ಹುಬ್ಬಳ್ಳಿ
ಸೋಮವಾರ, 23 ಮಾರ್ಚ್ 2026
ಸಂಪುಟ 15, ಸಂಚಿಕೆ 363, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



5 ವರ್ಷದಲ್ಲಿ 86,398 ನೌಕರರ ನಿವೃತ್ತಿ | ೦೫
ಪ್ರಧಾನಿ ನಿವಾಸಕ್ಕೆ ಪುಟ್ಟ ಅತಿಥಿ! | ೦೨
ಏ.1ಕ್ಕೆ ರಾಷ್ಟ್ರಪತಿ ಸಿದ್ಧಗಂಗಾ ಮಠಕ್ಕೆ ಭೇಟಿ | ೦೫



ಮೋದಿ ಸುದೀರ್ಘ ಜನ ಸೇವಕ

ದಾಖಲೆಯ ನಾಯಕ

24 ವರ್ಷಗಳ ದೀರ್ಘಾವಧಿ ಸೇವೆ ಸಲ್ಲಿಸಿದ ನರೇಂದ್ರ ಮೋದಿ

8,930 ದಿನಗಳ ಚಾಮ್ಲಿಂಗ್ ದಾಖಲೆ ಮುರಿದ ನಮೋ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿಯವರು ಸರ್ಕಾರವೊಂದರ ಮುಖ್ಯಸ್ಥರಾಗಿ ಅತ್ಯಂತ ಸುದೀರ್ಘ ಅವಧಿಗೆ ಅಂದರೆ 8,931 ದಿನಗಳ ಮೈಲುಗಲ್ಲು ದಾಟಿ ಹೊಸ ದಾಖಲೆ ಬರೆದಿದ್ದಾರೆ. ಈ ಮೂಲಕ ಅವರು 24 ವರ್ಷಗಳ ಕಾಲ ಸಿಕ್ಕಿಮ್‌ನ ಮುಖ್ಯಮಂತ್ರಿಯಾಗಿದ್ದ ಪವನ್ ಕುಮಾರ್ ಚಾಮ್ಲಿಂಗ್ ಅವರ ದಾಖಲೆಯನ್ನು (8,930 ದಿನಗಳು) ಮುರಿದಿದ್ದಾರೆ.

2001-2014

ನರೇಂದ್ರ ಮೋದಿಯವರು 2001ರ ಅ.7ರಂದು ಗುಜರಾತ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು 2014ರ ಮೇ 21ರವರೆಗೆ ಅಧಿಕಾರದಲ್ಲಿದ್ದರು.



4 ಗುಜರಾತಿನ ಸಿಎಂ ಆಗಿಯೂ ಅವರು ಅತ್ಯಂತ ಸುದೀರ್ಘ ಅವಧಿಗೆ (2001, 2002, 2007 ಮತ್ತು 2012ರಲ್ಲಿ ಸತತ 4 ಬಾರಿ ಗೆಲುವು) ಅಧಿಕಾರದಲ್ಲಿದ್ದ ದಾಖಲೆ ಬರೆದಿದ್ದರು.

2014

3 2014ರಲ್ಲಿ ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಅವರು, 2019 ಮತ್ತು 2024ರಲ್ಲಿ ಸತತ ಗೆಲುವು ಸಾಧಿಸಿ 3ನೇ ಬಾರಿ ಪ್ರಧಾನಿಯಾಗಿದ್ದಾರೆ.



ತಮ್ಮ ಸುದೀರ್ಘ ಸಾರ್ವಜನಿಕ ಸೇವೆಯಲ್ಲಿ ಮಹತ್ವದ ಮೈಲುಗಲ್ಲು ಸ್ಥಾಪಿಸಿದ ಸಾಧನೆಗಾಗಿ ಪ್ರಧಾನಿಯವರನ್ನು ಗೃಹಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ವಿವಿಧ ಕೇಂದ್ರ ಸಚಿವರು, ಮುಖ್ಯಮಂತ್ರಿಗಳು ಅಭಿನಂದಿಸಿದ್ದಾರೆ.



ಅಚಲ ಬದ್ಧತೆಯ ಪ್ರತೀಕ: ಶಾ

ಪ್ರಧಾನಿ ಮೋದಿಯವರ ಸರ್ಕಾರದ ಸೇವೆ ಎಂಬುದು ಕಠಿಣ ದುಡಿಮೆ ಮತ್ತು ಅಚಲ ಬದ್ಧತೆಯ ಪ್ರತೀಕ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಅಭಿನಂದಿಸಿದ್ದಾರೆ. ಸೇವೆ, ಕಠಿಣ ದುಡಿಮೆ ಮತ್ತು ಅಚಲ ನಿಷ್ಠೆಯ ಹಾದಿಯಲ್ಲಿ ಒಂದು ಮೈಲುಗಲ್ಲು, ಮೋದಿಯವರು 8,930 ದಿನಗಳ ದಾಖಲೆ ಮಾಡಿದ್ದ ಸಿಕ್ಕಿಮ್‌ನ ಮಾಜಿ ಸಿಎಂ ಪವನ್ ಕುಮಾರ್ ಚಾಮ್ಲಿಂಗ್ ಅವರ ದಾಖಲೆ ದಾಟಿದ್ದಾರೆ. ಪುಟ ೪

ಮೋದಿಗೆ ಇನ್‌ಸ್ಟಾಗ್ರಾಮ್‌ನಲ್ಲಿ 10 ಕೋಟಿ ಫಾಲೋವರ್ಸ್; ದಾಖಲೆ | • ಪುಟ ೪

ಕೇಂದ್ರ ಸಚಿವರು, ಬಿಜೆಪಿ ಅಧ್ಯಕ್ಷರ ಅಭಿನಂದನೆ • ಪುಟ ೭

ದಾವಣಗೆರೆಗೆ ಸಮರ್ಥ್, ಬಾಗಲಕೋಟೆಗೆ ಉಮೇಶ್ ಮೇಟಿ ಕಾಂಗ್ರೆಸ್‌ನಿಂದ ಕಣಕ್ಕೆ

ಉಪ ಚುನಾವಣೆಗೆ ಸಜ್ಜಾಯ್ತು ಅಖಾಡ




ಸಮರ್ಥ್


ಉಮೇಶ್

• **ಬೆಂಗಳೂರು:** ಸಾಕಷ್ಟು ಹಗ್ಗಜಗ್ಗಾಟ, ಲೆಕ್ಕಾಚಾರದ ಬಳಿಕ ಕಾಂಗ್ರೆಸ್ ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ ಅಭ್ಯರ್ಥಿಗಳ ಹೆಸರನ್ನು ಘೋಷಣೆ ಮಾಡಿದ್ದು, ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ದಿ. ಶಾಮನೂರು ಶಿವಶಂಕರಪ್ಪನವರ ಮೊಮ್ಮಗ ಹಾಗೂ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್‌ರವರ ಪುತ್ರ ಸಮರ್ಥ್ ಮಲ್ಲಿಕಾರ್ಜುನ್ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಕ್ಕೆ ದಿ. ಎಚ್.ವೈ. ಮೇಟಿಯವರ ಕಿರಿಯ ಪುತ್ರ ಉಮೇಶ್ ಮೇಟಿ ಹೆಸರನ್ನು ಪ್ರಕಟಿಸಿದೆ.

ಉಪ ಸಮರ

ತೀರಾ ಲೆಕ್ಕಾಚಾರ, ಎಲ್ಲವನ್ನೂ ಅಳೆದು ತೂಗಿ ಕಾಂಗ್ರೆಸ್ ಟಿಕೆಟ್ ಘೋಷಣೆ ಮಾಡಿದೆ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಟಿಕೆಟ್ ಶಾಮನೂರು ಕುಟುಂಬದ ಪಾಲಾಗಿದ್ದರೆ, ಬಾಗಲಕೋಟೆ ವಿಧಾನ ಸಭಾ ಕ್ಷೇತ್ರದ ಟಿಕೆಟ್‌ನ್ನು ಎಚ್.ವೈ. ಮೇಟಿಯವರ ಕುಟುಂಬಕ್ಕೆ ನೀಡಲಾಗಿದೆ. ಈ 2 ಕ್ಷೇತ್ರಗಳಲ್ಲೂ ಉಪಚುನಾವಣೆಯಲ್ಲಿ ಅನುಕಂಪದ ಲಾಭ ಪಡೆಯುವ ಲೆಕ್ಕಾಚಾರ ಅಡಗಿದೆ. ಸಾಮಾನ್ಯವಾಗಿ ಉಪ ಚುನಾವಣೆಗಳಲ್ಲಿ ಆ ಕ್ಷೇತ್ರಗಳಲ್ಲಿ ನಿಧರಾಗಿರುವ ಶಾಸಕರ ಕುಟುಂಬದವರಿಗೆ ಟಿಕೆಟ್ ನೀಡುವ ಪದ್ಧತಿಯನ್ನು ಕಾಂಗ್ರೆಸ್ ಪಕ್ಷ ಮೊದಲಿನಿಂದಲೂ ರೂಢಿಸಿಕೊಂಡಿದ್ದು, ಈ ಉಪ ಚುನಾವಣೆಯಲ್ಲೂ ಅದನ್ನೇ ಮುಂದುವರಿಸಿದೆ. ಪುಟ ೪

ಇಂದು ನಾಮಪತ್ರ ಸಲ್ಲಿಕೆ, ಶಕ್ತಿ ಪ್ರದರ್ಶನ

ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳು ಪಕ್ಷದ ಬಿ ಉಪ ಚುನಾವಣೆಗೆ ಸೋಮವಾರ (ಮಾ.23) ಬಿ ಫಾರಂ ಜತೆ ನಾಮಪತ್ರ ಸಲ್ಲಿಸಲಿದ್ದು, ದಾವಣಗೆರೆ, ಬಾಗಲಕೋಟೆ ಕ್ಷೇತ್ರಗಳಲ್ಲಿ ಎರಡೂ ಪಕ್ಷಗಳ ಶಕ್ತಿ ಪ್ರದರ್ಶನಕ್ಕೆ ಈ ನಾಮಪತ್ರ ಸಲ್ಲಿಕೆ ವೇದಿಕೆಯಾಗಲಿದೆ. ಪುಟ ೪

ಶತ್ರುಗಳಿಗಿಲ್ಲ ಹಾರ್ಮುಜ್ ಪ್ರವೇಶ



• **ಟೆಹ್ರಾನ್:** ತನ್ನ ಶತ್ರುಗಳು ಮತ್ತು ಅವರೊಂದಿಗೆ ನಂಟಿರುವ ರಾಷ್ಟ್ರಗಳಿಗೆ ಸೇರಿದ ಹಡಗುಗಳನ್ನು ಹೊರತುಪಡಿಸಿ ಉಳಿದೆಲ್ಲಾ ತೈಲ ಹಡಗುಗಳಿಗೆ ಹಾರ್ಮುಜ್ ಜಲಸಂಧಿಯಲ್ಲಿ ಸಂಚರಿಸಲು ಮುಕ್ತ ಅವಕಾಶ ನೀಡುವುದಾಗಿ ಇರಾನ್ ಪ್ರತಿನಿಧಿ ಅಲಿ ಮೌಸಾವಿ ಭಾನುವಾರ ಘೋಷಿಸಿದ್ದಾರೆ. ಮುಂದಿನ 48 ಗಂಟೆಗಳೊಳಗೆ ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣ ತೆರೆಯದಿದ್ದರೆ ಇರಾನ್ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ನಡೆಸುವುದಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಬೆದರಿಕೆ ನೀಡಿದ ಬಳಿಕ ಇರಾನ್ ತನ್ನ ನಿಲುವು ಸಡಿಲಗೊಳಿಸಿದೆ. ಆದರೆ ಶತ್ರು ರಾಷ್ಟ್ರ, ಅವುಗಳಿಗೆ ನೆರವು ನೀಡಿದ ರಾಷ್ಟ್ರಗಳ ಹಡಗುಗಳಿಗೆ ಅವಕಾಶ ಇಲ್ಲ ಎಂದಿದ್ದಾರೆ. • ವಿವರ ಪುಟ ೭

ಕಿರುಸುದ್ದಿ

ಬಂಗಾಳಿ ಹಿಂದುಗಳ ಮೇಲೆ ಪಾಕ್ ದಾಳಿ 'ನರಮೇಧ' • ಪುಟ ೭

ಇಂಧನ, ರಸಗೊಬ್ಬರ ಪೂರೈಕೆ ಕುರಿತು ಪ್ರಧಾನಿ ಪರಿಶೀಲನೆ • ಪುಟ ೭


ವಿಮಾನಯಾನ ದರ ಮಿತಿ ತೆರವು ಮಾಡಿದ ಸರ್ಕಾರ • ಪುಟ ೭

ಹೊನ್ನಾಕಟ್ಟಿ ಚೆಕ್‌ಪೋಸ್ಟ್‌ನಲ್ಲಿ 32.50 ಲಕ್ಷ ನಗದು ಜಪ್ತಿ • ಪುಟ ೫





ಭಾವಪೂರ್ಣ ಶ್ರದ್ಧಾಂಜಲಿ



ಜನನ: 22-3-1938

ಮರಣ: 20-3-2026

ಕೆ. ಗೋವಿಂದ ಭಟ್, ಸೂರಿಕುಮೇರು

ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತರು

ಭಾರತೀಯ ಪಾರಂಪರಿಕ ರಂಗಭೂಮಿಯ ಸಾರ್ವಕಾಲಿಕ ಶ್ರೇಷ್ಠ ಕಲಾವಿದ ಯಕ್ಷಗಾನ "ದಶಾವತಾರಿ" ಕೆ. ಗೋವಿಂದ ಭಟ್ಟರು ಬಹುಬಗೆಯ ಪಾತ್ರಗಳ ಮೂಲಕ ಆಂಗಿಕ, ಆಹಾರ್ಯ, ಸಾತ್ವಿಕ, ವಾಚಿಕ ವಿಭಾಗಗಳನ್ನು ಆವಿಷ್ಕಾರಿಕ ಆಯಾಮಗಳಿಂದ ಸಾಂಪ್ರದಾಯಿಕ ಆವರಣದೊಳಗೆ ಸುಪುಷ್ಟಗೊಳಿಸಿದ ಅನುಪಮ ಯಕ್ಷನಟ, ನಮಗೆ ವೃತ್ತಿಗೆ ಗುರುಗಳು, ರಂಗದಲ್ಲಿ ಸಹಕಲಾವಿದರು, ನೇಪಥ್ಯದಲ್ಲಿ ಮಾರ್ಗದರ್ಶಕರು. ಏಳು ದಶಕಗಳ ದಾಖಲೆಯ ತಿರುಗಾಟ ಹಾಗೂ ನಮ್ಮ ಯಕ್ಷಗಾನ ಮಂಡಳಿಯಲ್ಲಿ ಸುದೀರ್ಘ 55 ವರ್ಷಗಳ ಕಾಲ ತಿರುಗಾಟ ಪೂರೈಸಿ ಶಿವಪಾದ ಸೇರಿದ ಅವರ ಆತ್ಮಕ್ಕೆ ಶಾಶ್ವತ ಸಾಯುಜ್ಯ ಪ್ರಾಪ್ತಿಯಾಗುವಂತೆ ಶ್ರೀ ದೇವರಲ್ಲಿ ಸಂಪ್ರಾರ್ಥಿಸುತ್ತೇವೆ.

ಮೇನೇಜರ್, ಅರ್ಚಕರು
ಸರ್ವ ಕಲಾವಿದರು ಹಾಗೂ ಸಿಬ್ಬಂದಿ ವರ್ಗ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿ, ಧರ್ಮಸ್ಥಳ

ಕಿರುಸುದ್ದಿ

ನ್ಯಾಯಸಮ್ಮತ ನಿರ್ಧಾರ ಅಗತ್ಯ

ಹುಬ್ಬಳ್ಳಿ: ನಗರದಲ್ಲಿ ನಡೆಯುತ್ತಿರುವ ಮೇಲ್ಸೇತುವೆ ಕಾಮಗಾರಿಯಿಂದ ಸ್ವಾತಂತ್ರ್ಯ ಹೋರಾಟಗಾರರ, ಮಹಾತ್ಮರ ಪುತ್ಥಳಿಗಳನ್ನು ಸ್ಥಳಾಂತರಿಸಲಾಗಿದೆ. ನಗರದ ಇಂದಿರಾ ಗಾಜಿನ ಮನೆಯಲ್ಲಿ ಸ್ಥಾಪಿಸಲಾಗಿದ್ದು, ಅವುಗಳನ್ನು ಸ್ಥಳೀಯ ಆಡಳಿತ, ಜನಪ್ರತಿನಿಧಿಗಳು ಹಾಗೂ ಸಂಘ-ಸಂಸ್ಥೆಗಳು ನಿರ್ಲಕ್ಷ್ಯ ಮಾಡಿವೆ ಎಂದು ಚಿಂತನ ವೇದಿಕೆ ಆಕ್ರೋಶ ವ್ಯಕ್ತಪಡಿಸಿದೆ. ಈ ಕುರಿತು ಪ್ರಕಟಣೆಗೆ ತಿಳಿಸಿದ ವೇದಿಕೆ, ಮೂರು ತಿಂಗಳ ಕೆಲಸ ಮೂರು ವರ್ಷ ಕಳೆದರೂ ಮುಕ್ತಿ ನೀಡುವ ಪ್ರಯತ್ನ ನಡೆದಿಲ್ಲ. ಮುಂದಿನ ತಿಂಗಳು ಅಕ್ಷಯ ತೃತೀಯ ಬಸವ ಜಯಂತಿ ಸಂದರ್ಭದಲ್ಲಿ ಆದರೂ ಮೂಲೆಗುಂಪಾದ ಬೃಹತ್ ಅಶ್ವಾರೂಢ ಬಸವಣ್ಣನ ಮೂರ್ತಿ ಒಂದು ಸಾರ್ವಜನಿಕ ಸ್ಥಳದಲ್ಲಿ ಪ್ರತಿಷ್ಠಾಪನೆ ಮಾಡುವ ಮೂಲಕ ಬಸವ ಭಕ್ತರಿಗೆ ಖುಷಿ ವಿಚಾರ ನೀಡುವಲ್ಲಿ ಜಿಲ್ಲೆಯ ಆಡಳಿತ, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಆಸಕ್ತಿ ವಹಿಸುವಂತೆ ವೇದಿಕೆ ಮನವಿ ಮಾಡಿದೆ. ಸದ್ಯ ಚನ್ನಮ್ಮ ವೃತ್ತದಲ್ಲಿ ಇರುವ ಚನ್ನಮ್ಮನ ಬೃಹತ್ ಮೂರ್ತಿಯನ್ನು ಬೇರೆ ಕಡೆ ಸ್ಥಳಾಂತರ ಮಾಡುವ ಅಥವಾ ಅದನ್ನು ಇನಷ್ಟು ಎತ್ತರಿಸುವ ನಿಟ್ಟಿನಲ್ಲಿ ನಡೆದ ಚರ್ಚೆಗಳು ಮತ್ತೆ ಮೌನದತ್ತ ಜಾರಿವೆ. ಹುಬ್ಬಳ್ಳಿಯ ಹಿರಿಮೆ ಹೆಚ್ಚಿಸುವ ಈ ವಿಚಾರದಲ್ಲಿ ನ್ಯಾಯಸಮ್ಮತ ನಿರ್ಧಾರ ಅಗತ್ಯವಿದೆ. ಇನ್ನು ಬಸವೇಶ್ವರ ಮೂರ್ತಿಯನ್ನು ನೆಹರು ಮೈದಾನ ಇಲ್ಲವೇ ಪಾಲಿಕೆಯ ಕಚೇರಿ ಬಳಿಯ ಉಪವನದಲ್ಲಿ ಇರಿಸಬಹುದು ಎಂದು ವೇದಿಕೆಯ ಕೃಷ್ಣಮೂರ್ತಿ ಕುಲಕರ್ಣಿ, ಚನ್ನಬಸಪ್ಪಧಾರವಾಡಶೆಟ್ರು, ವಿ.ಜಿ.ಪಾಟೀಲ, ವಂದನಾ ರಮೇಶ ಮುಂತಾದವರು ಒತ್ತಾಯಿಸಿದ್ದಾರೆ.

ಅಗತ್ಯ ಕ್ರಮ ಕೈಗೊಳ್ಳಿ

ಹುಬ್ಬಳ್ಳಿ: ದೇಶದಲ್ಲಿ ಗ್ಯಾಸ್ ಸಿಲಿಂಡರ್ ಸಮಸ್ಯೆ ನಿಭಾಯಿಸುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ರಾಷ್ಟ್ರೀಯ ಅಹಿಂದ ಸಂಘಟನೆಯ ರಾಜ್ಯ ಪ್ರಚಾರ ಸಮಿತಿಯ ಅಧ್ಯಕ್ಷ ಬಾಬಾಜಾನ್ ಮುಧೋಳ್ ಹಾಗೂ ರಾಷ್ಟ್ರೀಯ ಅಹಿಂದ ಸಂಘಟನೆಯ ಅಧ್ಯಕ್ಷ ಮುತ್ತಣ್ಣ ಶಿವಳ್ಳಿ ಆರೋಪಿಸಿದ್ದಾರೆ.



ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ದೇಶದಲ್ಲಿ ವಾಣಿಜ್ಯ ಮತ್ತು ಅಡುಗೆ ಅನಿಲ್ ಸಮಸ್ಯೆ ಹೆಚ್ಚಾಗಿದೆ. ಇದಕ್ಕೆ ನೇರವಾಗಿ ಕೇಂದ್ರ ಸರ್ಕಾರದ ಬೇಜವಾಬ್ದಾರಿ ಆಡಳಿತವೆ ಕಾರಣವಾಗಿದೆ. ಗ್ಯಾಸ್ ಸಿಲಿಂಡರ್ ಸಮಸ್ಯೆ ದೇಶದಲ್ಲಿ ಉದ್ಭವಿಸುವುದಿಲ್ಲ ಇನ್ನು ಒಂದು ತಿಂಗಳಿಗೆ ಆಗುವಷ್ಟು ದಾಸ್ತಾನು ಇದೆ ಎಂದು ಕೇಂದ್ರ ಸರ್ಕಾರ ಹೇಳಿತು. ಆದರೆ ಈಗ ದೇಶದ ಮೂಲೆ ಮೂಲೆಯಲ್ಲಿರುವ ಸಹ ಸಿಲೆಂಡರ್ ಸಮಸ್ಯೆ ಉಂಟಾಗಿದೆ. ಇರಾನ್, ಇಸ್ರಯಿಲ್ ಮತ್ತು ಅಮೇರಿಕ ನಡುವೆ ಯುದ್ಧ ನಡೆಯುತ್ತಿರುವದು ಕೇಂದ್ರ ಸರ್ಕಾರಕ್ಕೆ ಗೊತ್ತಿಲ್ಲವೇ? ಮುಂದಿನ ದಿನಗಳಲ್ಲಿ ಗ್ಯಾಸ್ ಸಿಲಿಂಡರ್ ಸಮಸ್ಯೆ ಆಗಬಹುದು ಎಂದು ಕೇಂದ್ರ ಸರ್ಕಾರ ತಿಳಿದು ಕೊಳ್ಳಬೇಕಿತ್ತು. ದೇಶದ ಹಲವಾರು ರಾಜ್ಯಗಳಲ್ಲಿ ಹೋಟೆಲ್ ಮಾಲೀಕರು ಸಮಸ್ಯೆ ಎದುರಿಸುತ್ತಿದ್ದಾರೆ. ಸಾವಿರಾರು ಹೋಟೆಲ್ ಕಮರ್ಷಿಯಲ್ ಸಿಲಿಂಡರ್ ಬೆಲೆ ಹೆಚ್ಚಿರುವುದರಿಂದ ಮತ್ತು ಸರಬರಾಜಿನಲ್ಲಿ ಕೊರತೆ ಇರುವುದರಿಂದ ಕೆಲವರು ಗೃಹ ಬಳಕೆ ಸಿಲೆಂಡರ್ ಬಳಸುತ್ತಿದ್ದಾರೆ. ಜೊತೆಗೆ ಬೇರೆ ರಾಜ್ಯದಿಂದ ಬಂದ ವಿದ್ಯಾರ್ಥಿಗಳು ಕೂಡ ಮೆಸ್ಸಿನಲ್ಲಿ ಸಿಲಿಂಡರ್ ತೊಂದರೆ ಆಗುವ ಕಾರಣಕ್ಕೆ ಊಟದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕೇಂದ್ರ ಸರ್ಕಾರ ತಕ್ಷಣವೇ ಎಚ್ಚೆತ್ತುಕೊಂಡು ಅಗತ್ಯ ಕ್ರಮ ಕೈಗೊಳ್ಳಬೇಕು. ಜೊತೆಗೆ ರಾಜ್ಯದ ಪ್ರಮುಖ ಪಟ್ಟಣಗಳಲ್ಲಿ ಕಳ ಸಂತೆಯಲ್ಲಿ ಅಡುಗೆ ಅನಿಲ್ ಮಾರಾಟ ಆಗುತ್ತಿದೆ. ಸರ್ಕಾರ ಮತ್ತು ಜಿಲ್ಲಾ ಆಡಳಿತ ಅಂತವರ ಮೇಲೆ ನಿಗಾ ಇಟ್ಟು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ವಿಚಾರ ಸಂಕಿರಣ ಇಂದು

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗ, ಪ್ರಧಾನಮಂತ್ರಿ ಉಚ್ಚತ್ತರ ಶಿಕ್ಷಾ ಅಭಿಯಾನ ಯೋಜನೆಯಡಿ ಭಾರತೀಯ ಜ್ಞಾನ ಪದ್ಧತಿ ಬಗ್ಗೆ ಎರಡು ದಿನದ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ನಗರದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ನಡೆಯಲಿದೆ. ಮಾ.23ರ ಬೆಳಗ್ಗೆ 10ಕ್ಕೆ ಕುಲಪತಿ ಡಾ. ಎ.ಎಂ.ಖಾನ್ ಉದ್ಘಾಟಿಸಲಿದ್ದು, ಜೈನ್ ವಿವಿ ಪ್ರಾಧ್ಯಾಪಕಿ ರಜನಿ ಜಯರಾಮ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಕವಿವಿ ಕುಲಸಚಿವ ಎನ್.ವೈ. ಮಟ್ಟಿಹಾಳ, ಪ್ರೊ. ಆರ್.ಎಫ್.ಭಜಂತ್ರಿ ಪಾಲ್ಗೊಳ್ಳಲಿದ್ದು, ಡಾ. ಮೃತ್ಯುಂಜಯ ಆಗಡಿ ಅಧ್ಯಕ್ಷತೆ ವಹಿಸಲಿದ್ದಾರೆ. ಎರಡು ದಿನಗಳ ವಿಚಾರ ಸಂಕಿರಣದಲ್ಲಿ ಸಂಸ್ಕೃತ ವಿದ್ವಾಂಸರು, ಪಂಡಿತರು, ಸಂಶೋಧಕರು ಪ್ರಬಂಧ ಮಂಡಿಸಲಿದ್ದು, ಸಂಸ್ಕೃತ ಕುರಿತ ವಿವಿಧ ತಾಂತ್ರಿಕ ಗೋಷ್ಠಿಗಳು ನಡೆಯಲಿವೆ ಎಂದು ಆಯೋಜಕಿ ಡಾ.ರಜನಿ ಎಚ್, ಪದ್ಮಾವತಿ ಸಿಂಗಾರಿ ತಿಳಿಸಿದ್ದಾರೆ.

ಇಂದು ದಾಸಿಮಯ್ಯ ಜಯಂತಿ

ಧಾರವಾಡ: ಜಿಲ್ಲಾಡಳಿತ, ಕನ್ನಡ-ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ದೇವರ ದಾಸಿಮಯ್ಯ ಜಯಂತಿ ಮಾ.23ರಂದು ಬೆಳಗ್ಗೆ 10ಕ್ಕೆ ನಗರದ ಆಲೂರು ವೆಂಕಟರಾವ್ ಭವನದಲ್ಲಿ ಹಮ್ಮಿಕೊಂಡಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಉದ್ಘಾಟಿಸಲಿದ್ದು, ಶಾಸಕ ಅರವಿಂದ ಬೆಲ್ಲದ ಅಧ್ಯಕ್ಷತೆ ವಹಿಸವರು. ಸಚಿವ ಪ್ರಹ್ಲಾದ್ ಜೋಶಿ, ಸಭಾಪತಿ ಬಸವರಾಜ ಹೊರಟ್ಟಿ, ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು, ವಿವಿಧ ನಿಗಮ ಮಂಡಳಿ ಅಧ್ಯಕ್ಷರು, ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಹುಬ್ಬಳ್ಳಿ: ನಗರದ ಸಿದ್ಧಾರೂಢ ಸ್ವಾಮೀಜಿ ಮಠದ ಗೋ ಕೇಂದ್ರಕ್ಕೆ ಭಕ್ತರಿಂದ ಮೇವು ವಿತರಿಸಲಾಯಿತು. ಮಾಡಲಗಿ-22 ಟ್ರ್ಯಾಕ್ಟರ್, ಲಿಂಗದಾಳ-8 , ಮುರಕಿಬಾವಿ-4, ಮುತವಾಡ-5, ಕೋಳಿವಾಡ-4, ಹಳ್ಳಿಕೇರಿ-4 ಹೆಬಸೂರ, ಸವದತ್ತಿ, ಧಾರವಾಡ, ಕೌಜಗೇರಿ ರಾಮಾಪುರ ತಲಾ -2, ಹುಲಕೋಟಿ, ಹೆಬ್ಬಳ್ಳಿ, ನವಲೂರ, ರಾಯಾಪೂರ ತಲಾ 1 ಮೇವನ್ನು ಸೇರಿ ಗ್ರಾಮಗಳ ಸದ್ಭಕ್ತರಿಂದ ಶ್ರೀಮಠದ ಗೋವುಗಳಿಗೆ ಒಟ್ಟು 61 ಟ್ರ್ಯಾಕ್ಟರ್ ಬಿಳಿಜೋಳ ಹಾಗೂ ಗೋದಿ ಹೊಟ್ಟು ಮೇವನ್ನು ಗೋ ಸೇವಾರ್ಥವಾಗಿ ನೀಡಿದರು.

ಸಹೋದರತ್ವದ ಸೇತುವೆ ನಿರ್ಮಿಸೋಣ

ಅಳ್ನಾವರ: ಪ್ರಸಕ್ತ ಸಮಾಜದಲ್ಲಿ ಧರ್ಮಗಳ ನಡುವಿನ ಗೋಡೆಗಳನ್ನು ಕೆಡವಿ, ಪ್ರೀತಿ ಮತ್ತು ಸಹೋದರತ್ವದ ಸೇತುವೆ ನಿರ್ಮಿಸೋಣವೆಂದು ಗ್ರಾಮದ ಹಿರಿಯರಾದ ಬಸವರಾಜ ಇನಾಮದಾರ ಹೇಳಿದರು.

ಸಮೀಪದ ಹುಲಿಕೇರಿ ಗ್ರಾಮದಲ್ಲಿನ ಮಸೀದಿಯಲ್ಲಿ ಆಯೋಜಿಸಿದ್ದ ಸೌಹಾರ್ದ ಇಫ್ತಾರ್ ಕೂಟ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಬ್ಬಗಳು ಕೇವಲ ಒಂದು ಧರ್ಮಕ್ಕೆ ಸೀಮಿತವಲ್ಲ, ಇಂತಹ ಇಫ್ತಾರ್ ಕೂಟಗಳು ನಮ್ಮ ನಡುವಿನ ಅಂತರವನ್ನು ಕಡಿಮೆ ಮಾಡಿ, ಭಾರತೀಯತೆಯ ಮೌಲ್ಯವನ್ನು ಎತ್ತಿ ಹಿಡಿಯುತ್ತವೆ ಎಂದರು.

ರಂಜಾನ್ ಮಾಸದ ಉಪವಾಸದ ನಂತರ ಮುಸ್ಲಿಂ ಬಾಂಧವರೊಂದಿಗೆ ಹಿಂದು ಸಮಾಜದ ಮುಖಂಡರು ಹಾಗೂ ಸಾರ್ವಜನಿಕರು ಒಂದಾಗಿ ಕುಳಿತು ಫಲಾಹಾರ ಸೇವಿಸುವ ಮೂಲಕ ಸೌಹಾರ್ದತೆಯ ಸಂದೇಶ ಸಾರಿದರು. ಶಿವಾನಂದ ನರಗುಂದ, ಶಿವಾಜಿ ಡೊಳ್ಳಿನ, ಮಹಾಬಳೇಶ್ವರ ಬುಲಬುಲೆ, ರಮೇಶ ಕಿತ್ತೂರ, ದಾವಲಸಾಬ ತಹಶೀಲ್ದಾರ, ಕುತ್ಬುಸಾಬ ಡಂಕೇವಾಲೆ, ಶಿವಾಜಿ ಕಿತ್ತೂರ, ಅಲ್ಲಿಸಾಬ ನಧಾಫ್, ರಮೇಶ ಮಿಟಗಾರ, ಮಂಜುನಾಥ ಬೇಕ್ವಾಡಕರ, ಮಸೂದ ಗುಳೇದಕೊಪ್ಪ, ಜಮಾಲ ಮುನವಳ್ಳಿ, ಸುರೇಶ ಪಾಟೀಲ, ಸುಭಾಸ ಕೇದಾರ್ಜಿ,ಮಲ್ಲಿಕಾರ್ಜುನ ಕಲ್ಲೂರ, ಮೌಲಾಲಿ ಜೀರಗಿ,ಮಲಿಕ್ ಅಂಚಿ, ಸಯ್ಯದ ಹಲಸಿ, ಸದ್ದಾಮ ಬೋಗೂರ, ಇಸಾಕ ಅಂಚಿ,ನಿಜಾಮಆಲಿ ಗುಳ್ಳದಕೊಪ್ಪ ಮತ್ತಿತರರು ಇದ್ದರು. ನೂತನ ಸಂವತ್ಸರದ ಮೊದಲ ಹಬ್ಬ ಯುಗಾದಿಯನ್ನು ಪಟ್ಟಣವೂ ಸೇರಿದಂತೆ ತಾಲೂಕಿನ ಎಲ್ಲೆಡೆ ಸಂಭ್ರಮ ಸಡಗರ ಹಾಗೂ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.



ಅಳ್ನಾವರ: ಸಮೀಪದ ಹುಲಿಕೇರಿ ಗ್ರಾಮದಲ್ಲಿನ ಮಸೀದಿಯಲ್ಲಿ ಸೌಹಾರ್ದ ಇಫ್ತಾರ್ ಕೂಟ ಕಾರ್ಯಕ್ರಮ ನಡೆಯಿತು.

ಲವಣಗಿರಿ ಉತ್ಸವ | ಸಂಸದ ಬಸವರಾಜ ಬೊಮ್ಮಾಯಿ ಅಭಿಮತ

ಮೌಲ್ಯ ಕಲಿಸುವ ಮಠ ಮಾನ್ಯಗಳು



ಭಕ್ತಿ ಚಿರಸ್ಥಾಯಿ

ಶ್ರೀಮಠದ ಮೇಲಿರುವ ನನ್ನ ಭಕ್ತಿ ಚಿರಸ್ಥಾಯಿಯಾಗಿ ಉಳಿಯಲಿದೆ. ಗ್ರಾಮಕ್ಕೆ ಗ್ರಾಮದ ಜನತೆಗಾಗಿ ಅವರು ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ನಮ್ಮ ಸಂಸ್ಕಾರ ಕಾಯಕ ಸಂಸ್ಕಾರವಾಗಿದ್ದು, ಕಾಯಕ ಪೂಜೆಗಿಂತ ದೊಡ್ಡದು. ದುಡ್ಡೇ ದೊಡ್ಡಪ್ಪ ಅಲ್ಲಾ, ದುಡಿಮೆಯೇ ದೊಡ್ಡಪ್ಪ. ಹೃದಯದಲ್ಲಿ ಧರ್ಮವನ್ನು ತುಂಬುವುದು ಮಠಗಳ ಕಾರ್ಯವಾಗಿದ್ದು, ಎಲ್ಲಿಯವರೆಗೆ ಭಕ್ತರಿರುತ್ತಾರೆ ಅಲ್ಲಿಯವರೆಗೆ ಮಠ ಮಾನ್ಯಗಳು ಇರುತ್ತವೆ. ನಾವು ಧರ್ಮದಿಂದ ಬಾಳಬೇಕು. ಶ್ರೀಮಠದ ಕುಮಾರ ವಿರೂಪಾಕ್ಷ ಶ್ರೀಗಳ ಆಶೀರ್ವಾದದಿಂದಲೇ ನಾನು ಜೀವನದಲ್ಲಿ ಇಷ್ಟು ಎತ್ತರಕ್ಕೇರಿದ್ದೇನೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಉಪ್ಪಿನಬೆಟಗೇರಿ: ಜನರ ಬದುಕಿನಲ್ಲಿ ಮೌಲ್ಯಗಳನ್ನು ತುಂಬುವ ಕೆಲಸ ಮಠ ಮಾನ್ಯಗಳು ಮಾಡುತ್ತಿವೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಅವರು ವಿಶ್ವ ಗುರು ಬಸವಣ್ಣನವರ ವೇದಿಕೆಯಲ್ಲಿ ನಡೆಯುತ್ತಿರುವ ಶ್ರೀ ಗುರು ವಿರೂಪಾಕ್ಷೇಶ್ವರ ಜಾತ್ರಾ ಮಹೋತ್ಸವದ ಲವಣಗಿರಿ ಉತ್ಸವ ಶನಿವಾರದಂದು 9ನೇ ದಿನದ ಪ್ರವಚನ ಮಹಾಮಂಗಲ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು. ಬದುಕು ಮತ್ತು ಮಠಕ್ಕೆ ಬಹಳಷ್ಟು ಅವಿನಾಭಾವ ಸಂಬಂಧವಿರುತ್ತದೆ. ಜಗತ್ತಿನಲ್ಲಿ ನಡೆಯುತ್ತಿರುವ ಯುದ್ಧದಲ್ಲಿ, ಯುದ್ಧ ಮಾಡುವವರು ಮನುಷ್ಯರನ್ನು ಮಾನವೀಯತೆಯಲ್ಲಿ ನೋಡದೇ ಕೇವಲ ಸಾವಿನ ಅಂಕಿ ಸಂಖ್ಯೆಯಲ್ಲಿ ನೋಡುತ್ತಿರುವುದು ಮಾನವೀಯತೆ ಮರೆಯಾದಂತೆ ಆಗಿದೆ. ಮನುಕುಲದ ಒಳಿತಿಗಾಗಿ ಈಗ ನಡೆಯುತ್ತಿರುವ ಯುದ್ಧ ನಿಲ್ಲಬೇಕಾಗಿದೆ ಎಂದರು.

> ಬಸವಾದಿ ಶಿವಶರಣರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಾವು ಸಾಗಬೇಕು. ಯಾವುದೇ ಅಪೇಕ್ಷೆ ಇಲ್ಲದೇ ಈ ಧಾರ್ಮಿಕ ಕಾರ್ಯಕ್ರಮಕ್ಕೆ ಅಪಾರ ಸಂಖ್ಯೆಯಲ್ಲಿ ಬಂದಿರುವವರದ್ದು ಪವಿತ್ರವಾದ ಭಕ್ತಿಯಾಗಿದೆ.
> ■ ಬಸವರಾಜ ಬೊಮ್ಮಾಯಿ, ಸಂಸದ

ಧಾರವಾಡ ಮುರಾಘಾಮಠದ ಡಾ. ಮಲ್ಲಿಕಾರ್ಜುನ ಸ್ವಾಮೀಜಿ ಆಶೀರ್ವಚನ ನೀಡಿದರು. ಬೈಲಹೊಂಗಲ ಮೂರುಸಾವಿರ ವಿರಕ್ತಮಠದ ನೀಲಕಂಠ ಸ್ವಾಮೀಜಿ, ಕುಂದರಗಿ ಅಡವಿ ಸಿದ್ದೇಶ್ವರ ಮಠದ ಡಾ. ಅಮರಸಿದ್ದೇಶ್ವರ ಸ್ವಾಮೀಜಿ, ಅಮೀನಗಡದ ಶ್ರೀ ಪ್ರಭು ಶಂಕ್ರೇಶ್ವರ ಮಠದ ಶಂಕರರಾಜೇಂದ್ರ ಸ್ವಾಮೀಜಿ, ನಿರೂಪಾದಿ ದೇವರು ಸಾನ್ನಿಧ್ಯ ವಹಿಸಿದ್ದರು. ಶಿಕ್ಷಕ ಸೋಮಲಿಂಗ ಅಂಗಡಿ, ಸಂಜಯ ಕೊಡಿ ನಿರೂಪಿಸಿದರು.

ಭಾರತದ ಮೂಲ ಶಕ್ತಿ ಅಧ್ಯಾತ್ಮ

ಬಸವಾದಿ ಶರಣರ ಕಾಲದಲ್ಲಿ ಅಲ್ಲಮ ಪ್ರಭುಗಳ ವಚನದಲ್ಲಿ ಹೇಳಿದಂತೆ ಗುರು ಲಿಂಗ ಜಂಗಮ ಸಾಮರಸ್ಯ ಇಂದಿಗೂ ಪ್ರಸ್ತುತ. ಭಾರತದ ಮೂಲ ಶಕ್ತಿ ಅಧ್ಯಾತ್ಮವಾಗಿದ್ದು, ಧರ್ಮ ಕೇವಲ ಪೂಜಾ ಪದ್ಧತಿಯಲ್ಲ. ಯಾರಿಗೂ ತೊಂದರೆ ಕೊಡದೇ ಎಲ್ಲರೂ ಬದುಕಲು ಅವಕಾಶ ಕೊಡುವುದು ನಮ್ಮ ದೇಶದ ಸಂಪ್ರದಾಯ. ಹೀಗಾಗಿ ಹಣ ಗಳಿಸಲು ವಿದೇಶಕ್ಕೆ ಹೋದವರು ಜೀವ ಉಳಿಸಿಕೊಳ್ಳಲು ತಾಯ್ನಾಡಿಗೆ ಬರುತ್ತಾರೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

- ಗರಗ, ಹನುಮನಹಾಳ,ಹಾರೋಬೆಳವಡಿ ಗ್ರಾಮದ ಹಿರಿಯರನ್ನು ಶ್ರೀ ಕುಮಾರ ವಿರುಪಾಕ್ಷ ಸ್ವಾಮೀಜಿ ಸನ್ಮಾನಿಸಿದರು
- ಗ್ರಾಪಂ ಮಾಜಿ ಅಧ್ಯಕ್ಷ ಮಂಜುನಾಥ ಮಸೂತಿ ಪ್ರಸಾದ ಸೇವೆ ಸಲ್ಲಿಸಿದರು

ಸಾಮೂಹಿಕ ಗುಗ್ಗಳ ಮಹೋತ್ಸವ



ಉಪ್ಪಿನಬೆಟಗೇರಿ: ಅಮ್ಮಿನಬಾವಿ ಗ್ರಾಮದ ಸಂಸ್ಥಾನ ಪಂಚಗೃಹ ಹಿರೇಮಠದ ಜಾತ್ರಾ ಮಹೋತ್ಸವದ ಅಂಗವಾಗಿ ಕ್ಷೇತ್ರನಾಥ ವೀರಭದ್ರ ದೇವರ ಸಾಮೂಹಿಕ ಗುಗ್ಗಳ ಮಹೋತ್ಸವ ಭಾನುವಾರ ಪ್ರಾತಃ ಕಾಲದಲ್ಲಿ ಯಶಸ್ವಿಯಾಗಿ ಜರುಗಿತು.

ಉಪ್ಪಿನಬೆಟಗೇರಿ ಮೂರುಸಾವಿರ ವಿರಕ್ತಮಠದ ಶ್ರೀ ಕುಮಾರ ವಿರೂಪಾಕ್ಷ ಸ್ವಾಮೀಜಿ ಈ ಗುಗ್ಗಳ ಮಹೋತ್ಸವ ಉದ್ಘಾಟಿಸಿದರು. ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಹಿರಿಯ ಶ್ರೀಗಳಾದ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಹಾಗೂ ಕಿರಿಯ ಶ್ರೀಗಳಾದ ಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯವಹಿಸಿದ್ದರು. ಪಂಚಗೃಹ ಹಿರೇಮಠದಿಂದ ಆರಂಭಗೊಂಡ ಗುಗ್ಗಳ ಮಹೋತ್ಸವವು ಅಮ್ಮಿನಬಾವಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪುನಃ ಪಂಚಗೃಹ ಹಿರೇಮಠ ಆವರಣದಲ್ಲಿರುವ ವೀರಭದ್ರದೇವರ ದೇವಾಲಯದಲ್ಲಿ ಮಂಗಲಗೊಂಡಿತು.

ಪುರವಂತರ ಸೇವೆ: ಹಿರಿಯ ಪುರವಂತ ಕಲಾವಿದರುಗಳಾದ ಮರೇವಾಡದ ಬಸವಂತಪ್ಪ ಕಮ್ಮಾರ, ಸುಳ್ಳದ ದೇವೇಂದ್ರಪ್ಪ ಪತ್ತಾರ, ಹಳೇಹುಬ್ಬಳ್ಳಿಯ ಸತೀಶ ಮುಗಳಿ, ಸವಣೂರಿನ ನಾಗಪ್ಪ ಕುಂಬಾರ, ಸಿದ್ದಪ್ಪ ಕುಂಬಾರ, ಕರಡಿಗುಡ್ಡದ ಮಲ್ಲಿಕಾರ್ಜುನ ಕುರುವಿನಕೊಪ್ಪ, ತೇಗೂರಿನ ಮಂಜುನಾಥ ಬೆಳವಡಿ, ರುದ್ರಪ್ಪ ಕಮ್ಮಾರ ಅವರ ವಿಶೇಷ ಒಡಪುಗಳ ಸೇವೆಗೆ ಸಂಬಾಳ ಕಲಾವಿದರುಗಳಾದ ಮುಗದ ಗ್ರಾಮದ ಶಿವಪ್ಪ ಕುಂಬಾರ, ಮರೇವಾಡದ ಶರಣಬಸಪ್ಪ ಕಮ್ಮಾರ, ಅಮ್ಮಿನಬಾವಿಯ ಮಲ್ಲಪ್ಪ ಸವದಿ, ಮಲ್ಲಿಕಾರ್ಜುನ ಸೊರಟೂರ ಅವರು ಪೂರಕ ಸಾಥ ನೀಡಿ ಗಮನಸೆಳೆದರು. ವೀರಯ್ಯ ಹಿರೇಮಠ, ಸೋಮಲಿಂಗಶಾಸ್ತ್ರೀ ಗುಡ್ಡದಮಠ, ಶಿವಯೋಗಿ ಹಿರೇಮಠ, ವಿನಾಯಕ ಹಿರೇಮಠ ಸೇರಿದಂತೆ ಇತರರಿದ್ದರು.

ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಯತ್ನ: ಪಾಟೀಲ

ಕುಂದಗೋಳ: ನಾನು ಕೇವಲ ವೇದಿಕೆಗಳ ಮೇಲೆ ಬಣ್ಣ ಬಣ್ಣದ ಮಾತುಗಳನ್ನಾಡಿ ಜಾದು ಮಾಡುವನಲ್ಲ, ಚುನಾವಣಾ ಸಂದರ್ಭದಲ್ಲಿ ಜನತೆಗೆ ನೀಡಿದ ಭರವಸೆಯಂತೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುವ ಮೂಲಕ ನಿಮ್ಮ ಋಣ ತೀರಿಸುತ್ತೇನೆ ಎಂದು ಶಾಸಕ ಎಂ.ಆರ್. ಪಾಟೀಲ ಹೇಳಿದರು.

ಅವರು ತಾಲೂಕಿನ ಕುಬಿಹಾಳ ಗ್ರಾಮದಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಹಾಗೂ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಅಂದಾಜು 14 ಕೋಟಿ ರೂ. ವೆಚ್ಚದಲ್ಲಿ ಮಾಸ್ತಿ ಹಳ್ಳದ ಚೆಕ್ ಡ್ಯಾಂ. ಬಾಂದಾರ ಹಾಗೂ ವಿಠಲಾಪೂರ ಮತ್ತು ಗುರುವಿನಹಳ್ಳಿ ಗ್ರಾಮದ ಹತ್ತಿರ ಬಿ.ಸಿ.ಬಿ ನಿರ್ಮಾಣ ಸೇರಿದಂತೆ ಅಂದಾಜು 13 ಕೋಟಿ ರೂಪಾಯಿಗಳ ಬೃಹತ್ ಮೊತ್ತದ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿ, ಪ್ರತಿ ವರ್ಷವೂ ಬೆಣ್ಣೆ ಹಳ್ಳದ ಪ್ರವಾಹದಿಂದ ಈ ಭಾಗದ ರೈತರಿಗೆ ಮತ್ತು ಅವರ ಜಮೀನುಗಳಿಗೆ ಸಾಕಷ್ಟು ಹಾನಿ ಉಂಟಾಗುತ್ತಿರುವುದು ನನ್ನ ಗಮನಕ್ಕೆ ಬಂದಿತ್ತು. ಈ ಸಮಸ್ಯೆಯ ಗಂಭೀರತೆಯನ್ನು ಅರಿತು ತಕ್ಷಣವೇ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಗಮನಕ್ಕೆ ತಂದಾಗ ಅವರು ಸಕಾರಾತ್ಮಕವಾಗಿ ಸ್ಪಂದಿಸಿ ಕೇಂದ್ರ ಸರ್ಕಾರದಿಂದ ಈ ಭಾಗಕ್ಕೆ ಹೆಚ್ಚಿನ ಅನುದಾನ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಮಂಜೂರಾದ ಈ ಅನುದಾನದಿಂದ ನಿರ್ಮಾಣವಾಗುತ್ತಿರುವ ಚೆಕ್ ಡ್ಯಾಂ ಮತ್ತು ಬಾಂದಾರಗಳು ರೈತರ ಪಾಲಿಗೆ ವರದಾನವಾಗಲಿವೆ. ಈ ಕಾಮಗಾರಿಗಳಿಂದ ಕೇವಲ ಪ್ರವಾಹ ನಿಯಂತ್ರಣ ಮಾತ್ರವಲ್ಲದೆ ಅಂತರ್ಜಲ ಮಟ್ಟವೂ ವೃದ್ಧಿಯಾಗಿ ಕೃಷಿ ಚಟುವಟಿಕೆಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು. ರೈತರು ಆರ್ಥಿಕವಾಗಿ ಸದೃಢರಾದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂಬ ಆಶಯದೊಂದಿಗೆ ಈ ಬೃಹತ್ ನೀರಾವರಿ ಯೋಜನೆಗಳನ್ನು ರೂಪಿಸಲಾಗಿದೆ ಎಂದರು.

ನಾಗನಗೌಡ ಸಾತ್ಮಾರ, ಬಸವರಾಜ ದೇಶಪಾಂಡೆ, ಮಾಲತೇಶ ಶ್ಯಾಗೋಟಿ, ಉಮೇಶ ಹೆಬಸೂರ, ಚಂದ್ರಶೇಖರ ಪಾಲ್ಕರ್, ಫಕೀರಯ್ಯ ಎತ್ತಿನಮಠ, ಶಂಕ್ರಣ್ಣ ಸಂಶಿ, ವಿರೂಪಾಕ್ಷಪ್ಪ ಸಂಶಿ, ಹೇಮರೆಡ್ಡಿ ರೆಡ್ಡೇರ, ಮಂಜುನಾಥ ಪಾಲ್ಕರ, ರಾಮಣ್ಣ ಇಂಗಳಹಳ್ಳಿ, ಬಸಪ್ಪ ಗುಡಿಗೇರಿ, ರಮೇಶ ಸುಂಕದ್, ಮಂಜುನಾಥ ಬೂದಪ್ಪನವರ್, ಉಮೇಶ್ ಇಂಗಳಗಿ, ಪರಸಪ್ಪ ಮಾಡಲಗಿ, ಹಾಗೂ ಪಿಡಿಒ ಬಸವರಾಜ ಬಾಗಲ್ ಶಂಕರಗೌಡ ಮುದಿಗೌಡ್ರ, ಉಮೇಶ ಬೆನ್ನಿ, ಬಸಪ್ಪ ಹೊರಗಿನಮನಿ, ಬಸಪ್ಪ ಕುಂಬಾರ, ಬಾಬಣ್ಣ ರೆಡ್ಡೇರ ಸೇರಿದಂತೆ ಇತರರಿದ್ದರು.



ಮಾ.25ಕ್ಕೆ ಡಾ.ಅರವಿಂದ ಮೂಲಿಮನಿ ಅಭಿನಂದನಾ ಸಮಾರಂಭ

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದ ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಹಾಗೂ ವಿಜ್ಞಾನ-ತಂತ್ರಜ್ಞಾನದ ನಿಕಾಯದ ಡೀನ್ ಡಾ. ಅರವಿಂದ ಮೂಲಿಮನಿ ಅವರ ಅಭಿನಂದನಾ ಸಮಾರಂಭ ಮಾ.25ರಂದು ಬೆಳಗ್ಗೆ 10ಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಗೋಲ್ಡನ್ ಜ್ಯುಬ್ಲಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.



ಭಾನುವಾರ ಸುದ್ದಿಗೋಷ್ಠಿಯಲ್ಲಿ ಅರವಿಂದ ಮೂಲಿಮನಿ ಅಭಿನಂದನಾ ಸಮಿತಿ ಅಧ್ಯಕ್ಷ ಡಿ.ಡಿ.ಮಾಳಗಿ ಮಾತನಾಡಿ, ಸುದೀರ್ಘ 30 ವರ್ಷಗಳು ಸೇವೆ ಸಲ್ಲಿಸಿದ ಮೂಲಿಮನಿ ಅವರು ಸತ್ಯ, ಶುದ್ಧ ಕಾಯಕದ ವ್ಯಕ್ತಿಗಳಾಗಿ ಆಡಳಿತ ನಿರ್ವಹಣೆ ಮಾಡಿ, ಕವಿವಿಯ ಅಭ್ಯುದ್ಯೇಯಕ್ಕೆ ಶ್ರಮಿಸಿದರು. ವಿಶ್ವವಿದ್ಯಾಲಯದ 48 ವಿಷಯಗಳು ಮತ್ತು 18 ಪೀಠಗಳಲ್ಲಿ ಉದ್ಭವಿಸಿದ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳು ಸೂಚಿಸಿ, ಅವುಗಳ ಬೆಳವಣಿಗೆಗೆ ದುಡಿದಿದ್ದಾರೆ ಎಂದು ಸ್ಮರಣೆ ಮಾಡಿದರು.

ಡಾ.ಅರವಿಂದ ಮೂಲಿಮನಿ ಅವರ ಶಿಷ್ಯಬಳಗ ಮತ್ತು ಅಭಿಮಾನಿ ಬಳಗ ಸೇರಿ ಡಾ.ಅರವಿಂದ ಮೂಲಿಮನಿ ಅಭಿನಂದನಾ ಸಮಿತಿ ರಚಿಸಿ, ಮಾ.25ಕ್ಕೆ ಅವರಿಗೆ ಅಭಿನಂದಿಸುತ್ತಿದೆ. ಅಂದು ಭೂಗೋಳ ಭೂಷಣ ಅಭಿನಂದನಾ ಗ್ರಂಥವನ್ನೂ ಕೂಡ ಬಿಡುಗಡೆ ಮಾಡಲಾಗುತ್ತಿದೆ ಎಂದರು. ಸಮಿತಿ ಉಪಾಧ್ಯಕ್ಷ ಡಾ.ಮಲ್ಲಿಕಾರ್ಜುನ ಬಾಗೇವಾಡಿ ಮಾತನಾಡಿ, ಅಂದಿನ ಅಭಿನಂದನಾ ಕಾರ್ಯಕ್ರಮಕ್ಕೆ ಕವಿವಿ ಕುಲಪತಿ ಡಾ. ಎ.ಎಂ.ಖಾನ್, ಹಂಪಿ ವಿವಿಯ ಕುಲಪತಿ ಎ.ಮಾರಿಗೆಪ್ಪ, ಹುಬ್ಬಳ್ಳಿ ಕಾನೂನು ವಿವಿಯ ಕುಲಪತಿ ಡಾ. ಸಿ. ಬಸವರಾಜಪ್ಪ ಪಾಲ್ಗೊಳ್ಳುವುದಾಗಿ ಮಾಹಿತಿ ನೀಡಿದರು. ಸಮಾರಂಭದಲ್ಲಿ ಡಾ.ಅರವಿಂದ ಮೂಲಿಮನಿ ಅವರಿಗೆ ಸನ್ಮಾನಿಸಲಾಗುವುದು. ಅಭಿನಂದನಾ ಸಮಿತಿಯ ಅಧ್ಯಕ್ಷ ಡಿ.ಡಿ.ಮಾಳಗಿ ಅಧ್ಯಕ್ಷತೆ ವಹಿಸಲಿದ್ದು, ಮುಂಬೈ ವಿವಿಯ ಪ್ರಾಧ್ಯಾಪಕಿ ಪ್ರೊ. ಸವಿತಸ್ಮಿತಾ ಚವ್ಹಾಣ, ಡಾ.ತೇಜಸ್ವಿನಿ ನಾರಾಯಣಕರ ಭಾಗವಹಿಸುವುದಾಗಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಅರವಿಂದ ಮೂಲಿಮನಿ ಅಭಿನಂದನಾ ಸಮಿತಿ ಪದಾಧಿಕಾರಿಗಳಾದ ಪ್ರೊ. ಎಸ್.ಸಿ.ಶಿರಾಳಶೆಟ್ಟಿ, ಡಾ. ಎನ್.ಎಸ್.ತಳವಾರ, ಡಾ.ಸುರೇಶ, ಶ್ರೀಧರ ಆದಿ, ಜಿ.ಆರ್.ಕಾಂಬಳೆ, ಡಾ.ಪ್ರಭಾಕರ ಕಾಂಬಳೆ ಸೇರಿದಂತೆ ಅನೇಕರು ಇದ್ದರು.

ಇಂದಿನಿಂದ ಎರಡು ದಿನ ನಾಟಕೋತ್ಸವ

ಧಾರವಾಡ: ಡಾ. ರಾಮಮನೋಹರ ಲೋಹಿಯಾ ಜನ್ಮದಿನ, ವಿಶ್ವ ರಂಗಭೂಮಿ ದಿನಾಚರಣೆ ಪ್ರಯುಕ್ತ ನಾಟಕೋತ್ಸವ, ಡಾ. ರಾಮಮನೋಹರ ಲೋಹಿಯಾ ಪ್ರಶಸ್ತಿ ಪ್ರದಾನ, ವಿಚಾರ ಸಂಕಿರಣ ಮಾ.23 ಮತ್ತು 24ಕ್ಕೆ ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಲಾವಿದೆ ಗಾಯತ್ರಿ ಹಡಪದ, ಕರ್ನಾಟಕ ನಾಟಕ ಅಕ್ಯಾಡೆಮಿ, ವಿದ್ಯಾವರ್ಧಕ ಸಂಘದ ಸಹಯೋಗದಲ್ಲಿ ಮಾ. 23ರ ಸಂಜೆ 4ಕ್ಕೆ ನಾಟಕೋತ್ಸವಕ್ಕೆ ಚಿಂತಕ ಕಾಳೇಗೌಡ ನಾಗವಾರ ಉದ್ಘಾಟಿಸಲಿದ್ದು, ಕವಿಸಂ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅತಿಥಿಗಳಾಗಿ ಆಗಮಿಸಲಿದ್ದಾರೆ. ಸಮಾರಂಭದಲ್ಲಿ ಭಾರತ ಯಾತ್ರಾ ಕೇಂದ್ರ ಮತ್ತು ಎಂ.ಪಿ.ಪ್ರಕಾಶ ಸಮಾಜಮುಖಿ ಟ್ರಸ್ಟ್ ಕೊಡಮಾಡುವ ರಾಮ ಮನೋಹರ ಲೋಹಿಯಾ ಪ್ರಶಸ್ತಿ ಹೆಸರಾಂತ ಸಮಾಜವಾದಿ ಚಿಂತಕ ಹುಸೇನ್ ನಯೀಂ ಸುರಕೋಡ ಅವರಿಗೆ ಪ್ರದಾನ ಮಾಡಲಾಗುವುದು. ಬಿ.ಆರ್.ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಚಿಂತಕರಾದ ಕೆ.ವಿ.ನಾಗರಾಜ ಮೂರ್ತಿ ಹಾಗೂ ಜಿ.ಎನ್. ಮೋಹನ ಪಾಲ್ಗೊಳ್ಳುವರು. ಗಣೇಶ ಮಂದಾರ್ತಿ ನಿರ್ದೇಶನದಲ್ಲಿ ರಾಮ ಮನೋಹರ ಲೋಹಿಯಾ ಅವರ ಲೇಖನ ಆಧಾರಿಸಿದ ರಾಮ ಕೃಷ್ಣ ಶಿವ ನಾಟಕ ಕರಾವಳಿಯ ನಿರ್ದಿಗಂತ ತಂಡದ ಕಲಾವಿದರ ಪ್ರದರ್ಶನ ಮಾಡುವುದಾಗಿಯೂ ತಿಳಿಸಿದರು.

ಮಾ.24ರ ಬೆಳಗ್ಗೆ ವಿಚಾರ ಸಂಕಿರಣದ ಮೊದಲ ಗೋಷ್ಠಿಯಲ್ಲಿ ಕನ್ನಡ ರಂಗ ಭೂಮಿಯಲ್ಲಿ ಸಮಾಜವಾದಿ ಚಿಂತನೆಗಳ ಪ್ರಭಾವ ಮತ್ತು ಪರಿಣಾಮಗಳ ಬಗ್ಗೆ ಡಾ.



ಕೆ.ವೈ.ನಾರಾಯಣಸ್ವಾಮಿ ವಿಷಯ ಮಂಡಿಸಲಿದ್ದು, ಇದಕ್ಕೆ ಸಂಶೋಧಕ ಡಾ.ಶಿವಾನಂದ ಶೆಟ್ಟರ್ ಮತ್ತು ಅನಸೂಯಾ ಕಾಂಬಳೆ ವಿವರಣೆ ನೀಡಲಿದ್ದಾರೆ. ಅಂದು ಮಧ್ಯಾಹ್ನ 12.30ಕ್ಕೆ ಆಟಮಾಟ ತಂಡದಿಂದ ರಾಘವೇಂದ್ರ ಪಾಟೀಲ ಅವರ ಕಥೆಯಾಧರಿಸಿದ ಮತ್ತೊಬ್ಬ ಮಾಯಿ ನಾಟಕ ಪ್ರದರ್ಶನ ಜರಗಲಿದೆ. ಮಧ್ಯಾಹ್ನ 3ಕ್ಕೆ ಮಕ್ಕಳ ರಂಗಭೂಮಿ ವಿಚಾರ ಗೋಷ್ಠಿಯಲ್ಲಿ ಮಕ್ಕಳ ರಂಗಭೂಮಿ ಸಾಧ್ಯತೆ ಸವಾಲುಗಳ ಕುರಿತು ಶ್ರೀಪಾದ ಭಟ್ ವಿಷಯ ಮಂಡಿಸುವುದಾಗಿ ಹೇಳಿದರು. ಇದಕ್ಕೆ ಶಂಕರ ಹಲಗತ್ತಿ ಮತ್ತು ಕಲ್ಲಪ್ಪ ಪೂಜೇರ ಪ್ರತಿಕ್ರಿಯೆ ನೀಡಲಿದ್ದಾರೆ. ಸಂಜೆ 5.30ಕ್ಕೆ ಸಮಾರೋಪದಲ್ಲಿ ರಂಗನಿರ್ದೇಶಕ ಡಾ.ಪ್ರಕಾಶ ಗರುಡ ಸಮಾರೋಪ ಭಾಷಣ ಮಾಡಲಿದ್ದು, ಡಾ. ಸಂಜೀವ ಕುಲಕರ್ಣಿ ಅಧ್ಯಕ್ಷತೆ ವಹಿಸುವರು. ನಾಟಕ ಅಕ್ಯಾಡೆಮಿ ರಿಜಿಸ್ಟ್ರಾರ್ ಬಿ.ನೀಲಮ್ಮ ಅವರು ಪಾಲ್ಗೊಳ್ಳಲಿದ್ದಾರೆ ಎಂದರು. ಸವಿತಾ ರಾಣಿ ನಿರ್ದೇಶನದಲ್ಲಿ ಬೂಕರ್ ಪ್ರಶಸ್ತಿ ವಿಜೇತೆ ಭಾನು ಮುಸ್ತಾಕ್ ಅವರ ಎದೆಯ ಹಣತೆ ಕಥೆ ಆಧಾರಿತ ಒಮ್ಮೆ ಹೆಣ್ಣಾಗು ನಾಟಕ ಪ್ರದರ್ಶನ ಜರಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಲಾವಿದರ ಮಹಾದೇವ ಹಡಪದ, ಪ್ರಭು ಹಂಚಿನಾಳ ಇದ್ದರು.

ನವಲಗುಂದಕ್ಕೆ ಭೇಟಿ ನೀಡಿದ ಬಿವೈವಿ



ನವಲಗುಂದ: ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಬಾಗಲಕೋಟೆ ಉಪಚುನಾವಣೆ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರ ನಾಮಪತ್ರ ನಾಳೆ ಸಲ್ಲಿಕೆ ಹಿನ್ನಲೆ ಬಾಗಲಕೋಟೆ ತೆರಳುವ ಮಾರ್ಗ ಮಧ್ಯೆ ನವಲಗುಂದ ಪಟ್ಟಣಕ್ಕೆ ಭೇಟಿ ನೀಡಿದರು.

ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ನೇತೃತ್ವದಲ್ಲಿ ಬಿಜೆಪಿ ಮುಖಂಡರು ಹಾಗೂ ಯುವಕರು ರಾಜ್ಯಾಧ್ಯಕ್ಷರಿಗೆ ಹೂಗುಚ್ಛ ನೀಡಿ ಸ್ವಾಗತಿಸಿ ಸನ್ಮಾನಿಸಿದರು. ಈ ವೇಳೆ ರಾಜ್ಯಾಧ್ಯಕ್ಷ ಬಿ.ವೈ. ವಿಜೇಯಂದ್ರ ಅವರು ಬಿಜೆಪಿ ಮುಖಂಡರೊಂದಿಗೆ ಆಗಮಿಸಿ ರೈತ ಹುತಾತ್ಮ ಬಸಪ್ಪ ಲಕ್ಕುಂಡಿ ರೈತ ವೀರಗಲ್ಲಿಗೆ ಮಾಲಾರ್ಪಣೆ ಮಾಡಿದರು. ಬಿಜೆಪಿ ಮುಖಂಡರಾದ ಗಂಗಪ್ಪ ಮನವಿ, ಷಣ್ಮುಖ ಗುರಿಕಾರ, ನಿಂಗಪ್ಪ ಸುತಗಟ್ಟಿ, ಎ.ಬಿ.ಹಿರೇಮಠ, ದೇವರಾಜ ದಾಡಿಬಾವಿ, ಮಂಜುನಾಥ ಗಣಿ, ಅರುಣ ಮೆಣಸಿನಕಾಯಿ, ಸಿದ್ದನಗೌಡ ಪಾಟೀಲ, ಸಾಯಿಬಾಬಾ ಆನೆಗುಂದಿ, ಎಸ್.ಬಿ. ದಾನಪ್ಪಗೌಡ್ರ, ಶಿವಾನಂದ ಗೊಂಡಗೋವಿ, ಮಾಂತೇಶ ಕಲಾಲ್, ಈರಣ್ಣ ಚವಡಿ, ಈರಣ್ಣ ಹಸಬಿ, ದೇವರಾಜ ಹಿರೇಮಠ, ಬಸವರಾಜ ಕಾತರಕಿ, ಶಂಕರ ತೋಟದ, ಪ್ರಭು ಇಬ್ರಾಹಿಂಪುರ, ಪವನ್ ಪಾಟೀಲ, ಕೃಷ್ಣಾ ಭೋವಿ, ಪ್ರಕಾಶ ಮಗಜಿ ಸೇರಿದಂತೆ ಕ್ಷೇತ್ರದ ಬಿಜೆಪಿ ಮುಖಂಡರು, ಕಾರ್ಯಕರ್ತರು ಇದ್ದರು.

ಒತ್ತಡ ನಿವಾರಣೆಗೆ ಕ್ರೀಡೆ ಮುಖ್ಯ

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದ ಅಂತರ್ ಮಹಾ ವಿದ್ಯಾಲಯಗಳ ಮಹಿಳೆಯರ ಏಕವಲಯ ಖೋ-ಖೋ ಪಂದ್ಯಾವಳಿ ಕಿಟಲ್ ವಿಜ್ಞಾನ ಕಾಲೇಜಿನ ಮೈದಾನದಲ್ಲಿ ಜರುಗಿದವು.

ಸ್ಪರ್ಧೆಯಲ್ಲಿ ಏಳು ತಂಡಗಳು ಪಾಲ್ಗೊಂಡಿದ್ದು, ಜೆಎಸ್ಸೆಸ್ ಕಾಲೇಜು ಪ್ರಥಮ, ಕವಿವಿಯ ಬಿಪಿಇಡ್ ಕಾಲೇಜು ದ್ವಿತೀಯ, ನರಗುಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತೃತೀಯ ಸ್ಥಾನ ಪಡೆದವು.

ಅಂತಾರಾಷ್ಟ್ರೀಯ ಕ್ರೀಡಾಪಟು ಅಭಿಷೇಕ ಯಲಿಗಾರ, ಮಾನಸಿಕ ಒತ್ತಡದಿಂದ ಬಲಗೊಳ್ಳಲು, ದೈಹಿಕವಾಗಿ ಬಲಗೊಳ್ಳಲು ವಿದ್ಯಾರ್ಥಿಗಳಿಗೆ ಕ್ರೀಡೆ ಮುಖ್ಯ ಪಾತ್ರ ವಹಿಸುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಅನೂಪ್ ಥಿಯೋಫಿಲಸ್ ಮಾತನಾಡಿ, ಯಾವುದೇ ಕೆಲಸ ಆಸಕ್ತಿ ಮತ್ತು ಶ್ರದ್ಧೆಯಿಂದ ಮಾತ್ರವೇ ಗುರಿ ತಲುಪಲು ಸಾಧ್ಯ. ಗುರಿ ಬೆನ್ನಟ್ಟಲು ಹೇಳಿದರು.

ಜಿ.ವಿಮಲಾ, ಡಾ.ಪ್ರೇಮಲತಾ ಕೋಟಿ, ಡಾ.ನರಸಿಂಹ ಮೂರಿ, ಝೇವಿಯರ್ ಗಾಮಾ, ಡಾ. ಎ.ಎಲ್.ಹರಿಹರ ಇದ್ದರು.



ಅಭಿವೃದ್ಧಿ ನನ್ನ ಕನಸು: ಕೋನರಡ್ಡಿ



ಅಣ್ಣಿಗೇರಿ: ರಂಜಾನ ಹಬ್ಬದ ಶುಭಾಷಯಗಳನ್ನು ಶಾಸಕ ಎನ್. ಎಚ್. ಕೋನರಡ್ಡಿ ತಿಳಿಸಿದರು.

ಅಣ್ಣಿಗೇರಿಯ ನೂತನವಾಗಿ ನಿರ್ಮಿಸಿದ ಈದಗಾ ಮೈದಾನದಲ್ಲಿ ಪ್ರಾರ್ಥನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಅಣ್ಣಿಗೇರಿಯಲ್ಲಿ ಅಭಿವೃದ್ಧಿ ಪಡಿಸಿದ ಈದ್ಗಾ ಕಟ್ಟಡ ಹಾಗೂ ಆವರಣಕ್ಕೆ ಮೊರಂ ಹಾಕಿ ಲೆವಲ್ ಹಾಗೂ ರೋಲಿಂಗ್ ಮಾಡಿದ್ದು ಸಾರ್ವಜನಿಕರ ಮೆಚ್ಚುಗೆಗೆ ಕಾರಣವಾಗಿ ಅಭಿವೃದ್ಧಿ ನನ್ನ ಕನಸಾಗಿದ್ದು ಈಗಾಗಲೇ ಅಣ್ಣಿಗೇರಿ ಅಂಜುಮನ ಸಂಸ್ಥೆಯ ಈ ವಿಶಾಲವಾದ ಈದಗಾ ಮೈದಾನದ ಸುತ್ತಲೂ ಕಂಪೌಂಡ ಗೋಡೆ ನಿರ್ಮಿಸಲು 50 ಲಕ್ಷ ರೂ. ಅನುದಾನ ನೀಡಲಾಗಿದ್ದು, ಒಟ್ಟು ಅಣ್ಣಿಗೇರಿ ನಗರಕ್ಕೆ ರೂ. 1.45 ಕೋಟಿ ಅನುದಾನ ಬಿಡುಗಡೆಗೊಳಿಸಿದ್ದೇನೆ ಎಂದರು.

ಅಣ್ಣಿಗೇರಿ ಮುಸ್ಲಿಂ ಧರ್ಮಗುರುಗಳಾದ ಅಲ್ಹಾಜ್ ಸಜ್ಜಾದಹುಸೇನ ಖಾಜಿ, ಮಮ್ಮದಶಫೀ ಖಾಜಿ, ಸಜ್ಜಾದಹುಸೇನ ಖಾದ್ರಿ, ಮಮ್ಮದಸಮ್ಮದ ಖಾಜಿ, ಅಬ್ದುಲಖಾದರ ಖಾಜಿ, ಕೃಷಿ ವಿಜ್ಞಾನಿ ಅಬ್ದುಲಖಾದರ ನಡಕಟ್ಟಿನ, ವಿನೋದ ಅಸೂಟಿ, ಪುರಸಭೆ ಅಧ್ಯಕ್ಷ ಶಿವಾನಂದ ಬೆಳಹಾರ, ಉಪಾಧ್ಯಕ್ಷ ನಾಗರಾಜ ದಳವಾಯಿ, ಅಂಜುಮನ್ ಸಂಸ್ಥೆ ಅಧ್ಯಕ್ಷ ಪಕ್ರುಅಲಿ ಲೋಕಾಪೂರ ಇತರರಿದ್ದರು.

ಇಂದು ಎರಡು ನಾಟಕ ಪ್ರದರ್ಶನ

ಧಾರವಾಡ: ಹುಬ್ಬಳ್ಳಿಯ ಕರ್ನಾಟಕ ನಾಟಕ ಜಾನಪದ ಕಲಾವಿದರ ಅಭಿವೃದ್ಧಿ ಸಂಘ ಹಾಗೂ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ನಾಟಕೋತ್ಸವ ಸಮಾರಂಭ ಮಾ.23ರಂದು ಸಂಜೆ 5.30ಕ್ಕೆ ರಂಗಾಯಣದ ಸಾಂಸ್ಕೃತಿಕ ಸಮುಚ್ಚಯದಲ್ಲಿ ಜರುಗಲಿದೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಲಾವಿದ ಪ್ರಭು ಹಂಚಿನಾಳ, ವಕೀಲರಾದ ಕಲ್ಮೇಶ ಹಾವೇರಿಪೇಟ್ ನಾಟಕೋತ್ಸವಕ್ಕೆ ಚಾಲನೆ ನೀಡಲಿದ್ದು, ಕನ್ನಡ-ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ್ ಬೆಕ್ಕೇರಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಕವಿಸಂ ಕೋಶಾಧ್ಯಕ್ಷ ಸತೀಶ ತುರಮರಿ, ಕಲಾವಿದೆ ಗೀತಾ ಚಿಕ್ಕಮಠ, ಸಮಾಜ ಸೇವಕಿ ಪುಷ್ಪಾ ಹಿರೇಮಠ, ಸಾಮಾಜಿಕ ಚಿಂತಕ ಲಕ್ಷ್ಮಣ ಬಕ್ಕಾಯಿ ಪಾಲ್ಗೊಳ್ಳಲಿದ್ದು, ಧಾರವಾಡ ಕರ್ನಾಟಕ ಸಂಘದ ಅಧ್ಯಕ್ಷ ಡಾ.ಹೆಲನ್ ಮೈಸೂರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು. ಸಮಾರಂಭದಲ್ಲಿ ರಂಗ ನಿರ್ದೇಶಕ ಮಹಾದೇವ ಹಡಪದ, ರಂಗಬದುಕು ಟ್ರಸ್ಟ್ ಕಾರ್ಯದರ್ಶಿ ಮಧು ಬಿ.ಜಿ., ಖಜಾಂಚಿ ಗೋಪಿಕಾ ಗೋವಿಂದಸ್ವಾಮಿ, ಹಿರಿಯ ಕಲಾವಿದ ಮಲ್ಲಿಕಾರ್ಜುನ ಚಿಕ್ಕಮಠ ಸೇರಿದಂತೆ ವಿವಿಧ ಕಲಾವಿದರು, ಚಿಂತಕರು ಪಾಲ್ಗೊಳ್ಳುವುದಾಗಿ ಮಾಹಿತಿ ನೀಡಿದರು. ಅಂದು ಸಂಜೆ 6.30ಕ್ಕೆ ಬಸವರಾಜ ಸಬರದ ರಚಿಸಿ, ಡಾ.ಹೆಲನ್ ಮೈಸೂರು ನಿರ್ದೇಶನದ ಕುಡುಕ ನಿಜ ಶರಣನಾದ ಹಾಗೂ ಸಂಜೆ 7.30ಕ್ಕೆ ಹುಣಸೆಗಿಡ ಮುಪ್ಪಾದರು ಹುಳಿ ಮುಪ್ಪೆ ನಾಟಕವನ್ನು ಬೆಂಗಳೂರಿನ ರಂಗಬದುಕು ಟ್ರಸ್ಟ್ ಕಲಾವಿದರು ಪ್ರಸ್ತುತಪಡಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಲಾವಿದರಾದ ಕಲ್ಮೇಶ ಹಾವೇರಪೇಟ್, ರೇಷ್ಮಾ ತಿಪ್ಪಗೋಳ ಇದ್ದರು.



ಕಿರುಸುದ್ದಿ

ಸಿಡಿಲು ಬಡಿದು ಯುವಕ ಸಾವು

ಹೂವಿನಹಡಗಲಿ: ತಾಲೂಕಿನ ಕಂದಗಲ್ಲು ಗ್ರಾಮದಲ್ಲಿ ಕುರಿಗಳಿಗೆ ಮೂಜೆ ಸಲ್ಲಿಸಿ ಮನೆಗೆ ಬರುತ್ತಿದ್ದ ಯುವಕನಿಗೆ ಸಿಡಿಲು ಬಡಿದು ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಬುಧವಾರ ರಾತ್ರಿ ನಡೆದಿದೆ. ಗ್ರಾಮದ ಪ್ರಶಾಂತ (21) ಮೃತ ಯುವಕ.



ಮೃತ ಯುವಕ ಹಾಗೂ ಆತನ ಸ್ನೇಹಿತರಾದ ಎಂ.ಸಂತೋಷ್ (21), ಜಿ.ಗೊಣೇಶ್ (22) ಯುಗಾದಿಯ ಅಮವಾಸ್ಯೆ ಅಂಗವಾಗಿ ಜಮೀನಿನಲ್ಲಿದ್ದ ಕುರಿಗಳಿಗೆ ಪೂಜೆ ಸಲ್ಲಿಸಿ ಮನೆಗೆ ಮರಳುತ್ತಿದ್ದ ಸಂದರ್ಭ ಅತಿಯಾದ ಗಾಳಿ ಬೀಸಿ ಮಳೆ ಸುರಿದಿದೆ. ಮಳೆ ಪ್ರಮಾಣ ಕಡಿಮೆಯಾಗುತ್ತಿದಂತೆ ಮನೆಗೆ ಬೇಗನೆ ಮನೆಗೆ ತೆರಳುತ್ತಿದ್ದಾಗ ರಸ್ತೆಯ ಮಧ್ಯದಲ್ಲಿಯೇ ಸಿಡಿಲುತಾಗಿದೆ. ಸಿಡಿಲಿಗೆ ಪ್ರಸನ್ನ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಗಾಯಗೊಂಡಿದ್ದ ಎಂ.ಸಂತೋಷ್ ಮತ್ತು ಗೊಣೇಶರನ್ನು ಹೆಚ್ಚಿನ ಚಿಕಿತ್ಸೆಗೆ ಗದಗದ ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದೆ. ಮೃತ ಯುವಕನಿಗೆ ತಂದೆ, ತಾಯಿ, ತಮ್ಮ, ತಂಗಿ ಇದ್ದಾರೆ. ಸಿಡಿಲಿಗೆ ಯುವಕ ಮತಪಟ್ಟ ಹಿನ್ನೆಲೆಯಲ್ಲಿ ಯುಗಾದಿ ಸಂದರ್ಭದಲ್ಲಿ ನಡೆಯುತ್ತಿದ್ದ ರಣದಮ್ಮ ದೇವಿ ಜಾತ್ರೆ ಸ್ಥಗಿತಗೊಳಿಸಲಾಯಿತು.

ಬಾಲಕನ ಮೇಲೆ ಹಲ್ಲೆ: ದೂರು ದಾಖಲು

ಭಟ್ಕಳ: ಅಪ್ರಾಪ್ತ ಬಾಲಕನಿಗೆ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿದ ಆರೋಪದಡಿಯಲ್ಲಿ ಪಕ್ಕದ ಮನೆಯ ವ್ಯಕ್ತಿಯೋರ್ವರ ಮೇಲೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತನ್ನ ಪಕ್ಕದ ಮನೆಯ ಹುಡುಗ, ತನ್ನ ಅಪ್ರಾಪ್ತ ಮಗಳೊಂದಿಗೆ ಮೊಬೈಲ್ ಮೂಲಕ ಮಾತನಾಡುತ್ತಿದ್ದ ಹಿನ್ನೆಯಲ್ಲಿ ಬಾಲಕನಿಗೆ ಅಪ್ರಾಪ್ತ ಬಾಲಕಿಯ ತಂದೆ ಮಾತನಾಡದಂತೆ ತಾಕೀತು ಮಾಡಿದ್ದರೆನ್ನಲಾಗಿದೆ. ಆದರೂ ಸಹ ಬಾಲಕ ಮೊಬೈಲ್ ಮೂಲಕ ಬಾಲಕಿಗೆ ಮೆಸೇಜ್ ಮಾಡಿದ್ದನ್ನು ನೋಡಿದ ಬಾಲಕಿಯ ತಂದೆ ತೀವ್ರ ಸಿಟ್ಟಾಗಿದ್ದು ಪಕ್ಕದ ಮನೆಯ ಬಾಲಕನನ್ನು ಸಮುದ್ರ ಕಿನಾರೆಗೆ ಕರೆದುಕೊಂಡು ಹೋಗಿ ಕೈಯಿಂದ ಹಾಗೂ ಮೊಬೈಲ್ ಚಾರ್ಜರ್ ವಯರ್‌ನಿಂದ ಮೈಮೇಲೆ ಬಾಸುಂಡೆ ಬರುವಂತೆ ಹಲ್ಲೆ ನಡೆಸಿದ್ದಲ್ಲದೇ ಜೀವ ಬೆದರಿಕೆ ಹಾಕದ್ದಾನೆ. ವಿಷಯ ಯಾರಿಗಾದರೂ ತಿಳಿಸಿದರೆ ಕೊಲೆ ಮಾಡುವುದಾಗಿಯೂ ಬೆದರಿಕೆ ಒಡ್ಡಿದ್ದಾನೆ ಎನ್ನಲಾಗಿದೆ. ಹಲ್ಲೆಯ ತೀವ್ರತೆಯಿಂದ ಬಾಲಕನ ಕಿವಿಗೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಬಾಲಕ ಕಿವಿ ನೋವಿನಿಂದ ಬಳಲುತ್ತಿರುವ ವಿಷಯ ಬಾಲಕನ ತಾಯಿಗೆ ತಿಳಿದು ವಿಚಾರಿಸಿದಾಗ ವಿಷಯ ತಿಳಿದು ಬಂದಿದೆ. ಈ ಕುರಿತು ಬಾಲಕನ ತಾಯಿ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸಿದ್ದಾರೆ.

ಅಪಘಾತ: ಇಬ್ಬರ ದುರ್ಮರಣ

ಧಾರವಾಡ: ದ್ವಿಚಕ್ರ ವಾಹಕ್ಕೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಯುವಕರು ಮೃತಪಟ್ಟ ಘಟನೆ ಧಾರವಾಡ ತಾಲೂಕಿನ ಚಿಕ್ಕಮಲ್ಲಿಗವಾಡ ರಸ್ತೆಯಲ್ಲಿ ಶನಿವಾರ ನಡೆದಿದೆ. ಲಕಮಾಪುರದ ಯುವಕ ಇಮಾಮ್ ಹೆಬ್ಬಳ್ಳಿ (23) ಸ್ಥಳದಲ್ಲಿಯೇ ಮೃತಪಟ್ಟಿದ್ದು, ಮತ್ತೊಬ್ಬ ಯುವಕ ಅನಾಸ್ ಮುಲ್ಲಾನವರ (17) ಭಾನುವಾರ ಚಿಕಿತ್ಸೆ ಫಲಿಸದೆ, ಆಸ್ಪತ್ರೆಯಲ್ಲಿ ಅಸುನೀಗಿದ್ದಾನೆ. ಇಮಾಮ್‌ಗೆ ವಿವಾಹ ನಿಶ್ಚವಾಗಿತ್ತು. ಸ್ನೇಹಿತ ಅನಾಸ್ ಜೊತೆ ಭಾವಿ ಪತ್ನಿ ಊರಿಗೆ ಹೋಗಿ, ವಾಪಸ್ ಬರುವ ವೇಳೆ ಬೈಕ್ ಮತ್ತು ಲಾರಿ ಮಧ್ಯೆ ಈ ದುರ್ಘಟನೆಯು ಸಂಭವಿಸಿದೆ. ಈ ಕುರಿತು ಸಂಚಾರ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ತನಿಖೆ ನಡೆಸಿದ್ದಾರೆ.

ಬೈಕ್ ಸವಾರ ಸಾವು

ಭಟ್ಕಳ: ದುಡುಕಿನ ಹಾಗೂ ಅತಿವೇಗದ ಚಾಲನೆಯಿಂದ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರನೊಬ್ಬ ಸ್ಥಳದಲ್ಲೇ ಮೃತಪಟ್ಟ ಘಟನೆ ರಾಷ್ಟ್ರೀಯ ಹೆದ್ದಾರಿ-66ರಲ್ಲಿ ಗುಡಿಗದ್ದೆ ತಿರುವಿನಲ್ಲಿ ಸಂಭವಿಸಿದೆ. ಮೃತ ವ್ಯಕ್ತಿಯನ್ನು ಬೈಲೂರು ಸಣ್ಣಬಲ್ಸೆ ನಿವಾಸಿ ರಾಮಚಂದ್ರ ಮಂಜುನಾಥ ದೇವಡಿಗ (40) ಎಂದು ಗುರುತಿಸಲಾಗಿದೆ. ಈತನು ಮಾ.21ರಂದು ರಾತ್ರಿ ವೇಳೆಯಲ್ಲಿ ನನ್ನ ಬೈಕ್‌ನಲ್ಲಿ ಮುರ್ಡೇಶ್ವರದಿಂದ ಬೈಲೂರು ಕಡೆಗೆ ಹೋಗುತ್ತಿದ್ದಾಗ ವೇಗದ ಚಾಲನೆಯಿಂದಾಗಿ ಗುಡಿಗದ್ದೆ ಕ್ರಾಸ್‌ನಲ್ಲಿ ಬೈಕ್ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ರಸ್ತೆಗೆ ಬಿದ್ದು ಮಂಜುನಾಥನ ತಲೆ ಹಾಗೂ ಮುಖಕ್ಕೆ ಗಂಭೀರ ಗಾಯಗಳಾಗಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಈ ಕುರಿತು ಮೃತನ ಸಹೋದರ ಪರಮಯ್ಯ ದೇವಡಿಗ ಮುರ್ಡೇಶ್ವರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪ್ರಕರಣ ದಾಖಲಿಸಿಕೊಂಡ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಯುಕೆಪಿ ಯೋಜನೆ: ಯಾರ್ಯಾರ ಕೊಡುಗೆ ಏನು

ಬಹಿರಂಗ ಚರ್ಚೆಗೆ ತಿಮ್ಮಾಪುರಗೆ ಸಂಸದ ಕಾರಜೋಳರ ಆಹ್ವಾನ

ಬಾಗಲಕೋಟೆ: 1956ರಿಂದ 2026ವರೆಗೆ ಕೃಷ್ಣಾ ಮೇಲ್ದಂಡೆ ಯೋಜನೆಗೆ ಯಾರ್ಯಾರ ಕಾಲದಲ್ಲಿ ಏನೇನು ಅಭಿವೃದ್ಧಿ ಮಾಡಿದ್ದಾರೆಂದು ದಾಖಲೆ ಸಮೇತ ಉತ್ತರ ನೀಡಲು ಸಿದ್ಧನಿದ್ದೇನೆ. ಅಬಕಾರಿ ಸಚಿವ ತಿಮ್ಮಾಪುರ ಬಹಿರಂಗ ಚರ್ಚೆಗೆ ಬಂದರೆ ಉತ್ತರ ಕೊಡುವೆ ಎಂದು ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಹೇಳಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಲಮಟ್ಟಿ ಜಲಾಶಯಕ್ಕೆ ಮುಳಗಡೆಯಾಗುವ ಭೂಮಿಗೆ, ಮನೆಗೆ ಹಿಂದೆ ಎಷ್ಟು ಪರಿಹಾರ ಕೊಟ್ಟಿದ್ದೀರಿ ಎಂಬುದನ್ನು ತಿಮ್ಮಾಪುರ ತಿಳಿಸಬೇಕು. ನಮ್ಮ ಬೊಮ್ಮಾಯಿ ಸರ್ಕಾರ ಬಂದ ನಂತರ ಮಾರುಕಟ್ಟೆ ದರ ಜತೆಗೆ ಎಸ್ಟಿಮೇಟ್ ಮಾಡಿದ ಬಳಿಕ ಶೇ.25ರಷ್ಟು ದರವನ್ನು ನೀಡಿ ಪರಿಹಾರ ನೀಡಿದ್ದೇವೆ. ನೀರಾವರಿ ಮಂತ್ರಿಯಾಗಿದ್ದಾಗೆ ಜಿಲ್ಲೆಗೆ ನನ್ನ ಕೊಡುಗೆ ಸೇರಿದಂತೆ ಯಾರು ಎಷ್ಟು ಕೆಲಸ ಮಾಡಿದ್ದಾರೆ ಎಂಬುದನ್ನು ಉತ್ತರ ಕೊಡುವೆ ತಿಮ್ಮಾಪುರ ದಾಖಲೆ ತಂದು ಉತ್ತರ ನೀಡಲಿ ಎಂದು ಪಂಥಾಹ್ವಾನ ನೀಡಿದರು.

ಯುಕೆಪಿ ಯೋಜನೆಯಡಿ ಮುಳಗಡೆಯಾಗಿರುವ ಭೂಮಿಗೆ ನ್ಯಾಯಾಲಯಕ್ಕೆ ಹೋಗಿರುವ ರೈತರಿಗೆ 25 ಸಾವಿರ ಕೋಟಿ ರೂ. ಪರಿಹಾರವನ್ನು ಸರ್ಕಾರ ನೀಡಬೇಕಾಗಿದೆ. ಆದರೆ, ಬಜೆಟ್‌ದಲ್ಲಿ ಹಣವೇ ಮೀಸಲಿಟ್ಟಿಲ್ಲ ಎಂದರು.

ಎಸ್ಸಿ ಎಸ್ಟಿ ಜನಾಂಗಕ್ಕೆ ಒಳಮೀಸಲಾತಿ ಕುರಿತು ನಾಗಮೋಹನ್ ದಾಸ್ ಅವರು ಮೈತ್ರಿ ಸರ್ಕಾರವಿದ್ದಾಗ ಅದನ್ನು ವರದಿ ಸಲ್ಲಿಸಿದ್ದಾರೆ. 2022ಕ್ಕೆ ಬೊಮ್ಮಾಯಿ ಮುಖ್ಯಮಂತ್ರಿ ಇದ್ದಾಗ ಸರ್ವ ಪಕ್ಷದ ಸಭೆ ಕರೆದಾಗ ಎಲ್ಲರೂ ಇದಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ನಂತರ ಎರಡೂ ಸದನದಲ್ಲಿ ಕೂಡ ಅದರ ಮೇಲೆ ಚರ್ಚೆ ಕೂಡ ಆಗಿದೆ. ಎಸ್ಸಿ ಜನಾಂಗಕ್ಕೆ ಶೇ.17ರಷ್ಟು , ಶೇ.7ರಷ್ಟು ಮೀಸಲಾತಿ ನೀಡಲು ನಮ್ಮ ಸರ್ಕಾರ ಕೈಗೊಂಡ ನಿರ್ಣಯವಾಗಿದೆ. ಅದರಿಂದ ಸಾವಿರಾರು ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಅನುಕೂಲ ಕೂಡ ಆಗಿದೆ. ಬೊಮ್ಮಾಯಿ ತಪ್ಪು ಮಾಡಿದ್ದರೆ ನಿಲ್ಲಿಸಬೇಕಿತ್ತು ಈಗ ಒಳಮೀಸಲಾತಿಯನ್ನು ಶೇ.24ರಷ್ಟು ಮಾಡುತ್ತೇವೆ ಎನ್ನುತ್ತಾರೆ. ತಿಮ್ಮಾಪುರ ಜ್ಞಾನ ಇಲ್ಲದೇ ಏನೇನೂ ಮಾತನಾಡುತ್ತಾರೆ ಎಂದರು.

ಮೀಸಲಾತಿಯನ್ನು ಜನಸಂಖ್ಯೆಗೆ ಅನುಗುಣವಾಗಿ ಜಾರಿಗೆ ಮಾಡುತ್ತೇವೆ ಅಧಿಕಾರಕ್ಕೆ ಬಂದ ಮೊದಲ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಲಾಗುವುದು ಹೇಳಿದವರು ಇನ್ನೂ ಕೂಡ ಜಾರಿ ಮಾಡಿಲ್ಲ. ಒಳಮೀಸಲಾತಿ ನೀಡುವಾಗ ಅಲೆಮಾರಿ ಜನಾಂಗಕ್ಕೆ ದ್ರೋಹ ಮಾಡಿದ್ದಾರೆ. ಈ ಸರ್ಕಾರ ಸಂವಿಧಾನದ ಜತೆಗೆ ದಲಿತರಿಗೆ ದೊಡ್ಡ ದ್ರೋಹ ಮಾಡಿದೆ ಎಂದು ಆರೋಪಿಸಿದರು.

ಮೀಸಲಾತಿ ವಿಷಯ ಬಂದಾಗ ನ್ಯಾಯಾಲಯಕ್ಕೆ ಮಂಡ್ಯ, ರಾಯಚೂರ ಸೇರಿದಂತೆ ಇನ್ನಿತರ ಕಡೆ ಹೋದವರು ಕಾಂಗ್ರೆಸ್ ಪಕ್ಷದ ನಾಯಕರ ಶಿಷ್ಯರೇ ಆಗಿದ್ದಾರೆ ಎಂದರು.

ಚುನಾವಣಾ ಉಸ್ತುವಾರಿ ಅರುಣ್ ಶಹಾಪುರ, ತಳ್ಳಿಕೇರಿ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ, ಮಾಜಿ ಶಾಸಕ ಪಿ.ರಾಜೀವ್, ಸತ್ಯನಾರಾಯಣ ಹೇಮಾದ್ರಿ, ಬಸವರಾಜ ಯಂಕಂಚಿ, ಮುತ್ತಣ್ಣ ಬೆಣ್ಣೂರ, ಯಲ್ಲಪ್ಪ ಬೆಂಡಿಗೇರಿ ಇದ್ದರು.

ಪದ್ಮಶ್ರೀ ಪಂ.ವೆಂಕಟೇಶಕುಮಾರ್ ಅಭಿಮತ

ಸಂಗೀತ ಸ್ವರಗಳ ಜೋಡಣೆ ಅಲ್ಲ, ತಪಸ್ಸು

ಧಾರವಾಡ: ನಗರದ ಆಲೂರು ವೆಂಕಟರಾಯವ್ ಭವನದಲ್ಲಿ ಪಂ. ಪಂಚಾಕ್ಷರಿ ಗವಾಯಿಗಳ 135ನೇ ಜಯಂತಿ, ಪಂ.ಪಂಚಾಕ್ಷರಿ ಗವಾಯಿಗಳ ರಾಷ್ಟ್ರೀಯ ಯುವ ಪ್ರಶಸ್ತಿ ಪ್ರದಾನ ಹಾಗೂ ಪರಂಪರಾ ಸಂಗೀತ ಉತ್ಸವ ಭಾನುವಾರ ಜರುಗಿತು.

ಸಮಾರಂಭದಲ್ಲಿ ಮಾನವಿ ವಿದ್ಯಾಧರೆ ಶೈಕ್ಷಣಿಕ-ಸಾಂಸ್ಕೃತಿಕ ಟ್ರಸ್ಟ್ ಕೊಡ ಮಾಡುವ 2026ನೇ ಸಾಲಿನ ರೂ.25 ಸಾವಿರ ನಗದು, ಸ್ಮರಣಿಕೆ ಒಳಗೊಂಡ ಪಂ. ಪಂಚಾಕ್ಷರಿ ಗವಾಯಿ ರಾಷ್ಟ್ರೀಯ ಯುವ ಪ್ರಶಸ್ತಿಯನ್ನು ಬೆಂಗಳೂರಿನ ಗಾಯಕ ಕೌಶಿಕ್ ಐತಾಳ್ ಅವರಿಗೆ ಪ್ರದಾನಿಸಿ, ಗೌರವಿಸಲಾಯಿತು.

ಪ್ರಶಸ್ತಿ ಪ್ರದಾನಿಸಿದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಪಂ.ಎಂ.ವೆಂಕಟೇಶಕುಮಾರ ಮಾತನಾಡಿ, ಸಂಗೀತ ಕೇವಲ ಸ್ವರಗಳ ಜೋಡಣೆ ಅಲ್ಲ, ಅದೊಂದು ತಪಸ್ಸು. ಪಂ.ಪಂಚಾಕ್ಷರಿ ಗವಾಯಿಗಳು ಕೇವಲ ಸಂಗೀತ ಕಲಿಸದೆ. ಸಾವಿರಾರು ಅಂಧ ಮಕ್ಕಳ ಬಾಳಿಗೆ ಬೆಳಕಾದ ಮಹಾನ್ ಚೇತನ ಎಂದು ಬಣ್ಣಿಸಿದರು. ಶಿಸ್ತು ಮತ್ತು ಪರಿಶ್ರಮ ಇಲ್ಲದೆ, ಸಂಗೀತ ಸಿದ್ಧಿಸುವುದು ಅಸಾಧ್ಯ. ಹೀಗಾಗಿ ಸಂಗೀತಾಸಕ್ತ ಇಂದಿನ ಯುವ ಪೀಳಿಗೆ ಬದುಕಿನಲ್ಲಿ ಶಿಸ್ತು ರೂಢಿಸಿಕೊಳ್ಳಬೇಕು. ಪ್ರಶಸ್ತಿ ಪಡೆದವರು ಪರಂಪರೆ ಎತ್ತಿ ಹಿಡಿಯಬೇಕು ಎಂದು ಸಲಹೆ ನೀಡಿದರು. ಪ್ರಶಸ್ತಿ ಸ್ವೀಕರಿಸಿದ ಹಿಂದೂಸ್ತಾನಿ ಗಾಯಕ ಕೌಶಿಕ್ ಐತಾಳ್ ಮಾತನಾಡಿ, ಪಂ. ಪಂಚಾಕ್ಷರಿಗವಾಯಿಗಳ ಹೆಸರಿನ ಪ್ರಶಸ್ತಿ ಸ್ವೀಕರಿಸುವುದು ನನ್ನ ಬದುಕಿನ ಅವಿಸ್ಮರಣೀಯ ಕ್ಷಣ. ಸಂಗೀತ ಉಳಿಸಿ, ಬೆಳೆಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ವಾಗ್ದಾನ ಮಾಡಿದರು.

ಧಾರವಾಡ ಮುರುಘಾಮಠದ ಪೀಠಾಧ್ಯಕ್ಷ ಡಾ.ಮಲ್ಲಿಕಾರ್ಜುನ ಶ್ರೀಗಳು ಸಾನ್ನಿಧ್ಯ, ಗಾಯಕ ವಿರೂಪಾಕ್ಷಯ್ಯ ವಂದಲಿ ಅಧ್ಯಕ್ಷತೆ ವಹಿಸಿದ್ದರು. ಟ್ರಸ್ಟ್ ಅಧ್ಯಕ್ಷ ಬಸವರಾಜ ವಂದಲಿ, ಶಾಂತಾರಾಮ ಹೆಗಡೆ, ರಾಘವ ಕಮ್ಮಾರ, ಉದಯ ದೇಸಾಯಿ ಅನೇಕರು ಇದ್ದರು. ಇದಕ್ಕೂ ಮೊದಲು ರಮೇಶ ಭಜಂತ್ರಿ ಶಹನಾಯಿ, ಅರಣ್ಯಕುಮಾರ ಸಿತಾರಾ ವಾದನ, ರವಿಕಿರಣ್ ನಾಕೋಡ್ ತಬಲಾ ಸೋಲೋ, ಸಿದ್ದಾರ್ಥ ಬೆಳ್ಮಣ್ಣು, ಶಿವಾನಿ ಜೈನ್, ಆಕಾಶ ಪಂಡಿತ, ಐಶ್ವರ್ಯ ದೇಸಾಯಿ ಗಾಯನ ಪ್ರಸ್ತುತಪಡಿಸಿದರು.



ರೈತರನ್ನು ಉಳಿಸಲು ಕೆರೆಗಳನ್ನು ಉಳಿಸಿ: ಬೊಮ್ಮಾಯಿ

ಶಿಗ್ಗಾವಿ: ರಾಜ್ಯ ಸರ್ಕಾರಕ್ಕೆ ರೈತರನ್ನು ಉಳಿಸಿಕೊಳ್ಳಬೇಕೆಂಬ ಮನಸ್ಸಿದ್ದರೆ ಕೆರೆಗಳನ್ನು ಉಳಿಸಬೇಕು. ಕೆರೆಗಳನ್ನು ಸರಿಯಾಗಿ ನಿರ್ವಹಣೆ ಮಾಡಿದರೆ ಪ್ರವಾಹ ಆಗುವುದಿಲ್ಲ, ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಕೆರೆ ಹೂಳು ತೆಗೆಯಲು 200 ಕೋಟಿ ರೂ. ಇಟ್ಟಿದ್ದರು. ಅದೇ ರೀತಿ ಕೆರೆ ಹೂಳು ತೆಗೆಯಲು ರಾಜ್ಯ ಸರ್ಕಾರ ಪ್ರತ್ಯೇಕ ಹಣ ಮೀಸಲಿಡಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ಶಿಗ್ಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿಗ್ಗಾವಿ-ಸವಣೂರು ತಾಲೂಕುಗಳು ಕೆರೆಗಳಿಂದ ಕೂಡಿವೆ. ಸುಮಾರು ಐನೂರು ಕೆರೆಗಳಿವೆ. ಅವುಗಳಲ್ಲಿ ಕನಿಷ್ಟ 100 ದೊಡ್ಡ ಕೆರೆಗಳಿವೆ. 150ಕ್ಕಿಂತ ಹೆಚ್ಚು ದೊಡ್ಡ ಮತ್ತು ಸಣ್ಣ ಕೆರೆಗಳಿಗೆ ನೀರು ತುಂಬಿಸುವ ಕೆಲಸ ಮಾಡಬೇಕು. 2015, 16, 17ರಲ್ಲಿ ಬರಗಾಲ ಸಂದರ್ಭದಲ್ಲಿ ದೊಡ್ಡ ಪ್ರಮಾಣದಲ್ಲಿ ಕೆರೆ ಹೂಳು ತೆಗೆಯುವ ಕೆಲಸ ಆಯಿತು. ಇಂತಹ ಭಗೀರಥ ಕೆಲಸಕ್ಕೆ ಭಾರತ ಸೇವಾ ಸಂಸ್ಥೆ ಕೆರೆಗಳ ಹೂಳು ತೆಗೆಯಲು ದೊಡ್ಡ ಸಹಾಯ ಮಾಡಿದೆ. ಎರಡು ಮೂರು ವರ್ಷದಿಂದ ಒಳ್ಳೆಯ ಮಳೆಯಾಗಿದೆ. ಆದ್ದರಿಂದ ಹೂಳು ತೆಗೆಯಲು ಆಗಿರಲಿಲ್ಲ.

ಈ ವರ್ಷ ಬೇಸಿಗೆಗೆ ಕೆರೆ ಬತ್ತಿ ಹೋಗಿರುವುದರಿಂದ ಮತ್ತೆ ಹೂಳು ತೆಗೆಯುವ ಕೆಲಸ ಮಾಡಲು ಶ್ರೀಕಾಂತ ದುಂಡಿಗೌಡರು ಭಾರತ ಸೇವಾ ಸಂಸ್ಥೆ ವತಿಯಿಂದ ಹೂಳು ತೆಗೆಯುವ ಕೆಲಸ ಮಾಡಿದ್ದಾರೆ. ಪ್ರತಿಯೊಂದು ಜಿಲ್ಲಾ ಪಂಚಾಯತಿಯಲ್ಲಿ ಕನಿಷ್ಟ ಒಂದು ಕೆರೆ ಹೂಳೆತ್ತುವ ತೀರ್ಮಾನ ಮಾಡಿದ್ದಾರೆ. ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಇದರಿಂದ ಪ್ರೇರಣೆ ಪಡೆದು ಇನ್ನಷ್ಟು ಜನರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಹೂಳು ತೆಗೆಯುವ ಕೆಲಸ ಮಾಡಿದರೆ ನಮ್ಮ ಹೊಲ, ನಮ್ಮ ಮನೆ ಎನ್ನುವ ಭಾವನೆ ಇದೆ. ಅದೇ ರೀತಿ ನಮ್ಮ ಹೊಲ, ನಮ್ಮ ಮನೆ, ನಮ್ಮ ಕೆರೆ ನಮ್ಮ ಊರು ಎಂಬ ಭಾವನೆ ಬೆಳೆಸಿಕೊಂಡರೆ ಹಳ್ಳಿಗಳು ನಮಗೆ ಗ್ರಾಮ ಸ್ವರಾಜ್ಯ ಸಿಕ್ಕಿದೆ. ಸ್ವರಾಜ್ಯದಿಂದ ಸುರಾಜ್ಯ ಆಗುತ್ತವೆ. ಆ ನಿಟ್ಟಿನಲ್ಲಿ ಶ್ರೀಕಾಂತ ಅವರ ಪ್ರಯತ್ನಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಇದೇ ವೇಳೆ ಶ್ರೀಕಾಂತ ದುಂಡಿಗೌಡರ್ ಅವರನ್ನು ಪಕದಿಂದ ಉಚ್ಚಾಟಿಸಲಾಗಿದ್ದು, ಅವರನ್ನು ಪಕ್ಷಕ್ಕೆ ವಾಪಸ್ ಕರೆಸಿಕೊಳ್ಳುವ ಕುರಿತು ಕೇಳಿದ ಪ್ರಶ್ನೆಗೆ ಈ ಕುರಿತು ಪಕ್ಷದಲ್ಲಿ ಚರ್ಚಿಸುತ್ತೇವೆ ಎಂದು ಹೇಳಿದರು.

ಎರಡೂ ಕ್ಷೇತ್ರದಲ್ಲಿ ಜಯ

ನಾವು ಬಹಳ ಲೆಕ್ಕಾಚಾರ ಹಾಕಿ ದಾವಣಗೆರೆಯಲ್ಲಿ ಟಿಕೆಟ್ ನೀಡಿದ್ದೇವೆ. ಬರುವಂತಹ ದಿನಗಳಲ್ಲಿ ಬಡವರು, ಎಸ್ಸಿ ಎಸ್ಟಿ ಜನರಿಂದ ದೊಡ್ಡ ಪ್ರಮಾಣದಲ್ಲಿ ಬೆಂಬಲ ಸಿಗುತ್ತದೆ. ಆಶ್ಚರ್ಯಕರ ಫಲಿತಾಂಶ ದಾವಣಗೆರೆಯಲ್ಲಿ ದೊರೆಯುತ್ತದೆ. ಬಾಗಲಕೋಟೆಯಲ್ಲಿ ವಿಜಯ ಪಥದಲ್ಲಿ ನಾವು ಹೋಗುತ್ತಿದ್ದೇವೆ. ಕಳೆದ ಬಾರಿ ಕಾಂಗ್ರೆಸ್ ಸೇರಿದ್ದ ಅನೇಕ ಮುಖಂಡರು ಬಿಜೆಪಿಗೆ ಸೇರುತ್ತಿದ್ದಾರೆ. ಹೀಗಾಗಿ ಬಾಗಲಕೋಟೆಯಲ್ಲಿ ದೊಡ್ಡ ಪ್ರಮಾಣದ ಅಂತರದಲ್ಲಿ ಗೆಲ್ಲುತ್ತೇವೆ. ದಾವಣಗೆರೆಯಲ್ಲಿ ಮೊದಲ ಬಾರಿಗೆ ಬಿಜೆಪಿ ಬಾವುಟ ಹಾರಿಸುತ್ತೇವೆ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಜಗತ್ತಿನ ಉದ್ಧಾರಕ್ಕಾಗಿ ಶುನಕ ಸಭೆ ನಡೆದಿದೆ: ಶಿವಯ್ಯ ಮಹಾಸ್ವಾಮೀಜಿ

ವಿಜಯಪುರ: ಅಕ್ರಾಳ, ವಿಕ್ರಾಳ, ಕರಾಳ ಈ ಬಾರಿಯೂ ಇದ್ದದ್ದೇ, ಯುದ್ಧ ಅಲ್ಲಿ ಅಷ್ಟೇ ಅಲ್ಲ ಇಲ್ಲಿಯೂ ಇದ್ದಂತೆಯೇ. ಜಗತ್ತಿನ ಉದ್ಧಾರಕ್ಕಾಗಿ ಶುನಕ ಸಭೆ ನಡೆದಿದೆ ಎಂದು ಶಿವಯ್ಯ ಮಹಾಸ್ವಾಮೀಜಿ ಕಾಲಜ್ಞಾನದ ಹೇಳಿಕೆ ನುಡಿದರು.

ಸುಕ್ಷೇತ್ರ ಕತಕನಹಳ್ಳಿಯಲ್ಲಿ ಗುರುಚಕ್ರವರ್ತಿ ಸದಾಶಿವ ಜಾತ್ರಾ ಮಹೋತ್ಸವ ನಿಮಿತ್ತ ಭಾನುವಾರ ಲಗಮವ್ವ ದೇವಿ ದೇವಾಲಯದ ಎದುರು ಅವರು ಗುರು ಕರುಣೆಯ ಭವಿಷ್ಯದ ಕಾಲಜ್ಞಾನ ಹೇಳಿಕೆ ನೀಡಿದರು.

ಶುನಕ ಸಭೆ ಎಂದು ಹೇಳಿ ವಿಶ್ಲೇಷಿಸಿದ ಅವರು, ಶು ಎಂದರೆ ಶುದ್ಧ, ನ ಎಂದರೆ ನಂಬಿಕೆ ಹಾಗೂ ಕ ಎಂದರೆ ಕರ್ತವ್ಯ. ಈ ಎಲ್ಲವೂ ಕೂಡಿದರೆ ಜಗತ್ತು ಉದ್ಧಾರ, ಹೀಗಾಗಿ ಜಗತ್ತು ಉಳಿಸಲು ಈ ತತ್ವಗಳು ಸಭೆ ಮಾಡುತ್ತಿವೆ ಎಂದರು.

ಕಾವಿ, ಖಾದಿ, ಖಾಕಿ, ಮೂರು ಒಳಗೆ ಜಗಳ ಆಗ್ತದ ಎಂದು ಹಿಂದೆಯೂ ಹೇಳಿದ್ದೆ. ಕಾವಿ, ಖಾದಿ, ಖಾಕಿ, ಜೊತೆಗೆ ಕಪ್ಪು, ಹಸಿರು, ನೀಲಿ ಇನ್ನಷ್ಟು ಬಣ್ಣ ಕೂಡಿ ಮಿಕ್ಸರ್ ಆಗುತ್ತಿವೆ. ಗದ್ದಲವಾಗುತ್ತಿದೆ. ಹೀಗಾಗಿಯೇ ಇದನ್ನು ತಪ್ಪಿಸಲು ಶುನಕ ಸಭೆ ಮಾಡುತ್ತಿವೆ ಎಂದರು.



ಅಹಂಕಾರ ಮಾಡಿದವರೆಲ್ಲ ಮಣ್ಣಾಗಿ ಹೋಗುತ್ತಾರೆ, ನಾ ಹಿಂದೆಯೂ ಹೇಳಿದ್ದೆ, ಗಡ್ಡ, ಗುಡ್ಡ, ಗಿಡ್ಡ ಜಗಳಾಡಿ ಗದ್ದಲ ಹಿಡಿಸುತ್ತಾರೆ ಎಂದು, ಈಗ ಅದೇ ಆಗುತ್ತಿದೆ, ಅಲ್ಲಿ ಯುದ್ಧ ನಡೆದಿದೆ ನಮಗೆ ಸಂಬಂಧವಿಲ್ಲ ಎಂದೇನಿಲ್ಲ, ಇಲ್ಲಿಯೂ ಯುದ್ಧ ನಡೆದಂತೆಯೇ ಎಂದರು.

ಆನೆ ಬೆಲೆ ಎತ್ತಿಗೆ, ಎತ್ತಿನ ಬೆಲೆ ಕುರಿಗೆ, ಕುರಿ ಬೆಲೆ ಕೋಳಿಗೆ, ಕೋಳಿ ಬೆಲೆ ಮನುಷ್ಯನಿಗೆ ಅಂದರೆ ಮನುಷ್ಯನಿಗೆ ಯಾವ ಕಿಮ್ಮತ್ತೂ ಉಳಿದಿಲ್ಲ ಎಂದರು.

ಉಳಿವಿಯಲ್ಲಿ ಉರುಳುತ್ತ ಬರುವ ಶಬ್ದ, ನಾನು ಮೇಲು ನಾನು ಮೇಲು ಎನ್ನುವ ಅಹಂಕಾರವನ್ನು ಅಡಗಿಸುತ್ತದೆ. ಹಸಿರು ನಾಮದ ಒಡೆಯ, ಹಂಡ ಕುದುರೆಯನೇರಿ, ಅರಸಾಗಿ ಬರುವಾಗ ದೈತ್ಯರನ್ನು ಸಂಹರಿಸುತ್ತಾನೆ, ಮಸಲತ್ತು ಮಾಡಿ ಹಿಂಸೆ ಕೊಡುವ ದೈತ್ಯರಿಗೆ ಸಂಹಾರ ಮಾಡಿ ಅವರನ್ನು ಪಾತಾಳಕ್ಕೆ ತಲುಪಿಸುವನು ಎಂದರು.

ಅಕ್ರಾಳ, ವಿಕ್ರಾಳ, ಕರಾಳ ಹೈರಾಣ ಈ ಬಾರಿಯೂ ಹಂಗೆ ಇರ್ತಾವ ಎಂದ ಅವರು, ಇದು ಹೆಸರೇ ಹೇಳಿದಂತೆ ಪರಾಭವ ನಾಮ ಸಂವತ್ಸರ, ಅಂದರೆ ಸೋಲುವುದು, ಸದಾಶಿವನ ಸಲುವಾಗಿ ಸೋಲಿರಿ, ಆಗ ನೀವು ಎಲ್ಲ ಕಡೆ ಗೆಲುತ್ತಿರಿ ಎಂದರು.

ಕಾಲಜ್ಞಾನ ಹೇಳಿಕೆಗೂ ಮುನ್ನ ಉದ್ಯಮಿ ಬಾಬುಗೌಡ ಬಿರಾದಾರ ಶ್ರೀಗಳ ಪಾದಪೂಜೆ ನೆರವೇರಿಸಿದರು. ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಮಾತನಾಡಿದರು.

ತ್ಯಾಗದಲ್ಲಿ ನಿಜವಾದ ಸುಖವಿದೆ: ಶ್ರೀಗಳು

ಸಿದ್ದಾಪುರ: ಮತ್ತೊಬ್ಬರ ನೋವಿಗೆ, ಕಷ್ಟಕ್ಕೆ ಸ್ಪಂದಿಸುವ ನಿಟ್ಟಿನಲ್ಲಿ ಪ್ರಾರಂಭಿಸಲಾದ ಕಾರ್ಯಕ್ರಮ ಜೀವನದಾನ. ಜೀವನದಾನ ಸತ್ಪಾತ್ರರಾದವರಿಗೆ, ಅಗತ್ಯವಿದ್ದವರಿಗೆ ಸಲ್ಲಬೇಕು. ಇಂತಹ ದಾನದಿಂದ ನೆಮ್ಮದಿ, ಆನಂದ ದೊರೆಯುತ್ತದೆ. ತ್ಯಾಗದಲ್ಲಿಯೇ ನಿಜವಾದ ಸುಖವಿದೆ ಎಂದು ರಾಮಚಂದ್ರಾಪುರಮಠ ಮಹಾ ಸಂಸ್ಥಾನದ ರಾಘವೇಶ್ವರಭಾರತೀ ಶ್ರೀಗಳು ಹೇಳಿದರು.



ತಾಲೂಕಿನ ಭಾನ್ಕುಳಿಯ ಶ್ರೀ ರಾಮದೇವಮಠದಲ್ಲಿ ಶ್ರೀಗಳವರ ಸನ್ಯಾಸಗ್ರಹಣ ವಾರ್ಷಿಕೋತ್ಸವ ನಿಮಿತ್ತ ಸಂಘಟಿಸಲಾಗಿದ್ದ 'ಜೀವನದಾನ' ಕಾರ್ಯಕ್ರಮದಲ್ಲಿ ಸಂಪೆಕಟ್ಟೆ ವಲಯದ ಮತ್ತಿಕೈ ರಾಮಚಂದ್ರ ಭಟ್ಟ ದಂಪತಿಗಳಿಗೆ ಜೀವನದಾನ ಕರುಣಿಸಿ ಶ್ರೀಗಳು ಆಶೀರ್ವಚನ ನೀಡುತ್ತಿದ್ದರು. ಇಂದು 88ರ ಇಳಿವಯದಲ್ಲಿರುವ ರಾಮಚಂದ್ರ ಭಟ್ಟರು ಅಡುಗೆ ಕೆಲಸ ಸೇರಿದಂತೆ ಕೂಲಿ ಮಾಡಿ ಬದುಕು ನಡೆಸಿದವರು.

ಕೈಗೆ ಬಂದ ಮಗನನ್ನೂ ಕಳೆದುಕೊಂಡು ಇದೀಗ ಅನಾಥ ಪ್ರಜ್ಞೆಗೆ ಒಳಗಾಗಿದ್ದಾರೆ. ಇವರ ನೆರವಿಗೆ ಶ್ರೀಮಠದ ಜೀವನದಾನ ಟ್ರಸ್ಟ್ ಮುಂದಾಗಿದೆ. ಭವಿಷ್ಯದಲ್ಲಿ ಈ ವಯೋವೃದ್ಧ ದಂಪತಿಗಳ ಕಷ್ಟ-ಸುಖಗಳಲ್ಲಿ ಶಿಷ್ಯರು ಸ್ಪಂದನೆ ನೀಡಲಿದ್ದಾರೆ ಎಂದು ಶ್ರೀಗಳು ಹೇಳಿದರು.

ಶಾಸನತಂತ್ರದ ಅಧ್ಯಕ್ಷ ಮೋಹನ ಹೆಗಡೆ ಹೆರವಟ್ಟಾ ಪ್ರಾಸ್ತಾವಿಕ ಮಾತನಾಡಿ ಶ್ರೀ ರಾಮಚಂದ್ರಾಪುರಮಠದ ಶ್ರೀ ಪೀಠವನ್ನು 36 ಯತಿ ವರೇಣ್ಯರು ನಡೆಸಿಕೊಂಡು ಬಂದಿದ್ದಾರೆ. ಧಾರ್ಮಿಕ ಮಾರ್ಗ ತೋರುತ್ತ, ಗೋಮಾತೆಯ ರಕ್ಷಣೆ, ವಿಷ್ಣುಗುಪ್ತ ವಿಶ್ವವಿದ್ಯಾಪೀಠ ಸ್ಥಾಪನೆ, ವಿವಿಧ ಸಾಮಾಜಿಕ ಕಾರ್ಯಗಳ ಜೊತೆ ರಾಘವೇಶ್ವರಭಾರತೀ ಶ್ರೀಗಳವರು ಸಂಕಷ್ಟಕ್ಕೊಳಗಾದವರಿಗೆ ಸಾಮಾಜಿಕ, ಆರ್ಥಿಕ ಬಲ ನೀಡಲು ಜೀವನದಾನ ಯೋಜನೆ ನಿರ್ದೇಶಿಸಿದ್ದಾರೆ.

ಜೀವನದಾನ ಯೋಜನೆಯ ಮೂಲಕ ಬಡಕುಟುಂಬಗಳಿಗೆ ಆರ್ಥಿಕನೆರವು, ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಜೀವನದಾನ ಟ್ರಸ್ಟಿನ ಸದಸ್ಯರಾಗಿ ಚಂದ್ರಮತಿ ರಮಾನಂದಹೆಗಡೆಹರಗಿ, ರಾಜೇಶ್ವರಿ ಗುರುಪಾದ ಹೆಗಡೆ ಹೊಸ್ಮನೆ ಅವರುಗಳು ಸೇರ್ಪಡೆಗೊಂಡರು. ರಾಜಲಕ್ಷ್ಮಿ ವಿವೇಕಾನಂದ ಹೆಗಡೆ ಗುರುಪಾದಗಾಣಿಕೆ ಸಮರ್ಪಿಸಿದರು. ಶಂಖನಾದ, ಗ'ು'ರ'ು'ವ'ಂ'ದ'ನೆ'ಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಸುಭದ್ರಾ ಶಿವಮೊಗ್ಗಾ ಪ್ರಾರ್ಥನೆ ಹಾಡಿದರು. ಗಣಪತಿ ಹೆಗಡೆ ಜಡ್ಡಿಗದ್ದೆ ದಂಪತಿಗಳು ಸಭಾಪೂಜೆ ನೆರವೇರಿಸಿದರು. ಗಣಪತಿ ಹೆಗಡೆ ಗುಂಜಗೋಡ ನಿರ್ವಹಿಸಿದರು.

ಅಣ್ಣ-ತಮ್ಮಂದಿರ ಜಗಳ ಕೊಲೆಯಲ್ಲಿ ಅಂತ್ಯ

ಯರಗಟ್ಟಿ: ಹೊಲದಲ್ಲಿ ನೀರು ಹರಿಸುವ ವಿಚಾರವಾಗಿ ಅಣ್ಣ-ತಮ್ಮಂದಿರ ನಡುವೆ ನಡೆದ ಜಗಳ ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ ತಾಲೂಕಿನ ನುಗ್ಗಾನಟ್ಟಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಯಲ್ಲಪ್ಪ ದೇಮಪ್ಪ ಸಣ್ಣಮ್ಮನವರ (45) ಕೊಲೆಯಾಗಿರುವ ವ್ಯಕ್ತಿ. ಮಹಾದೇವಪ್ಪ ದೇವಪ್ಪ ಸಣ್ಣಮ್ಮನವರ (55) ಬಂಧಿತ ಆರೋಪಿಗಳು. ಶನಿವಾರ ಮಧ್ಯಾಹ್ನ ಜಗಳ ನಡೆದಿದ್ದು, ಸಹೋದರರಾದ ನುಗ್ಗಾನಟ್ಟಿ ಗ್ರಾಮದಲ್ಲಿ ವಾಸವಿದ್ದ ಯಲ್ಲಪ್ಪ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಹಲ್ಲೆಯಿಂದ ಅಸ್ವಸ್ಥಗೊಂಡಿದ್ದ ಯಲ್ಲಪ್ಪ ಸ್ಥಳದಲ್ಲಿ ಮೃತಪಟ್ಟಿದ್ದಾನೆ. ಈ ಬಗ್ಗೆ ಅವರ ಪತ್ನಿ ಮುರಗೋಡ ಠಾಣೆಗೆ ದೂರು ನೀಡಿದ್ದು, ಆರೋಪಿಗಳನ್ನು ಪೊಲೀಸರು ಬಂಧಿಸಿ ತನಿಖೆ ಕೈಗೊಂಡಿದ್ದಾರೆ.



ಸೌಹಾರ್ದ ಸಮಾಜ ನಿರ್ಮಾಣವೇ ಪಂಚ ಪೀಠಗಳ ಗುರಿ: ರಂಭಾಪುರಿ ಶ್ರೀ

ಗುತ್ತಲ: ಜೀವನ ಸಮೃದ್ಧಿಗೆ ಮತ್ತು ಶಾಂತಿಗೆ ದೈವಿ ಗುಣಗಳ ಅವಶ್ಯಕತೆಯಿದೆ. ದೈವಿ ಗುಣಗಳು ಪ್ರಾಬಲ್ಯಗೊಂಡರೆ ಅಸುರಿ ಗುಣಗಳು ನಾಶವಾಗುತ್ತವೆ. ಸಮಾಜದಲ್ಲಿ ಸಂಘಟನೆಗಳು ನಡೆಯಲಿ ಆದರೆ, ಸಂಘರ್ಷಗಳು ನಡೆಯಬಾರದು. ಸೌಹಾರ್ದಯುತ ಸಮಾಜ ನಿರ್ಮಾಣವೇ ಪಂಚಪೀಠಗಳ ಮೂಲ ಗುರಿಯಾಗಿದೆ ಎಂದು ಬಾಳೆಹೊನ್ನೂರು ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಹೇಳಿದರು.

ಸಮೀಪದ ನೆಗಳೂರಿನಲ್ಲಿ ಜಗದ್ಗುರು ಪಂಚ ಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ, ನೂತನ ರಥದ ಲೋಕಾರ್ಪಣೆ ಅಂಗವಾಗಿ ನಡೆದ ಜನ ಜಾಗೃತಿ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ನೆಗಳೂರು ಗ್ರಾಮದ ಚಾರಿತ್ರಿಕ ಇತಿಹಾಸದಲ್ಲಿ ಇಂದಿನ ದಿನ ಅವಿಸ್ಮರಣೀಯ. ಲಿಂ.ಶಿವಾನಂದ ಶಿವಾಚಾರ್ಯರ ಬಹುದಿನದ ಸಂಕಲ್ಪ ಇಂದು ಸಾಕಾರಗೊಂಡಿದೆ. ಇಂದಿನ ಪಟ್ಟಾಧ್ಯಕ್ಷರಾದ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳ ನಿರಂತರ ಪರಿಶ್ರಮ ಮತ್ತು ಪ್ರಯತ್ನದಿಂದಾಗಿ ಈ ಮಹಾಕಾರ್ಯ ನಡೆಯುತ್ತಿರುವುದು ಹರುಷ ತಂದಿದೆ. ವೀರಶೈವ ಧರ್ಮದ ಇತಿಹಾಸ ಮತ್ತು ಪರಂಪರೆ ಅಪೂರ್ವವಾದದ್ದು. ಜಗದ್ಗುರು ರೇಣುಕಾದಿ ಪಂಚ ಆಚಾರ್ಯರಿಂದ ಸ್ಥಾಪಿತಗೊಂಡ ಪಂಚ ಪೀಠಗಳು ಯಾವಾಗಲೂ ಧರ್ಮ ಮುಖಿಯಾಗಿ ಮತ್ತು ಸಮಾಜ ಮುಖಿಯಾಗಿ ಕಾರ್ಯ ಮಾಡುತ್ತಾ ಬಂದಿವೆ ಎಂದರು.

ಸಾನ್ನಿಧ್ಯ ವಹಿಸಿದ್ದ ಉಜ್ಜಯಿನಿ ಸಿದ್ದಲಿಂಗ ಜಗದ್ಗುರುಗಳು ಮಾತನಾಡಿ, ವಿದ್ಯಾ ಬುದ್ಧಿ ಕೊಟ್ಟವನು ಭಗವಂತ. ಹೃದಯ ಹೊಟ್ಟೆ ಕೊಟ್ಟವನು ಭಗವಂತ. ಅನ್ನ, ನೀರು, ಗಾಳಿ, ಬೆಳಕು ಕೊಟ್ಟವನು ಪರಮಾತ್ಮ. ಅರಿವು ಆಚರಣೆಗೆ ಗುರು ಬೋಧಾಮೃತ ಅವಶ್ಯಕವೆಂದರು.

ಶ್ರೀಶೈಲ ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಜಗದ್ಗುರು, ಕಾಶಿ ಪೀಠದ ಡಾ.ಚಂದ್ರಶೇಖರ ಜಗದ್ಗುರು, ಕಾಶಿ ನೂತನ ಡಾ.ಮಲ್ಲಿಕಾರ್ಜುನ ವಿಶ್ವಾರಾಧ್ಯ ಜಗದ್ಗುರು ಮಾತನಾಡಿದರು. ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ಅವರು 'ಶ್ರೀ ಗುರುಶಾಂತೇಶ್ವರ ಜೀವನ ದರ್ಶನ' ಕೃತಿ ಬಿಡುಗಡೆ ಮಾಡಿದರು. ವಿಧಾನಸಭೆಯ ಉಪಸಭಾಪತಿ ರುದ್ರಪ್ಪ ಲಮಾಣಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಂಜೀವಕುಮಾರ ನೀರಲಗಿ ಸೇರಿದಂತೆ ಹಲವಾರು ಮಠಾಧೀಶರು ಮತ್ತು ಗಣ್ಯರು ಪಾಲ್ಗೊಂಡಿದ್ದರು. ಸವಣೂರಿನ ಡಾ. ಗುರುಪಾದಯ್ಯ ಸಾಲಿಮಠ ನಿರೂಪಿಸಿದರು.



ಸಂಭ್ರಮದ ಅಡ್ಡಪಲ್ಲಕ್ಕಿ ಉತ್ಸವ


ನೆಗಳೂರು ಗ್ರಾಮದಲ್ಲಿ ರಂಭಾಪುರಿ, ಉಜ್ಜಯಿನಿ, ಶ್ರೀಶೈಲ ಮತ್ತು ಕಾಶಿ ಉಭಯ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ಜರುಗಿತು. ಇದೇ ಪವಿತ್ರ ಸಂದರ್ಭದಲ್ಲಿ ನೂತನವಾಗಿ ನಿರ್ಮಾಣಗೊಂಡ ನೆಗಳೂರು ಹಿರೇಮಠದ ಕರ್ತೃ ಗುರುಶಾಂತೇಶ್ವರರ ಭವ್ಯ ರಥವನ್ನು ಜಗದ್ಗುರು ಪಂಚ ಪೀಠಾಧೀಶ್ವರರು ಮಂಗಲಾಕ್ಷತೆ ಹಾಕಿ ಲೋಕಾರ್ಪಣೆಗೊಳಿಸಿದರು. ನೆರೆದ ಸಕಲ ಸದ್ಭಕ್ತರು ಅತ್ಯಂತ ಭಕ್ತಿ ಭಾವನೆಯಿಂದ ತೇರನ್ನು ಎಳೆದ ದೃಶ್ಯ ಅಪೂರ್ವವಾಗಿತ್ತು.

ಅಕ್ರಮವಾಗಿ ಸಂಗ್ರಹಿಸಿದ್ದ 29 ಖಾಲಿ ಸಿಲಿಂಡರ್ ಜಪ್ತಿ

ಕುಡಚಿ: ಕುಡಚಿ ಪೊಲೀಸ್ ಠಾಣಾ ವ್ಯಾಪ್ತಿಯ ಚಿಂಚಲಿ ಪಟ್ಟಣದಲ್ಲಿ ಅಕ್ರಮವಾಗಿ ಸಂಗ್ರಹಿಸಿ ಇಡಲಾಗಿದ್ದ ಖಾಲಿ ಸಿಲಿಂಡರ್‌ಗಳನ್ನು ಕುಡಚಿ ಪೊಲೀಸರು ಜಪ್ತಿ ಮಾಡಿದ್ದಾರೆ.

ಚಿಂಚಲಿ ಪಟ್ಟಣದ ನಾಮದೇವ ಪೋಳ ಎಂಬವರು ಗಣೆಕೋಡಿ ತೋಟದ ತಮ್ಮ ಶೆಡ್ ಒಂದರಲ್ಲಿ ಅಕ್ರಮವಾಗಿ ಸಂಗ್ರಹಣೆ ಮಾಡಲಾಗಿದ್ದ ಖಾಲಿ ಸಿಲಿಂಡರ್‌ಗಳನ್ನು ಪತ್ತೆಹಚ್ಚಿ ತಕ್ಷಣವೇ 26 ಗ್ರಹೋಪಯೋಗಿ ಹಾಗೂ 3 ವಾಣಿಜ್ಯ ಉಪಯೋಗಿ ಸೇರಿದಂತೆ 29 ಖಾಲಿ ಸಿಲಿಂಡರ್‌ಗಳನ್ನು ಕುಡಚಿ ಪೊಲೀಸರು ಆಹಾರ ಇಲಾಖೆಯವರೊಂದಿಗೆ ಜಪ್ತಿ ಮಾಡಿದ್ದಾರೆ. ಆರೋಪಿ ಪರಾರಿಯಾಗಿದ್ದು, ಕುಡಚಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆಯನ್ನು ಮುಂದುವರಿಸಿದ್ದಾರೆ.

ಈ ಸಂದರ್ಭದಲ್ಲಿ ಕುಡಚಿ ಪಿಎಸ್‌ಐ ಪ್ರೀತಮ್ ನಾಯಿಕ, ಆಹಾರ ಇಲಾಖೆ ಶಿರಸ್ತೇದಾರ್ ಶರಣಪ್ಪ ಬಾಗೇವಾಡಿ, ಆಹಾರ ನಿರೀಕ್ಷಕ ವಿನಾಯಕ ಬಾಟೆ, ಪೊಲೀಸ್ ಸಿಬ್ಬಂದಿ ಶೇಖರ್ ಸಾಸನೂರ, ಎಸ.ಡಿ.ಬನಾಜ ಇತರರು ಉಪಸ್ಥಿತರಿದ್ದರು.



ಹೊಸ ದಿಗಂತ 15ನೇ ವಾರ್ಷಿಕೋತ್ಸವ

ಸಂಭ್ರಮೋತ್ಸವ

ನಾಡಿನ ಹೆಮ್ಮೆಯ ರಾಷ್ಟ್ರಜಾಗೃತಿಯ ದೈನಿಕ ಹೊಸ ದಿಗಂತ ದಿನಪತ್ರಿಕೆ ಹುಬ್ಬಳ್ಳಿಯಲ್ಲಿ ತನ್ನ ಹೆಜ್ಜೆಯನ್ನಿರಿಸಿ ಸಾರ್ಥಕ ಹದಿನೈದು ವರ್ಷಗಳು ಸಂದವು. ಉತ್ತರ ಕರ್ನಾಟಕದ ದನಿಯಾಗುತ್ತ, ರಾಗ, ದ್ವೇಷವಿಲ್ಲದ ನಿರ್ಮಲ ಪತ್ರಿಕೋದ್ಯಮದ ಮೂಲಕ ರಾಷ್ಟ್ರ ನಿರ್ಮಾಣ ಕಾಯಕದಲ್ಲಿ ತೊಡಗಿಕೊಂಡಿರುವ **ಹೊಸ ದಿಗಂತ 15ನೇ ವಾರ್ಷಿಕೋತ್ಸವ**ವನ್ನು ಸಂಭ್ರಮದಿಂದ ಆಚರಿಸಲು ನಿರ್ಧರಿಸಿದೆ. ಈ ಸಂದರ್ಭದಲ್ಲಿ ಮಾಹಿತಿ ಪೂರ್ಣ, ಸಂಗ್ರಹಯೋಗ್ಯ, ಓದುಗರ ಮನ ತಣಿಸುವ ಸುಂದರ, ವಿಶೇಷ ಪುರವಣಿಯನ್ನು ಹೊರತರಲು ನಿರ್ಧರಿಸಿದೆ. ಈ ಪುರವಣಿಗೆ ಕವನ, ಲೇಖನ, ವಿಶೇಷ ಬರಹ, ಪ್ರವಾಸ ಲೇಖನ ಸಾಧಕರ ಪರಿಚಯ ಹೀಗೆ ವೈವಿಧ್ಯಮಯ ಬರಹವನ್ನು ಆಹ್ವಾನಿಸುತ್ತಿದೆ.

ಆಸಕ್ತ ಬರಹಗಾರರಿಗೆ ಇಲ್ಲಿದೆ ಅವಕಾಶ

- 500-600 ಶಬ್ದಗಳ ಧನಾತ್ಮಕ ಆಶಯ ಹೊಂದಿರುವ ವೈಚಾರಿಕ, ಧಾರ್ಮಿಕ, ಪ್ರವಾಸ ಮತ್ತಿತರ ವಿಚಾರ ಪ್ರಚೋದಕ ಲೇಖನಗಳನ್ನು ಕಳುಹಿಸಬಹುದು.
- 100-150 ಶಬ್ದಗಳ ಒಳಗೆ ಸ್ಫೂರ್ತಿದಾಯಕವಾದ ಜೀವನಾನುಭವಗಳು, ಸ್ವಾರಸ್ಯಕರ ಘಟನೆಗಳಿದ್ದರೆ ಕಳುಹಿಸಬಹುದು.
- ಚುಟುಕು ಮತ್ತು ಕವನಗಳನ್ನೂ ಕಳುಹಿಸಬಹುದು.
- ಪ್ರತಿ ಬರಹದ ಜೊತೆಗೆ ನಿಮ್ಮದೊಂದು ಭಾವಚಿತ್ರ, ಸಂಪರ್ಕ ಸಂಖ್ಯೆ ಇರಲಿ.

ನಿಮ್ಮ ಬರಹಗಳು ಮಾರ್ಚ್ 25, 2026 ರೊಳಗೆ ತಲುಪಬೇಕು. ನಿಮ್ಮ ಬರಹವನ್ನು hdanniversary.11@gmail.com ಈಮೇಲ್ ಮಾಡಿರಿ

ಹೊಸ ದಿಗಂತ ಹುಬ್ಬಳ್ಳಿ



ಬೆಂಗಳೂರಿನಲ್ಲಿ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿಗೆ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾನುವಾರ ಬಿ ಫಾರಂ ನೀಡಿದರು.

ಕಡ್ಡಾಯ ಯೋಗ ಶಿಕ್ಷಣ ಯೋಜನೆ ಆರಂಭ: ಭಗವಾನ್

ಉಜಿರೆ: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯವು ಎಸ್.ಡಿ.ಎಂ ಪ್ರಕೃತಿ ಚಿಕಿತ್ಸಾ ಮತ್ತು ಯೋಗವಿಜ್ಞಾನ ಮಹಾವಿದ್ಯಾಲಯ ಹಾಗೂ ಇನ್ನಿತರ ಸಂಸ್ಥೆಗಳ ಸಹಯೋಗದಲ್ಲಿ ಪೌಷ್ಟಿಕಾಂಶ ಮೌಲ್ಯ, ಜೀವನಶೈಲಿ ಮೌಲ್ಯ, ಮತ್ತು ಕಡ್ಡಾಯ ಯೋಗ ಶಿಕ್ಷಣ ಯೋಜನೆಯನ್ನು ಮುಂದಿನ ದಿನಗಳಲ್ಲಿ ಪ್ರಾರಂಭಿಸುವುದಾಗಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಕರ್ನಾಟಕ ಉಪಕುಲಪತಿ ಡಾ. ಭಗವಾನ್ ಬಿ.ಸಿ. ಹೇಳಿದರು.



ಉಜಿರೆಯ ಎಸ್.ಡಿ.ಎಂ ಶಿಕ್ಷಣ ಸಂಸ್ಥೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನಗಳ ಮಹಾವಿದ್ಯಾಲಯ ಉಜಿರೆ ಇದರ 31ನೇಯ ಪದವಿ ಪ್ರಧಾನ ಸಮಾರಂಭದಲ್ಲಿ ಮಾತನಾಡಿದರು. ಭಾರತವು ಪ್ರಕೃತಿ ಚಿಕಿತ್ಸೆ ಮತ್ತು ಯೋಗವಿಜ್ಞಾನದಲ್ಲಿ ಜಾಗತಿಕ ಮಟ್ಟದಲ್ಲಿ ನಾಯಕತ್ವ ಸ್ಥಾನ ಪಡೆದುಕೊಳ್ಳುವುದರ ಕಡೆಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ. ಪ್ರಾಚೀನ ಕಾಲದಿಂದಲೂ ಚಿಕಿತ್ಸೆಯಲ್ಲಿ ಚರಕ, ಶುಶ್ರುತರಂತಹ ಭಾರತೀಯರು ಮುಂಚೂಣಿಯಲ್ಲಿದ್ದರು. ಆದರೆ ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ವಿಷಯದ ಕುರಿತು ಅರಿವು ಕಡಿಮೆಯಾಗಿದೆ. ಪ್ರಕೃತಿ ಚಿಕಿತ್ಸೆ ಮತ್ತು ಯೋಗವಿಜ್ಞಾನದಲ್ಲಿ ಪಾಶ್ಚ್ಯ ದೇಶಗಳ ಪ್ರಾಬಲ್ಯತೆಗೆ ಸಿಲುಕದೆ ಭಾರತದ ಅದ್ಭುತ ವೈಜ್ಞಾನಿಕ ವೈದ್ಯಕೀಯ ಪರಂಪರೆಗೆ ಗಮನಹರಿಸುವ ಅಗತ್ಯವಿದೆ. ಏಕೆಂದರೆ ಜಗತ್ತಿನಾದ್ಯಂತ ನಡೆಯುತ್ತಿರುವ ಪ್ರಚಲಿತ ವಿದ್ಯಮಾನಗಳನ್ನು ನೋಡಿದರೆ ಪ್ರಕೃತಿಯೊಂದಿಗೆ ಹೊಂದಿಕೊಂಡಿರುವ ಚಿಕಿತ್ಸೆಯು ಮುಂದಿನ ಭವಿಷ್ಯವಾಗಿದೆ ಎಂದರು.

ಪದವಿಪಡೆದ ವಿದ್ಯಾರ್ಥಿಗಳ ವೈದ್ಯಕೀಯ ವೃತ್ತಿಗೆ ಶುಭಾಶಯಗಳನ್ನು ತಿಳಿಸುತ್ತಾ, ಸೇವೆ ಎಂಬುದು ಮಹತ್ವಪೂರ್ಣ ಜವಾಬ್ದಾರಿ. ವೈದ್ಯಕೀಯ ವೃತ್ತಿಯ ಮೌಲ್ಯ, ತತ್ವಗಳೊಂದಿಗೆ ಪರಾನುಭೂತಿ, ನೈತಿಕತೆ, ಪ್ರಜ್ಞೆ, ಪ್ರಾಮಾಣಿಕತೆ, ವೃತ್ತಿಪರತೆಯ ಜೊತೆಗೆ ಕಾರ್ಯನಿರ್ವಹಿಸಿದಾಗ ವೃತ್ತಿ ಜೀವನದಲ್ಲಿ ತೃಪ್ತಿ ಸಾಧಿಸಬಹುದು. ವಿಶೇಷವಾಗಿ ಎಐ ಇರುವ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳು ಸದಾ ಕಲಿಕೆಯಲ್ಲಿ ತೊಡಗಿಸಿಕೊಳ್ಳುತ್ತಾ ಪ್ರಸ್ತುತೆ ಸಾಧಿಸಬೇಕು. ಏಕೆಂದರೆ ಕಲಿಕೆ ನಿಂತರೆ ಜೀವನವೇ ಕೊನೆ ಗೊಂಡಂತೆ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತನ್ನು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಉಜಿರೆಯ ಎಸ್.ಡಿ.ಎಂ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಿ. ಹರ್ಷೇಂದ್ರ ಕುಮಾರ್ ಮಾತನಾಡಿ, ಪ್ರಸ್ತುತ ಜಗತ್ತಿನಲ್ಲಿ ಹೆಚ್ಚುತ್ತಿರುವ ಜೀವನ ಶೈಲಿ ಅಸ್ವಸ್ಥತೆಯನ್ನು ಗುಣಪಡಿಸಲು ವೈದ್ಯರು ಬೇಕಾಗಿದ್ದಾರೆ. ಈ ನಿಟ್ಟಿನಲ್ಲಿ ಇಂದು ತೇರ್ಗಡೆ ಹೊಂದುತ್ತಿರುವ ವಿದ್ಯಾರ್ಥಿಗಳು ಸುಸ್ಥಿರ ವೈದ್ಯಕೀಯ ಅಭ್ಯಾಸದಲ್ಲಿ ತೊಡಗಿಸಿಕೊಂಡು ಯಶಸ್ವಿಯಾಗಬೇಕು ಎಂದು ಶುಭ ಹಾರೈಸಿದರು. ತೇರ್ಗಡೆಹೊಂದಿದವಿದ್ಯಾರ್ಥಿಗಳಿಗೆಡಾ.ಭಗವಾನ್ ಬಿ.ಸಿ ಪದವಿ ಪ್ರಧಾನ ಮಾಡಿದರು. ಎಸ್.ಡಿ.ಎಂ. ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನ ಕಾಲೇಜಿನ ಉಪ ಪ್ರಾಂಶುಪಾಲರಾದ ಡಾ. ಸುಜಾತ ಕೆ.ಜೆ. ಪ್ರಮಾಣ ವಚನ ಬೋಧಿಸಿದರು.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಕೃತ್ತಿಕೆ

ದಿನದ ಮಾತು

ಇಂದ್ರಿಯಗಳ ಸೇನೆಗೆ ಮನಸ್ಸೇ ನಾಯಕ. ಆದ್ದರಿಂದ ಮನಸ್ಸನ್ನು ಜಯಿಸಿದಲ್ಲಿ, ಅದು ನಿಜವಾದ ವಿಜಯ.

▲ಸ್ವಾಮಿ ವಿವೇಕಾನಂದ

ದಿನ ಭವಿಷ್ಯ

ಮೇಷ ಎಲ್ಲ ಕೆಲಸ ಇಂದು ವಿಳಂಬಗೊಳ್ಳುವುದು. ಕೆಲವರ ಅಸಹಕಾರ. ಅಸಹನೆ ಅಧಿಕ. ಆರ್ಥಿಕ ಒತ್ತಡ ಹೆಚ್ಚಳ. ಕರಿದ ತಿಂಡಿಯಿಂದ ದೂರವಿರಿ.

ವೃಷಭ ಉತ್ಸಾಹಪೂರ್ಣ ದಿನ. ಕಠಿಣ ಕೆಲಸವೂ ಸುಲಭದಲ್ಲಿ ಸಾಧ್ಯ. ಉದ್ದೇಶಿತ ಕೆಲಸ ಫಲಪ್ರದ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶ.

ಮಿಥುನ ಎಲ್ಲ ಬೆಳವಣಿಗೆ ಪೂರಕವಾಗಿ ನಡೆಯಲಿದೆ. ಅಡ್ಡಿ ನಿವಾರಣೆ. ಹಣದ ಕೊರತೆ ಪರಿಹಾರ. ನವದಂಪತಿಗಳಿಗೆ ಶುಭಕರ ಬೆಳವಣಿಗೆ.

ಕಟಕ ತಲೆನೋವು ಅಥವಾ ಅಜೀರ್ಣದ ಸಮಸ್ಯೆ ಕಾಡಬಹುದು. ಕುಟುಂಬ ಸದಸ್ಯರ ಜತೆ ಕಳೆಯಿರಿ, ಒತ್ತಡ ನಿವಾರಿಸಿಕೊಳ್ಳಿ. ಧನಹಾನಿ ಸಂಭವ.

ಸಿಂಹ ಕಾರ್ಯಸಿದ್ಧಿ. ಆತ್ಮೀಯರ ಜತೆಗಿನ ಭಿನ್ನಮತ ನಿವಾರಣೆ. ಕೌಟುಂಬಿಕ ಸಮಸ್ಯೆ ಇದ್ದರೆ ಸಂಜೆಯೊಳಗೆ ಪರಿಹಾರ. ಖರ್ಚು ಹೆಚ್ಚಬಹುದು.

ಕನ್ಯಾ ಮಾನಸಿಕ ಒತ್ತಡವು ದಂಪತಿ ಮಧ್ಯೆ ಕಲಹಕ್ಕೆ ಕಾರಣವಾದೀತು. ಸಮಾಧಾನದಿಂದ ವ್ಯವಹರಿಸಿ. ಚರ್ಮದ ಅಲರ್ಜಿ ಕಾಣಿಸೀತು.

ತುಲಾ ಹೊಟ್ಟೆನೋವು, ಕಣ್ಣಿನ ಕಿರಿಕಿರಿಯಂತಹ ಸಮಸ್ಯೆ ಉಂಟಾದೀತು. ವೃತ್ತಿಯಲ್ಲಿ ಹೆಚ್ಚು ಹೊಣೆ. ಸಂಗಾತಿ ಜತೆಗೆ ವಾಗ್ವಾದ. ಆರ್ಥಿಕ ಉನ್ನತಿ.

ವೃಶ್ಚಿಕ ಕೆಲದಿನಗಳ ಒತ್ತಡ ಇಂದು ನಿವಾರಣೆ. ಅನುಚಿತ ಆಹಾರ ಸೇವನೆ ಆರೋಗ್ಯಕ್ಕೆ ಸಮಸ್ಯೆ ಒಡ್ಡಬಹುದು. ಪ್ರೀತಿಯಲ್ಲಿ ಯಶಸ್ಸು.

ಧನು ಮಕ್ಕಳಿಂದ ಸಮಸ್ಯೆ ಉಂಟಾದೀತು. ಅದನ್ನು ತಾಳ್ಮೆಯಿಂದ ನಿಭಾಯಿಸಿ. ಸಾಂಸಾರಿಕ ಬಿಕ್ಕಟ್ಟು ಪರಿಹರಿಸಲು ಸಮಯ ವ್ಯಯ. ಧನನಷ್ಟ.

ಮಕರ ಅನವಶ್ಯ ಚಿಂತೆ ಕಾಡಲು ಬಿಡಬೇಡಿ. ಸಮಸ್ಯೆಗೆ ಪರಿಹಾರ ಇದ್ದೇ ಇದೆ. ಹಣ ಹೂಡಿಕೆಗೆ ಪೂರಕ ದಿನವಲ್ಲ. ಮನೆಯಲ್ಲಿ ಸಾಮರಸ್ಯ.

ಕುಂಭ ಬಿಕ್ಕಟ್ಟಿಗೆ ತಕ್ಷಣ ಪ್ರತಿಕ್ರಿಯಿಸಿ. ವಿಳಂಬ ಧೋರಣೆ ಒಳ್ಳೆಯದಲ್ಲ. ಉಪಯುಕ್ತ ಕಾರ್ಯಕ್ಕೆ ಹಣ ಹೆಚ್ಚು ಖರ್ಚು. ಕೌಟುಂಬಿಕ ಸಮಾಧಾನ.

ಮೀನ ಸಂಗಾತಿ ಜತೆ ಪ್ರಾಮಾಣಿಕವಾಗಿ ವರ್ತಿಸಿ. ಮುಚ್ಚುಮರೆ ಬೇಡ. ಅನಿರೀಕ್ಷಿತ ಖರ್ಚು. ಮೇಲಧಿಕಾರಿಯ ಕಿರುಕುಳ ಎದುರಿಸುವಿರಿ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 9,4,7,5

ಹಾರಕೋಡು ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮೀಜಿ ಕಿವಿಮಾತು
ಎಲ್ಲರೂ ಬಸವತತ್ವ ಪಾಲಿಸಿ

ಬೀದರ್: ಅಹಂ ಇಲ್ಲದ, ಧೈರ್ಯಶಾಲಿಗಳಾದ ಮತ್ತು ಸಮಯೋಚಿತವಾಗಿ ನುಡಿವ ಹಾಗೂ ದಾನ ಮಾಡುವ ಪ್ರವೃತ್ತಿ ಮೈಗೂಡಿಸಿಕೊಂಡಿರುವ ಈಶ್ವರ ಖಂಡ್ರೆ, ತಮ್ಮ ಚತುರ್ಗುಣದಿಂದಲೇ ಜನಮೆಚ್ಚಿದ ನಾಯಕರಾಗಿದ್ದು, ಎಲ್ಲಾ ಸಮುದಾಯಕ ನಾಯಕರು ಬಸವತತ್ವ ಪಾಲಿಸಬೇಕು ಎಂದು ಹಾರಕೋಡು ಶ್ರೀ ಚನ್ನವೀರ ಶಿವಾಚಾರ್ಯರು ಅಭಿಪ್ರಾಯಪಟ್ಟರು.

ಬೀದರ್ ಕರ್ನಾಟಕ ಫಾರ್ಮಸಿ ಕಾಲೇಜಿನಲ್ಲಿ ನಡೆದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಕ್ಕೆಹಮ್ಮಿಕೊಂಡಿದ್ದಅಭಿನಂದನಾಸಮಾರಂಭದಲ್ಲಿ ಮಾತನಾಡಿ, ಈ ಕಾರ್ಯಕ್ರಮಕ್ಕೆ ದೊಡ್ಡ ಸಂಖ್ಯೆಯಲ್ಲಿ ಪ್ರೀತಿಪೂರ್ವಕವಾಗಿ ಎಲ್ಲರೂ ಆಗಮಿಸಿದ್ದೀರಿ. ಸದ್ಗುಣ ಸಂಪನ್ನರಾದ ಈಶ್ವರ್ ಖಂಡ್ರೆಯವರು ಶತಾಯುಷಿಗಳಾಗಿ ಬಾಳಲಿ, ಈ ನಾಡು ಬೆಳಗಲಿ ಎಂದರು.

ಇಡೀ ಬೀದರ್ ನಗರದ ಇತಿಹಾಸದಲ್ಲಿಯೇ ಬಸವತತ್ವದವರು, ಪಂಚಾಚಾರ್ಯ ಪರಂಪರೆಯವರು, ವಿರಕ್ತರು ಎಲ್ಲರೂ ಒಂದೇ ವೇದಿಕೆ ಯಲ್ಲಿ ಸೇರಿದ್ದಾರೆ. ರೇಣುಕಾಚಾರ್ಯರಿಗೆ, ಬಸವಣ್ಣನವರಿಗೆ ಹಾಗೂ ಹಾನಗಲ್ಲ ಕುಮಾರೇಶ್ವರರ ಭಾವ ಚಿತ್ರಕ್ಕೆ ಇಂದು ಪುಷ್ಪನಮನ ಸಲ್ಲಿಸಿದ ಏಕೈಕ ಕಾರ್ಯಕ್ರಮ ಇದಾಗಿದೆ ಎಂದರು. ಚನ್ನಬಸವಪಟ್ಟದ್ದೇವರು ನಮ್ಮೆಲ್ಲರ ಹೃದಯದಲ್ಲಿದ್ದಾರೆ. ಅವರಿಗೂ ಸೇರಿದಂತೆ ನಮಗೆಲ್ಲರಿಗೂ ಆಧ್ಯಾತ್ಮಿಕ ಶಕ್ತಿಯನ್ನು ತುಂಬಿದವರು ಕುಮಾರೇಶ್ವರರು ಎಂದರು. ಚನ್ನಬಸವ ಪಟ್ಟದ್ದೇವರ ಪರಮಭಕ್ತರಾದ ಈಶ್ವರ ಖಂಡ್ರೆಯವರು ಸಮಾಜಕ್ಕಾಗಿ ಶ್ರಮಿಸುತ್ತಿದ್ದಾರೆ ಎಂದರು.

ಮಾಜಿ ಶಾಸಕ ಅಶೋಕ್ ಖೇಣಿ ಮಾತನಾಡಿ, ಈಶ್ವರ ಖಂಡ್ರೆ ಅವರ ನೇತೃತ್ವದಲ್ಲಿ ವೀರಶೈವ ಲಿಂಗಾಯತ ಮಹಾಸಭಾ ದೊಡ್ಡ ಶಕ್ತಿಯಾಗಲಿದೆ ಎಂದರು. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಮಾತನಾಡಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಬೀದರ್‌ನ ಆಶಾಕಿರಣ ಈಶ್ವರ ಖಂಡ್ರೆ ಅವರ ಕೈಯನ್ನು ನಾವೆಲ್ಲರೂ ಬಲಪಡಿಸಬೇಕು ಎಂದರು.



ಖಂಡ್ರೆ ಮೇಲೆ ದೊಡ್ಡ ಜವಾಬ್ದಾರಿ: ರಾಜಶೇಖರ ಪಾಟೀಲ್

ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷತೆ ಅತಿ ದೊಡ್ಡ ಹೊಣೆಯಾಗಿದ್ದು, ಈ ಜವಾಬ್ದಾರಿ ಚಿಕ್ಕ ವಯಸ್ಸಿನಲ್ಲೇ ಈಶ್ವರ ಖಂಡ್ರೆ ಅವರಿಗೆ ಲಭಿಸಿದೆ ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ್ ಹೇಳಿದರು. ಬೀದರ್‌ನ ಕರ್ನಾಟಕ ಫಾರ್ಮಸಿ ಕಾಲೇಜಿನ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, ಭಾಲ್ಕಿ ಕ್ಷೇತ್ರದಿಂದ 4 ಬಾರಿ ಶಾಸಕರಾಗಿ, 2 ಬಾರಿ ಸಚಿವರಾಗಿ ಕಾಂಗ್ರೆಸ್ ಪಕ್ಷದ ಕಾರ್ಯಾಧ್ಯಕ್ಷರಾಗಿ ಸೇವೆ ಸಲ್ಲಿಸುವ ಅವಕಾಶ ಈಶ್ವರ ಖಂಡ್ರೆ ಅವರಿಗೆ ಲಭಿಸಿದೆ. ಅವರು ಈಗ ಸಭಾ ಅಧ್ಯಕ್ಷರಾಗಿ ಬೀದರ್‌ನಿಂದ ಚಾಮರಾಜನಗರದವರೆಗೆ ಸಂಘಟನೆಯನ್ನು ಬಲಪಡಿಸಬೇಕು ಎಂದರು. ವೀರಶೈವ ಮತ್ತು ಲಿಂಗಾಯತರು ಒಂದೇ ನಾಣ್ಯದ ಎರಡು ಮುಖ ಇದ್ದಂತೆ. ನಾವು ಜೊತೆಯಾಗಿ ಸಾಗಿದಾಗ ಅಭಿವೃದ್ಧಿ ಸಾಧ್ಯ ಎಂದರು.

ಸಿದ್ದಾರೂಢಮಠದ ಶ್ರೀ ಶಿವಕುಮಾರ ಸ್ವಾಮೀಜಿ ಮಾತನಾಡಿ, ಈಶ್ವರ ಖಂಡ್ರೆ ಅವರಿಗೆ ಭೀಮಣ್ಣ ಖಂಡ್ರೆ ಅವರಿಂದ ದಿವ್ಯ ಶಕ್ತಿ ಲಭಿಸಿದೆ. ಸಮಾಜದ ಒಳಿತಿಗಾಗಿ ಸದಾ ಶ್ರಮಿಸುತ್ತಿರುವ ಈಶ್ವರ ಖಂಡ್ರೆ ಅವರಲ್ಲಿ ಸಂತರ ಕರುಣೆ, ಯೋಧನ ಶೌರ್ಯ, ದಾನಿಯ ದಯಾಗುಣವಿದೆ. ಅವರು ತಮ್ಮ ಗುಣದಿಂದಲೇ ಗೌರವ ಪಡೆದಿದ್ದಾರೆ. ಹೀಗಾಗಿಯೇ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಅಭಿಮಾನಿಗಳು ಆಗಮಿಸಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವ ರಾಜಶೇಖರ ಪಾಟೀಲ್, ಶಾಸಕರುಗಳಾದ ಚಂದ್ರಕಾಂತ್ ಪಾಟೀಲ್, ಭೀಮರಾವ್ ಪಾಟೀಲ್, ಮುಖಂಡರಾದ ಸೂರ್ಯಕಾಂತ ಪಾಟೀಲ್, ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು, ಸಿದ್ದಾರೂಢ ಮಠ ಬೀದರ್‌ನ ಶ್ರೀ ಶಿವಕುಮಾರಸ್ವಾಮಿ, ಹಾರಕೋಡು ಮಠದ, ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮೀಜಿ, ಬೈಲೂರು ನಿಜಗುಣಾನಂದ ಸ್ವಾಮೀಜಿ, ಬೇಲ್ದಾಳೆ ಶರಣರು ಮತ್ತಿತರರು ಪಾಲ್ಗೊಂಡಿದ್ದರು.

ಮೋದಿ ಜನಪ್ರಿಯತೆ ಕುಗ್ಗಿಲ್ಲ: ವಿಜಯೇಂದ್ರ



ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿಜೀ ಅವರು 8,931 ದಿನಗಳ ಕಾಲ ನಿರಂತರವಾಗಿ ಆಡಳಿತ ನಡೆಸುತ್ತಿರುವುದು ನಮ್ಮೆಲ್ಲರಿಗೂ ತುಂಬ ಸಂತೋಷ ತಂದು ಕೊಟ್ಟ ವಿಚಾರ. ಇದು ಬಹಳ ದೊಡ್ಡ ಮೈಲಿಗಲ್ಲು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ವಿಶ್ಲೇಷಿಸಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದ ಬಗ್ಗೆ ಇವತ್ತು ದೇಶಾದ್ಯಂತ ಶ್ಲಾಘನೆ ಮಾಡುತ್ತಿದ್ದಾರೆ ಎಂದು ತಿಳಿಸಿದರು. ಭಾರತವು ಎಲ್ಲ ಕ್ಷೇತ್ರಗಳಲ್ಲೂ ಮುಂದೆ ಸಾಗುತ್ತಿರುವ ಸಂದರ್ಭದಲ್ಲಿ ಮೋದಿಜೀ ಅವರು ದಿಟ್ಟ ನಾಯಕತ್ವ ನೀಡಿದ್ದಾರೆ. ಸ್ವಾತಂತ್ರ್ಯ ಬಂದ ನಂತರದಲ್ಲಿ ಸತತ 3ನೇ ಬಾರಿಗೆ ಪ್ರಧಾನಿಗಳಾಗಿ ಮೋದಿ ಅವರ ಜನಪ್ರಿಯತೆ ಯಾವತ್ತೂ ಕುಗ್ಗಿಲ್ಲ ಎಂದು ನುಡಿದರು.

ಬಿಜೆಪಿ ಅಭ್ಯರ್ಥಿಗಳು ಗೆದ್ದುಬರುತ್ತಾರೆ

ಬಾಗಲಕೋಟೆಗೆ ಮಾಜಿ ಶಾಸಕ ವೀರಣ್ಣ ಚರಂತಿಮಠ್, ದಾವಣಗೆರೆ ದಕ್ಷಿಣಕ್ಕೆ ಶ್ರೀನಿವಾಸ ದಾಸ್ ಕರಿಯಪ್ಪ ನಮ್ಮ ಅಭ್ಯರ್ಥಿಯಾಗಿದ್ದಾರೆ. ಕಾರ್ಯಕರ್ತರಲ್ಲಿ ರಣೋತ್ಸಾಹ ಕಾಣುತ್ತಿದೆ. ಮತ್ತೊಂದು ಕಡೆ ಮತದಾರರು ರಾಜ್ಯ ಸರಕಾರದ ವಿರುದ್ಧ ಬೇಸತ್ತಿದ್ದಾರೆ. ಜನವಿರೋಧಿ, ಬಡವರ ವಿರೋಧಿ, ರೈತ ವಿರೋಧಿ, ಯುವಜನತೆಯ ಭವಿಷ್ಯವನ್ನು ಹಾಳುಗೆಡವಿದ ಈ ಕಾಂಗ್ರೆಸ್ ಸರಕಾರದ ವಿರುದ್ಧ ಜನರು ದಂಡೇಳುವ ಪರಿಸ್ಥಿತಿಯಲ್ಲಿ ಉಪ ಚುನಾವಣೆ ಘೋಷಣೆ ಆಗಿದೆ. ಬಾಗಲಕೋಟೆ ಕ್ಷೇತ್ರದ ಪ್ರಜ್ಞಾವಂತ ಮತದಾರರು ಈ ಬಾರಿ ಬಿಜೆಪಿಯನ್ನು ಬೆಂಬಲಿಸುತ್ತಾರೆ. ಹಿರಿಯರಾದ ವೀರಣ್ಣ ಚರಂತಿಮಠ್ ಅವರು ಗೆದ್ದು ಬಂದೇ ಬರುತ್ತಾರೆಂಬ ವಿಶ್ವಾಸ ಇದೆ ಎಂದು ಹೇಳಿದರು. ಅದೇರೀತಿ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲೂ ಒಂದು ಅಚ್ಚರಿಯ ಫಲಿತಾಂಶ ಬರಲಿದ್ದು, ಬಿಜೆಪಿ ಅಭ್ಯರ್ಥಿ ಗೆದ್ದು ಬರುತ್ತಾರೆ ಎಂದು ವಿಶ್ವಾಸದಿಂದ ತಿಳಿಸಿದರು. ಕೇಂದ್ರ ಸಚಿವರಾದ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ಜೊತೆಗೂ ಚರ್ಚೆ ಮಾಡಿದ್ದೇನೆ. ಅವರೂ ಸಂಪೂರ್ಣ ಬೆಂಬಲ ಕೊಡುತ್ತಿದ್ದಾರೆ ಎಂದು ಹೇಳಿದರು. ಇದೆಲ್ಲದರ ಪರಿಣಾಮವಾಗಿ ಎರಡೂ ಕ್ಷೇತ್ರಗಳಲ್ಲಿ ನಾವು ಗೆಲ್ಲಲಿದ್ದೇವೆ ಎಂದರು.

ಕಲಾಪಕ್ಕೆ ಪ್ರಮುಖ ನಾಯಕರು ಗೈರು

ಬೆಂಗಳೂರು: ಯುಗಾದಿ ಮತ್ತು ರಂಜಾನ್ ಹಬ್ಬದ ರಜಾ ದಿನಗಳ ನಂತರ ಬಜೆಟ್ ಅಧಿವೇಶನ ಮತ್ತೆ ಸೋಮವಾರದಿಂದ ಆರಂಭವಾಗಲಿದ್ದು, ಬಜೆಟ್ ಮೇಲಿನ ಚರ್ಚೆಗೆ ಪ್ರಮುಖ ನಾಯಕರು ಗೈರು ಹಾಜರಾಗಲಿದ್ದಾರೆ. ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನ ಸಭೆ ಕ್ಷೇತ್ರಗಳ ಉಪಚುನಾವಣೆಗೆ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಜೊತೆಯಾಗಿ ಭಾಗವಹಿಸಲಿದ್ದು, ಸದನದಲ್ಲಿ ಗೈರಾಗಲಿದ್ದಾರೆ. ಇನ್ನೂ ಬಿಜೆಪಿಯಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮತ್ತು ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರು ಕೂಡಾ ತಮ್ಮ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯಲ್ಲಿ ಭಾಗಿಯಾಗಲಿದ್ದು, ಇದರ ಜತೆಗೆ ಪಂಚರಾಜ್ಯಗಳ ಚುನಾವಣೆ ಪ್ರಚಾರದಲ್ಲಿ ಪ್ರಮುಖ ಸಚಿವರು ಕೂಡಾ ತೆರಳಿದ್ದಾರೆ. ಆಡಳಿತ ಮತ್ತು ಪ್ರತಿಪಕ್ಷಗಳ ಪ್ರಮುಖ ನಾಯಕರ ಅನುಪಸ್ಥಿತಿಯಿಂದ ಬಜೆಟ್ ಮೇಲಿನ ಚರ್ಚೆಯ ತೀವ್ರತೆ ಕಡಿಮೆಯಾಗಲಿದೆ. ವಿರೋಧ ಪಕ್ಷಗಳ ಪ್ರಶ್ನೆಗಳಿಗೆ ಸರ್ಕಾರವನ್ನು ಸಮರ್ಥಿಸಿಕೊಳ್ಳುವ ಜವಾಬ್ದಾರಿ ಒಂದಿಬ್ಬರು ಸಚಿವರ ಮೇಲೆ ಇದೆ.

ಪುತ್ರನಿಗೆ ಟಿಕೆಟ್ ತರುವಲ್ಲಿ ಸಚಿವ ಮಲ್ಲಿಕಾರ್ಜುನ್ ಯಶಸ್ವಿ
ಟಿಕೆಟ್ ಆಕಾಂಕ್ಷಿಗಳಿಂದ ಬಂಡಾಯ

ದಾವಣಗೆರೆ: ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಮುಸ್ಲಿಂ ಅಭ್ಯರ್ಥಿಗೆ ಕಾಂಗ್ರೆಸ್ ಟಿಕೆಟ್ ನೀಡಬೇಕೆಂಬಬೇಡಿಕೆನಡುವೆಯೂಪುತ್ರನಿಗೆ ಟಿಕೆಟ್ ತರುವಲ್ಲಿ ಸಚಿವ ಮಲ್ಲಿಕಾರ್ಜುನ್ ಯಶಸ್ವಿಯಾಗಿದ್ದಾರೆ. ಇದರೊಂದಿಗೆ ಟಿಕೆಟ್ ಸಮರಕ್ಕೆ ತೆರೆಬಿದ್ದಿದ್ದರೂ, ಟಿಕೆಟ್ ಆಕಾಂಕ್ಷಿಗಳಾಗಿದ್ದ ಮುಸ್ಲಿಂ ಮುಖಂಡರ ಮುಂದಿನ ನಡೆ ಕುತೂಹಲಕ್ಕೆ ಕಾರಣವಾಗಿದೆ. ಪಕ್ಷದಲ್ಲಿನ ಭಿನ್ನಮತ ಚುನಾವಣಾ ವೇಳೆಗೆ ಜ್ವಾಲಾಮುಖಿಯಾಗಿ ಸ್ಫೋಟಗೊಳ್ಳುವ ಲಕ್ಷಣಗಳು ದಟ್ಟವಾಗಿವೆ.

ಕಾಂಗ್ರೆಸ್ ಮುಖಂಡ ಸಾದಿಕ್ ಪೈಲ್ವಾನ್ ಈಗಾಗಲೇ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಮೂಲಕ ಬಂಡಾಯದ ಬಾವುಟ ಹಾರಿಸಿದ್ದಾರೆ. ಟಿಕೆಟ್ ಘೋಷಣೆ ನಂತರವೂ ನಿಲುವು ಬದಲಿಸದ ಸಾದಿಕ್ ಪೈಲ್ವಾನ್ ಸೋಮವಾರ ಮತ್ತೆ ನಾಮಪತ್ರ ಸಲ್ಲಿಸುವ ಮೂಲಕ ಕಣದಲ್ಲಿ ಉಳಿಯುವುದಾಗಿ ಘೋಷಿಸಿದ್ದಾರೆ. ಇವರಿಗೆ ಎಐಎಂಐಎಂ, ಎಸ್.ಡಿ.ಪಿ.ಐ ಪಕ್ಷಗಳು ಬೆಂಬಲಿಸಿದಲ್ಲಿ ಮುಸ್ಲಿಂ ಮತಗಳು ಚದುರಿಹೋಗಿ, ಸಮರ್ಥ ಶಾಮನೂರು ಗೆಲುವು ಪ್ರಯಾಸದ ಹಾದಿಯಾಗಲಿದೆ. ಸಮರ್ಥ ಶಾಮನೂರುಗೆ ಟಿಕೆಟ್ ಘೋಷಣೆ ಆಗುತ್ತಿದ್ದಂತೆ ಇನ್ನೋರ್ವ ಟಿಕೆಟ್ ಆಕಾಂಕ್ಷಿಯಾಗಿದ್ದ ವಿಧಾನ ಪರಿಷತ್ ಸದಸ್ಯ ಕೆ. ಅಬ್ದುಲ್ ಜಬ್ಬಾರ್ ಬಣವು ಸಾಮಾಜಿಕ ಜಾಲತಾಣಗಳಲ್ಲಿ 'ತಾವು ಮತಬ್ಯಾಂಕ್ ಅಲ್ಲ, ಮತ ಪವರ್ ಎಂಬುದನ್ನು ಚುನಾವಣೆ ವೇಳೆ ತೋರಿಸುತ್ತೇವೆ ಅಂತಾ ಆಕ್ರೋಶ ವ್ಯಕ್ತಪಡಿಸಿದೆ.

ಹಿಂದೆ ಸರಿಯುವ ಮಾತೇ ಇಲ್ಲ: ಸಾದಿಕ್

ದಾವಣಗೆರೆ: ಬಾಲ್ಯದಿಂದಲೂ ನಾನೊಬ್ಬ ಪೈಲ್ವಾನ್. ಒಮ್ಮೆ ಅಖಾಡಕ್ಕಿಳಿದರೆ ಮತ್ತೆ ಹಿಂದೆ ಸರಿಯುವ ಮಾತೇ ಇಲ್ಲ ಎಂದು ಕಾಂಗ್ರೆಸ್ ಹಾಗೂ ಮುಸ್ಲಿಂ ಸಮಾಜದ ಹಿರಿಯ ಮುಖಂಡ ಸಾದಿಕ್ ಪೈಲ್ವಾನ್ ಸ್ಪಷ್ಟಪಡಿಸಿದ್ದಾರೆ. ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದೆ. ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ಕೊಡುವಂತೆ ಕೇಳಿದ್ದೆವು. ಮುಸ್ಲಿಮರಿಗೆ ಟಿಕೆಟ್ ಸಿಕ್ಕಿಲ್ಲ, ಹಾಗಾಗಿ ನಾನು ಪಕ್ಷೇತರನಾಗಿಯೇ ಕಣಕ್ಕಿಳಿಯುತ್ತೇನೆ. ಎದುರಾಳಿಯಾಗಿ ಆನೆಯೇ ಇದ್ದರೂ ನಾನು ಸೆಡ್ಡು ಹೊಡೆಯುತ್ತೇನೆ. ದಕ್ಷಿಣ ಕ್ಷೇತ್ರದಲ್ಲಿ ನನಗೆ ಕಾಂಗ್ರೆಸ್ ಪಕ್ಷವೇ ಎದುರಾಳಿ. ಯಾರು ಏನೇ ಹೇಳಿದರೂ ನಾನು ಸ್ಪರ್ಧೆ ಮಾಡುವುದು ಶತಃಸಿದ್ಧ. ನಾನು ಮಾ.23ರಂದು ಬೆಳಿಗ್ಗೆ 11.30ಕ್ಕೆ ಅರಳೀ ಮರ ವೃತ್ತದಿಂದ ಪಾದಯಾತ್ರೆ ಮೂಲಕ ತೆರಳಿ, ಚುನಾವಣಾಧಿಕಾರಿಗೆ ಇನ್ನೊಂದು ಸಲ ನನ್ನ ನಾಮಪತ್ರ ಸಲ್ಲಿಸುತ್ತೇನೆ ಎಂದು ತಿಳಿಸಿದರು.

ವಿರಾಜಪೇಟೆಯಲ್ಲಿ ಒಂಟಿ ಸಲಗ ಸೆರೆ

ಮಡಿಕೇರಿ: ವಿರಾಜಪೇಟೆ ವ್ಯಾಪ್ತಿಯಲ್ಲಿ ಮಾನವ-ಆನೆ ಸಂಘರ್ಷಕ್ಕೆ ಕಾರಣವಾಗಿದ್ದ ಮತ್ತೊಂದು ಒಂಟಿ ಸಲಗವನ್ನು ಸೆರೆ ಹಿಡಿಯುವಲ್ಲಿ ಕೊಡಗು ವಿಭಾಗದ ಅರಣ್ಯ ಇಲಾಖೆ ಯಶಸ್ವಿಯಾಗಿದೆ. ಮೂರು ಗಂಟೆಗಳ ಯಶಸ್ವಿ ಕಾರ್ಯಾಚರಣೆ ಬಳಿಕ 35 ವರ್ಷದ ಒಂಟಿ ಸಲಗವನ್ನು ಯಶಸ್ವಿಯಾಗಿ ಸೆರೆ ಹಿಡಿಯಲಾಗಿದೆ.

ಕಾಡಾನೆಗಳ ಚಲನವಲನದ ಹೆಚ್ಚಳ ಹಾಗೂ ಕಕ್ಕೂರು, ಚೆಂಬ ಬೆಳ್ಳೂರು ಸುತ್ತಮುತ್ತಲ ಗ್ರಾಮಗಳ ವ್ಯಾಪ್ತಿಯ ಕಾಫಿ ತೋಟಗಳಲ್ಲಿ ಬೀಡುಬಿಟ್ಟು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದ್ದ ಒಂಟಿ ಸಲಗ ಸೆರೆ ಹಿಡಿಯಲು ಸರ್ಕಾರ ಅನುಮತಿ ನೀಡಿತ್ತು.

ಭಾನುವಾರ ಬೆಳಗ್ಗೆ ಆನೆ ಪತ್ತೆಯಾದ ನಂತರ ಸೆರೆ ಹಿಡಿಯುವ ಕಾರ್ಯಾಚರಣೆ ಆರಂಭವಾಗಿದ್ದು, ಮಧ್ಯಾಹ್ನದ ವೇಳೆಗೆ ಅರಣ್ಯಾಧಿಕಾರಿಗಳು ಯಶಸ್ವಿಯಾಗಿ ಒಂಟಿ ಸಲಗವನ್ನು ಸೆರೆ ಹಿಡಿದಿದ್ದಾರೆ. ಕೊಡಗಿನಲ್ಲಿ ಕಾಫಿ ಬೆಳೆಗಾರನ ಬಲಿ ಪಡೆದಿದ್ದ ಕಾಡಾನೆ ಸೆರೆ ದುಬಾರೆ ಹಾಗೂ ಮತ್ತಿಗೋಡು ಶಿಬಿರದ ಸಾಕಾನೆಗಳಾದ ಅಭಿಮನ್ಯು, ಮಹೇಂದ್ರ, ಕಂಜನ್, ಭೀಮ, ಸುಗ್ರೀವ ಮತ್ತು ಹರ್ಷ ಸೇರಿದಂತೆ 100 ಕ್ಕೂ ಹೆಚ್ಚು ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಹೃದಯಾಘಾತ: ಸೇನಾಧಿಕಾರಿ ಸಾವು

ಬೆಳಗಾವಿ: ನಾನಾವಾಡಿಯ ಕಮಾಂಡೋ ವಿಂಗ್ ಆವರಣದಲ್ಲಿ ಸ್ವಿಮ್ಮಿಂಗ್ ಪೂಲ್‌ನಲ್ಲಿ ಸ್ವಿಮ್ಮಿಂಗ್ ಮಾಡುತ್ತಿದ್ದಾಗ ಹೃದಯಘಾತದಿಂದ ಸೇನಾಧಿಕಾರಿ ಮೃತಪಟ್ಟ ಘಟನೆ ನಡೆದಿದೆ. ಹರಿಯಾಣ ಮೂಲದ ಲೆಫ್ಟಿನೆಂಟ್ ಅಮಿತ್ ಸಿಂಗ್ ಹೃದಯಾಘಾತದಿಂದ ಮೃತಪಟ್ಟ ಸೇನಾಧಿಕಾರಿ. ಬೆಳಗಾವಿಯ ಎಂಎಲ್‌ಆರ್‌ಸಿ ಕಮಾಂಡೋ ವಿಂಗ್‌ನಲ್ಲಿ ಟ್ರೇನಿಂಗ್ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಸ್ವಿಮ್ಮಿಂಗ್ ಮಾಡುತ್ತಿದ್ದಾಗ ಅಮಿತ್ ಸಿಂಗ್ ಹೃದಯಾಘಾತಕ್ಕೊಳಗಾಗಿದ್ದಾರೆ. ತಕ್ಷಣ ಲೈಫ್ ಗಾರ್ಡ್ ಪ್ರದೀಪ್ ಕುಮಾರ್ ಅವರಿಗೆ ಪ್ರಥಮ ಚಿಕಿತ್ಸೆ ನೀಡಿ ಆಸ್ಪತ್ರೆಗೆ ತೆರಳುತ್ತಿದ್ದ ವೇಳೆ ಕೊನೆಯುಸಿರು ಎಳೆದಿದ್ದಾರೆ.



ಚಾಲಾಕಿಗಳ ನಕಲಿ ನಾಟಕ ಬಯಲಿಗೆಳೆದ ಮಹಿಳೆ

ಬೆಂಗಳೂರು: ಸೈಬರ್ ವಂಚಕರ ಜಾಲ ಈಗ ಮುಂದಿನ ಹಂತಕ್ಕೆ ತಲುಪಿದೆ. ಇಷ್ಟು ದಿನ ಬೇರೆ ರಾಜ್ಯದ ಪೊಲೀಸರ ಹೆಸರಿನಲ್ಲಿ ಜನರನ್ನು ಹೆದರಿಸುತ್ತಿದ್ದ ವಂಚಕರು, ಈಗ ಸ್ಥಳೀಯ ಪೊಲೀಸರ ಹೆಸರನ್ನೇ ಬಳಸಿಕೊಂಡು ಜನರನ್ನು ದಾರಿ ತಪ್ಪಿಸಲು ಮುಂದಾಗಿದ್ದಾರೆ. ನಗರದ ಮಹಿಳೆಯೊಬ್ಬರಿಗೆ ಬಂದ ಕರೆ ಮತ್ತು ಅವರು ತೋರಿದ ಸಮಯಪ್ರಜ್ಞೆ ಈ ಚಾಲಾಕಿಗಳ ನಕಲಿ ನಾಟಕವನ್ನು ಬಯಲಿಗೆಳೆದಿದೆ. ನಯನಾ ಪ್ರಕಾಶ್ ಎಂಬ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿದ್ದ ಖದೀಮರು ಬೆಂಗಳೂರಿನ ಮಹಿಳೆಯೊಬ್ಬರಿಗೆ ಮೊದಲು ಆಡಿಯೋ ಕಾಲ್ ಮಾಡಿ, ನಿಮ್ಮ ತಾಯಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ ಎಂದು ಬೆದರಿಸಿದ್ದಾರೆ.

ಉಪ ಚುನಾವಣೆಗೆ ಸಜ್ಜಾಯ್ತು ಅಖಾಡ

ಪುಟ ೧➡ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಬೇಕು ಎಂಬ ಒತ್ತಡಗಳು ಇದ್ದವಾದರೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಅವರು ಕಳೆದ ಎರಡು ದಿನಗಳಿಂದ ಎಲ್ಲರ ಜತೆಗೆ ಮಾತನಾಡಿ ಅಲ್ಪಸಂಖ್ಯಾತರ ಮನವೊಲಿಸಿ ಸಮರ್ಥ ಶಾಮನೂರುರವರ ಹೆಸರನ್ನು ಅಂತಿಮಗೊಳಿಸಿದ್ದರು. ಹಾಗೆಯೇ ಬಾಗಲಕೋಟೆ ಕ್ಷೇತ್ರದಿಂದ ಉಮೇಶ್ ಮೇಟಿ ಅವರ ಹೆಸರನ್ನು ಅಂತಿಮಗೊಳಿಸಿ ಹೈಕಮಾಂಡ್‌ಗೆ ಕಳುಹಿಸಲಾಗಿತ್ತು.

ಕುಟುಂಬದಲ್ಲಿಯೇ ಪೈಪೋಟಿಯಿತ್ತು: ಬಾಗಲಕೋಟೆ ಕ್ಷೇತ್ರದಲ್ಲಿ ಟಿಕೆಟ್‌ಗಾಗಿ ದಿ.ಮೇಟಿಯವರ ಕುಟುಂಬದಲ್ಲೇ ಪೈಪೋಟಿಯಿತ್ತು. ಮೇಟಿಯವರ ಪುತ್ರಿ ಮಹಾದೇವಿ ಮೇಟಿರವರು ಟಿಕೆಟ್ ಆಕಾಂಕ್ಷಿಯಾಗಿದ್ದರು. ಸಿಎಂ ಸಿದ್ದರಾಮಯ್ಯನವರು ದಿ.ಎಚ್.ವೈ. ಮೇಟಿಯವರ ಇಬ್ಬರು ಪುತ್ರರು ಹಾಗೂ ಪುತ್ರಿಯರನ್ನು ಕರೆಸಿ ಸಭೆ ನಡೆಸಿ, ನಾವು ಯಾರಿಗೆ ಟಿಕೆಟ್ ಕೊಡುತ್ತೇವೋ ಅವರ ಪರ ಕೆಲಸ ಮಾಡಬೇಕು ಎಂದು ಸೂಚಿಸಿದ್ದರು. ಮೇಟಿಯವರ ಪುತ್ರಿ ಮಹದೇವಿ ಮೇಟಿ ತಮ್ಮ ಸಹೋದರ ಮಲ್ಲಿಕಾರ್ಜುನ ಮೇಟಿ ಬದಲು ಮತ್ತೊಬ್ಬ ಸಹೋದರ ಉಮೇಶ್ ಮೇಟಿಯವರಿಗೆ ಟಿಕೆಟ್ ನೀಡಬೇಕು. ಇಲ್ಲದಿದ್ದರೆ ತಾವು ಚುನಾವಣಾ ಕಣಕ್ಕೆ ಇಳಿಯುವುದಾಗಿ ಹೇಳಿದ್ದರು. ಈಗ ಕಾಂಗ್ರೆಸ್ ಹೈಕಮಾಂಡ್ ಉಮೇಶ್ ಮೇಟಿಯವರಿಗೆ ಟಿಕೆಟ್ ಘೋಷಣೆ ಮಾಡಿರುವುದರಿಂದ ಪರಿಹಾರವಾದಂತಾಗಿದ್ದು, ಮಹಾದೇವಿ ಮೇಟಿಯವರ ಆಶಯವೂ ಈಡೇರಿದಂತಾಗಿದೆ. ಈಗ ಎರಡೂ ಕ್ಷೇತ್ರಗಳಲ್ಲೂ ಟಿಕೆಟ್ ಹಂಚಿಕೆಯ ಗೊಂದಲಗಳು ಮುಗಿದಿದ್ದು, ಮುಂದಿನ ಹಣಾಹಣಿಗೆ ಕಾಂಗ್ರೆಸ್ ಪಕ್ಷ ಸಜ್ಜಾಗಿದೆ. ಕಾಂಗ್ರೆಸ್ ಪಕ್ಷ ಉಪಚುನಾವಣೆಗೆ ಅಭ್ಯರ್ಥಿಗಳನ್ನು ಘೋಷಣೆ ಮಾಡಿರುವುದರಿಂದ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಸಮರ್ಥ್ ಮಲ್ಲಿಕಾರ್ಜುನ್ ಮತ್ತು ಬಿಜೆಪಿಯ ಶ್ರೀನಿವಾಸ ದಾಸ ಕರಿಯಪ್ಪ ನಡುವೆ ಚುನಾವಣಾ ಗೆಲುವಿಗೆ ಹಣಾಹಣಿ ನಡೆಯಲಿದ್ದು, ಬಾಗಲಕೋಟೆಯಲ್ಲಿ ಉಮೇಶ್ ಮೇಟಿ ಮತ್ತು ಬಿಜೆಪಿಯ ವೀರಣ್ಣ ಚರಂತಿಮಠ ನಡುವೆ ಸ್ಪರ್ಧೆ ಏರ್ಪಟ್ಟಿದೆ.

ಇಂದು ನಾಮಪತ್ರ ಸಲ್ಲಿಕೆ, ಶಕ್ತಿ ಪ್ರದರ್ಶನ

ಪುಟ ೧➡ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಸಮರ್ಥ ಮಲ್ಲಿಕಾರ್ಜುನ್ ಅವರು ಬಿ ಫಾರಂ ಇಲ್ಲದೆ ಶುಭ ದಿನವೆಂದು ಕಳೆದ ಶುಕ್ರವಾರವೇ ನಾಮಪತ್ರ ಸಲ್ಲಿಸಿದ್ದರು. ಹಾಗೆಯೇ ಬಿಜೆಪಿಯ ಶ್ರೀನಿವಾಸದಾಸ ಕರಿಯಪ್ಪ ಕೂಡ ಕಳೆದ ಶುಕ್ರವಾರವೇ ತಮ್ಮ ಉಮೇದುವಾರಿಕೆ ಸಲ್ಲಿಸಿದ್ದರು. ಬಾಗಲಕೋಟೆಯಲ್ಲಿ ಬಿಜೆಪಿಯ ವೀರಣ್ಣ ಚರಂತಿಮಠ ಅವರು ಸಹ ಕಳೆದ ಶುಕ್ರವಾರ ನಾಮಪತ್ರ ಸಲ್ಲಿಕೆ ಮಾಡಿದ್ದರು. ಈ ನಾಮಪತ್ರ ಸಲ್ಲಿಕೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮೊದಲಾದ ಪ್ರಮುಖರು ಭಾಗಿಯಾಗಲಿದ್ದು, ಬಿಜೆಪಿ ಅಭ್ಯರ್ಥಿಗಳ ಪರವಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಪಕ್ಷ ನಾಯಕ ಆರ್. ಅಶೋಕ್ ಸೇರಿದಂತೆ ಪ್ರಮುಖ ಮುಖಂಡರುಗಳು ಪಾಲ್ಗೊಳ್ಳಲಿದ್ದು, ಇಂದಿನ ನಾಮಪತ್ರ ಸಲ್ಲಿಕೆ ಎರಡೂ ಪಕ್ಷಗಳ ಶಕ್ತಿ ಪ್ರದರ್ಶನಕ್ಕೆ ವೇದಿಕೆಯಾಗಲಿದೆ.



ನಮ್ಮ ಪಕ್ಷದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ವೇಳೆ ನಾನು ಹಾಗೂ ಮುಖ್ಯಮಂತ್ರಿಗಳು ದಾವಣಗೆರೆ ಹಾಗೂ ಬಾಗಲಕೋಟೆಗೆ ಹೋಗುತ್ತಿದ್ದೇವೆ. ಎರಡೂ ಕ್ಷೇತ್ರಗಳಲ್ಲೂ ಪಕ್ಷವನ್ನು ಗೆಲ್ಲಿಸಲು ಎಲ್ಲಾ ರೀತಿಯ ತಂತ್ರಗಳನ್ನು ರೂಪಿಸಲಾಗಿದೆ. ಎಲ್ಲರೂ ಸೇರಿ ಪಕ್ಷ ಗೆಲ್ಲಿಸಿಕೊಂಡು ಬರುತ್ತೇವೆ.

■ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಅಚಲ ಬದ್ಧತೆಯ ಪ್ರತೀಕ: ಶಾ

ಪುಟ ೧➡ ಮೊದಲಿಗೆ ಗುಜರಾತ್ ಮುಖ್ಯಮಂತ್ರಿಯಾಗಿ ನಂತರ ಪ್ರಧಾನಿಯಾಗಿ 'ರಾಷ್ಟ್ರ ಮೊದಲು ಎನ್ನುವ ಬದ್ಧತೆಯೊಂದಿಗೆ ತಮ್ಮ ಕೃತಿಯಲ್ಲಿ ಸಮಗ್ರತೆಯನ್ನು ಕಾಯ್ದುಕೊಂಡು ದೇಶದ ಪ್ರತಿ ನಾಗರಿಕನ ಉನ್ನತಿಯ ಚಿಂತನೆಯೊಂದಿಗೆ ಅವಿಶ್ರಾಂತ ಸೇವೆ ಸಲ್ಲಿಸುತ್ತಿದ್ದಾರೆ. ಇದು ಅಭೂತಪೂರ್ವ ವಿಶ್ವಾಸ ಮತ್ತು ಸಾಟಿಯಿಲ್ಲದ ಸೇವೆಯೊಂದರ ಮೇಲೆ ನಿರ್ಮಿಸಲಾದ ಅಪೂರ್ವ ಪರಂಪರೆ ಎಂಬುದಾಗಿ ಬರೆದುಕೊಂಡಿದ್ದಾರೆ.

ಪ್ರಧಾನಿ ಮೋದಿಯವರು ಈಗ ಭಾರತ ಸರ್ಕಾರದ ಮುಖ್ಯಸ್ಥರಾಗಿ ಸುದೀರ್ಘ ಸೇವೆ ಸಲ್ಲಿಸಿದ ದಾಖಲೆ ಮಾಡಿದ್ದು, ರಾಷ್ಟ್ರ ಮತ್ತು ರಾಷ್ಟ್ರದ ಜನತೆಗೆ ಪೂರ್ಣ ಸಮರ್ಪಿತವಾದ ಮೋದಿಯವರ ನಿಷ್ಠೆಯೇ ಅವರನ್ನು ಈ ಸಾಧನೆಗೈಯ್ಯುವಂತೆ ಮಾಡಿದೆ.

■ ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಮೋದಿಗೆ ಇನ್‌ಸ್ಟಾಗ್ರಾಮ್‌ನಲ್ಲಿ 10 ಕೋಟಿ ಫಾಲೋವರ್ಸ್; ದಾಖಲೆ

ಇದಕ್ಕೂ ಮುನ್ನ ಪ್ರಧಾನಿ ಮೋದಿಯವರು ಇನ್‌ಸ್ಟಾಗ್ರಾಮ್‌ನಲ್ಲಿ 10 ಕೋಟಿ (100ಮಿಲಿಯ)ಫಾಲೋವರ್‌ಗಳನ್ನು ಹೊಂದಿದ ವಿಶ್ವದ ಮೊದಲ ನಾಯಕನೆಂಬ ಖ್ಯಾತಿಗೆ ಭಾಜನರಾಗಿದ್ದರು. ಇದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ (43ಮಿ.ಫಾಲೋವರ್ಸ್) ಅವರಿಗಿಂತ ದುಪ್ಪಟ್ಟು ಸಂಖ್ಯೆ ಎಂಬುದಿಲ್ಲಿ ಉಲ್ಲೇಖನೀಯ.

ವಿದ್ಯುತ್ ಉತ್ಪಾದನೆ ಹೆಚ್ಚಿಸುವ ಗುರಿ: ಗೌರವ್ ಗುಪ್ತ



ಬೆಂಗಳೂರು: ಮುಂದಿನ 5 ವರ್ಷಗಳಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು 25 ಸಾವಿರ ಮೆಗಾವ್ಯಾಟ್‌ಗೆ ಹೆಚ್ಚಿಸುವ ಗುರಿಯನ್ನು ಕರ್ನಾಟಕ ಹೊಂದಿದ್ದು, ಇದನ್ನು ಸಾಧಿಸಲು ಸರ್ಕಾರ ಸಾಕಷ್ಟು ಪೂರಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ ಎಂದು ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಹೇಳಿದ್ದಾರೆ.

ಕರ್ನಾಟಕ ನವೀಕರಿಸಬಹುದಾದ ಇಂಧನ ನಿಯಮಿತ (ಕ್ರೆಡಲ್), ಸಿಇಇಡಬ್ಲ್ಯು ಸಹಯೋಗದೊಂದಿಗೆ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ಹೂಡಿಕೆದಾರರು ಮತ್ತು ಜನರ ಸಹಯೋಗದೊಂದಿಗೆ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು 25 ಸಾವಿರ ಮೆಗಾವ್ಯಾಟ್‌ಗೆ ಹೆಚ್ಚಿಸುವ ಗುರಿ ಸಾಧಿಸಬೇಕಾಗಿದೆ. ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಸಾಕಷ್ಟು ಭೂಮಿ ಬೇಕಾಗುತ್ತದೆ. ಈ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಜನರಿಂದ ಸಾಕಷ್ಟು ವಿರೋಧಗಳು ಬರುತ್ತಿವೆ. ಯೋಜನೆಗಳಿಗೆ ನಮಗೆ ತೊಂದರೆಯಾಗುತ್ತದೆ ಎಂಬ ಆತಂಕ ಅವರಲ್ಲಿರುತ್ತದೆ. ಭೂಸ್ವಾಧೀನಕ್ಕೆ ಬರುವ ವಿರೋಧಗಳನ್ನು ಹೂಡಿಕೆದಾರರು ಅಡೆತಡೆ ಎಂದು ಯೋಚಿಸುತ್ತಾರೆ. ಆದ್ದರಿಂದ ನವೀಕರಿಸಬಹುದಾದ ಇಂಧನ ನೇತೃತ್ವದ ಬೆಳವಣಿಗೆಯು ದೇಶದ ಅಭಿವೃದ್ಧಿಗೆ ಮಾರ್ಗ ಎಂಬುದನ್ನು ಜನರಿಗೆ ಮನದಟ್ಟು ಮಾಡಿಕೊಟ್ಟರೆ ಅವರು ಯೋಜನೆಗಳನ್ನು ಬೆಂಬಲಿಸುತ್ತಾರೆ ಎಂದು ತಿಳಿಸಿದರು.

ಉದ್ಯಮ ವಲಯದಿಂದ ಬಂದಿರುವ ಪ್ರತಿಕ್ರಿಯೆಗಳನ್ನು ಆಧರಿಸಿ ಭೂಸ್ವಾಧೀನ ವಿಚಾರದಲ್ಲಿ ಸರಳೀಕರಣ ಮಾಡಲಾಗಿದೆ. ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಭೂಮಿ ಪಡೆಯಲು ರಾಜ್ಯ ಸರ್ಕಾರ ವಿಶೇಷ ಆನ್ ಲೈನ್ ಪೋರ್ಟಲ್ ಸಿದ್ಧಪಡಿಸಿದೆ. ಹೂಡಿಕೆದಾದರರು ರೈತರೊಂದಿಗೆ ಮಾತುಕತೆ ನಡೆಸಿದ ಬಳಿಕ ಭೂ ಪರಿವರ್ತನೆಗಾಗಿ ಆನ್‌ಲೈನ್ ನೋಂದಣಿ ಮಾಡಿ, ಪರಿವರ್ತನೆ ಮಾಡಿಸಿಕೊಳ್ಳಬಹುದು ಎಂದು ತಿಳಿಸಿದರು.

ಮುಖ್ಯಮಂತ್ರಿ ಸೌರ ಕೃಷಿ ಯೋಜನೆಗೆ ಮೆಚ್ಚುಗೆ

ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಕರ್ನಾಟಕವು ಸಾಕಷ್ಟು ಸಾಧನೆಗಳನ್ನು ಮಾಡಿದ್ದು, ರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳನ್ನು ಪಡೆದಿದೆ. ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಸಾಧನೆಗಾಗಿ ಭೂಸ್ವಾಧೀನದಲ್ಲಿ ಸುಧಾರಣೆಗಳನ್ನು ತಂದಿದೆ. ಈ ಬಾರಿಯ ಆಯವ್ಯಯದಲ್ಲಿ ಮುಖ್ಯಮಂತ್ರಿ ಸೌರ ಕೃಷಿ ಯೋಜನೆಯನ್ನು ಘೋಷಿಸಿದ್ದು, ಇದು ಕೃಷಿ ಮತ್ತು ನವೀಕರಿಸಬಹುದಾದ ಇಂಧನವನ್ನು ಒಂದೇ ವೇದಿಕೆಯಲ್ಲಿ ತರುವ ಮಹತ್ವದ ಯೋಜನೆಯಾಗಿದೆ.ಅಭಿವೃದ್ಧಿಪರ ಯೋಜನೆಗಳ ರೂಪರೇಷೆ ಮತ್ತು ಅನುಷ್ಠಾನದಲ್ಲಿ ಗುಣಮಟ್ಟವನ್ನ ಹೆಚ್ಚಿಸಬೇಕಾದ ಅವಶ್ಯಕತೆ ಇದ್ದು, ಇರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ಹೂಡಿಕೆದಾರರು ಮತ್ತು ಜನರ ಮಧ್ಯೆ ಸಮನ್ವಯತೆ ಸಾಧಿಸಿ ಯೋಜನೆಗಳನ್ನು ಜಾರಿಗೊಳಿಸಬೇಕೆಂದು ಕ್ರೆಡಲ್ ಅಧ್ಯಕ್ಷ ಟಿ.ಡಿ.ರಾಜೇಗೌಡ ಹೇಳಿದರು.

ಅಧಿವೇಶನ ಸಮಾರಂಭ



ರಾಜಸ್ಥಾನದ ಭಾರತೀಯ ಯುವ ಸಂಸತ್ತು ಮತ್ತು ಹೊಸದಿಲ್ಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾನಿಲಯಗಳ ಜಂಟಿ ಆಶ್ರಯದಲ್ಲಿ ನಾಗ್ಪುರದ ಆರ್. ಎಸ್. ಎಸ್. ಪ್ರಧಾನ ಕಚೇರಿಯ ಸಭಾಂಗಣದಲ್ಲಿ ನಡೆಯುತ್ತಿರುವ 29ನೇ ಭಾರತೀಯ ಯುವ ಸಂಸತ್ ಮೂರು ದಿನಗಳ ಅಧಿವೇಶನದಲ್ಲಿ ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಪಾಲ್ಗೊಂಡರು. ತೆಲಂಗಾಣ ರಾಜ್ಯಪಾಲ ಜಿಷ್ಣುದೇವ ವರ್ಮಾ, ಶ್ರೀರಾಮಾನುಜ ಪರಂಪರೆಯ ಶ್ರೀ ಚಿನ್ನಜೀಯರ್ ಸ್ವಾಮೀಜಿ, ಕೇಂದ್ರೀಯ ಸಂಸ್ಕೃತ ವಿವಿ ಉಪಕುಲಪತಿ ಡಾ. ಶ್ರೀನಿವಾಸ ವರಖೇಡಿ ಮೊದಲಾದವರು ಉಪಸ್ಥಿತರಿದ್ದರು.

ಕಿರುಸುದ್ದಿ

ಏ.1ರಂದು ರಾಷ್ಟ್ರಪತಿ ಸಿದ್ಧಗಂಗಾ ಮಠಕ್ಕೆ ಭೇಟಿ

ತುಮಕೂರು: ನಗರದ ಸಿದ್ಧಗಂಗಾ ಮಠದಲ್ಲಿ ಏ.1ರಂದು ಹಮ್ಮಿಕೊಂಡಿರುವ ಲಿಂ.ಶ್ರೀ ಶಿವಕುಮಾರ ಸ್ವಾಮೀಜಿ ಅವರ 119 ಜನ್ಮ ವರ್ಧಂತಿ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾಗವಹಿಸಲಿದ್ದಾರೆ.



ಏ.1ರಂದು ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಗದ್ದುಗೆ ದರ್ಶನ ಪಡೆದು, ಪೂಜೆ ಸಲ್ಲಿಸಿ, ಧ್ಯಾನ ಮಂದಿರ ಭೇಟಿ ಬಳಿಕ ಮಕ್ಕಳೊಂದಿಗೆ ಸಂವಾದ ನಡೆಸಿ, ಬಳಿಕ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಜನ್ಮದಿನಾಚರಣೆ ಕಾರ್ಯಕ್ರಮದ ವೇದಿಕೆಯಲ್ಲಿ ಭಾಗವಹಿಸಲಿದ್ದಾರೆ.

ಕೇಂದ್ರ ಸಚಿವ ಸೋಮಣ್ಣ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಾ. 31ರಂದು ಬೆಂಗಳೂರಿಗೆ ಆಗಮಿಸಿ ಲೋಕ್ ಪಾಲ್ ಭವನದಲ್ಲಿ ತಂಗಲಿದ್ದಾರೆ. ಏ.1ರಂದು ಬೆಳಗ್ಗೆ 9ಕ್ಕೆ ಸಿದ್ಧಗಂಗಾ ಮಠಕ್ಕೆ ಆಗಮಿಸುವರು. ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ ಅಧ್ಯಕ್ಷತೆ ವಹಿಸಲಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಸಚಿವರಾದ ಎಂಬಿ ಪಾಟೀಲ್ ಸೇರಿದಂತೆ ಸ್ಥಳೀಯ ಶಾಸಕರು ಭಾಗವಹಿಸಲಿದ್ದಾರೆ.

ಹೊನ್ನಾಕಟ್ಟಿ ಚೆಕ್‌ಪೋಸ್ಟ್‌ನಲ್ಲಿ ₹32.50 ಲಕ್ಷ ನಗದು ಜಪ್ತಿ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಯ ಹಿನ್ನೆಲೆಯಲ್ಲಿ ಹೊನ್ನಾಕಟ್ಟಿ ಚೆಕ್‌ಪೋಸ್ಟ್‌ನ ಅಧಿಕಾರಿಗಳ ತಂಡ ಭಾನುವಾರ ಬೆಳಗಿನ ಜಾವ 4 ಗಂಟೆ ಸುಮಾರಿಗೆ ನಡೆದ ಕಾರ್ಯಾಚರಣೆಯಲ್ಲಿ ದಾಖಲೆ ಇಲ್ಲದ ಒಟ್ಟು 32.50 ಲಕ್ಷ ರೂ.ಗಳ ನಗದು ಹಣವನ್ನು ಜಪ್ತಿ ಮಾಡಿದೆ. ಪಂಚಾಯತ ರಾಜ್ ಇಲಾಖೆಯ ಶಶಿಧರ ಸಂಗನಾಳ ನೇತೃತ್ವದ ಎಫ್‌ಎಸ್‌ಟಿ ತಂಡ ಚೆಕ್‌ಪೋಸ್ಟ್‌ನಲ್ಲಿ ವಾಹನಗಳ ಪರಿಶೀಲನೆ ನಡೆಸುತ್ತಿರುವ ವೇಳೆಯಲ್ಲಿ ಕೆಎ-36, ಪಿ-3991 ಮಾರುತಿ ಎರ್ಟಿಗಾ ಕಾರಿನಲ್ಲಿ 32.50 ಲಕ್ಷ ರೂ.ಗಳ ನಗದು ಪತ್ತೆಯಾಗಿದೆ. ಪತ್ತೆಯಾದ ಹಣಕ್ಕೆ ದಾಖಲೆಗಳನ್ನು ಒದಗಿಸಲಾಗದ ಹಿನ್ನೆಲೆಯಲ್ಲಿ ಹಣವನ್ನು ಜಪ್ತಿ ಮಾಡಲಾಯಿತು. ಈ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ. ಕಾರ್ಯಾಚರಣೆ ತಂಡದಲ್ಲಿ ಎ.ಎಸ್.ಐ ಸುರೇಶ ನಾಯಕ, ಪಿಸಿ ಮಂಜುನಾಥ ಕುರಿ, ಅಬಕಾರಿ ಕಾನ್ಸಟೇಬಲ್ ಶಂಕರಾನಂದ ಮುಧೋಳ ಇದ್ದರು.

ಮಂಡ್ಯ ನಗರಕ್ಕೆ ಮೂರು ದಿನ ನೀರು ವ್ಯತ್ಯಯ

ಮಂಡ್ಯ: ಮಂಡ್ಯ ನಗರಕ್ಕೆ ನೀರು ಸರಬರಾಜಾಗುವ ಪೈಪ್ ಲೈನ್ ಕಾಮಗಾರಿಯ ಬದಲಿ ಮಾರ್ಗದ ಹೊಸ ಪೈಪ್‌ಲೈನ್ ಅಳವಡಿಸುವುದರಿಂದ 24 ರಿಂದ 26ರವರೆಗೆ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಒಳಚರಂಡಿ ನಿರ್ವಹಣಾ ಮಂಡಳಿ ಸಹಾಯಕ ಕಾರ್ಯಪಾಲಕರು ತಿಳಿಸಿದ್ದಾರೆ. ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆ ನಿರ್ವಹಣೆಯಡಿ ರಾಗಿಮುದ್ದನಹಳ್ಳಿಯಲ್ಲಿರುವ ಕೆಳಮಟ್ಟದ ಜಲಸಂಗ್ರಹಗಾರವನ್ನು ಸ್ವಚ್ಛಗೊಳಿಸುವ ಸಲುವಾಗಿ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಶ್ರೀರಂಗಪಟ್ಟಣ ತಾಲೂಕು ಎಂ. ಶೆಟ್ಟಿಹಳ್ಳಿ ಸಮೀಪದಲ್ಲಿ ಈಗಾಗಲೇ ಅಳವಡಿಸಲಾಗಿರುವ 1016 ಮಿ.ಮಿ. ವ್ಯಾಸದ ಎಂ.ಎಸ್. ಏರು ಕೊಳವೆ ಮಾರ್ಗವನ್ನು ಬದಲೀ ಪಥದಲ್ಲಿ ಹೊಸ 1016 ಮಿ.ಮೀ. ವ್ಯಾಸದ ಎಂ.ಎಸ್. ಏರು ಕೊಳವೆ ಮಾರ್ಗವನ್ನು ಒದಗಿಸಿ, ಅಳವಡಿಸುವ ಕಾಮಗಾರಿ ಹಿನ್ನೆಲೆಯಲ್ಲಿ ಮಂಡ್ಯ ನಗರಕ್ಕೆ ಸರಬರಾಜಾಗುವ ನೀರಿನಲ್ಲಿ ವ್ಯತ್ಯಯವಾಗಲಿದೆ.

ಕಳುಹಿಸಿದ ಪಟ್ಟಿಯನ್ನೇ ಅಂತಿಮಗೊಳಿಸಿದ ಹೈಕಮಾಂಡ್: ಡಿಸಿಎಂ

ಚರ್ಚೆ ಬಳಿಕ ಅಭ್ಯರ್ಥಿ ಆಯ್ಕೆ

ಬೆಂಗಳೂರು: ಪಕ್ಷದಲ್ಲಿ ಸಾಕಷ್ಟು ಚರ್ಚೆ ನಡೆಸಿಯೇ ಉಪಚುನಾವಣೆಗೆ ಅಭ್ಯರ್ಥಿಗಳನ್ನು ಘೋಷಣೆ ಮಾಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ರಾಜ್ಯ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ತಾವು ಸೇರಿದಂತೆ ಉಪಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಎಲ್ಲರೊಡನೆ ಚರ್ಚಿಸಿ ಹೈಕಮಾಂಡ್‌ಗೆ ಪಟ್ಟಿ ಕಳುಹಿಸಿದೆವು. ನಾವು ಕಳುಹಿಸಿದ ಪಟ್ಟಿಯನ್ನೇ ಹೈಕಮಾಂಡ್ ಘೋಷಣೆ ಮಾಡಿದೆ ಎಂದರು. ಚುನಾವಣೆ ಎಂದ ಮೇಲೆ ಹಲವು ಜನ ಆಕಾಂಕ್ಷಿಗಳಿರುತ್ತಾರೆ. ದಾವಣಗೆರೆ ದಕ್ಷಿಣದಲ್ಲಿ ಅಲ್ಪಸಂಖ್ಯಾತರು ಟಿಕೆಟ್ ಕೇಳಿದ್ದರಲ್ಲಿ ತಪ್ಪೇನಿಲ್ಲ. ನಾವು ಎಲ್ಲಾ ಅಲ್ಪಸಂಖ್ಯಾತ ಮುಖಂಡರೊಂದಿಗೆ ಚರ್ಚಿಸಿ, ಎಲ್ಲರನ್ನು ಸಮಾಧಾನಗೊಳಿಸಿಯೇ ಶಾಮನೂರು ಶಿವಶಂಕರಪ್ಪನವರ ಮೊಮ್ಮಗ ಸಮರ್ಥ್ ರವರಿಗೆ ಟಿಕೆಟ್ ಅಂತಿಮಗೊಳಿಸಿದೆವು ಎಂದರು.

ಹಾಗೆಯೇ ಬಾಗಲಕೋಟೆಯಲ್ಲಿ ದಿ. ಹೆಚ್. ವೈ. ಮೇಟಿಯವರ ಕುಟುಂಬದಲ್ಲೇ ಟಿಕೆಟ್‌ಗೆ ಪೈಪೋಟಿ ಇತ್ತು. ನಾನು ಹಿರಿಯ ಪುತ್ರ ಮಲ್ಲಿಕಾರ್ಜುನ ಮೇಟಿಯವರಿಗೆ ಟಿಕೆಟ್ ಕೊಡಬೇಕು ಎಂದಿದ್ದೆ. ಆದರೆ ಅವರ ಕುಟುಂಬಸ್ಥರೊಡನೆ ಚರ್ಚಿಸಿದ ನಂತರ ಕಿರಿಯ ಪುತ್ರ ಉಮೇಶ್ ಮೇಟಿಯವರಿಗೆ ಟಿಕೆಟ್ ನೀಡಿದ್ದೇವೆ. ಎಲ್ಲರೂ ಸೇರಿ ಪಕ್ಷವನ್ನು ಗೆಲ್ಲಿಸಿಕೊಂಡು ಬರುತ್ತೇವೆ ಎಂದು ಹೇಳಿದ್ದಾರೆ ಎಂದರು.



ನಮ್ಮ ಪಕ್ಷದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ವೇಳೆ ನಾನು ಹಾಗೂ ಮುಖ್ಯಮಂತ್ರಿಗಳು ದಾವಣಗೆರೆ ಹಾಗೂ ಬಾಗಲಕೋಟೆಗೆ ಹೋಗುತ್ತಿದ್ದೇವೆ. ಎರಡೂ ಕ್ಷೇತ್ರಗಳಲ್ಲೂ ಪಕ್ಷವನ್ನು ಗೆಲ್ಲಿಸಲು ಎಲ್ಲಾ ರೀತಿಯ ತಂತ್ರಗಳನ್ನು ರೂಪಿಸಲಾಗಿದೆ ಎಂದರು. ಬುಧವಾರ ಮಾ. 26 ರಂದು ಸಂಜೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಲಿದ್ದು, ಆ ಸಭೆಯಲ್ಲಿ ರಾಜ್ಯದ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ರವರು ಭಾಗಿಯಾಗಲಿದ್ದಾರೆ. ಚುನಾವಣೆಗೆ ಸಂಬಂಧಿಸಿದಂತೆ ಸಚಿವರು ಹಾಗೂ ಶಾಸಕರಿಗೆ ಜವಾಬ್ದಾರಿ ನೀಡುವ ಸಂಬಂಧ ಸಭೆಯಲ್ಲಿ ಚರ್ಚೆಗಳು ಆಗಲಿವೆ ಎಂದರು.

ಉಪಚುನಾವಣೆ ಕಾಂಗ್ರೆಸ್‌ಗೆ ಗೆಲುವು

ಬೆಳಗಾವಿ: ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಉಮೇಶ ಮೇಟಿ ಅವರಿಗೆ ಟಿಕೆಟ್ ನೀಡಬೇಕೆಂದು ಜನರ, ನಮ್ಮ ನಿರೀಕ್ಷೆ ಇತ್ತು. ಅದರಂತೆಯೇ ಹೈಕಮಾಂಡ್ ಅವರು ಉಮೇಶ ಮೇಟಿಗೆ ಟಿಕೆಟ್ ನೀಡಿದ್ದಾರೆಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಭಾನುವಾರ ನಗರದ ಕಾಂಗ್ರೆಸ್ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬಾಗಲಕೋಟೆ ವಿಧಾನಸಭಾ ಕ್ಷೇತ್ರ ದಲ್ಲಿ ಮೇಟಿ ಕುಟುಂಬಸ್ಥರ ಮೇಲೆ ಅಲ್ಲಿನ ಜನ ಅಪಾರ ಗೌರವ ಇಟ್ಟುಕೊಂಡಿದ್ದಾರೆ. ಬಾಗಲಕೋಟೆ ಯಲ್ಲಿ ಕಳೆದ ಎರಡು ತಿಂಗಳಿಂದ ನಾವು ಚುನಾವಣೆ ಗೆಲುವಿಗಾಗಿ ಕೆಲಸ ಮಾಡುತ್ತಿದ್ದೇವೆ. ಆದ್ದರಿಂದ ಉಮೇಶ ಮೇಟಿ ಗೆಲುವಿಗೆ ಕಷ್ಟವಿಲ್ಲ ಎಂದರು.

ಡಿಜಿ ರಾಮಚಂದ್ರರಾವ್ ವಿರುದ್ಧ ತನಿಖೆ: ಪರಂ

ಬೆಂಗಳೂರು: ಡಿಜಿಪಿ ರಾಮಚಂದ್ರ ರಾವ್ ಅವರ ವಿರುದ್ಧ ಇಲಾಖಾ ತನಿಖೆ ಆಗಲಿದ್ದು, ಅದನ್ನು ಆಧರಿಸಿ ಕ್ರಮದ ಬಗ್ಗೆ ತೀರ್ಮಾನ ಆಗಲಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ರಾಮಚಂದ್ರರಾವ್ ವೈರಲ್ ವೀಡಿಯೋ ಅಸಲಿ ಅಂತ ಎಫ್‌ಎಸ್‌ಎಲ್ ವರದಿ ನೀಡಿದೆ. ಆ ಹಿನ್ನೆಲೆಯಲ್ಲಿ ರಾಮಚಂದ್ರರಾವ್ ವಿರುದ್ಧ ಇಲಾಖಾ ತನಿಖೆ ಆಗಲಿದ್ದು, ಬಳಿಕ ಸರ್ಕಾರಕ್ಕೆ ವರದಿ ಸಲ್ಲಿಕೆ ಆಗಲಿದೆ. ಅದನ್ನು ಆಧರಿಸಿ ಕ್ರಮದ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು' ಎಂದರು. ವೈರಲ್ ಆಗಿದ್ದ ತಮ್ಮ ವೀಡಿಯೋ ಎಐ ವೀಡಿಯೋ' ಅಂತ ರಾಮಚಂದ್ರರಾವ್ ಹೇಳಿದ್ದರು. ಸತ್ಯ ತಿಳಿಯಲು ಎಫ್‌ಎಸ್‌ಎಲ್‌ಗೆ ಕೊಟ್ಟಿದ್ದೆವು ಎಂದು ಸ್ಪಷ್ಟಪಡಿಸಿದರು.

ವರದಿ ಬಂದ ನಂತರ ಕ್ರಮ: ಪಾವಗಡದ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಆತ್ಮಹತ್ಯೆ ಮಾಡಿ ಕೊಂಡಿರುವ ಬಗ್ಗೆ ಆ ಇಲಾಖೆಯವರು ಪರಿಶೀಲಿಸಿ ವರದಿ ನೀಡಬೇಕು. ನಂತರ ಕ್ರಮ ಕೈಗೊಳ್ಳಲಾಗುತ್ತದೆ ಪರಮೇಶ್ವರ್ ತಿಳಿಸಿದರು. ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿ ನೇರವಾಗಿ ಜಂಟಿ ನಿರ್ದೇಶಕರ ಮೇಲೆ ಆರೋಪ ಮಾಡಿದ್ದಾರೆ. ಜಂಟಿ ನಿರ್ದೇಶಕರು ಆ ರೀತಿ ಮಾಡಬೇಕಾದರೂ ಬೇರೆ ಯಾರಾದರೂ ಕಾರಣವೇ ಅಂತ ನೋಡಬೇಕಾಗುತ್ತದೆ ಎಂದರು.

ಎರಡೂ ಕ್ಷೇತ್ರಗಳಲ್ಲಿ ಗೆಲ್ಲುವ ವಿಶ್ವಾಸ

ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ನಮ್ಮವರೇ ಗೆದ್ದ ಕ್ಷೇತ್ರಗಳಾಗಿವೆ. ಅವುಗಳನ್ನು ಬಿಟ್ಟುಕೊಡಲು ಆಗದು. ಅದೊಂದೇ ಈಗ ನಮಗೆ ಮುಖ್ಯ ಎಂದು ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು. ಉಪಚುನಾವಣೆಯಲ್ಲಿ ಕುಟುಂಬಗಳಿಗೇ ಟಿಕೆಟ್ ನೀಡಿರುವ ಬಗ್ಗೆ ಕೇಳಿದಾಗ, ಕೆಲವು ಮಾನದಂಡಗಳನ್ನು ಇಟ್ಟುಕೊಂಡು, ಇಂದಿನ ರಾಜಕೀಯ ಸನ್ನಿವೇಶವನ್ನು ನೋಡಿ ತೀರ್ಮಾನ ಮಾಡಲಾಗುತ್ತದೆ. ನಮ್ಮ ಪಕ್ಷದವರೇ ಈ ಎರಡೂ ಕ್ಷೇತ್ರಗಳನ್ನು ಗೆದ್ದಿದ್ದು, ಅದನ್ನು ವಾಪಸ್ ಗೆಲ್ಲಿಸಿಕೊಳ್ಳಬೇಕಷ್ಟೇ. ಬಿಟ್ಟುಕೊಡಲು ಆಗುವುದಿಲ್ಲ. ಅದು ನಮಗೆ ಮುಖ್ಯ ಅಷ್ಟೇ ಎಂದು ಹೇಳಿದರು. ಉಪಚುನಾವಣೆಯಲ್ಲಿ ಇಂತಹ ಸಮಸ್ಯೆ ಬಹಳಷ್ಟು ಬಂದಿವೆ. ನಾನು ಅಧ್ಯಕ್ಷನಾಗಿದ್ದಾಗಲೂ ಇಂತಹ ಸಮಸ್ಯೆ ಬಗೆಹರಿಸಿದ್ದೇವೆ. ಅಂತಿಮವಾಗಿ ಯಾರಿಗಾದರೂ ಟಿಕೆಟ್ ಕೊಡಲೇಬೇಕಲ್ಲವೇ ಎಂದು ಮರುಪ್ರಶ್ನಿಸಿದ ಅವರು, ಸಾಧಕ-ಬಾಧಕಗಳನ್ನು ನೋಡಿ ಹೈಕಮಾಂಡ್ ತೀರ್ಮಾನ ಮಾಡಿರುತ್ತದೆ ಎಂದು ಸ್ಪಷ್ಟಪಡಿಸಿದರು.

ಮಂಗಳೂರಿಗೆ ಬಂತು ಎಲ್‌ಪಿಜಿ ಹಡಗು!



ಮಂಗಳೂರು: ಮಧ್ಯಪ್ರಾಚ್ಯ ದೇಶಗಳ ಯುದ್ಧದ ನಡುವೆ ರಷ್ಯಾದಿಂದ ಚೀನಾಕ್ಕೆ ಹೊರಟಿದ್ದ ಅಕ್ವಾ ಟೈಟಾನ್ ಹೆಸರಿನ ಕಚ್ಚಾ ತೈಲ ಹೊತ್ತ ಬೃಹತ್ ಹಡಗು ನವ ಮಂಗಳೂರು ಬಂದರಿಗೆ ಆಗಮಿಸಿದ್ದು, ತೈಲ ಇಳಿಸುವ ಕಾರ್ಯ ಭರದಿಂದ ಸಾಗುತ್ತಿದೆ. ಅದೇ ರೀತಿ ಅಮೆರಿಕದಿಂದ ಎಲ್‌ಪಿಜಿ ಕಾರ್ಗೋ ಹಡಗು ಕೂಡ ಭಾನುವಾರ ನವಮಂಗಳೂರು ಬಂದರು ತಲುಪಿದೆ. ಅಮೆರಿಕದ ಟೆಕ್ಸಾಸ್‌ನಿಂದ ಮಂಗಳೂರಿಗೆ ಆಗಮಿಸಿರುವ 'ಪಿಕ್ಸಿಸ್ ಪಯನೀರ್' ಹೆಸರಿನ ಎಲ್‌ಪಿಜಿ ಕಾರ್ಗೋ ಹಡಗು 16,714 ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತು ಬಂದಿದೆ. ವಿದೇಶದಿಂದ ಕರ್ನಾಟಕಕ್ಕೆ ಆಗಮಿಸಿದ ಮೊದಲ ಎಲ್‌ಪಿಜಿ ಹಡಗು ಇದಾಗಿದೆ. ಈ ಹಡಗು ಮಾ.14 ರಂದು ಅಮೆರಿಕದಿಂದ ಹೊರಟಿತ್ತು.

ಅದಾಲತ್: 55.85 ಲಕ್ಷ ಪ್ರಕರಣ ಇತ್ಯರ್ಥ

ಬೆಂಗಳೂರು: ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 55.85 ಲಕ್ಷ ಪ್ರಕರಣಗಳನ್ನು ಇತ್ಯರ್ಥಪಡಿಸುವ ಮೂಲಕ ಜನರಿಗೆ ತ್ವರಿತ ನ್ಯಾಯ ಒದಗಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಒಟ್ಟು 3,248 ಕೋಟಿ ರೂ.ಗಳ ಪರಿಹಾರದ ಮೊತ್ತವನ್ನು ಕಕ್ಷಿದಾರರಿಗೆ ಕೊಡಿಸಲಾಗಿದೆ.

ಹೈಕೋರ್ಟ್‌ನ ಎಕ್ಸಿಕ್ಯೂಟಿವ್ ಚೇರ್‌ಮನ್ ಮೀಟಿಂಗ್ ಹಾಲ್‌ನಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಹೈಕೋರ್ಟ್‌ನ ನ್ಯಾಯಮೂರ್ತಿ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷೆ ಅನು ಸಿವರಾಮನ್, ಸರ್ವರಿಗೂ ನ್ಯಾಯ ಎಂಬ ಧ್ಯೇಯೋದ್ದೇಶದೊಂದಿಗೆ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಆಯೋಜಿಸಿದ್ದ ವರ್ಷದ ಮೊದಲನೇ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಅಭೂತಪೂರ್ವ ಯಶಸ್ಸು ಲಭಿಸಿದೆ ಎಂದರು.

ಈ ಲೋಕ ಅದಾಲತ್‌ನಲ್ಲಿ ಉಚ್ಚ ನ್ಯಾಯಲಯದ ಪೀಠಗಳಲ್ಲಿದ್ದ 956 ಪ್ರಕರಣಗಳು, ಜಿಲ್ಲಾ ನ್ಯಾಯಾಲಯದಲ್ಲಿ ಬಾಕಿಯಿದ್ದ 2,60,204 ಪ್ರಕರಣಗಳು ಇತ್ಯರ್ಥಗೊಂಡಿವೆ.

ನಾಳೆ ಒಳಮಿಸಲಾತಿ ವಿರೋಧಿಸಿ ಪ್ರತಿಭಟನೆ

ಬೆಂಗಳೂರು: ಸರ್ಕಾರದ ಒಳಮಿಸಲಾತಿ ನೀತಿ, ಆಯೋಗಗಳ ವರದಿ ಹಾಗೂ ರೋಸ್ಟರ್ ವ್ಯವಸ್ಥೆಗಳನ್ನು ವಿರೋಧಿಸಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ವತಿಯಿಂದ ಮಾ.24 ರಂದು ನಗರದ ಫ್ರೀಡ್‌ಂ ಪಾರ್ಕ್‌ನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ತಿಳಿಸಿದರು.

ವಸಂತನಗರದ ಜಸ್ಮಾಭವನದಲ್ಲಿ ಭಾನುವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಾ. 24ರಂದು ನಡೆಯಲಿರುವ ಈ ಸಮಾವೇಶ ರಾಜ್ಯ, ರಾಜಕೀಯ ಹಾಗೂ ಸಾಮಾಜಿಕ ವಲಯದಲ್ಲಿ ಗಮನ ಸೆಳೆಯುವ ಸಾಧ್ಯತೆ ಇದ್ದು, ರಾಜ್ಯದ ವಿವಿಧ ಭಾಗಗಳಿಂದ 1 ಲಕ್ಷ ಜನ ಸೇರುವ ಸಾಧ್ಯತೆ ಇದೆ ಎಂದರು. ಭೋವಿ, ಬಂಜಾರ, ಕೊರಮ, ಕೊರಚ, ಸೂಕ್ಷ್ಮ, ಅತಿಸೂಕ್ಷ್ಮ ಹಾಗೂ ಅಲೆಮಾರಿಗಳ 59 ಜಾತಿಗಳಿಗೆ ಅನ್ಯಾಯವಾಗುತ್ತಿದ್ದು, ಪರಿಶಿಷ್ಟ ಜಾತಿಗಳ ಒಳಮಿಸಲಾತಿ ವಿಚಾರದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳು ಅವೈಜ್ಞಾನಿಕ. ಆಯೋಗವೇ ಸಲ್ಲಿಸಿರುವ ವರದಿಯಲ್ಲಿಯೇ ಈ ಸಮುದಾಯಗಳು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ತೀವ್ರ ಹಿಂದುಳಿದಿವೆ ಎಂದು 26 ಕೋಷ್ಟಕಗಳಲ್ಲಿ 19ರಲ್ಲಿ ಸ್ಪಷ್ಟಪಡಿಸಲಾಗಿದೆ. ಆದರೂ, ಸರ್ಕಾರವು ಒಳಮಿಸಲಾತಿ ರೂಪಿಸುವಾಗ ಈ ಅಂಶಗಳನ್ನು ಪರಿಗಣಿಸಿಲ್ಲ ಎಂದರು.

ಮಾ. 27ರಂದು ಒಳಮಿಸಲಾತಿ ಕುರಿತ ವಿಶೇಷ ಸಚಿವ ಸಂಪುಟ ಸಭೆ ನಡೆಯಲಿರುವ ಹಿನ್ನೆಲೆಯಲ್ಲಿ, ಸರ್ಕಾರವು ಈ ಸಭೆಯಲ್ಲಿ ಸಮಗ್ರ ಚರ್ಚೆ ನಡೆಸಿ ನ್ಯಾಯಸಮ್ಮತ ನಿರ್ಧಾರ ಕೈಗೊಳ್ಳಬೇಕು. ಸದ್ಯ ಸರ್ಕಾರ ಭರ್ತಿ ಮಾಡಲು ಉದ್ದೇಶಿಸಿರುವ 56 ಸಾವಿರ ಹುದ್ದೆಗಳನ್ನು ಯಾವುದೇ ಒಳಮಿಸಲಾತಿ ಜಾರಿಗೊಳಿಸದೆ ಭರ್ತಿ ಮಾಡಬಾರದು. ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಸಮಾನ ಅವಕಾಶಗಳನ್ನು ಒದಗಿಸುವಂತೆ ಸರ್ಕಾರಕ್ಕೆ ಒತ್ತಾಯಿಸಲು ಈ ಪ್ರತಿಭಟನಾ ಸಮಾವೇಶವನ್ನು ಆಯೋಜಿಸಲಾಗಿದೆ ಎಂದರು.

ಮೀಸಲಾತಿ ಒಕ್ಕೂಟದ ಅಧ್ಯಕ್ಷ ಡಾ. ಎಚ್. ರವಿ ಮಾಕಳಿ, ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಕಾರ್ಯಾಧ್ಯಕ್ಷ ರಾಘವೇಂದ್ರ ನಾಯಕ್, ಕಾರ್ಯಾಧ್ಯಕ್ಷ ಅನಂತ ನಾಯಕ್, ಉಪಾಧ್ಯಕ್ಷ ಆದರ್ಶ ಯಲ್ಲಪ್ಪ, ರವಿ ಪೂಜಾರ ಇದ್ದರು.



ಅವೈಜ್ಞಾನಿಕ ರೋಸ್ಟರ್

ಸರ್ಕಾರ ರೂಪಿಸಿರುವ ಪ್ರವರ್ಗ ಅ, ಆ, ಇ ವಿಭಾಗೀಕರಣವೂ ಜನಸಂಖ್ಯಾ ಅನುಪಾತಕ್ಕೆ ಅನುಗುಣವಾಗಿಲ್ಲ. ವಿಶೇಷವಾಗಿ ರೋಸ್ಟರ್ ವ್ಯವಸ್ಥೆ ಅವೈಜ್ಞಾನಿಕವಾಗಿದೆ. ಹಿಂದಿನ ಸರ್ಕಾರದಲ್ಲಿ 560 ಹುದ್ದೆಗಳ ನೇಮಕಾತಿಯಲ್ಲಿ ಒಂದು ಪ್ರವರ್ಗಕ್ಕೆ ಬಹುಪಾಲು ಹುದ್ದೆಗಳು ನೀಡಲಾಗಿದ್ದು, ಪ್ರವರ್ಗ ಇಗೆ ಅತಿ ಕಡಿಮೆ ಅವಕಾಶ ದೊರೆತಿದೆ. ಹೊಸ ರೋಸ್ಟರ್‌ನಲ್ಲಿ ಪ್ರವರ್ಗ ಇಗೆ 15ನೇ ಸ್ಥಾನ ನೀಡಿರುವುದರಿಂದ, ಈ ಸಮುದಾಯಗಳಿಗೆ ಅವಕಾಶ ಸಿಗುವಷ್ಟರಲ್ಲಿ ತಲೆಮಾರುಗಳು ಕಳೆದು ಹೋಗುವ ಪರಿಸ್ಥಿತಿ ಉಂಟಾಗುತ್ತದೆ. ಇದು ಸಮುದಾಯಗಳನ್ನು ಉದ್ದೇಶಪೂರ್ವಕವಾಗಿ ಹಿಂದುಳಿಸುವ ಪ್ರಯತ್ನ ಎಂದರು.

ಸರ್ಕಾರಿ ಉದ್ಯೋಗಗಳ ನೇಮಕಾತಿ ಚರ್ಚೆ | ನೇಮಕಾತಿ ಕ್ಯಾಲೆಂಡರ್ ರಚನೆಗೆ ಸರ್ಕಾರ ಸೂಚನೆ

ಮುಂದಿನ 5 ವರ್ಷಗಳಲ್ಲಿ 86,398 ನೌಕರರ ನಿವೃತ್ತಿ

ವೀರಣ್ಣ ಬಳಿಗಾರ

ದಿಗಂತ ವಿಶೇಷ

ಬೆಂಗಳೂರು: ಸರ್ಕಾರಿ ಉದ್ಯೋಗಗಳ ನೇಮಕಾತಿಯ ಕುರಿತು ರಾಜ್ಯದಲ್ಲಿ ಬಹು ಚರ್ಚೆ ನಡೆಯುತ್ತಿದ್ದು, ಲಕ್ಷಾಂತರ ಉದ್ಯೋಗಗಳು ಖಾಲಿ ಇದ್ದರೂ ಕೂಡಾ ಒಂದಲ್ಲ ಒಂದು ಕಾರಣಕ್ಕೆ ನೇಮಕಾತಿ ಮುಂದೂಡಲಾಗುತ್ತಿದೆ. ಇಗಾಗಲೇ ಸುಮಾರು 2.84 ಲಕ್ಷ ಉದ್ಯೋಗ ಖಾಲಿ ಇದ್ದು, ಇದರ ಜತೆಗೆ ಮುಂದಿನ 5 ವರ್ಷಗಳಲ್ಲಿ ರಾಜ್ಯದಲ್ಲಿ 86,398 ನೌಕರರು ನಿವೃತ್ತರಾಗಲಿದ್ದಾರೆ.

ಇತ್ತೀಚೆಗೆ ಧಾರವಾಡದಲ್ಲಿ ವಿದ್ಯಾರ್ಥಿಗಳ ಹೋರಾಟದಿಂದ ಉದ್ಯೋಗ ನೇಮಕಾತಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಮತ್ತು ಕೆಪಿಸಿಎಸ್‌ಯ ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸಬೇಕು. ಮುಂದಿನ 5 ವರ್ಷಗಳ ನೇಮಕಾತಿಯ ಕ್ಯಾಲೆಂಡರ್ ರಚಿಸಬೇಕೆಂದು ಸರ್ಕಾರ ಸೂಚನೆ ನೀಡಿದೆ. ಈ ಭಾರಿ ಸಂಖ್ಯೆಯ ನಿವೃತ್ತಿಯು ಉದ್ಯೋಗಕಾಂಕ್ಷಿಗಳಿಗೆ ಶುಕ್ರದಸೆ ಎನಿಸಿದರೂ ಕೂಡಾ ಇಷ್ಟು ದೊಡ್ಡ ಪ್ರಮಾಣದ ನಿವೃತ್ತಿ ಸರ್ಕಾರಕ್ಕೆ ಹೊರೆಯಾಗುವುದಂತು ನಿಜ.

2023 ರಿಂದ 2025ರ ನಡುವೆ ರಾಜ್ಯ ಸರ್ಕಾರ 8,157 ಹುದ್ದೆಗಳನ್ನು ಯಶಸ್ವಿಯಾಗಿ ಭರ್ತಿ ಮಾಡಿದೆ. ಇನ್ನೂ 3,081 ಹುದ್ದೆಗಳಿಗೆ ನೇಮಕಾತಿ ಪ್ರಗತಿಯಲ್ಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದು, ಪ್ರಸ್ತುತ ಖಾಲಿ ಇರುವ ಉದ್ಯೋಗಗಳನ್ನು ಸರ್ಕಾರ ದೊಡ್ಡ ಪ್ರಮಾಣದಲ್ಲಿ ನೇಮಕಾತಿ ಮಾಡಿಕೊಳ್ಳದಿದ್ದರೆ ಈ ಸಂಖ್ಯೆ ಮತ್ತಷ್ಟು ಹೆಚ್ಚಾಗಲಿದೆ. ಇನ್ನೂ ದೊಡ್ಡ ಪ್ರಮಾಣದ ನಿವೃತ್ತಿಯಿಂದ ಅವರಿಗೆ ನೀಡಬೇಕಾದ ಪಿಂಚಣಿ ಹಣವನ್ನು ಹೊಂದಿಸುವುದು ಸರ್ಕಾರಕ್ಕೆ ಸವಾಲಾಗಿದೆ.

ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿಯನ್ನು ಕಲ್ಪಿಸುವ ಸಂಬಂಧ 9 ತಿಂಗಳ ಕಾಲ ನೇಮಕಾತಿ ಸ್ಥಗಿತಗೊಂಡಿತ್ತು, ನೇಮಕಾತಿ ವಿಳಂಬದ ಬಗ್ಗೆ ಉದ್ಯೋಗಾಕಾಂಕ್ಷಿಗಳಿಂದ ಭಾರಿ ಪ್ರತಿಭಟನೆಗಳು ನಡೆದಿದ್ದರಿಂದ ರಾಜ್ಯ ಸರ್ಕಾರ ಫೆಬ್ರವರಿ 27 ರಂದು ನೇರ ನೇಮಕಾತಿಯ ಮೂಲಕ 56,432 ಹುದ್ದೆಗಳನ್ನು ಭರ್ತಿ ಮಾಡಲು ನಿರ್ಧರಿಸಿತು. ಎಸ್‌ಸಿಗೆ ಶೇ. 15, ಎಸ್‌ಟಿಗೆ ಶೇ. 3 ಮತ್ತು ಒಬಿಸಿಗೆ ಶೇ. 32 ರಷ್ಟು ಮೀಸಲಾತಿ ಅನ್ವಯ ಶೇ.50 ರಷ್ಟು ಮೀಸಲಾತಿಯ ಆಧಾರದ ಮೇಲೆ ಭರ್ತಿಗೆ ಘೋಷಿಸಿದ್ದರೂ ಹಲವು ಸಮುದಾಯಗಳು ಆಕ್ಷೇಪ ವ್ಯಕ್ತಪಡಿಸಿದ್ದು, ಮಾ.27ರಂದು ನಡೆಯುವ ಸಂಪುಟ ಸಭೆಯ ಬಳಿಕ ಒಳಮೀಸಲಾತಿ ಬಗ್ಗೆ ಸರ್ಕಾರ ನಿರ್ಧಾರದ ನಂತರ ನೇಮಕಾತಿಯಲ್ಲಿ ಮೀಸಲಾತಿ ಕುರಿತು ಸ್ಪಷ್ಟತೆ ಸಿಗುವ ಸಾಧ್ಯತೆ ಇದೆ.

ಸರ್ಕಾರಕ್ಕೆ ಆರ್ಥಿಕ ಹೊರೆ

2026-27ನೇ ಆರ್ಥಿಕ ವರ್ಷದಲ್ಲಿ, ಸರ್ಕಾರವು ಸಂಬಳ ಮತ್ತು ಪಿಂಚಣಿಗಳಿಗಾಗಿ 1.32 ಲಕ್ಷ ಕೋಟಿ ರೂ.ಗಳನ್ನು ಖರ್ಚು ಮಾಡುವ ನಿರೀಕ್ಷೆಯಿದೆ. ಇದು 2023-24ರಲ್ಲಿ ಸಂಬಳ ಮತ್ತು ಪಿಂಚಣಿಗಳನ್ನು ಪಾವತಿಸಲು ಸರ್ಕಾರ ಖರ್ಚು ಮಾಡಿದ 96,166 ಕೋಟಿ ರೂ.ಗಳಿಗಿಂತ ಶೇ.38ರಷ್ಟು ಹೆಚ್ಚಳವಾಗಲಿದೆ. 2029-30ರ ವೇಳೆಗೆ ಸಂಬಳ ಮತ್ತು ಪಿಂಚಣಿಗಳ ಮೇಲಿನ ಖರ್ಚು 1.65 ಲಕ್ಷ ಕೋಟಿ ರೂ.ಗಳಿಗೆ ಏರುವ ನಿರೀಕ್ಷೆಯಿದೆ.

ಖಾಲಿ ಇರುವ ಉದ್ಯೋಗಗಳು

ಗ್ರೂಪ್ ಎ	ಗ್ರೂಪ್ ಬಿ	ಗ್ರೂಪ್ ಸಿ	ಗ್ರೂಪ್ ಡಿ	ಒಟ್ಟು
16,171	1,72,190	1,72,190	79,340	2,84,881

ನಿವೃತ್ತಿಯಾಗುವ ನೌಕರರ ವಿವರ

2026	16,513
2027	16,800
2028	17,726
2029	18,100
2030	17,259

ಕಾಶಿಗೆ ಹೊರಟಿದ್ದ ಪ್ರಯಾಣಿಕರ ವಾಹನಕ್ಕೆ ಲಾರಿ ಡಿಕ್ಕಿ

ಸ್ಥಳದಲ್ಲೇ ಮೂವರ ಸಾವು

ದೇವನಹಳ್ಳಿ: ಕಾಶಿಯಾತ್ರೆಗೆ ಹೊರಟಿದ್ದ ಸ್ತ್ರೀಶಕ್ತಿ ಸಂಘದ ಕಾರ್ಯಕರ್ತರಿದ್ದ ವಾಹನಕ್ಕೆ ಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮ ಮೂವರು ಸ್ಥಳದಲ್ಲೇ ಮೃತಪಟ್ಟು, ಕೆಲವರಿಗೆ ಗಾಯವಾಗಿರುವ ಘಟನೆ ಇಲ್ಲಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದ ರಾಣಿ ಕ್ರಾಸ್ ಬಳಿ ಸಂಭವಿಸಿದೆ.

ತಿಪಟೂರು ತಾಲೂಕಿನ ಜಯಮ್ಮ (65), ಯಶೋಧಮ್ಮ (60), ಗಂಗಾ (40) ಎಂಬುವರು ಮೃತಪಟ್ಟವರು. ಇನ್ನುಳಿದವರಿಗೆ ಸಣ್ಣಪುಟ್ಟ ಗಾಯವಾಗಿದ್ದು ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ತಿಪಟೂರು ತಾಲೂಕಿನ ಸ್ತ್ರೀಶಕ್ತಿ ಸಂಘಟನೆಯಿಂದ 15 ದಿನಗಳ ಕಾಲ ಕಾಶಿ ಸೇರಿದಂತೆ ವಿವಿಧ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡಲು ಸಿದ್ಧತೆ ನಡೆಸಿದ್ದರು. ಸ್ತ್ರೀಶಕ್ತಿ ಸಂಘಟನೆಯ ಕಾರ್ಯಕರ್ತರಲ್ಲಿ 12 ಜನರ ತಂಡ ಕಾಶಿ ಯಾತ್ರೆಗೆ ಹೊರಟಿದ್ದರು. ಭಾನುವಾರ ಬೆಳಗ್ಗೆ 6 ಗಂಟೆ ಸಮಯದಲ್ಲಿ ತಿಪಟೂರಿನಿಂದ ದೇವನಹಳ್ಳಿ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಬರುವಾಗ, ಸರ್ವೀಸ್ ರಸ್ತೆಯಲ್ಲಿ ತಿರುವು ಪಡೆಯುವ ವೇಳೆ, ಎಡಬದಿಯಿಂದ ಬಂದ ಲಾರಿ ಡಿಕ್ಕಿ ಹೊಡೆದಿದೆ. ಇದರ ಪರಿಣಾಮ, ಟಿಟಿ ವಾಹನ ಸಂಪೂರ್ಣವಾಗಿ ಜಖಂಗೊಂಡಿದೆ.



ವಾಹನದಲ್ಲಿದ್ದ ಮೂವರು ಸ್ತ್ರೀ ಶಕ್ತಿ ಸಂಘಟನೆಯ ಕಾರ್ಯಕರ್ತರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಉಳಿದ ಗಾಯಾಳುಗಳನ್ನು ದೇವನಹಳ್ಳಿಯ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಅಪಘಾತದ ನಂತರ ಲಾರಿಯನ್ನು ಬಿಟ್ಟು, ಚಾಲಕ ಪರಾರಿಯಾಗಿದ್ದಾನೆ. ಮೃತದೇಹವನ್ನು ತಿಪಟೂರಿಗೆ ರವಾನೆ ಮಾಡಲಾಗಿದೆ. ದೇವನಹಳ್ಳಿ ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸಂಪಾದಕೀಯ

ಶಾಂತಿಯ ಸಮಾಜಕ್ಕೆ ಅರಿವೇ ಗುರು

ಸಮಾಜ ಸ್ವಾತಂತ್ರ್ಯಪೂರ್ವದ ಚಿಂತನೆಯೊಂದನ್ನು ನಿರ್ಲಕ್ಷಿಸಿದೆ ಎಂಬ ಮಾತೊಂದನ್ನು ಇತ್ತೀಚೆಗೆ ಚಿಂತಕರೊಬ್ಬರು ಆಡಿದ್ದರು. ಸಾಮಾನ್ಯವಾಗಿ ಸ್ವಾತಂತ್ರ್ಯಪೂರ್ವದ ಚಿಂತನೆ ಎಂದರೆ ವಸಾಹತುಶಾಹಿ ಎಂದೇ ಭಾವಿಸಲಾಗುತ್ತದೆ. ಆದರೆ ಸ್ವಾತಂತ್ರ್ಯಪೂರ್ವ ಎಂದರೆ ಒಂದು ಕಾಲಘಟ್ಟವೂ ಹೌದು. ಪೂರ್ವದ ಪಾಠಗಳನ್ನು ಮರೆಯಲೇಬೇಕು ಎನ್ನುವಂತಿಲ್ಲ. ಅಲ್ಲದೆ ಸ್ವಾತಂತ್ರ್ಯಾನಂತರದ ಹಲವಾರು ಘಟನೆಗಳಿಗೆ ಪೂರ್ವದ ಪಾಠ ಪರಿಹಾರವಾಗಬಲ್ಲದು. ಆದ್ದರಿಂದ ಸ್ವಾತಂತ್ರ್ಯಪೂರ್ವ ಎಂದರೆ ಕೇವಲ ವಸಾಹತುಪ್ರಜ್ಞೆಯಲ್ಲ.

ಇಂದಿಗೂ ಸಮಾಜದಲ್ಲಿ ಮತೀಯ ಸಾಮರಸ್ಯ ಎಂಬುದು ಮರೀಚಿಕೆ. ಎಲ್ಲೆಲ್ಲೂ ಅಸಹನೆ, ಸಂದೇಹ. ಕೆಲವು ದಿನಗಳ ಹಿಂದೆಯಷ್ಟೇ ಹಿಂದುಗಳ ಯುಗಾದಿ ಮತ್ತು ಮುಸಲ್ಮಾನರ ರಂಜಾನ್ ಹಬ್ಬ ಜೊತೆಜೊತೆಯಾಗಿ ಬಂತು. ಸದ್ಭಾವನೆ ಮತ್ತು ಪರಸ್ಪರ ಸಹೋದರತ್ವದ ದೃಷ್ಟಿಯಿಂದ ಇದು ಸಮಾಜದಲ್ಲಿ ಚೇತೋಹಾರಿ ವಾತಾವರಣವನ್ನು ನಿರ್ಮಿಸಬೇಕಿತ್ತು. ಆದರೆ ರಾಜ್ಯದ ಹಲವಾರು ಕಡೆಗಳಲ್ಲಿ ಕಾನೂನು ಸುವ್ಯವಸ್ಥೆಯ ಕಾರಣಕ್ಕೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವ ವಾತಾವರಣ ಸೃಷ್ಟಿಯಾಯಿತು. ಗಲಭೆ ನಡೆಯಬಹುದೆಂದು ಶಾಂತಿಸಭೆಗಳನ್ನು ನಡೆಸಲಾಯಿತು. ಇವೆಲ್ಲವನ್ನೂ ಏಕಮುಖದಿಂದ ಅವಲೋಕಿಸಿದರೆ ಸಾಮಾನ್ಯ ಘಟನೆ ಎನಿಸಬಹುದು.

ಆದರೆ ಸ್ವಾತಂತ್ರ್ಯ ಬಂದು ಏಳುವರೆ ದಶಕಗಳಾದರೂ ದೇಶದಲ್ಲಿ ಇಂಥ ಸ್ಥಿತಿ ಇದೆ ಎನ್ನುವುದು ಯೋಚಿಸತಕ್ಕ ಸಂಗತಿ. ಅದರಲ್ಲೂ ಸಂವಿಧಾನ ಹೇಳುವ ಸಮಾನತೆ ಮತ್ತು ಸೌಹಾರ್ದತೆಗಳು ಸಮಾಜದಲ್ಲಿ ಯಾವ ಪರಿಯಲ್ಲಿ ನೆಲೆಸಿದೆ ಎನ್ನುವುದಕ್ಕೆ ಇದು ಸಾಕ್ಷಿಯೂ ಹೌದು. ಎರಡು ಸಮುದಾಯದ ಹಬ್ಬಗಳನ್ನು ಜೊತೆಯಲ್ಲಿ, ಸಂತೋಷದಿಂದ ಆಚರಿಸಲು ಯಾಕೆ ಸಾಧ್ಯವಾಗುತ್ತಿಲ್ಲ ಎನ್ನುವುದನ್ನು ಗಂಭೀರವಾಗಿ ಚಿಂತಿಸಬೇಕಿದೆ. ನಾನಾ ಭಿನ್ನಾಭಿಪ್ರಾಯಗಳಿರಬಹುದು. ಆದರೆ ಅವು ಶಾಂತಿಗೆ ಭಂಗ ತರುವ ಮಟ್ಟಕ್ಕೆ ಹೋಗುತ್ತದೆ ಎಂದರೆ ಸಂವಿಧಾನ ಕರ್ತೃಗಳ ಆಶಯ ಸಂಪೂರ್ಣ ಈಡೇರಲಿಲ್ಲ ಎಂದೇ ಅರ್ಥ. ಮುಸಲ್ಮಾನರ ಮೆರವಣಿಗೆಯನ್ನು ಇತರ ಮತೀಯರು ಸಂದೇಹದಿಂದ ಯಾಕೆ ನೋಡುತ್ತಾರೆ ಎನ್ನುವುದನ್ನು ಆ ಸಮುದಾಯದ ಮುಖಂಡರು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಹಾಗಾದರೆ ಅದನ್ನು ಸಮಾಜದ ತಪ್ಪು ಎನ್ನಬಹುದೇ ಎಂದರೆ ಅದೂ ಸಾಧ್ಯವಿಲ್ಲ. ಈ ಹಿಂದೆ ಎಲ್ಲೆಲ್ಲಿ ಗಣೇಶ ಮೆರವಣಿಗೆಯ ಮೇಲೆ ಕಲ್ಲೆಸೆತ ಮತ್ತು ಇತರ ಶಾಂತಿಭಂಗದ ಪ್ರಯತ್ನಗಳು ನಡೆದವೋ ಅಲ್ಲೆಲ್ಲಾ ಮುಸಲ್ಮಾನರ ಮೆರವಣಿಗೆಯನ್ನು ಸಮಾಜ ಸಂದೇಹದಿಂದಲೇ ನೋಡುತ್ತದೆ.

ಎಲ್ಲರಿಗೂ ತಮ್ಮ ಮತಗಳನ್ನು ಆಚರಿಸಲು ಪೂರ್ಣ ಸ್ವಾತಂತ್ರ್ಯವಿದೆ. ಆದರೆ ಸಂಶಯ ಮತ್ತು ಭಯ ಆ ಸ್ವಾತಂತ್ರ್ಯವನ್ನು ಅನುಭವಿಸಲು ಅಡ್ಡಿಯಾಗುತ್ತಿದೆ. ಎಲ್ಲಾ ಮತಗಳಲ್ಲಿ ಹಬ್ಬಗಳೆಂದರೆ ನಾನಾ ಕಾರಣಗಳಿಂದ ವ್ಯಕ್ತಿಯ ಉನ್ನತಿಯ ಮಾರ್ಗಗಳು. ಆದರೆ ಅಂಥ ಸುಸಂದರ್ಭದಲ್ಲೂ ಹುನ್ನಾರಕ್ಕೆ ಹೊಂಚುಹಾಕುವ ಮನಸ್ಸುಗಳು ಇಂದಿಗೂ ಇದೆ ಎನ್ನುವುದು ಖೇದಕರ. ಸ್ವಾತಂತ್ರ್ಯಪೂರ್ವದಲ್ಲಿ ಇಂಥ ಭಾವನೆಗಳಿಂದಲೇ ಗಲಭೆಗಳು ನಡೆಯುತ್ತಿದ್ದವು ಮತ್ತು ಅವು ಮುಂದೆ ದೇಶವಿಭಜನೆಯವರೆಗೂ ತಲುಪಿತು ಎನ್ನುವುದನ್ನು ಸಮಾಜ ಮರೆಯಬಾರದು. ತುಷ್ಟೀಕರಣ ರಾಜಕೀಯಕ್ಕೆ ಬಲಿಯಾಗುವ ಸಮಾಜ ಮತೀಯ ಸಾಮರಸ್ಯವನ್ನು ಕೆಡಿಸುತ್ತದೆ ಎನ್ನುವುದನ್ನು ಸಮಾಜ ಅರಿಯಬೇಕು. ಅದರಲ್ಲೂ ಅಲ್ಪಸಂಖ್ಯಾತ ಎನಿಸಿಕೊಂಡವರು ಮುಖ್ಯವಾಗಿ ಅರಿಯಬೇಕು. ಆಗಲೇ ಸಮಾಜ ಸರ್ವಜನಾಂಗದ ಶಾಂತಿಯ ತೋಟವಾಗುತ್ತದೆ.

ಜೇಮ್ಸ್ ಹ್ಯಾರಿಸನ್ ಎಂಬ ಮಹಾನ್ ರಕ್ತದಾನಿ, ನಿಜವಾದ ಹೀರೋ

ಜೇಮ್ಸ್ ಹ್ಯಾರಿಸನ್ 1173 ಬಾರಿ ರಕ್ತದಾನ ಮಾಡಿ ಯಾರೂ ಸದ್ಯಕ್ಕೆ ಮುರಿಯಲಾಗದ ದಾಖಲೆ ಬರೆದಿದ್ದಾರೆ.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ರಕ್ತದಾನ ಶ್ರೇಷ್ಠದಾನ ಎಂಬ ಮಾತನ್ನು ಆಗಾಗ ಕೇಳುತ್ತಲೇ ಇರುತ್ತೇವೆ. ಒಂದು ಜೀವ ಉಳಿಸಲು ನಮ್ಮ ರಕ್ತವನ್ನು ದಾನ ಮಾಡುವುದು ಯಜ್ಞಯಾಗ ಹೋಮ ಮಾಡಿದ್ದಕ್ಕಿಂತಲೂ ಶ್ರೇಷ್ಠ ಕಾರ್ಯ ಎಂದು ವೇದಿಕೆಗಳ ಮೇಲಿನಿಂದ ಆಗೊಮ್ಮೆ ಈಗೊಮ್ಮೆ ಭಾಷಣವನ್ನು ಮಾಡಿರುತ್ತೇವೆ. ದೇಶದಾದ್ಯಂತ ಹಲವಾರು ಖಾಸಗಿ ಸಂಸ್ಥೆಗಳು 'ಬ್ಲಡ್‌ಬ್ಯಾಂಕ್'ಗಳನ್ನು ಈ ಹಿನ್ನೆಲೆಯಲ್ಲಿ ಸ್ಥಾಪಿಸಿ ವಿವಿಧ ಬಗೆಯ ರಕ್ತ ಮಾದರಿಗಳನ್ನು, ಪ್ಲಾಸ್ಮಾ, ಪ್ಲೇಟ್‌ಲೆಟ್‌ಗಳನ್ನು ಶೇಖರಿಸಿ, ಕೆಡದಂತೆ ರಕ್ಷಿಸಿಡುವ ಸಂಗತಿ ಎಲ್ಲರಿಗೂ ತಿಳಿದಿರುವಂತಹುದೇ.

ಹಿಂದೆಲ್ಲ ರಕ್ತದಾನ ಮಹಾಪಾಪ ಎಂದೇ ಹೇಳಲಾಗುತ್ತಿತ್ತು. ಅಗತ್ಯವಿರುವವರಿಗೆ ರಕ್ತ ನೀಡಿದರೆ ರಕ್ತ ನೀಡಿದವರ ಆರೋಗ್ಯ ಕ್ಷೀಣಿಸಿ, ಅವರ ಆಯುಸ್ಸು ಕುಸಿಯುತ್ತದೆಂಬ ಮೂಢನಂಬಿಕೆಯನ್ನು ಯಾರೋ ಬಿತ್ತಿಬಿಟ್ಟಿದ್ದರು. ಹಾಗಾಗಿ ರಕ್ತದಾನ ಮಾಡಲು ಯಾರೂ ಅಷ್ಟಾಗಿ ಮುಂದೆ ಬರುತ್ತಿರಲಿಲ್ಲ. ರಕ್ತದಾನ ಮಾಡಬಲ್ಲ ಆರೋಗ್ಯವಂತ ವ್ಯಕ್ತಿಗಳು ಕೂಡ ಏನಾದರೊಂದು ನೆಪ ಹೇಳಿ ಜಾರಿಕೊಳ್ಳುತ್ತಿದ್ದರು. ಮೂಢನಂಬಿಕೆಯ 'ಪ್ರಭಾವ' ಅಷ್ಟರಮಟ್ಟಿಗೆ ಹರಡಿತ್ತು.

ಆದರೆ ವಿಜ್ಞಾನ ಬೆಳೆದಂತೆಲ್ಲ, ಜನರು ಹೆಚ್ಚು ವಿದ್ಯಾವಂತರಾದಂತೆಲ್ಲ, ವೈದ್ಯ ಪದವೀಧರರ ಸಂಖ್ಯೆ ಹೆಚ್ಚಿದಂತೆಲ್ಲ ಜನಮಾನಸದಲ್ಲಿ ಹುದುಗಿದ್ದ ಈ ಮೌಢ್ಯವನ್ನು ಕ್ರಮೇಣ ಕಳಚಿಹಾಕಲು ಸಾಧ್ಯವಾಯಿತು. ಸಣ್ಣ ಸಣ್ಣ ಊರುಗಳಲ್ಲೂ ಆರೋಗ್ಯವಂತ ಯುವಕ-ಯುವತಿಯರು ರಕ್ತದಾನ ಮಾಡಲು ಧೈರ್ಯವಾಗಿ ಮುಂದೆ ಬರತೊಡಗಿದರು. ಸೆಲೆಬ್ರಿಟಿಗಳ ಸ್ಮರಣಾರ್ಥ ರಕ್ತದಾನ ಮಾಡುವ ಹೊಸಬಗೆಯ 'ಸಂಸ್ಕೃತಿ'ಗೂ ಚಾಲನೆ ದೊರಕಿತು. ಹೀಗಾಗಿ ಈಗ ರಕ್ತದಾನವೆಂದರೆ ಹೆದರಿಕೊಳ್ಳುವವರ ಸಂಖ್ಯೆ ಮೊದಲಿಗಿಂತ ಸಾಕಷ್ಟು ಕಡಿಮೆಯಾಗಿದೆ. ಅಲ್ಲೊಬ್ಬರು ಇಲ್ಲೊಬ್ಬರು ಈಗಲೂ ಹೆದರಿ ಹಿಂದೆ ಸರಿಯುವವರೂ ಇಲ್ಲದೇ ಇಲ್ಲ.

ನಮ್ಮ ದೇಶದಲ್ಲಿ ಅತಿ ಹೆಚ್ಚು ರಕ್ತದಾನ ಮಾಡಿದವರ ಸಾಲಿನಲ್ಲಿ ಮೊದಲ ಸ್ಥಾನದಲ್ಲಿ ಶೋಭಿಸುವವರು ಹರಿಯಾಣದ ಡಾ. ಸುರೇಶ್ ಕುಮಾರ್ ಸೈನಿ. ಪ್ಲೇಟ್‌ಲೆಟ್ ಸೇರಿದಂತೆ ಅವರು ಒಟ್ಟು 223 ಬಾರಿ ರಕ್ತದಾನ ಮಾಡಿ ಸಾವಿರಾರು ರೋಗಿಗಳನ್ನು ಬದುಕಿಸಿದ್ದಾರೆ. ಚಂಡೀಗಢದ ರಾಜನ್ ರೈಖಿ ಕೂಡ 222ಕ್ಕೂ ಅಧಿಕ ಬಾರಿ ರಕ್ತದಾನ ಮಾಡಿರುವವರ ಕ್ಲಬ್‌ಗೆ ಸೇರಿದ್ದಾರೆ. ಇನ್ನು ಬೆಂಗಳೂರಿನ ಮಧುರ ಅಶೋಕ್ ಕುಮಾರು 117 ಬಾರಿ, ಮಹಾರಾಷ್ಟ್ರದ ವಿಶ್ವಜಿತ್ ಕಾಶೀದ್ 185 ಬಾರಿ ರಕ್ತದಾನ ಮಾಡಿದ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ. ಕರ್ನಾಟಕದ ಆದಿಕೇಶವ ಪ್ರಕಾಶ ಶಾಸ್ತ್ರಿ ಓ-ನೆಗೆಟಿವ್ (o negative) ಎಂಬ ಅಪರೂಪದ ಗುಂಪಿನ ರಕ್ತವನ್ನು ಹಲವಾರು ಬಾರಿ ದಾನ ಮಾಡಿ ಪ್ರಶಂಸೆಗೆ ಭಾಜನರಾಗಿದ್ದಾರೆ.

ದೆಹಲಿಯ ರೋಟರಿ ಬ್ಲಡ್ ಬ್ಯಾಂಕ್ (ಆರ್‌ಬಿಬಿ) ಅತಿ ದೊಡ್ಡ ರಕ್ತ ಸಂಗ್ರಹ ಕೇಂದ್ರವಾಗಿದ್ದು, ಸುರಕ್ಷತೆ ಹಾಗೂ ವಿಶ್ವಾಸಾರ್ಹತೆಗೆ ಪಾತ್ರವಾಗಿದೆ. ರೆಡ್‌ಕ್ರಾಸ್ ಸೊಸೈಟಿ (ಐಆರ್‌ಸಿಎಸ್) ದೇಶಾದ್ಯಂತ ಒಂದು ನೂರಕ್ಕೂ ಹೆಚ್ಚು ರಕ್ತ ಕೇಂದ್ರಗಳೊಂದಿಗೆ ಸುಸಜ್ಜಿತ ಬ್ಲಡ್‌ಬ್ಯಾಕ್ ಎನಿಸಿಕೊಂಡಿದೆ. ಬೆಂಗಳೂರಿನ ರೋಟರಿ-ಟಿಟಿಕೆ ಬ್ಲಡ್ ಬ್ಯಾಂಕ್ (ಬಿಎಂಎಸ್‌ಟಿ) ಇದುವರೆಗೆ ವಾರ್ಷಿಕವಾಗಿ 90 ಸಹಸ್ರ ರೋಗಿಗಳಿಗೆ ರಕ್ತ ನೀಡಿದ ಹೆಗ್ಗಳಿಕೆ ಹೊಂದಿದೆ. ಬೆಂಗಳೂರಿನ ಗವಿಪುರಂನಲ್ಲಿರುವ ಸಂಘ ಪರಿವಾರದ ರಾಷ್ಟ್ರೋತ್ಥಾನ ರಕ್ತನಿಧಿ (ರಾಷ್ಟ್ರೋತ್ಥಾನ ಬ್ಲಡ್‌ಬ್ಯಾಂಕ್) ಕೂಡ ಗುಣಮಟ್ಟದ ವಿಶ್ವಾಸಾರ್ಹ, ಸುರಕ್ಷತೆಯ ರಕ್ತ, ಪ್ಲಾಸ್ಮಾ, ಪ್ಲೇಟ್‌ಲೆಟ್ ಸಂಗ್ರಹದ ಪ್ರಮುಖ ಕೇಂದ್ರವೆನಿಸಿ ಸಾವಿರಾರು ಮಂದಿ ರಕ್ತದ ಅಗತ್ಯವಿರುವ ರೋಗಿಗಳ ಸಂಜೀವಿನಿ ಎಂದು ಖ್ಯಾತವಾಗಿದೆ.

ಆದರೆ ಇವೆಲ್ಲ ಸಂಗತಿಗಳಿಗಿಂತ ಅಚ್ಚರಿ ಹುಟ್ಟಿಸುವ, ಬೆರಗಾಗುವ ಮಹಾನ್ ರಕ್ತದಾನಿಯೊಬ್ಬನಿದ್ದ. ಆತ ಕಳೆದ 2025ರ ಫೆ. 17ರಂದು ಇಹಲೋಕ ತ್ಯಜಿಸಿದ. ಆತ ರಕ್ತದಾನ ಮಾಡಿದ್ದು ನೂರಲ್ಲ, ಇನ್ನೂರಲ್ಲ, ಐನೂರು ಬಾರಿಯೂ ಅಲ್ಲ. ಬರೋಬ್ಬರಿ 1173 ಬಾರಿ ರಕ್ತದಾನ ಮಾಡಿ ಇಡೀ ಜಗತ್ತಿಗೇ ಯಾರೂ ಸದ್ಯಕ್ಕೆ ಮುರಿಯಲಾಗದ ದಾಖಲೆ ಬರೆದಿದ್ದಾನೆ. ಆತ ಇನ್ಯಾರೂ ಅಲ್ಲ, ಆಸ್ಟ್ರೇಲಿಯಾದ ನ್ಯೂಸೌತ್‌ವೇಲ್ಸ್‌ನ ಜೇಮ್ಸ್ ಹ್ಯಾರಿಸನ್ ಎಂಬ ವ್ಯಕ್ತಿ. ಆತ 1173 ಬಾರಿ ರಕ್ತದಾನ ಮಾಡಿದ್ದು ಉತ್ಪ್ರೇಕ್ಷೆಯ ಸಂಗತಿಯಲ್ಲ, ಆದರೆ ವಾಸ್ತವ. ಅದಕ್ಕೆ ಅಧಿಕೃತ ವೈದ್ಯಕೀಯ ದಾಖಲೆಗಳೇ ಇವೆ.



1936ರಲ್ಲಿ ಜನಿಸಿದ ಜೇಮ್ಸ್ ಹ್ಯಾರಿಸನ್‌ಗೆ ವಯಸ್ಸು 14 ಆಗಿದ್ದಾಗ ಜೀವ ಹಿಂಡುವ ರೋಗವೊಂದಕ್ಕೆ ಆಸ್ಪತ್ರೆಗೆ ಸೇರಬೇಕಾಯ್ತು. ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿ ಆತನ ಶ್ವಾಸಕೋಶದ ಒಂದು ಭಾಗವನ್ನೇ ತೆಗೆದುಹಾಕಿದ್ದರು. ಅನಸ್ತೇಶಿಯಾದ ಪ್ರಭಾವ ಕಡಿಮೆಯಾಗಿ ಆಸ್ಪತ್ರೆಯ ಹಾಸಿಗೆಯಲ್ಲಿ ಹ್ಯಾರಿಸನ್ ಕಣ್ತೆರೆದು ನೋಡಿದಾಗ ಆತನ ಎದೆಯ ಸುತ್ತ 100 ಹೊಲಿಗೆಗಳನ್ನು ಹಾಕಲಾಗಿತ್ತು. ಆತನ ಜೀವವುಳಿಸಲು 13 ಯೂನಿಟ್ ರಕ್ತದ ಅಗತ್ಯವಿತ್ತು. ಯಾರು ಯಾರೋ ಅಪರಿಚಿತರು (ಹ್ಯಾರಿಸನ್‌ಗೆ ಅವರಾರೆಂದು ಗೊತ್ತೇ ಇರಲಿಲ್ಲ) ಆ ರಕ್ತವನ್ನು ಮಾನವೀಯ ನೆಲೆಯಲ್ಲಿ ಆತನಿಗೆ ದಾನ ಮಾಡಿದ್ದರು. ಅವರೆಲ್ಲ ಹೀಗೆ ರಕ್ತದಾನ ಮಾಡಿದ್ದರಿಂದಲೇ ನೀನು ಈಗ ಜೀವಂತವಾಗಿದ್ದೀಯಾ ಎಂದು ಪಕ್ಕದಲ್ಲಿ ಶುಶ್ರೂಷೆ ಮಾಡುತ್ತಿದ್ದ ಹ್ಯಾರಿಸನ್‌ನ ತಂದೆ ರೆಗ್ ಹೇಳಿದಾಗ, ಹ್ಯಾರಿಸನ್ ಮನದಲ್ಲಿ ನೂರಾರು ಭಾವನೆಗಳು ಹಾದುಹೋದವು. ಆಗಲೇ ಆತ ಒಂದು ನಿರ್ಧಾರಕ್ಕೆ ತಲುಪಿದ್ದ. ನನಗೆ ಪರಿಚಯವಿಲ್ಲದವರು ನನ್ನನ್ನುಳಿಸಲು ರಕ್ತದಾನ ಮಾಡಿದ್ದಾರೆ. ಹಾಗಾಗಿ ನಾನು ಕೂಡ ಜೀವನಪೂರ್ತಿ ಇತರರನ್ನು ಬದುಕಿಸುವುದಕ್ಕಾಗಿ ರಕ್ತದಾನ ಮಾಡುವೆ. ಇದೇ ಹ್ಯಾರಿಸನ್‌ನ ಆ ನಿರ್ಧಾರವಾಗಿತ್ತು.

ಆದರೆ ಆಗಿನ್ನೂ ಆತನಿಗೆ 14 ವರ್ಷದ ಹರೆಯ. ಆಗ ಆತ ರಕ್ತ ನೀಡುವಂತಿರಲಿಲ್ಲ. ನಾಲ್ಕು ವರ್ಷದ ಬಳಿಕ (1954) ರಕ್ತದಾನ ಮಾಡುವುದಕ್ಕೆ ಅರ್ಹತಾ ವಯಸ್ಸು ಪ್ರಾಪ್ತವಾದ ಮೇಲೆ ಹ್ಯಾರಿಸನ್ ರಕ್ತದಾನ ಕೇಂದ್ರಕ್ಕೆ ತಾನೊಬ್ಬನೇ ನಡೆದುಹೋದ. ಕುರ್ಚಿಯೊಂದರಲ್ಲಿ ಕುಳಿತ. ಮೇಲೆ ತಿರುಗುತ್ತಿರುವ ಫ್ಯಾನ್, ಇನ್ನೊಂದೆಡೆ ಸೂಜಿ ಚುಚ್ಚಲು ಸಿದ್ಧಳಾಗಿ ನಿಂತ ನರ್ಸ್. ಒಮ್ಮೆ ಆತನಿಗೆ ಗಾಬರಿಯಾಯಿತು. ಗಾಬರಿಯಾಗಿದ್ದು ರಕ್ತದಾನಕ್ಕೆ ಹೆದರಿ ಅಲ್ಲ. ಆತ ಹೆದರಿದ್ದು ನರ್ಸ್ ಹಿಡಿದಿದ್ದ ಆ ಸೂಜಿಗೆ (ಸಿರಿಂಜ್)! ಚಿಕ್ಕಂದಿನಿಂದ ಆತನಿಗೆ ಸೂಜಿಯೆಂದರೆ ಇನ್ನಿಲ್ಲದ ಭಯ. ಎದೆಯ ಶಸ್ತ್ರಚಿಕಿತ್ಸೆಗೊಳಗಾದಾಗ ನೂರು ಕಡೆ ಸೂಜಿ ಚುಚ್ಚಿ ಹೊಲಿಗೆ ಹಾಕಿದ್ದರು. ನೂರು ಹೊಲಿಗೆ ನೋಡಿಯೇ ಗಾಬರಿಯಾದ ದೃಶ್ಯ ಇನ್ನೂ ಮಾಸಿರಲಿಲ್ಲ. ಆದರೆ ತಾನು ದೃಢ ನಿರ್ಧಾರ ಮಾಡಿರುವೆ. ಅದರಿಂದ ಹಿಂದೆ ಸರಿಯುವುದು ತರವಲ್ಲ ಎಂದು ಮನಸ್ಸು ಹೇಳಿತು. ಸೂಜಿ ಹಾಗೂ ನರ್ಸ್ ಕಡೆ ನೋಡದೆ, ಮೇಲೆ ತಿರುಗುತ್ತಿರುವ ಫ್ಯಾನ್ ನೋಡುತ್ತ 'ನನ್ನ ರಕ್ತ ತೆಗೆಯಬಹುದು' ಎಂದ. ಸೂಜಿಗೆ ಕುರುಡಾಗಿ, ನೋವಿಗೆ ಕಿವುಡಾಗಿ ಕುಳಿತ.

ಈ ಪ್ರಕ್ರಿಯೆ ಮುಂದೆ ಎರಡು ವಾರಕ್ಕೊಮ್ಮೆ ನಡೆಯುತ್ತಾ ಹೋಯಿತು. ಪ್ರತಿ ಬಾರಿ ರಕ್ತ ತೆಗೆಯುವಾಗಲೂ ಸೂಜಿ ಮತ್ತು ನರ್ಸ್ ಕಡೆಗೆ ದೃಷ್ಟಿ ಹಾಯಿಸುತ್ತಲೇ ಇರಲಿಲ್ಲ. ಹೀಗೇ ಕೆಲವು ವಾರಗಳ ಬಳಿಕ, ಸಂಗ್ರಹವಾದ ಆತನ ರಕ್ತವನ್ನು ವಿಶ್ಲೇಷಿಸಿದಾಗ ಅದರಲ್ಲಿ ವಿಸ್ಮಯಕಾರಿ, ಅಪರೂಪದ ಪ್ರತಿನಿರೋಧಕ (antibody) ಇರುವುದು ವೈದ್ಯರಿಗೆ ಅಚ್ಚರಿ ಹುಟ್ಟಿಸಿತು. ಆಗ ಆಸ್ಟ್ರೇಲಿಯಾದಾದ್ಯಂತ ಹರಡಿದ್ದ RH ಎಂಬ ಭಯಾನಕ ಕಾಯಿಲೆಯನ್ನು ನಿಯಂತ್ರಿಸುವ ತಾಕತ್ತು ಆ ಪ್ರತಿನಿರೋಧಕಕ್ಕೆ ಇತ್ತು.

ವೈದ್ಯರ ಈ ವಿನೂತನ ಸಂಶೋಧನೆಗೆ ಮೊದಲು, ಆಸ್ಟ್ರೇಲಿಯಾದ ಸಾವಿರಾರು ಶಿಶುಗಳು RH ಖಾಯಿಲೆಯಿಂದ ಜನಿಸಿದ ಕೆಲವೇ ಕ್ಷಣದಲ್ಲಿ ಸಾವನ್ನಪ್ಪುತ್ತಿದ್ದವು. ಕೆಲವು ಮಕ್ಕಳಿಗೆ ಮಿದುಳಿನ ಆಘಾತ, ಕೆಲವು ಮಕ್ಕಳು ಅವಧಿಗೆ ಮುನ್ನವೇ ಜನಿಸಿ ಮರಣ- ಇದಕ್ಕೆಲ್ಲ ಜೇಮ್ಸ್ ಹ್ಯಾರಿಸನ್‌ನ ರಕ್ತವು ಸಂಜೀವಿನಿ ರೂಪದ ಪರಿಹಾರವಾಗಿತ್ತು. ಹ್ಯಾರಿಸನ್ ರಕ್ತದಾನಕ್ಕಾಗಿ ಮೀಸಲಿಡುತ್ತಿದ್ದ ಅವಧಿ 20 ನಿಮಿಷ. ಆದರ ಬದಲು 90 ನಿಮಿಷ ನೀಡಬಹುದೇ ಎಂದು ವೈದ್ಯರು ಕೇಳಿದಾಗ ಹ್ಯಾರಿಸನ್ ಕೂಡಲೇ ಒಪ್ಪಿದ. ಆ ಅವಧಿಯಲ್ಲಿ ಆತನ ರಕ್ತದಲ್ಲಿರುವ ಪ್ಲಾಸ್ಮಾವನ್ನು ವೈದ್ಯರು ಸಂಗ್ರಹಿಸುತ್ತಿದ್ದರು. ಅದನ್ನು ಮರಣಶಯ್ಯೆಯಲ್ಲಿರುವ ಶಿಶುಗಳಿಗೆ ನೀಡಿದಾಗ ಅದ್ಭುತ ಪವಾಡವೆಂಬಂತೆ ಅವೆಲ್ಲ ಬದುಕುಳಿದವು. ಈ ಸಂಗತಿ ಗೊತ್ತಾದಾಗ ಹ್ಯಾರಿಸನ್‌ಗೆ ಆದ ಆನಂದ ಅಷ್ಟಿಷ್ಟಲ್ಲ. ತಪ್ಪದೇ ತನಗೆ 81 ವರ್ಷ ಆಗುವವರೆಗೂ ರಕ್ತ, ಪ್ಲಾಸ್ಮಾ ದಾನ ನೀಡುತ್ತಲೇ ಹೋದ.

2018ರಲ್ಲಿ ಹ್ಯಾರಿಸನ್‌ಗೆ ಬರೋಬ್ಬರಿ 81 ವರ್ಷ. ಈ ಬಾರಿ ಇಳಿವಯಸ್ಸಿನ ಕಾರಣದಿಂದಾಗಿ ರಕ್ತದಾನ ಮಾಡಲು ಆಸ್ಟ್ರೇಲಿಯಾದ ಕಾನೂನಿನ ಅನುಮತಿ ಬೇಕಿತ್ತು. ಅದನ್ನು ಪಡೆದು ಕೊನೆಯ ಬಾರಿ ಹ್ಯಾರಿಸನ್ ರಕ್ತದಾನಕ್ಕೆ ಮುಂದಾದ. ಆತನ ಸುತ್ತಲೂ, ಹ್ಯಾರಿಸನ್‌ನ ರಕ್ತ ಪಡೆದು ಬದುಕಿದ್ದ ಮುದ್ದುಮಕ್ಕಳನ್ನು ಎತ್ತಿಕೊಂಡ ನೂರಾರು ತಾಯಂದಿರು. ಅವರೆಲ್ಲರ ಕಣ್ಣಂಚಿನಲ್ಲಿ ಅಶ್ರುಧಾರೆ. ತಮ್ಮ ಮಕ್ಕಳನ್ನು ರಕ್ತ ನೀಡಿ ಬದುಕಿಸಿದ ನಿಜವಾದ 'ಹೀರೋ' ಕೊನೆಯ ಬಾರಿ ರಕ್ತದಾನ ಮಾಡುವುದನ್ನು ನೋಡಲು ಅವರೆಲ್ಲ ಅಲ್ಲಿ ನೆರೆದಿದ್ದರು. ಕಳೆದ 64 ವರ್ಷಗಳಿಂದ ಒಟ್ಟು 1173 ಬಾರಿ ರಕ್ತದಾನ ಮಾಡಿದ್ದ. ಅದರಿಂದಾಗಿ 2.4 ದಶಲಕ್ಷ ಶಿಶುಗಳು ಆಸ್ಟ್ರೇಲಿಯಾದಲ್ಲಿ ಬದುಕುಳಿದಿದ್ದವು.

"ನೀನೊಬ್ಬ ನಿಜವಾದ ಹೀರೋ. ನಮಗೆಲ್ಲ ನೀನೇ ದೇವರು" ಎಂದು ಆ ತಾಯಂದಿರು ಕಣ್ತುಂಬಿ ಹೇಳಿದರೆ, ಹ್ಯಾರಿಸನ್ ಎಲ್ಲೋ ನೋಡುತ್ತ 'ನೋಡಿ, ನಾನು ಒಂದು ಸುರಕ್ಷಿತ ಕೋಣೆಯಲ್ಲಿ ಕುಳಿತು ರಕ್ತದಾನ ಮಾಡುತ್ತೇನೆ. ಅನಂತರ ನರ್ಸ್ ಕುಡಿಯಲು ಕಾಫಿ ಮತ್ತು ತಿನ್ನಲು ಬಿಸ್ಕೆಟ್ ಕೊಡುತ್ತಾರೆ. ಬಳಿಕ ಮೇಲೆದ್ದು ಮನೆಗೆ ಹೋಗುತ್ತೇನೆ. ನನಗ್ಯಾವತೊಂದರೆಯೂ ಇಲ್ಲ. ನನ್ನ ಕೊಡುಗೆ ಏನೂ ಇಲ್ಲ' ಎಂದು ತಣ್ಣಗೆ ಹೇಳುತ್ತಾ ಮನೆಯತ್ತ ನಡೆದೇಬಿಟ್ಟಿದ್ದ.

ಆಸ್ಟ್ರೇಲಿಯಾ ಸರ್ಕಾರ ಆತನ ಈ ಮಹಾನ್ ಸೇವೆಯನ್ನು ಪರಿಗಣಿಸಿ ದೇಶದ ಅತ್ಯುನ್ನತ 'ಮೆಡಲ್ ಆಫ್ ದಿ ಆರ್ಡರ್ ಆಫ್ ಆಸ್ಟ್ರೇಲಿಯಾ' ನಾಗರಿಕ ಪ್ರಶಸ್ತಿಯನ್ನು ನೀಡಿತ್ತು. ಹ್ಯಾರಿಸನ್ ತನ್ನ 88ನೇ ವಯಸ್ಸಿನಲ್ಲಿ ನೆಮ್ಮದಿಯಿಂದ ನಿದ್ದೆ ಮಾಡುತ್ತಿರುವಾಗಲೇ ಕಳೆದ 2025ರ ಫೆ. 17ರಂದು ಈ ಲೋಕಕ್ಕೆ ವಿದಾಯ ಹೇಳಿದ. ಪತ್ನಿ ಬಾರ್ಬರಾ ಲಿಂಡ್‌ಬೆಕ್ 2005ರಲ್ಲೇ ಸಾವಿಗೀಡಾಗಿದ್ದಳು. ಒಬ್ಬಳೇ ಮಗಳು ಟ್ರೇಸಿ ಮೆಲ್ಲೋಶಿಪ್. ತಮಾಷೆಯೆಂದರೆ, ಟ್ರೇಸಿಯ ಪುಟ್ಟ ಮಗು ಬದುಕುಳಿದಿದ್ದು ಕೂಡ ತಾತ ಹ್ಯಾರಿಸನ್‌ನ ರಕ್ತದಾನದಿಂದಲೇ!

ಅತಿಶ್ರೀಮಂತರನ್ನು, ಸಿನಿಮಾಗಳಲ್ಲಿ ನಟಿಸುವ ನಾಯಕ ನಾಯಕಿಯರನ್ನು, ಇನ್ಯಾರೋ ತರಕಲಾಂಡಿ ರಾಜಕೀಯ ಮುಖಂಡರನ್ನು ತಮ್ಮ 'ಹೀರೋ'ಗಳೆಂದು ಹಲವರು ಭ್ರಮಿಸಿ ಆರಾಧಿಸುತ್ತಾರೆ. ಹಾಲಿನ ಅಭಿಷೇಕ ಮಾಡುತ್ತಾರೆ. ಆದರೆ ಲಕ್ಷಾಂತರ ಮಕ್ಕಳಿಗೆ ತನ್ನ ರಕ್ತದಾನದ ಮೂಲಕ ಜೀವದಾನ ಮಾಡಿದ ಜೇಮ್ಸ್ ಹ್ಯಾರಿಸನ್ ಮುಂದೆ ಇವರೆಲ್ಲ ಅದೆಂಥ ಹೀರೋಗಳು?

ಹರೆಯದವರ ಸವಾಲುಗಳು

ಹರೆಯದ ಸವಾಲುಗಳನ್ನು ಎದುರಿಸಲು ಆತ್ಮಸ್ಥೈರ್ಯ, ಸಕಾರಾತ್ಮಕ ಚಿಂತನೆ, ಪೋಷಕ, ಉಪಾಧ್ಯಾಯರ ಸಕಾರಾತ್ಮಕ ಮಾರ್ಗದರ್ಶನ ಮತ್ತು ಬಾಲ್ಯದಲ್ಲಿ ಪೋಷಕರು ಕಲಿಸಿದ ಜೀವನ ಕೌಶಲಗಳು ಪೂರಕ.

ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ಜೀವನವೇ ಸವಾಲುಗಳ ಸರಪಳಿ. ಅದಕ್ಕೆ ಪರಿಹಾರ ಏನು ಎಂಬ ಪ್ರಶ್ನೆಗೆ, ಸವಾಲುಗಳನ್ನು ಎದುರಿಸಿ ಯಶಸ್ವಿಯಾಗಿ ನಿಭಾಯಿಸಿಕೊಂಡು ಮುನ್ನಡೆಯುವುದೇ ಜೀವನ. ಸವಾಲುಗಳಿಲ್ಲದ ಜೀವನ ನೀರಸವಾಗುತ್ತದೆ. ವ್ಯಕ್ತಿಯು ಜನಿಸಿದಾಗಿನಿಂದ ಅಂತ್ಯದವರೆಗೆ ಸವಾಲುಗಳಿರುತ್ತವೆ. ಜನಿಸಿದ ಮಗು ಮೈಲುಗಲ್ಲುಗಳನ್ನು ಸಾಧಿಸುವುದೂ ಸವಾಲುಗಳೇ. ಜನಿಸಿದ ಮೂರು ತಿಂಗಳಿಗೆ ಕವುಚಿ ಹಾಕಿಕೊಳ್ಳುವುದು ಮಗುವಿಗೆ ಒಂದು ಸವಾಲು. ಹಾಗೆ ಕವುಚಿಕೊಳ್ಳುವಾಗ ಮಗು ಪ್ರಯತ್ನಿಸಲೇಬೇಕು. ಮಗುಚಿಕೊಳ್ಳುವಾಗ ತನ್ನ ದೇಹಕ್ಕೆ ಪೆಟ್ಟಾಗದಿದ್ದ ಹಾಗೆ ಎಚ್ಚರಿಕೆ ವಹಿಸಬೇಕು. ನಿಂತುಕೊಳ್ಳುವ ಮೊದಲು ಸಮತೋಲನವನ್ನು ಕಾಪಾಡಿಕೊಳ್ಳಬೇಕು. ಅದಿಲ್ಲದಿದ್ದಲ್ಲಿ ಕೆಳಗೆ ಬಿದ್ದು ಶರೀರಕ್ಕೆ ಗಾಯವಾಗುತ್ತದೆ. ಹೀಗೆ ಬೀಳದಂತೆ, ಎಡವದಂತೆ ನಡೆಯುವುದು, ಮಾತನಾಡಲು ಕಲಿಯುವುದು ಇವೂ ಸವಾಲುಗಳೇ. ಮಗು ಸವಾಲುಗಳನ್ನು ಎದುರಿಸಿ, ಅವುಗಳನ್ನು ನಿಭಾಯಿಸಿಕೊಂಡು ಯಶಸ್ವಿಯಾಗಿ ಮೈಲುಗಲ್ಲುಗಳನ್ನು ದಾಟಿದಾಗ ಮಗುವಿಗೆ ತಾನೇನೋ ಸಾಧನೆ ಮಾಡಿದ್ದೇನೆ ಎಂಬ ವಿಶ್ವಾಸ ಉಂಟಾಗುತ್ತದೆ. ಆತ್ಮವಿಶ್ವಾಸದಿಂದ ಒಂದೊಂದೇ ಮೆಟ್ಟಿಲುಗಳನ್ನು ಏರುತ್ತದೆ. ಇದಕ್ಕೆ ಅವಶ್ಯವಿರುವುದು ಪೋಷಕರ ಪ್ರೀತಿಯ ಮಾತುಗಳು, ಪ್ರೋತ್ಸಾಹ ಮತ್ತು ಸಕಾರಾತ್ಮಕ ಮಾರ್ಗದರ್ಶನ.

ಮೇಲೆ ತಿಳಿಸಿದಂತೆ ಜೀವನವೇ ಸವಾಲುಗಳ ಸರಪಣಿ. ಹರೆಯದವರಲ್ಲಿ ಎದುರಾಗುವ ಸವಾಲುಗಳದ್ದೇ ಒಂದು ವಿಶೇಷ. ಹರೆಯವು ಸಂಕ್ರಮಣ ಕಾಲ. ಅತ್ತ ಬಾಲ್ಯವನ್ನು ತೊರೆದು, ಇತ್ತ ಸ್ವಾತಂತ್ರ್ಯವನ್ನು ಸಾಧಿಸದೇ ಇರುವ ಒಂದು ತ್ರಿಶಂಕು ಸ್ವರ್ಗ. ಹರೆಯದಲ್ಲಿ ಎದುರಾಗುವ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ, ನಿಭಾಯಿಸಿದರೆ, "ತನ್ನತನ"ವನ್ನು ಕಂಡುಕೊಂಡು, ಸಾಧನೆಯತ್ತ ದಾಪುಗಾಲಿಡಬಹುದು. ಸವಾಲುಗಳನ್ನು ಎದುರಿಸಲಾಗದೇ ಆತ್ಮಸ್ಥೈರ್ಯ ಕಳೆದುಕೊಂಡು, ಹರೆಯದ ಮನಸ್ಸು ಗೊಂದಲದ ಗೂಡಾದರೆ ಸಾಧನೆಯಲ್ಲಿ ಹಿನ್ನಡೆಯಾಗುತ್ತದೆ. ಇಂಥವರ ಭವಿಷ್ಯ ಡೋಲಾಯಮಾನವಾಗುತ್ತದೆ. ಇನ್ನೊಂದು ಅಂಶವನ್ನು ಓದುಗರು ಗಮನಿಸಬೇಕು. ಹರೆಯದಲ್ಲಿ ಎದುರಾಗುವ ಸವಾಲುಗಳು ಮತ್ತು ಒತ್ತಡಗಳು ಒಂದೇ ಎಂದು ಹೇಳುವವರಿದ್ದಾರೆ. ಸವಾಲುಗಳು ಹರೆಯದ ಪ್ರತಿಯೊಬ್ಬ ವ್ಯಕ್ತಿಗೂ ಎದುರಾಗುತ್ತವೆ. ಆದರೆ ಒತ್ತಡಗಳು ಕೆಲವರಿಗೆ ಎದುರಾಗದೇ ಇರಬಹುದು. ಹಾಗಾಗಿ ಒತ್ತಡಗಳನ್ನು ಮತ್ತು ಸವಾಲುಗಳು ವಿಭಿನ್ನವಾದವು ಎನ್ನುವುದು ನನ್ನ ಅಭಿಪ್ರಾಯ.

ಹರೆಯದವರ ಸವಾಲುಗಳನ್ನು ನಾಲ್ಕು ವಿಧಗಳಾಗಿ ವಿಂಗಡಿಸಬಹುದು. ಮೊದಲನೆಯದು ವ್ಯಕ್ತಿಯಲ್ಲಿ ಉಂಟಾಗುವ ಸಮಗ್ರ ಬದಲಾವಣೆಗಳಿಗೆ ಸಂಬಂಧಿಸಿದ ವೈಯಕ್ತಿಕ ಸವಾಲುಗಳು. ಎರಡನೆಯದು ಮನೋವಿಕಾಸದಿಂದ ಉಂಟಾಗುವ ಮಾನಸಿಕ ಸವಾಲುಗಳು. ಮೂರನೆಯದು ಸಾಮಾಜಿಕ ಸವಾಲುಗಳು. ನಾಲ್ಕನೆಯದು ಭಾವನಾತ್ಮಕವಾಗಿ ಎದುರಾಗುವ ಸವಾಲುಗಳು. ಉದಾಹರಣೆಗಳ ಮೂಲಕ ಇವುಗಳನ್ನು ತಿಳಿಯೋಣ.

ಹದಿನಾಲ್ಕು ವರ್ಷ ವಯಸ್ಸಿನ ರಾಹುಲ್ ಒಂಭತ್ತನೇ ತರಗತಿಯ ವಿದ್ಯಾರ್ಥಿ. ಶರೀರದಲ್ಲಿ ಎತ್ತರವಾಗಿ ಬೆಳೆದ. ಎಲ್ಲರೂ ಇದೇನೋ ರಾಹುಲ್ ಇಷ್ಟು ಎತ್ತರವಾಗಿದೀಯ. ನಿನ್ನನ್ನು ನೋಡಿದರೆ ದೊಡ್ಡವರ ಹಾಗೆ ಕಾಣುತ್ತೀಯಾ? ಎಂದು ಅವನ ಸಂಬಂಧಿಕರು ಹೇಳಿದ್ದನ್ನು ಕೇಳಿದ ರಾಹುಲ್ ಮನಸ್ಸಿಗೆ ಇರುಸುಮುರುಸಾಯಿತು. ಅದೇ ವಯಸ್ಸಿನ ತನ್ನ ಸಹಪಾಠಿ ಸುನಿಲ್ ಸ್ವಲ್ಪ ಕುಳ್ಳನಾಗಿದ್ದ. ಅರೇ ಇತರರಿಗಾಗದ್ದು ತನಗೇಕೆ ಹೀಗಾಗಿದೆ? ಇದು ಅಸಹಜವೇ ಎಂಬ ಗೊಂದಲ ರಾಹುಲ್‌ನಿಗೆ ಉಂಟಾಯಿತು. ಇದಕ್ಕೆ ಪರಿಹಾರವೇನು? ಎಂದು ಯೋಚಿಸಿದ. ಏನಾದರಾಗಲೀ ತಾಯಿಯನ್ನು ಕೇಳುವುದು ಒಳ್ಳೆಯದು ಎಂದು ಭಾವಿಸಿ, ತಾಯಿಯ ಹತ್ತಿರ ಹೋದ. ತಾಯಿಯನ್ನು ಕೇಳಿದಾಗ, ತಾಯಿ "ಮಗನೇ ಈಗ ನೀನು ಹದಿನಾಲ್ಕು ವರ್ಷದವನು. ದೇಹದಲ್ಲಿ ಹಲವು ಬದಲಾವಣೆಗಳಾಗುತ್ತವೆ. ಅವುಗಳಲ್ಲಿ ಇದೂ ಒಂದು. ಕೆಲವರಿಗೆ ಈ ಬದಲಾವಣೆಗಳು ಒಂದೆರಡು ವರ್ಷ ಬೇಗ ಆಗಬಹುದು. ಕೆಲವರಿಗೆ ತಡವಾಗಿ ಆಗುತ್ತದೆ. ಅದಕ್ಕಾಗಿ ಆತಂಕಪಡಬೇಡ" ಎಂದು ಹೇಳಿದರು. ರಾಹುಲ್‌ಗೆ ಸಮಾಧಾನವಾಯಿತು. ಹೀಗೆ ಸಂದೇಹಗಳಿಂದ ಹರೆಯದ ಮನಸ್ಸಿಗೆ ಆತಂಕ ಉಂಟಾದಾಗ ಆತಂಕ ಪಡದೇ ಪೋಷಕರ ಹತ್ತಿರ ಹಂಚಿಕೊಂಡರೆ ಅದನ್ನು ಎದುರಿಸುವುದು ಸುಲಭಸಾಧ್ಯ.

ಹದಿನಾರು ವರ್ಷದ ಶೈಲಾ ಮೊದಲನೇ ಪಿಯುಸಿ ವಿದ್ಯಾರ್ಥಿನಿ. ಮನೋವಿಕಾಸದಿಂದ ಶೈಲಾಳಿಗೆ ಏನೇನೋ ಯೋಚನೆಗಳು ಉಂಟಾಗಲು ಪ್ರಾರಂಭವಾಯಿತು. ಅವುಗಳಲ್ಲಿ ಮುಖ್ಯವಾದದ್ದು ತಾನು ಏನನ್ನು ಓದಬೇಕು? ತಾನು ಯಾರಂತಾಗಬೇಕು? ಯಾವ ವ್ಯಕ್ತಿಯನ್ನು ಆರಿಸಿಕೊಳ್ಳಬೇಕು? ಸಮಾಜದಲ್ಲಿ ತನ್ನ ಸ್ಥಾನ ಎಲ್ಲಿ? ತನಗೆ ಗೌರವವೆಲ್ಲಿ ದೊರಕುತ್ತದೆ? ಎಂಬ "ತನ್ನತನ" ವನ್ನು ಕಾಣುವ ಹಂಬಲ. ಇದಕ್ಕೆ 'ತನ್ನತನ' ಎನ್ನುತ್ತಾರೆ. 'ತನ್ನತನ'ವನ್ನು ಬೆಳೆಸಿಕೊಳ್ಳುವುದು ಒಂದು ಸವಾಲು. ಇದರಿಂದ ಶೈಲಾಳ ಮನಸ್ಸು ತನಗೆ ಯಾಕೆ ಹೀಗೆ ಈ ವಿಧದ ಯೋಚನೆಗಳು ಬರುತ್ತಿವೆ. ಅದಕ್ಕೆ ಪರಿಹಾರ ಏನು ಎಂದು ಕೇಳಲು, ತಾಯಿಯ ಹತ್ತಿರ ಹೋದಳು. ತಾಯಿಯು ಮಗಳ ಸಂದೇಹಗಳನ್ನು ಆಲಿಸಿ, ಶೈಲಾಳ ತಂದೆಯನ್ನು ಕರೆದರು. ಅಪ್ಪ ಅಮ್ಮ ಇಬ್ಬರೂ ಕೂತು ಶೈಲಾಳಿಗೆ ಯಾಕೆ ಹೀಗಾಗುತ್ತಿದೆ, ಅದನ್ನು ಅರ್ಥ ಮಾಡಿಕೊಳ್ಳುವುದು ಹೇಗೆ, ಅದರಿಂದ ಏನು ಪ್ರಯೋಜನ ಎಂಬುದನ್ನು ಉದಾಹರಣೆಯೊಂದಿಗೆ ವಿವರಿಸಿದರು. ಶೈಲಾಗೆ ತನ್ನಲ್ಲಿ ಆತ್ಮವಿಶ್ವಾಸ ಉಂಟಾಯಿತು. "ತನ್ನತನ"ವು ಮನಸ್ಸಿನಲ್ಲಿ ಬೇರೂರಿ, ಆತ್ಮವಿಶ್ವಾಸದಿಂದ ಮುನ್ನಡೆಯಲು ಪ್ರಾರಂಭಿಸಿದಳು.

ದೀಪು ಹತ್ತನೇ ತರಗತಿಯಲ್ಲಿ ಪಾಸಾಗಿ ಪಿಯುಸಿಯನ್ನು ಸೇರಿದನು. ಪಿಯುಸಿಯಲ್ಲಿ ಎಲ್ಲವೂ ಹೊಸದು. ಅವುಗಳಲ್ಲಿ ಮುಖ್ಯವಾದದ್ದು ಗೆಳೆಯರೊಂದಿಗಿನ ಸಂಬಂಧ. ಪಿಯುಸಿ ಸೇರಿ ಒಂದು ವಾರದಲ್ಲಿ ಎರಡು ಮೂರು ಜನ ಗೆಳೆಯರಾದರು. ದೀಪುವಿಗೂ ಒಳ್ಳೆಯ ಗೆಳೆಯರು ಸಿಕ್ಕಿದರಲ್ಲಾ ಎಂದು ಸಂತೋಷವಾಯಿತು. ವಾರಗಳು ಕಳೆದ ಹಾಗೆ ಅವರು ತರಗತಿ ತಪ್ಪಿಸಿ ಅಲ್ಲಿ ಇಲ್ಲಿ ಹೋಗುತ್ತಿದ್ದುದನ್ನು ಕಂಡನು. ಅವರನ್ನು ವಿಚಾರಿಸಿದಾಗ, "ಏ ಬಾರೋ ನೀನೂ ಸ್ವಲ್ಪ ದಿನ ಮಜಾ ಮಾಡುವಿಯಂತೆ, ನಂತರ ಓದಿದರಾಯಿತು" ಎಂದು ಹೇಳಿದಾಗ ದೀಪುವಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಆ ಕ್ಷಣವೇ ಅವರನ್ನು ತೊರೆದು ಬೇರೆಯವರ ಸ್ನೇಹ ಮಾಡಿದರೆ ಒಳ್ಳೆಯದು ಎನಿಸಿತು. ಹಾಗೆ ಮಾಡಿದರೆ ಹೊಸಬರು ಹೇಗಿರುತ್ತಾರೆ ಎಂಬುದರ ಗೊಂದಲ ಉಂಟಾಯಿತು. ಮನೆಗೆ ಬಂದು ತಾಯಿಯ ಹತ್ತಿರ ತನ್ನ ಕಷ್ಟ ಹೇಳಿಕೊಂಡನು. ತಾಯಿ ಮಗನನ್ನು ಕೂರಿಸಿಕೊಂಡು ಗಾಬರಿಯಾಗಬೇಡ, ಹೀಗಾಗುವುದು ಸಹಜ. ಸ್ವಲ್ಪ ದಿನ ಯಾರು ಚೆನ್ನಾಗಿ ಓದುತ್ತಾರೆ, ಯಾರು ಕ್ಲಾಸಿಗೆ ಸರಿಯಾಗಿ ಬರುತ್ತಾರೆ ಎಂಬುದನ್ನು ಗಮನಿಸುತ್ತಿರು. ಓದುವುದರಲ್ಲಿ ಯಾರು ಮುಂದೆ? ಯಾರು ಕ್ಲಾಸಿನ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾರೆ? ಎಂಬುದನ್ನು ಗಮನಿಸು. ಅಂಥವರ ಗೆಳೆತನ ಒಳ್ಳೆಯದು. ನಿನಗೂ ಅದರಿಂದ ಒಳ್ಳೆಯದಾಗುತ್ತದೆ ಎಂದರು. ದೀಪು ತಾಯಿ ಹೇಳಿದ ಹಾಗೆ ಸಮಾಧಾನದಿಂದ ಸಹಪಾಠಿಗಳ ಚಲನವಲನಗಳನ್ನು ಗಮನಿಸಿ, ಯಾರು ತನ್ನ ಹಾಗೆ ಓದಿ ಮುಂದೆ ಬರಬೇಕೆಂಬ ಗುರಿ ಹೊಂದಿದ್ದಾರೆ. ಯಾರು ಹಲವಾರು ಕೌಶಲಗಳನ್ನು ಹೊಂದಿದ್ದಾರೆ ಎಂಬುದನ್ನು ಗಮನಿಸಿ ಅಂಥವರ ಜೊತೆಗೂಡಿ ಓದಲನುವಾದ. ಮುಂದೆ ಪರೀಕ್ಷೆಯಲ್ಲಿ ಒಳ್ಳೆಯ ಅಂಕ ಗಳಿಸಿ ಉತ್ತೀರ್ಣನಾದ.

ನರರಸದೂತಗಳ ಸ್ರವಿಸುವಿಕೆಯಿಂದ ಹರೆಯದಲ್ಲಿ ಭಾವನೆಗಳು ಏರುಪೇರಾಗುತ್ತವೆ. ಒಂದರಲ್ಲಿ ಯಶಸ್ವಿಯಾದರೆ ಆಕಾಶಕ್ಕೇರುತ್ತಾರೆ. ಮತ್ತೊಂದರಲ್ಲಿ ವಿಫಲರಾದರೆ ಪಾತಾಳಕ್ಕಿಳಿದು ಧೈರ್ಯಗುಂದುತ್ತಾರೆ. ಇದು ರಸದೂತಗಳ ಸ್ರವಿಸುವಿಕೆಯಿಂದ ಭಾವನೆಗಳಲ್ಲಿ ಆಗುವ ಏರುಪೇರುಗಳು. ಇದನ್ನು ತಡೆದು, ಸಮಚಿತ್ತವನ್ನು ಸಾಧಿಸಲು ಪ್ರಯತ್ನಿಸಬೇಕಾಗುತ್ತದೆ. ಇದಕ್ಕೆ ಅವಶ್ಯವಿರುವುದು ಹವ್ಯಾಸಗಳು. ಆಟ, ಸಂಗೀತ, ನೃತ್ಯ, ನಾಟಕ, ಒಳ್ಳೆಯ ಪುಸ್ತಕಗಳನ್ನು ಓದುವುದು, ಹೂದೋಟ ಬೆಳೆಸುವುದು, ಮುಂತಾದವು ಹವ್ಯಾಸಗಳೆನಿಸಿಕೊಳ್ಳುತ್ತವೆ. ಹವ್ಯಾಸಗಳು, ಪಠ್ಯೇತರ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಸೋಲು ಗೆಲುವುಗಳ ಅನುಭವವಾಗುತ್ತದೆ. ಸಮಾಜದಲ್ಲಿ ಬೆರೆತಾಗ, ಕೆಲವರು ಹೊಗಳುತ್ತಾರೆ. ಕೆಲವರು ತೆಗಳುತ್ತಾರೆ. ಅವನ್ನು ಸಹಿಸಿಕೊಂಡು ಸಮತೋಲನ ಭಾವನೆಗಳನ್ನು ಸಾಧಿಸಿ ಮುನ್ನಡೆಯಲು ದಾರಿ ಸುಗಮವಾಗುತ್ತದೆ.

ಮೇಲಿನ ಸವಾಲುಗಳೊಂದಿಗೆ ವಿಮರ್ಶಾತ್ಮಕ ಮತ್ತು ಸೃಜನಶೀಲ ಚಿಂತನೆ, ಪರಿಣಾಮಕಾರಿ ಸಂವಹನ, ಮಾನವೀಯ ಸಂಬಂಧ ಮತ್ತು ಭವಿಷ್ಯದಲ್ಲಿ ಎದುರಾಗುವ ಸವಾಲುಗಳನ್ನು ಹರೆಯದಲ್ಲಿ ಕಲಿಯಬೇಕಾಗುತ್ತದೆ. ಜೀವನದ ಮೌಲ್ಯಗಳು, ನೈತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳುವುದು ಒಂದು ಹರೆಯದ ಸವಾಲು.

ಹೀಗೆ ಹರೆಯದ ಸವಾಲುಗಳನ್ನು ಎದುರಿಸಲು ಆತ್ಮಸ್ಥೈರ್ಯ, ಸಕಾರಾತ್ಮಕ ಚಿಂತನೆ, ಪೋಷಕ, ಉಪಾಧ್ಯಾಯರ ಸಕಾರಾತ್ಮಕ ಮಾರ್ಗದರ್ಶನ ಮತ್ತು ಬಾಲ್ಯದಲ್ಲಿ ಪೋಷಕರು ಕಲಿಸಿದ ಜೀವನ ಕೌಶಲಗಳು ಪೂರಕ ಎಂಬುದನ್ನು ನೆನಪಿಡಬೇಕು.

ಈ ಕಾಲ ಹೇಗೆಲ್ಲ ಬದಲಾಗಿದೆಯಲ್ಲ!

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಕಾಲವನ್ನು ತಡೆಯೋರು ಯಾರೂ ಇಲ್ಲ..' ಎಂಬ ಹಾಡೇ ಇದೆ. ಹೌದು ಸ್ವಾಮಿ, ಕಾಲವನ್ನಷ್ಟೇ ಅಲ್ಲ, ಆ ಕಾಲಕ್ಕೆ ತಕ್ಕಂತೆ ಆಗುವ ಬದಲಾವಣೆಗಳನ್ನೂ ತಡೆಯೋರು ಯಾರೂ ಇಲ್ಲ ಎಂದರೂ ಸರಿಯೇ. 'ಬದಲಾವಣೆ ಜಗದ ನಿಯಮ' ಎಂಬೆಲ್ಲಾ ಮಾತುಗಳಿದ್ದರೂ ಕೆಲವರು ಮಾತ್ರ ಬದಲಾವಣೆಯಲ್ಲಿ ಬದನೇಕಾಯಿ ಅಂಥದ್ದೇನಿದೆ ಎಂದು ನಿರ್ಲಕ್ಷಿಸುತ್ತಾರೆ. ಏನೇ ಹೇಳಿ ಹೀಗೆ ಚೇಂಜ್ ಆಗುವುದೆಂದರೆ ಅಥವಾ ಯಾವುದಾದರೂ ಒಂದು ಬಗೆಯ ಚೇಂಜ್ ಕಾಣಿಸಿಕೊಳ್ಳುವುದೆಂದರೆ ಅದು 'ಚಿಲ್ಲರೆ' ವಿಷಯವಂತೂ ಅಲ್ಲವೇ ಅಲ್ಲ ಎಂದೇ ಹೇಳಬಹುದಾಗಿದೆ. ಆದ್ದರಿಂದ ಅವುಗಳಿಗೆ 'ಚಿಲ್' ಆಗಿ ಹೊಂದಿಕೊಳ್ಳುವವರು ಬಹುತೇಕರು. ನಮಗೆ ಬೇಕೋ ಬೇಡವೋ ಕೆಲವೊಂದು ಸಂಗತಿಗಳು ಕಾಲಕ್ಕೆ ತಕ್ಕಂತೆ ಬದಲಾಗುತ್ತಲೇ ಹೋಗುತ್ತವೆ. ಜನರ ಆಸಕ್ತಿ, ಆಯ್ಕೆ, ನಿಲುವು, ಮನೋಧೋರಣೆ ಹಾಗೂ ಜೀವನಕ್ರಮಗಳ ಮೇಲೆ ಈ ನಿಟ್ಟಿನ ಬದಲಾವಣೆಗಳು ತಮ್ಮದೇ ಆದ ಪರಿಣಾಮವನ್ನು ಉಂಟುಮಾಡಿವೆ ಎಂದು ಹೇಳಬಹುದಾಗಿದೆ. ನಾವೂ ಇಂಥ ಬದಲಾವಣೆಗೆ ಸಾಕ್ಷಿಯೋ, ಮೂಕ ಸಾಕ್ಷಿಯೋ ಆದವರೇ. ಹಾಗಂಥ ಇವುಗಳನ್ನು ಸಕಾರಾತ್ಮಕ ಬದಲಾವಣೆಯೋ, ನಕರಾತ್ಮಕ ಬದಲಾವಣೆಯೋ ಷರಾ ಬರೆಯುವುದು ಕಷ್ಟ. ಸುಮ್ಮನೆ ಒಮ್ಮೆ ಆಲೋಚಿಸಿದರೂ ಇಂಥ ಅಸಂಖ್ಯಾತ ಬದಲಾವಣೆಗಳನ್ನು ಪಟ್ಟಿ ಮಾಡಬಹುದು. ಆ ಪೈಕಿ ನಮ್ಮ ನಿಮ್ಮ ನಿತ್ಯ ಜೀವನಕ್ಕೆ ತೀರಾ ಹತ್ತಿರವೆನಿಸುವ ಕೆಲವು ಬದಲಾವಣೆಗಳನ್ನು ಈ ಮೂಲಕ ಗಮನಿಸೋಣವೇ?

- ಸ್ನಾನ ಎಂದಾಕ್ಷಣ ಮೊದಲಿಗೆ ನೆನಪಿಗೆ ಬರುವುದೇ ಸೋಪ್. ಸಾಬೂನು, ಸ್ನಾನ ಮಾಡುವವರ ಪಾಲಿಗೆ ಒಂಥರಾ ಬೂನ್(ವರ) ಇದ್ದಂತೆಯೇ ಸರಿ. ಹಾಗೆಯೇ ಆಪಾದಮಸ್ತಕ ಸಾಬೂನು ಹಚ್ಚಿಕೊಂಡು ಸ್ನಾನ ಮಾಡಲಾಗುತ್ತಿತ್ತು. ಸ್ನಾನದ ಕೋಣೆಯಲ್ಲಿ ಸಾಬೂನೇ ರಾಜನಂತೆ ಮೆರೆಯುತ್ತಿತ್ತು. ಈಗ ಅಲ್ಲಿ ಶ್ಯಾಂಪೂ, ಫೇಸ್‌ವಾಶ್, ವಿವಿಧ ಬಗೆಯ ಜೆಲ್, ಕಂಡೀಷನರ್ ಹೀಗೆ ಇನ್ನೂ ಏನೇನೋ ತುಂಬಿ ತುಳುಕುತ್ತವೆ. 'ದೇಹವೊಂದೇ ಆದರೆ ಹಚ್ಚುವ ಕ್ರೀಮ್/ಸೋಪ್‌ಗಳು ಹಲವು' ಎಂಬಂತಾಗಿದೆ. ಸ್ನಾನದ ಕೊಠಡಿಯೂ ಕನ್ಯೂಸಿಂಗ್ ಜಾಗವಾಗಿ ಮಾರ್ಪಾಡಾಗುವಲ್ಲಿ ಇದರ ಪಾತ್ರವೂ ಇದೆ. ಯಾವ ಕ್ರೀಮ್ ಬಳಸಲಿ, ಯಾವ ಸೋಪ್ ಹಚ್ಚಲಿ ಎಂದು ಹೊಸಬರಿಗೆ ಗೊಂದಲವಾಗದೇ ಇರಲಿಕ್ಕಿಲ್ಲ.
- ಹಿರಿಯರ ಕಾಲಿಗೆ ಬಿದ್ದು ಆಶೀರ್ವಾದ ಪಡೆದುಕೊಳ್ಳುವುದು ಕಾಲಾನುಕಾಲದಿಂದಲೂ ಪ್ರಚಲಿತದಲ್ಲಿರುವ ಒಂದು ಸಂಸ್ಕಾರಯುತ ಕ್ರಿಯೆ. ಅದೊಂಥರ ಅವರೆಡೆಗೆ ಭಯ, ಭಕ್ತಿ ಹಾಗೂ ಗೌರವವನ್ನು ತೋರಿಸುವ ಒಂದು ಕ್ರಮವಾಗಿತ್ತು. ಆದರೆ ಈಗ ಕಾಲ ಬದಲಾಗಿದೆ ಹಾಗಾಗಿ ಕಾಲಿಗೆ ಬೀಳುವುದೂ ಕಡಿಮೆಯಾಗಿದೆ. ಅಂದರೆ ಕಾಲಿಗೆ ಬೀಳುವ ಬದಲಿಗೆ ಹಿರಿಯರ ಜೊತೆಗೊಂದು ಸೆಲ್ಫಿ ತೆಗೆಸಿಕೊಂಡರೆ ಅದುವೇ ಈ ಕಾಲದವರು ಆಶೀರ್ವಾದ ಪಡೆದುಕೊಂಡಂತೆ! ಸೆಲ್ಫಿಗೆ ನಕ್ಕರೆ ಆಶೀರ್ವಾದ ಟ್ರಾನ್ಸ್‌ಫರ್ ಆದಂತೆಯೇ ಸರಿ.
- ಪರೀಕ್ಷಾ ಕೊಠಡಿಯಿಂದ ಹೊರಬರುವಾಗ ಬಹುತೇಕರ ಮನಸ್ಸಿನಲ್ಲಿ ಒಂದು ಬಗೆಯ ಚಡಪಡಿಕೆ ಇರುತ್ತದೆ. ಪ್ರಶ್ನೆಗಳು, ಬರೆದ ಉತ್ತರ, ಸರಿ ತಪ್ಪಿನ ಕುತೂಹಲ, ಸಿಗಬಹುದಾದ ಅಂಕಗಳು ಇನ್ನಿತ್ಯಾದಿ ಅಂಶಗಳು ಮನಸ್ಸಿನಲ್ಲಿ ಓಡುತ್ತಿರುವುದೇ ಆ ಕಸಿವಿಸಿಗೆ ಕಾರಣ. ಆದ್ದರಿಂದ ಪರೀಕ್ಷಾ ಹಾಲ್‌ನಿಂದ ಹೊರಬಂದವರೇ ಪ್ರಶ್ನೆಪತ್ರಿಕೆ, ಪುಸ್ತಕ, ನೋಟ್ಸ್ ಇತ್ಯಾದಿಗಳನ್ನು ತೆಗೆದು ತಾಳೆ ಹಾಕುವ ಧಾವಂತದಲ್ಲಿರುತ್ತಾರೆ. ಈಗಲೂ ಪರೀಕ್ಷಾ ಕೊಠಡಿಗಳಿಂದ ಹೊರ ಬರುವವರ ಎದೆಬಡಿತ ಹೆಚ್ಚಿರುತ್ತದೆ. ಅವರೂ ಬ್ಯಾಗ್‌ಗೆ ಕೈಹಾಕಿ ತಡಕಾಡಿ ಮೊಬೈಲ್‌ನ್ನು ಹೊರತೆಗೆದು ಒಂದೇ ಸಮನೇ ನೋಡಲಾರಂಭಿಸುತ್ತಾರೆ. ಎಷ್ಟು ಕಾಲ್ ಬಂದಿದೆ, ವಾಟ್ಸಾಪ್‌ಲ್ಲಿ ಯಾರೆಲ್ಲಾ ಮೆಸೇಜ್ ಮಾಡಿದ್ದಾರೆ, ಫೇಸ್‌ಬುಕ್ ನೋಟಿಫಿಕೇಷನ್ ಏನೇನು ಬಂದಿದೆ ಎಂದು ಹುಡುಕಲಾರಂಭಿಸುತ್ತಾರೆ.
- ಎಲ್ಲೇ ಹೋದರೂ ವೀಕ್ಷಣೆಯ ಅಥವಾ ನೋಡುವಿಕೆಯ ನೇತೃತ್ವವನ್ನು ಸಾಮಾನ್ಯವಾಗಿ ನಮ್ಮ ನೇತ್ರಗಳು ವಹಿಸಿಕೊಳ್ಳುತ್ತಿದ್ದವು. ಎಲ್ಲವೂ ಕಣ್ಣ ಕನ್ನಡಿಯಲ್ಲಿ ಪ್ರತಿಫಲನಗೊಂಡು, ಆ ಪೈಕಿ ಕೆಲವಷ್ಟೇ ಕ್ಯಾಮರಾ ಕಣ್ಣಲ್ಲಿ ಪ್ರತಿಬಿಂಬಿತವಾಗುತ್ತಿದ್ದವು. ಬದಲಾದ ಸನ್ನಿವೇಶದಲ್ಲಿ ಪ್ರತಿಯೊಂದು ಕ್ಯಾಮರಾದಲ್ಲಿ ಸೆರೆಯಾಗಿ ಎಲ್ಲೋ ಕೆಲವೊಂದಷ್ಟನ್ನು ಮಾತ್ರ ಕಣ್ಣಿನಿಂದ ವೀಕ್ಷಿಸುವಂತಾಗಿದೆ. ಏನೋ ಅದ್ಭುತವಾದುದನ್ನು ನೋಡುವಾಗ, ತಮ್ಮ ತಮ್ಮ ಚಿಕ್ಕ ಮಕ್ಕಳನ್ನು ಎತ್ತಿಹಿಡಿದು ತೋರಿಸುವ ಬದಲಿಗೆ ತಮ್ಮಲ್ಲಿರುವ ಮೊಬೈಲ್ ಕ್ಯಾಮೆರಾಗಳನ್ನು ಎತ್ತಿಹಿಡಿದು ರೆಕಾರ್ಡ್ ಮಾಡಿಕೊಳ್ಳುವಲ್ಲಿ ವ್ಯಸ್ತರಾಗುವವರೇ ಹೆಚ್ಚು. ವಿಪರ್ಯಾಸ ಏನೆಂದರೆ ಹಾಗೆ ರೆಕಾರ್ಡ್ ಆಗಿ ಸಂಗ್ರಹವಾದ ಬಹುಪಾಲು ಫೋಟೊ, ವೀಡಿಯೋಗಳನ್ನು ಹೆಚ್ಚಿನವರು ತಿರುಗಾ ನೋಡುವುದೇ ಇಲ್ಲ.
- ಸಣ್ಣ ಸಣ್ಣ ಗುಂಪುಗಳಲ್ಲಿ ಹರಟೆ ಹೊಡೆಯುವ ಅಭ್ಯಾಸ ಯಾವಾಗಿನಿಂದಲೂ ಇರುವಂಥದ್ದು. ಚಹಾದಂಗಡಿಯ ಮುಂದೆ, ಅರಳಿ ಕಟ್ಟೆಯ ಮೇಲೆ, ಇಂಥ ಗುಂಪುಗಳು ಸಾಮಾನ್ಯವಾಗಿ ಕಂಡುಬರುತ್ತವೆ ಈಗಲೂ ಹಾಗೆಯೇ ಗುಂಪುಗಳೇನೋ ಇವೆ. ಆದರೆ ಅವುಗಳ ಸ್ವರೂಪ ಮಾತ್ರ ಬದಲಾಗಿದೆ. ಆ ಬಗೆಯ ಗುಂಪುಗಳಿಗಿಂತಲೂ ಫೇಸ್‌ಬುಕ್, ವಾಟ್ಸಾಪ್‌ನ ಇ-ಗುಂಪುಗಳು ಅಂದರೆ ಗ್ರೂಪ್‌ಗಳೇ ಕಂಡುಬರುತ್ತವೆ. ಅಲ್ಲೂ ಅದೇ ವೈಖರಿಯ ಚರ್ಚೆಗಳು ನಡೆಯುತ್ತವೆ. ಈ ಗುಂಪು(ಗ್ರೂಪ್)ಗಳ ಪ್ರಭಾವ ಎಷ್ಟರ ಮಟ್ಟಿಗೆ ಹೆಚ್ಚಿದೆಯೆಂದರೆ ಎಲ್ಲರೂ ಒಂದಿಲ್ಲೊಂದು ಸಂದರ್ಭದಲ್ಲಿ 'ಗುಂಪಿನಲ್ಲಿ(ಗ್ರೂಪ್‌ನಲ್ಲಿ) ಗೋವಿಂದ ಆಗಿಯೇ ಇರುತ್ತಾರೆ'. ಊರಿಗೆ ಬಂದವರು ಈ ಬಗೆ ಬಗೆಯ ಗ್ರೂಪ್‌ಗಳಿಗೆ ಬರದೇ ಇರಲಾರರು.
- ಮನೆಗೆ ಬಂದ ಅತಿಥಿಗಳನ್ನು ಚಹಾ, ತಿಂಡಿ, ಪಾನೀಯ ನೀಡಿ ಉಪಚರಿಸುವ ಅತಿಥಿ ಸತ್ಕಾರ ಭಾವ ನಮ್ಮ ನೆತ್ತರಲ್ಲೇ ಇದೆ ಅಂತಾರೆ. ಅದೊಂಥರ ಬಂದವರನ್ನು ವಿಚಾರಿಸಿಕೊಳ್ಳುವ ರೀತಿಯೇ ಆಗಿದೆ. ಈಗಲೂ ವಿಚಾರಿಸಿಕೊಳ್ಳುವ ಕ್ರಮ ಇದೆ. ಆದರೆ ಈ ದಿನಗಳಲ್ಲಿ ಮೇಲೆ ತಿಳಿಸಿದವುಗಳ ಜೊತೆಗೆ ಅವರ ಮೊಬೈಲ್‌ಗೆ ಸೂಕ್ತ ಚಾರ್ಜರ್ ನೀಡುವುದು, ಚಾರ್ಜ್ ಮಾಡಿಕೊಳ್ಳಲು ಪಾಯಿಂಟ್ ಎಲ್ಲಿದೆ ಎಂದು ತೋರಿಸುವುದೂ ಸೇರಿದೆ. ಮನುಷ್ಯರು ರಿಚಾರ್ಜ್ ಆಗುವುದಕ್ಕಿಂತಲೂ ಮೊಬೈಲ್ ರಿಚಾರ್ಜ್ ಆಗುವುದೇ ಈಗಿನವರ ಆದ್ಯತೆಯಾಗಿದೆಯೆಂದರೆ ಅತಿಶಯವೇನಲ್ಲ.
- ಮನೆ ಹುಡುಕೋದು ತುಂಬಾ ಕಷ್ಟದ ಕೆಲ. ಹಾಗಾಗಿ ಸೂಕ್ತವಾದ ಮನೆಯನ್ನು ಆರಿಸಿಕೊಳ್ಳಲು ಮನೆಯ ಅಂದ-ಚೆಂದ, ಗಾಳಿ-ಬೆಳಕು, ರೂಮ್‌ಗಳ ಸಂಖ್ಯೆ, ನೀರಿನ ಲಭ್ಯತೆ ಇತ್ಯಾದಿಗಳನ್ನು ಪರಿಗಣಿಸಲಾಗುತ್ತಿತ್ತು. ಈಗಲೂ ಅದನ್ನೆಲ್ಲಾ ನೋಡುತ್ತಾರೆ. ಅವುಗಳ ಜೊತೆಗೆ ನೆಟ್‌ವರ್ಕ್ ಲಭ್ಯತೆಯ ಬಗ್ಗೆ ಮೊದಲು ತಿಳಿದುಕೊಳ್ಳುತ್ತಾರೆ. ಯಾವ ನೆಟ್‌ವರ್ಕ್ ಸಿಕ್ಕೀತು, ಎಷ್ಟು ವೇಗ ಇತ್ಯಾದಿಗಳನ್ನೂ ಪರಿಶೀಲಿಸಲಾಗುತ್ತದೆ. ನಗರಗಳಲ್ಲಿ ಈ ಸಾಧ್ಯತೆ ಸ್ವಲ್ಪ ಕಡಿಮೆಯಾದರೂ ಹಳ್ಳಿಗಳಲ್ಲಂತೂ ಇದು ಬಲುಮುಖ್ಯ! ನೆಟ್‌ವರ್ಕ್ ಇರುವ ಜಾಗದ ನೆಟ್‌ವರ್ತ್ ಎಲ್ಲಾ ರೀತಿಯಲ್ಲೂ ಹೆಚ್ಚೇ.
- ಜನರ ವರ್ತನೆ, ಮೂಡ್, ಗುಣಾವಗುಣಗಳ ಬಗ್ಗೆ ತಿಳಿದುಕೊಳ್ಳಲು ಅಕ್ಕಪಕ್ಕದವರು, ಸ್ನೇಹಿತರು, ಬಂಧುಗಳಲ್ಲಿ ವಿಚಾರಿಸಬೇಕಿತ್ತು. ಇಂದಿನ ಕಾಲಕ್ಕೆ ಅದೇನೂ ಅನಿವಾರ್ಯವಲ್ಲ. ಬೇರೆ ಆಯ್ಕೆಯಾಗಿ ಅವರು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಹಾಕಿಕೊಳ್ಳುವ ಸ್ಟೇಟಸ್, ಪೋಸ್ಟ್, ಶೇರ್ ಇತ್ಯಾದಿಗಳ ಆಧಾರದಲ್ಲಿ ಒಂದು ಮಟ್ಟಿಗೆ ಎಲ್ಲವನ್ನೂ ಊಹಿಸಲು ಸಾಧ್ಯವಿದೆ. ಹಾಗೆಯೇ ಹಿಂದಿನ ಕಾಲದಂತೆ ಅವರ ರೂಮು, ಪೆಟ್ಟಿಗೆ, ಬ್ಯಾಗುಗಳನ್ನು ಹುಡುಕುವ ಬದಲಿಗೆ ಈ ಖಾತೆಗಳಲ್ಲಿ ಸ್ವಲ್ಪ ಜಾಲಾಡಿದರೆ ಎಲ್ಲ ಮಾಹಿತಿಯೂ ಅನಾಯಾಸವಾಗಿ ದೊರಕುತ್ತದೆ. ಸೋಷಿಯಲ್ ಮೀಡಿಯಾ ಅಕೌಂಟ್ ಕೇವಲ ಅಕೌಂಟ್ ಅಲ್ಲ, ಅದು ಬದುಕಿನ ಎಲ್ಲಾ ಲೆಕ್ಕಾಚಾರಗಳನ್ನೂ ಹೀಗೆ ತನ್ನೊಳಗೆ ಅಡಗಿಸಿಕೊಂಡಿರುವ ಮೂಲಕ ಬದುಕಿನ ಅಕೌಂಟ್ ಆಗಿ ಬದಲಾಗಿದೆ.
- ಅಪ್ಪ – ಅಮ್ಮ ಕೆಲಸ ಮಾಡುವುದು, ಅವರ ಮಕ್ಕಳು ಸಣ್ಣ ಪುಟ್ಟ ಸಹಾಯ ಮಾಡುವುದು ಒಂದು ಚೆಂದನೆಯ ಆಪ್ತ ಪ್ರಕ್ರಿಯೆ. ಅದರಿಂದ ಅವರಿಗೆ ಕೆಲಸದ ಅನುಭವ, ಹಿಡಿತ ದೊರಕುತ್ತದೆ ಹಾಗೂ ತಂದೆ ತಾಯಿಯರ ಶ್ರಮವೂ ಅರಿವಾಗುತ್ತದೆ. ಈಗಲಾದರೆ ಹಾಗಲ್ಲ, ಜೊತೆಯಲ್ಲಿ ಕೆಲಸ ಮಾಡುವ ಬದಲಿಗೆ ಅದನ್ನು ವೀಡಿಯೋ ರೆಕಾರ್ಡ್ ಮಾಡುತ್ತಾ ಎಲ್ಲರಿಗೂ ಅಲ್ಲಿ ಆಗುವ ಕೆಲಸದ ಕಾಮೆಂಟ್ರಿ ಹೇಳಿ, ಕೆಲಸ ಮಾಡುತ್ತಿರುವ ತಂದೆ ತಾಯಂದಿರಿಂದಲೂ ಹಲೋ ಹೇಳಿಸಿ ಅದನ್ನೆಲ್ಲಾ ಸಾಮಾಜಿಕ ಜಾಲತಾಣಗಳಿಗೇರಿಸಿ ಲೈಕುಗಳ ಲೆಕ್ಕ ಹಾಕುವುದರಲ್ಲಿ ಮುಳುಗಿಹೋಗುತ್ತಾರೆ! ಅಷ್ಟಕ್ಕೆ ಸೀಮಿತವಾಗಿಲ್ಲ, ಮೊನಿಟೈಸೇಷನ್ ಆದರೆ, ಅಲ್ಲೂ ದುಡಿಮೆಯ ಅವಕಾಶ ಇರುವುದರಿಂದ ಅದಕ್ಕೂ ಹೆತ್ತವರು ಬೆಂಬಲ ನೀಡುವುದನ್ನು ಕಾಣಬಹುದು.

ಓವರ್‌ಡೋಸ್: ಏನೇ ಬದಲಾದರೂ ಗೋಡೆ ಮೇಲೆ ಉಗುಳುವುದು ಮಾತ್ರ ಬದಲಾಗಲೇ ಇಲ್ಲ. ಆಗೆಲ್ಲಾ ಸಿಕ್ಕ ಸಿಕ್ಕ ಕಟ್ಟಡದ ಗೋಡೆಗಳ ಮೇಲೆ ಉಗುಳುತ್ತಿದ್ದರು ಆದರೆ ಈಗ ಅದಕ್ಕಿಂತಲೂ ಹೆಚ್ಚಾಗಿ ಕಂಡ ಕಂಡ ಫೇಸ್‌ಬುಕ್ ಗೋಡೆ(ವಾಲ್) ಮೇಲೆ ಉಗುಳುತ್ತಾರೆ.

ವಿದ್ಯುತ್ ಸ್ಥಾವರಗಳ ನಾಶಗೊಳಿಸುವುದಾಗಿ ಟ್ರಂಪ್ ಬೆದರಿಕೆ | ಅಮೆರಿಕ ಅಧ್ಯಕ್ಷರಿಗೆ ಕ್ಯಾರೇ ಎನ್ನದ ಇರಾನ್
ವೈರಿ ದೇಶಗಳ ಹೊರತುಪಡಿಸಿ ಉಳಿದೆಲ್ಲಾ ರಾಷ್ಟ್ರಗಳ ನೌಕೆಗಳಿಗೆ ಹಾರ್ಮುಜ್ ಜಲಸಂಧಿ ತೆರೆದ ಇರಾನ್

ಶತ್ರುಗಳಿಗಿಲ್ಲ ಹಾರ್ಮುಜ್ ಪ್ರವೇಶ

ಟೆಹ್ರಾನ್: ತನ್ನ ಶತ್ರುಗಳು ಮತ್ತು ಅವರೊಂದಿಗೆ ನಂಟಿರುವ ರಾಷ್ಟ್ರಗಳಿಗೆ ಸೇರಿದ ಹಡಗುಗಳನ್ನು ಹೊರತುಪಡಿಸಿ ಉಳಿದೆಲ್ಲಾ ತೈಲ ಹಡಗುಗಳಿಗೆ ಹಾರ್ಮುಜ್ ಜಲಸಂಧಿಯಲ್ಲಿ ಸಂಚರಿಸಲು ಮುಕ್ತ ಅವಕಾಶ ನೀಡುವುದಾಗಿ ಇರಾನ್ ಪ್ರತಿನಿಧಿ ಅಲಿ ಮೌಸಾವಿ ಭಾನುವಾರ ಘೋಷಿಸಿದೆ.

ಮುಂದಿನ 48 ಗಂಟೆಗಳೊಳಗೆ ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣ ತೆರೆಯದಿದ್ದರೆ ಇರಾನ್ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ನಡೆಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ನೀಡಿದ ಬಳಿಕ ಇರಾನ್ ತನ್ನ ನಿಲುವು ಸಡಿಲಗೊಳಿಸಿದೆ. ಆದರೆ ಶತ್ರು ರಾಷ್ಟ್ರಗಳು, ಅವುಗಳೊಂದಿಗೆ ನಂಟಿರುವ ರಾಷ್ಟ್ರಗಳ ಹಡಗುಗಳಿಗೆ ಹಾರ್ಮುಜ್ ಜಲಸಂಧಿಯನ್ನು ದಾಟಲು ಅವಕಾಶ ನೀಡುವುದಿಲ್ಲ ಎಂದು ಇರಾನ್ ಪ್ರತಿನಿಧಿ ತಿಳಿಸಿದ್ದಾರೆ.

ರಾಜತಾಂತ್ರಿಕ ಮಾತುಕತೆಗಳು ಇರಾನ್‌ಗೆ ಆದ್ಯತೆಯಾಗಿವೆ. ಆದರೆ ದಾಳಿಗಳ ಸಂಪೂರ್ಣ ನಿಲ್ಲಿಸುವುದು, ಪರಸ್ಪರ ನಂಬಿಕೆ ಮತ್ತು ವಿಶ್ವಾಸ ಇನ್ನಷ್ಟು ಮುಖ್ಯ ಎಂದು ಮೌಸವಿ ಹೇಳಿದ್ದಾರೆ.

ಶತ್ರುಗಳಿಗಿಲ್ಲ ಹಡಗು ಸಂಚಾರಕ್ಕೆ ಅವಕಾಶ: ಇರಾನ್ ಶತ್ರುಗಳೆಂದರೆ, ಇಸ್ರೇಲ್ ಮತ್ತು ಅಮೆರಿಕ. ಅಂದರೆ ಇಸ್ರೇಲ್, ಅಮೆರಿಕ ಸಹಿತ ಅವುಗಳೊಂದಿಗೆ ನಿಕಟ ಸಂಪರ್ಕದಲ್ಲಿರುವ ರಾಷ್ಟ್ರಗಳ ಹಡಗುಗಳಿಗೆ ಅವಕಾಶ ನೀಡುವುದಿಲ್ಲ ಎಂದು ಇರಾನ್ ಹೇಳಿದೆ.


ಇರಾನ್ ವಕ್ತಾರ ಹೇಳಿಕೆಯು, ಟ್ರಂಪ್ ಬೆದರಿಕೆ ಹಾಕಿದ ಕೆಲವೇ ಗಂಟೆಗಳ ಬಳಿಕ ಬಂದಿದೆ. ಅಂತಾರಾಷ್ಟ್ರೀಯ ಸಮುದ್ರಯಾನ ಸಂಘಟನೆಯ ಇರಾನ್ ಪ್ರತಿನಿಧಿ ಅಲಿ ಮೌಸವಿ ಭಾನುವಾರ ಮಾತನಾಡಿದ್ದು, ಇರಾನ್‌ನೊಂದಿಗೆ ಭದ್ರತೆ ಮತ್ತು ಸುರಕ್ಷತಾ ವ್ಯವಸ್ಥೆ ಖಚಿತಪಡಿಸುವ ಮೂಲಕ ಕಿರಿದಾದ ಜಲಮಾರ್ಗದಲ್ಲಿ ಸಂಚರಿಸಲು ಅವಕಾಶ ನೀಡಲಾಗುವುದು ಎಂದು ಇರಾನ್ ಹೇಳಿದೆ.

ಈಗಿನ ಸ್ಥಿತಿಗೆ ಇಸ್ರೇಲ್, ಅಮೆರಿಕ ಕಾರಣ: ಗಲ್ಫ್‌ನಲ್ಲಿ ಸಮುದ್ರ ಸುರಕ್ಷತೆಯನ್ನು ಸುಧಾರಿಸಲು ಮತ್ತು ನಾವಿಕರನ್ನು ರಕ್ಷಿಸಲು ವಿಶ್ವಸಂಸ್ಥೆಯೊಂದಿಗೆ ಸಹಕರಿಸಲು ಇರಾನ್ ಸಿದ್ಧವಾಗಿದೆ. ಹಾರ್ಮುಜ್‌ನ ಈಗಿನ ಪರಿಸ್ಥಿತಿಗೆ ಇಸ್ರೇಲ್ ಮತ್ತು ಅಮೆರಿಕ ನಡೆಸಿದ ದಾಳಿಗಳೇ ಮೂಲ ಕಾರಣವೆಂದು ಮೌಸವಿ ವಾದಿಸಿದ್ದಾರೆ.

ಶತ್ರುಗಳ ಮಿತ್ರರಿಗೆ 1 ಲೀ. ತೈಲ ಕೊಡಲ್ಲ: ಫೆ.28ರಂದು ಮಹತ್ವದ ಇಂಧನ ಪೂರೈಕೆ ಮಾರ್ಗವನ್ನು ಇರಾನ್ ಮುಚ್ಚಿತ್ತು. ವಿಶ್ವದ ಸುಮಾರು ಐದನೇ ಒಂದು ಭಾಗ (ಶೇ.20) ತೈಲ ಮತ್ತು ಎಲ್‌ಎನ್‌ಜಿ ಈ ಮಾರ್ಗದ ಮೂಲಕ ಸಾಗುತ್ತದೆ. ಒಂದು ಲೀ. ತೈಲವನ್ನೂ ಅಮೆರಿಕ, ಇಸ್ರೇಲ್ ಮತ್ತು ಅವುಗಳ ಮಿತ್ರರಾಷ್ಟ್ರಗಳಿಗೆ ಕೊಡುವುದಿಲ್ಲ ಎಂದು ಇರಾನ್ ಹೇಳಿತ್ತು.

ಇಂಧನ ವ್ಯತ್ಯಯ ತಡೆಗಟ್ಟಿದ ಇರಾನ್?: ಮಧ್ಯಪ್ರಾಚ್ಯ ಯುದ್ಧದಿಂದ ಉಂಟಾದ ಜಾಗತಿಕ ಮಟ್ಟದ ಇಂಧನ ವ್ಯತ್ಯಯ ಬಹುಶಃ ಕಡಿಮೆ ಆಗಬಹುದು. ಇರಾನ್ ನಿರ್ಧಾರದಿಂದ ಹಲವು ರಾಷ್ಟ್ರಗಳು ನಿಟ್ಟುಸಿರು ಬಿಡುವಂತಾಗಿದೆ.

ನ್ಯಾಟೋಗಿಲ್ಲ ಆಸಕ್ತಿ: ಹಾರ್ಮುಜ್ ಜಲಸಂಧಿಯಲ್ಲಿ ಹಡಗುಗಳಿಗೆ ರಕ್ಷಣೆ ಒದಗಿಸಲು ಅಮೆರಿಕಾ ನೌಕಾಪಡೆ ಒಕ್ಕೂಟವನ್ನು ರಚಿಸಲು ಪ್ರಯತ್ನಿಸಿದೆ. ಆದರೆ ಅಧ್ಯಕ್ಷ ಟ್ರಂಪ್ ಕರೆಗೆ ಯಾವುದೇ ನ್ಯಾಟೋ ಮಿತ್ರರಾಷ್ಟ್ರಗಳು ಬೆಂಬಲ ನೀಡಿಲ್ಲ.



ಟ್ರಂಪ್ ಬೆದರಿಕೆ

ಮುಂದಿನ 48 ಗಂಟೆಗಳೊಳಗೆ ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣ ತೆರೆಯದಿದ್ದರೆ, ಇರಾನ್‌ನ ವಿದ್ಯುತ್ ಸ್ಥಾವರಗಳನ್ನು ನಾಶ ಮಾಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶನಿವಾರ ರಾತ್ರಿ ಬೆದರಿಕೆ ಹಾಕಿದ್ದರು. ಇರಾನ್‌ನ ಹಲವು ವಿದ್ಯುತ್ ಸ್ಥಾವರಗಳ ಮೇಲೆ ಅಮೆರಿಕ ದಾಳಿ ನಡೆಸಲಿದ್ದು, ಇರಾನ್‌ನ ಅತಿ ದೊಡ್ಡ ವಿದ್ಯುತ್ ಸ್ಥಾವರವನ್ನು ನಾಶ ಮಾಡುವ ಮೂಲಕ ಆರಂಭಿಸಲಿದ್ದೇವೆ ಎಂದು ಟ್ರಂಪ್ ಟ್ರುತ್ ಸೋಶಿಯಲ್‌ನಲ್ಲಿ ಬರೆದಿದ್ದಾರೆ.

ಇಸ್ರೇಲ್ ಮೇಲೆ ಇರಾನ್ ದಾಳಿ: 180 ಜನಕ್ಕೆ ಗಾಯ

ಜೆರುಸಲೇಂ: ಇರಾನ್ ಶನಿವಾರ ನಡೆಸಿದ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿಗಳು ಇಸ್ರೇಲ್‌ನ ದಕ್ಷಿಣದ ನಗರಗಳಾದ ಡಿಮೋನಾ ಮತ್ತು ಆರಾದ್ ಮೇಲೆ ಅಪ್ಪಳಿಸಿದ್ದು, ಕನಿಷ್ಠ 180 ಜನರು ಗಾಯಗೊಂಡಿದ್ದಾರೆ. ಇದರಿಂದ ಕಳೆದ ನಾಲ್ಕು ವಾರಗಳಿಂದ ನಡೆಯುತ್ತಿರುವ ಸಂಘರ್ಷ ಮತ್ತಷ್ಟು ಉಲ್ಬಣಿಸಿದೆ. ಇಸ್ರೇಲ್ ಆರೋಗ್ಯ ಸಚಿವಾಲಯದ ಪ್ರಕಾರ, ಆರಾದ್‌ನಲ್ಲಿ 116 ಮತ್ತು ಡಿಮೋನಾದಲ್ಲಿ 64 ಜನರು ಗಾಯಗೊಂಡಿದ್ದು, ಇವರಲ್ಲಿ 10 ವರ್ಷದ ಬಾಲಕನೂ ಸೇರಿದ್ದಾನೆ. ವಸತಿ ಕಟ್ಟಡಗಳು ನಾಶವಾಗಿದ್ದು, ಹಲವಾರು ಕಡೆ ಬೆಂಕಿ ಕಾಣಿಸಿಕೊಂಡಿದೆ. ವಾಯು ರಕ್ಷಣಾ ವ್ಯವಸ್ಥೆಗಳು ಕ್ಷಿಪಣಿಗಳನ್ನು ತಡೆಯುವಲ್ಲಿ ಅವು ವಿಫಲವಾಗಿವೆ, ಎಂದು ಇಸ್ರೇಲ್ ಮಿಲಿಟರಿ ಅಧಿಕಾರಿಗಳು ತಿಳಿಸಿದ್ದಾರೆ.



ವಿಕಿರಣ ಸೋರಿಕೆ ಆಗಿಲ್ಲ

ನಟಾಂಜ್ ಪರಮಾಣು ಸಂಕೀರ್ಣದ ಮೇಲೆ ನಡೆದ ದಾಳಿಗೆ ಪ್ರತೀಕಾರವಾಗಿ ಈ ದಾಳಿ ನಡೆಸಲಾಗಿದೆ. ಡಿಮೋನಾದಲ್ಲಿ ಇಸ್ರೇಲ್‌ನ ಪ್ರಮುಖ ಪರಮಾಣು ಸಂಶೋಧನಾ ಕೇಂದ್ರವಿದ್ದರೂ, ಅಲ್ಲಿ ಯಾವುದೇ ಹಾನಿ ಅಥವಾ ವಿಕಿರಣ ಸೋರಿಕೆ ಪತ್ತೆಯಾಗಿಲ್ಲ ಎಂದು ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ (ಐಎಇಎ) ಖಚಿತಪಡಿಸಿದೆ.

10 ಹಿಜ್ಬುಲ್ಲಾ ಉಗ್ರರು ಬಲಿ

ದಕ್ಷಿಣ ಲೆಬನಾನ್‌ನ ಹಲವು ಹಿಜ್ಬುಲ್ಲಾ ಅಡಗುದಾಣಗಳ ಮೇಲೆ ದಾಳಿ ನಡೆಸಿ, 10ಕ್ಕೂ ಹೆಚ್ಚು ಭಯೋತ್ಪಾದಕರನ್ನು ಹೊಡೆದುರುಳಿಸಿದ್ದೇವೆ. ದೊಡ್ಡ ಪ್ರಮಾಣದ ಶಸ್ತ್ರಾಗಾರಗಳನ್ನು ಪತ್ತೆಹಚ್ಚಿರುವುದಾಗಿ ಇಸ್ರೇಲ್ ಸೇನೆ (ಐಡಿಎಫ್) ಭಾನುವಾರ ಘೋಷಿಸಿದೆ. ದಾಳಿ ನಡೆಸಿದ ಅಡಗುದಾಣಗಳಲ್ಲಿ ದಕ್ಷಿಣ ಲೆಬನಾನ್‌ನಲ್ಲಿರುವ ಹಿಜ್ಬುಲ್ಲಾ ಸಭಾ ಕೇಂದ್ರವೂ ಸೇರಿದ್ದು, ಪ್ರದೇಶದಿಂದ ರಾಕೆಟ್‌ಗಳ ಸಹಿತ ಹಲವು ಶಸ್ತ್ರಾಸ್ತ್ರಗಳನ್ನು ಇಸ್ರೇಲ್ ಸೇನೆ ವಶಪಡಿಸಿಕೊಂಡಿದೆ. ಈ ಶಸ್ತ್ರಗಳನ್ನು ಐಡಿಎಫ್ ಸೈನಿಕರು ಮತ್ತು ಇಸ್ರೇಲ್ ಸೇನೆಯ ವಿರುದ್ಧ ಭಯೋತ್ಪಾದನಾ ದಾಳಿಗಳನ್ನು ನಡೆಸಲು ಬಳಸಲಾಗುತ್ತಿತ್ತು ಎಂದು ಐಡಿಎಫ್ ತಿಳಿಸಿದೆ. ಶನಿವಾರ ರಾತ್ರಿ, 9 ಹಿಜ್ಬುಲ್ಲಾ ಉಗ್ರರನ್ನು ಐಡಿಎಫ್ ಹೊಡೆದುರುಳಿಸಿತ್ತು.

ಅಮೆರಿಕದ ಎಫ್-15 ಹೊಡೆದುರುಳಿಸಿದ ಇರಾನ್

ಟೆಹ್ರಾನ್: ಅಮೆರಿಕ ಮೇಲೆ ಇನ್ನಿಲ್ಲದಂತೆ ಮುಗಿಬಿದ್ದಿರುವ ಇರಾನ್ ಇದೀಗ ಅಮೆರಿಕದ ಮತ್ತೊಂದು ಎಫ್-15 ಯುದ್ಧ ವಿಮಾನವನ್ನು ಹೊಡೆದುರುಳಿಸಿದ್ದಾಗಿ ಘೋಷಿಸಿದೆ. ಇರಾನ್ ಸೇನೆಯು ಭಾನುವಾರ ದೇಶದ ದಕ್ಷಿಣ ಕರಾವಳಿಯಲ್ಲಿ ಮತ್ತು ಹಾರ್ಮುಜ್ ದ್ವೀಪದ ಬಳಿ ತನ್ನ ವಾಯು ರಕ್ಷಣಾ ವ್ಯವಸ್ಥೆಯನ್ನು ಬಳಸಿಕೊಂಡು ಶತ್ರು ರಾಷ್ಟ್ರ ಅಮೆರಿಕದ ಎಫ್-15 ಅನ್ನು ಹೊಡೆದುರುಳಿಸಿರುವುದಾಗಿ ಹೇಳಿಕೊಂಡಿದೆ. ಇತ್ತೀಚಿನ ದಾಳಿ ದೃಢಪಟ್ಟರೆ, ಅಮೆರಿಕದ ವಿರುದ್ಧ ನಡೆಯುತ್ತಿರುವ ಸಂಘರ್ಷದಲ್ಲಿ ಇರಾನ್ ಕನಿಷ್ಠ ಅರ್ಧ ಡಜನ್ ಅಮೆರಿಕನ್ ಜೆಟ್‌ಗಳನ್ನು ಹೊಡೆದುರುಳಿಸಿದಂತಾಗಿದೆ ಎನ್ನಲಾಗಿದೆ. ಸುಧಾರಿತ ಎಫ್ -15 ಫೈಟರ್ ಜೆಟ್ ಅನ್ನು ಇರಾನಿನ ವಾಯು ರಕ್ಷಣಾ ಪಡೆಯ ನೆಲದಿಂದ ಗಾಳಿಗೆ ವ್ಯವಸ್ಥೆಗಳನ್ನು ಬಳಸಿಕೊಂಡು ಹೊಡೆದುರುಳಿಸಲಾಗಿದೆ ಎಂದು ಇರಾನ್‌ನ ಫಾರ್ಸ್ ನ್ಯೂಸ್ ವರದಿ ಮಾಡಿದೆ. ಇರಾನ್ ನ ವಾಯು ರಕ್ಷಣಾ ವ್ಯವಸ್ಥೆಯು ಎಫ್ -15 ಫೈಟರ್ ಜೆಟ್ ಅನ್ನು ಯಶಸ್ವಿಯಾಗಿ ಲಾಕ್ ಮಾಡಿರುವುದನ್ನು ತೋರಿಸುವ ವೀಡಿಯೊವನ್ನು ಇರಾನಿನ ಮಾಧ್ಯಮವು ಅಪ್‌ಲೋಡ್ ಮಾಡಿದೆ.

ಟ್ರಂಪ್ ಬೆದರಿಕೆಗೆ ಇರಾನ್ ಪ್ರತ್ಯುತ್ತರ

ಹಾರ್ಮುಜ್ ಜಲಸಂಧಿಯಲ್ಲಿ ಸಂಚರಿಸಲು ಮುಕ್ತ ಅವಕಾಶ ನೀಡದಿದ್ದರೆ ಇರಾನ್ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ಮಾಡುವುದಾಗಿ ಅಮೆರಿಕದ ಬೆದರಿಕೆಗೆ ಇರಾನ್ ಪ್ರತ್ಯುತ್ತರ ನೀಡಿದ್ದು, ಒಂದು ವೇಳೆ ವಾಷಿಂಗ್ಟನ್ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ನಡೆಸಿದರೆ ಜಲಸಂಧಿಯನ್ನು ಸಂಪೂರ್ಣವಾಗಿ ಮುಚ್ಚುತ್ತೇವೆಂದು ಹೇಳಿದೆ.

ಇರಾನ್ ಕ್ಷಿಪಣಿ ದಾಳಿಯಿಂದ ಜಗತ್ತಿಗೆ ಅಪಾಯ: ಇಸ್ರೇಲ್



ಜೆರುಸಲೇಂ: ಇತ್ತೀಚೆಗೆ ಇಸ್ರೇಲ್ ಮತ್ತು ಡಿಯಾಗೋ ಗಾರ್ಸಿಯಾ ಮೇಲೆ ಇರಾನ್ ನಡೆಸಿದ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿಗಳು, ಟೆಹ್ರಾನ್ ಈಗ ಇಡೀ ಯುರೋಪ್ ಖಂಡಕ್ಕೆ ಅಪಾಯವನ್ನುಂಟು ಮಾಡುವ ಸಾಮರ್ಥ್ಯ ಹೊಂದಿದೆ ಎಂಬುದನ್ನು ಸಾಬೀತುಪಡಿಸಿವೆ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಭಾನುವಾರ ಘೋಷಿಸಿದ್ದಾರೆ.

ಶನಿವಾರ ನಡೆದ ಕ್ಷಿಪಣಿ ದಾಳಿಯಲ್ಲಿ 115 ಜನರು ಗಾಯಗೊಂಡಿದ್ದ ದಕ್ಷಿಣ ಇಸ್ರೇಲ್‌ನ ಆರಾದ್ ನಗರಕ್ಕೆ ನೆತನ್ಯಾಹು ಭೇಟಿ ನೀಡಿದ್ದರು. ಇರಾನ್ ಪಡೆಗಳು 4,000 ಕಿಮೀ ದೂರದಲ್ಲಿರುವ ಡಿಯಾಗೋ ಗಾರ್ಸಿಯಾದ ಬ್ರಿಟಿಷ್-ಅಮೆರಿಕನ್ ವಾಯುನೆಲೆ ಮತ್ತು ಜೆರುಸಲೇಂನ ಪವಿತ್ರ ಸ್ಥಳಗಳ ಸಮೀಪವಿರುವ ಪ್ರದೇಶಗಳನ್ನು ಗುರಿಯಾಗಿಸಿಕೊಂಡಿದ್ದವು ಎಂದು ವರದಿಯಾಗಿದೆ.

ಇರಾನ್ ಆಡಳಿತವನ್ನು ಎದುರಿಸಲು ಇಸ್ರೇಲ್ ಮತ್ತು ಅಮೆರಿಕದ ನಡುವಿನ ಸಹಯೋಗ ಅತ್ಯಗತ್ಯ. ಟೆಹ್ರಾನ್‌ನ ಪರಮಾಣು ಮತ್ತು ಕ್ಷಿಪಣಿ ಉತ್ಪಾದನಾ ಸಾಮರ್ಥ್ಯಗಳನ್ನು ನಾಶಪಡಿಸುವತ್ತ ಪ್ರಸ್ತುತ ಮಿಲಿಟರಿ ಕಾರ್ಯಾಚರಣೆಗಳನ್ನು ಕೇಂದ್ರೀಕರಿಸಲಾಗಿದೆ. ಈ ಜಾಗತಿಕ ಬೆದರಿಕೆಯನ್ನು ಹತ್ತಿಕ್ಕಲು ಮತ್ತು ಇರಾನ್‌ನ ಪ್ರಸ್ತುತ ಆಡಳಿತವನ್ನು ಉರುಳಿಸಲು ಅಂತಾರಾಷ್ಟ್ರೀಯ ಸಮುದಾಯ ಕೈಜೋಡಿಸಬೇಕೆಂದು ಅವರು ಕರೆ ನೀಡಿದರು.

ಭಾರತದ ಯೂರಿಯಾ ಉತ್ಪಾದನೆಗೆ ಹೊಡೆತ

ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯಿಂದಾಗಿ ಹಾರ್ಮುಜ್ ಜಲಸಂಧಿಯ ಮೂಲಕ ನಡೆಯುವ ದ್ರವೀಕೃತ ನೈಸರ್ಗಿಕ ಅನಿಲ(ಎಲ್‌ಎನ್‌ಜಿ) ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಭಾರತದ ಯೂರಿಯಾ ಸ್ಥಾವರಗಳು ಅರ್ಧದಷ್ಟು ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಪೂರೈಕೆದಾರರು ಒಪ್ಪಂದದ ಪ್ರಮಾಣವನ್ನು ತಲುಪಿಸಲು ವಿಫಲವಾದ ಕಾರಣ ಪೆಟ್ರೋನೆಟ್ ಎಲ್‌ಎನ್‌ಜಿ ಫೋರ್ಸ್ ಮೆಜ್ಯೂರ್ ಘೋಷಿಸಿದೆ. ಈ ಬೆಳವಣಿಗೆಯಿಂದಾಗಿ ಗೇಲ್ (ಜಿಎಐಎಲ್) ಮತ್ತು ಐಒಸಿನಂತಹ ಸರ್ಕಾರಿ ವಿತರಕರು ದೇಶೀಯ ರಸಗೊಬ್ಬರ ಘಟಕಗಳಿಗೆ ಅನಿಲ ಪೂರೈಕೆಯನ್ನು ಸುಮಾರು 40 ಪ್ರತಿಶತದಷ್ಟು ಕಡಿತಗೊಳಿಸಲು ಸೂಚಿಸಲಾಗಿದೆ. ಉತ್ಪಾದನೆ ಅರ್ಧದಷ್ಟು ಕುಸಿದಿದೆ, ಅಲ್ಲದೆ ಉಷ್ಣತೆಯ ಅಭಾವದಿಂದ ಈ ಘಟಕಗಳಲ್ಲಿನ ಇಂಧನ ಬಳಕೆ 40 ಪ್ರತಿಶತದಷ್ಟು ಹೆಚ್ಚಿರುವುದು ಸಮಸ್ಯೆಗೆ ಕಾರಣವಾಗಿದೆ ಎಂದು ಉದ್ಯಮದ ಮೂಲಗಳು ತಿಳಿಸಿವೆ.



ಹಠಾತ್ ಲೋಡ್ ಬದಲಾವಣೆ ಉಪಕರಣಗಳ ಸುರಕ್ಷತೆಗೆ ಅಪಾಯವನ್ನುಂಟುಮಾಡುತ್ತಿವೆ. ಗೇಲ್ ಪರಿಚಯಿಸಿದ ಹೊಸ ಬೆಲೆ ಮಾದರಿಗಳು ಆರ್ಥಿಕ ಅನಿಶ್ಚಿತತೆ ಹೆಚ್ಚಿಸಿದ್ದು, ಮುಂಬರುವ ಖಾರಿಫ್ ಬಿತ್ತನೆ ಹಂಗಾಮಿನ ಮೇಲೆ ಇದು ಪರಿಣಾಮ ಬೀರಬಹುದು ಎಂದು ವಿಶ್ಲೇಷಕರು ಎಚ್ಚರಿಸಿದ್ದಾರೆ.

ಕಿರುಸುದ್ದಿ

ವಿಮಾನಯಾನ ದರ ಮಿತಿ ತೆರವುಗೊಳಿಸಿದ ಸರ್ಕಾರ

ಹೊಸದಿಲ್ಲಿ: ದೇಶೀಯ ವಿಮಾನಯಾನ ಟಿಕೆಟ್ ದರಗಳ ಮೇಲಿನ ತಾತ್ಕಾಲಿಕ ಮಿತಿಯನ್ನು ತೆಗೆದುಹಾಕಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಮಾ.23ರಿಂದ ಈ ವಿಮಾನಯಾನ ದರ ಮಿತಿಯನ್ನು ತೆಗೆದುಹಾಕುವುದಾಗಿ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯವು ಆದೇಶ ಹೊರಡಿಸಿದೆ. ಸಾಮಾನ್ಯವಾಗಿ ವಿಮಾನ ಹಾರಾಟ ವ್ಯತ್ಯಯದ ವೇಳೆ ಟಿಕೆಟ್ ದರ ಮಿತಿಮೀರಿ ಹೆಚ್ಚಾಗುವ ವೇಳೆ ಗ್ರಾಹಕರ ಕಾಳಜಿಯಿಂದ ಸರ್ಕಾರ ತಾತ್ಕಾಲಿಕ ಮಿತಿ ಹೇರುತ್ತದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ದೇಶದೆಲ್ಲೆಡೆ ಉಂಟಾಗಿದ್ದ ಇಂಡಿಗೋ ವಿಮಾನಯಾನ ಹಾರಾಟ ವ್ಯತ್ಯಯದ ವೇಳೆ ಗ್ರಾಹಕರ ರಕ್ಷಣೆಗಾಗಿ ಕೇಂದ್ರ ಸರ್ಕಾರ ತಾತ್ಕಾಲಿಕ ಮಿತಿ ಹೇರಿತ್ತು. ಹಾರಾಟ ವ್ಯತ್ಯಯ ಮತ್ತು ಟಿಕೆಟ್‌ಗಾಗಿ ಬೇಡಿಕೆ ಹೆಚ್ಚಾದಾಗ ವಿಮಾನಯಾನ ದರ ಹೆಚ್ಚಾಗುತ್ತದೆ. ಈ ವೇಳೆ ಸರ್ಕಾರ ಹೇರಿದ ಮಿತಿಗಿಂತ ಹೆಚ್ಚು ಹಣವನ್ನು ವಿಮಾನಯಾನ ಸಂಸ್ಥೆಗಳು ಪ್ರಯಾಣಿಕರಿಂದ ವಸೂಲಿ ಮಾಡುವಂತಿಲ್ಲ. ಮಿತಿ ತೆರವುಗೊಳಿಸಿದ್ದರಿಂದ, ವಿಮಾನಯಾನ ಸಂಸ್ಥೆಗಳು ಬೇಡಿಕೆಗೆ ಅನುಗುಣವಾಗಿ ಟಿಕೆಟ್ ದರ ಹೆಚ್ಚಿಸುವ ಸಾಧ್ಯತೆಯಿದೆ.

ಇಂಧನ ಪೂರೈಕೆ ಕುರಿತು ಪರಿಶೀಲನೆ



ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿ ಉಲ್ಬಣಗೊಳ್ಳುತ್ತಿರುವ ಸಂಘರ್ಷದ ಹಿನ್ನೆಲೆಯಲ್ಲಿ ಕಚ್ಚಾ ತೈಲ, ಅನಿಲ, ವಿದ್ಯುತ್ ಮತ್ತು ರಸಗೊಬ್ಬರ ವಲಯಗಳ ಸ್ಥಿತಿಗತಿಗಳ ಕುರಿತು ಪ್ರಧಾನಿ ನರೇಂದ್ರ ಮೋದಿಯವರು ಭಾನುವಾರ ಹಿರಿಯ ಸಚಿವರೊಂದಿಗೆ ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಸಿದರು.

ದೇಶಾದ್ಯಂತ ಅಗತ್ಯ ವಸ್ತುಗಳ ಅಡೆತಡೆಯಿಲ್ಲದ ಪೂರೈಕೆ, ಸ್ಥಿರ ಲಾಜಿಸ್ಟಿಕ್ ಮತ್ತು ಸಮರ್ಥ ವಿತರಣಾ ಜಾಲವನ್ನು ಖಚಿತಪಡಿಸಿಕೊಳ್ಳುವತ್ತ ಗಮನ ಹರಿಸುವಂತೆ ಸಭೆಯಲ್ಲಿ ಪ್ರಧಾನಿ ಸೂಚಿಸಿದರು ಎನ್ನಲಾಗಿದೆ. ಫೆ.28ರಿಂದ ಪ್ರಾದೇಶಿಕ ಸಂಘರ್ಷದಿಂದ ಪ್ರಾರಂಭವಾದ ಯುದ್ಧದಿಂದ ಉಂಟಾಗಿರುವ ಸಮಸ್ಯೆಗಳನ್ನು ನಿವಾರಿಸಲು ಮತ್ತು ಗ್ರಾಹಕರು ಹಾಗೂ ಕೈಗಾರಿಕೆಗಳ ಹಿತಾಸಕ್ತಿಗಳನ್ನು ರಕ್ಷಿಸಲು ಕೈಗೊಳ್ಳಲಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ, ರಕ್ಷಣೆ, ಗೃಹ, ವಿದೇಶಾಂಗ ಮತ್ತು ಹಣಕಾಸು ಸಚಿವರು ಸೇರಿದಂತೆ ಹಿರಿಯ ಕ್ಯಾಬಿನೆಟ್ ಸದಸ್ಯರು ಪ್ರಧಾನಿಯೊಂದಿಗೆ ಚರ್ಚಿಸಿದ್ದಾರೆ.

ಜಾಗತಿಕ ಇಂಧನ ಸಾರಿಗೆಯ ಶೇ.20ರಷ್ಟು ಪಾಲನ್ನು ನಿರ್ವಹಿಸುವ ಹಾರ್ಮುಜ್ ಜಲಸಂಧಿಯಲ್ಲಿ ಉಂಟಾಗಿರುವ ಅಡೆತಡೆಗಳು ಪ್ರಸ್ತುತ ಪೂರೈಕೆ ಸವಾಲುಗಳಿಗೆ ಪ್ರಾಥಮಿಕ ಕಾರಣ. ಸಂಘರ್ಷದ ಆರಂಭದಿಂದಲೂ ಈ ಮಾರ್ಗದಲ್ಲಿ ಹಡಗುಗಳ ಸಂಚಾರ ನಿರ್ಬಂಧಿಸಲ್ಪಟ್ಟಿದೆ. ಇಂತಹ ಅಂತಾರಾಷ್ಟ್ರೀಯ ಪೂರೈಕೆ ಸರಪಳಿ ಬಿಕ್ಕಟ್ಟುಗಳನ್ನು ಎದುರಿಸಲು ಸಾರ್ವಜನಿಕ ಜಾಗೃತಿ ಮತ್ತು ಕಾರ್ಯತಂತ್ರದಲ್ಲಿ ತಾಳ್ಮೆ ಅತ್ಯಗತ್ಯ ಎಂದು ಪ್ರಧಾನಿ ಅಭಿಪ್ರಾಯಪಟ್ಟಿದ್ದಾರೆ.

ಸೌದಿ ಅರೇಬಿಯಾ, ಯುಎಇ, ಕತಾರ್, ಇಸ್ರೇಲ್ ಮತ್ತು ಇರಾನ್ ಸೇರಿದಂತೆ ವಿವಿಧ ದೇಶಗಳ ನಾಯಕರೊಂದಿಗೆ ಪ್ರಧಾನಿ ನಡೆಸಿದ ಇತ್ತೀಚಿನ ಮಾತುಕತೆಗಳ ಬಗ್ಗೆಯೂ ಸಭೆಯಲ್ಲಿ ಮಾಹಿತಿ ನೀಡಲಾಯಿತು.

ಎಲ್ಪಿಜಿ ಸಿಲಿಂಡರ್ ಹಂಚಿಕೆ ಹೆಚ್ಚಿಸಲು ಕೇಂದ್ರ ನಿರ್ದೇಶ

ಹೊಸದಿಲ್ಲಿ: ಜಾಗತಿಕ ಮಟ್ಟದಲ್ಲಿ ತೈಲ ಮತ್ತು ಅನಿಲ ಪೂರೈಕೆ ವ್ಯತ್ಯಯದ ಹಿನ್ನೆಲೆ ನಗರ ಅನಿಲ ಸರಬರಾಜು ಯೋಜನೆಯನ್ವಯ ಎಲ್‌ಪಿಜಿ ಸಿಲಿಂಡರ್‌ಗಳ ವಿತರಣೆ ಮತ್ತು ವಾಣಿಜ್ಯ ಎಲ್‌ಪಿಜಿ ಹಂಚಿಕೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಭಾನುವಾರ ನಿರ್ದೇಶಿಸಿದೆ.

ಪೆಟ್ರೋಲಿಯಂ ಮತ್ತು ಸ್ಫೋಟಕ ಸುರಕ್ಷತಾ ಸಂಸ್ಥೆ (ಪಿಇಎಸ್‌ಒ) ತನ್ನ ಕಚೇರಿಗಳಿಗೆ ನಗರ ಅನಿಲ ವಿತರಣೆ (ಸಿಸಿಡಿ) ಅರ್ಜಿಗಳನ್ನು ಇನ್ನು 10 ದಿನಗಳೊಳಗೆ ವಿಲೇವಾರಿ ಮಾಡಲು ಸೂಚಿಸಿದೆ. ಇದರಿಂದ ಪೈಪ್ ನೈಸರ್ಗಿಕ ಅನಿಲ (ಪಿಎನ್‌ಜಿ) ವಿತರಣೆಯ ವೇಗವರ್ಧನೆಯಾಗಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ. ಪ್ರಮುಖ ನಗರ ಮತ್ತು ನಗರ ಪ್ರದೇಶಗಳಲ್ಲಿನ ವಾಣಿಜ್ಯ ಎಲ್‌ಪಿಜಿ ಬಳಕೆದಾರರು, ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಮೇಲಿನ ಅವಲಂಬನೆ ಕಡಿಮೆ ಮಾಡಲು, ಪಿಎನ್‌ಜಿಯನ್ನು ಅಳವಡಿಸಿಕೊಳ್ಳಲು ಸಲಹೆ ನೀಡಿದೆ.

ಗೃಹ ಬಳಕೆಯ ಎಲ್‌ಪಿಜಿ ಸರಬರಾಜು ಸ್ಥಿರವಾಗಿದ್ದು, ಡೀಲರ್‌ಗಳಲ್ಲಿಯೂ ಯಾವುದೇ ಕೊರತೆ ವರದಿಯಾಗಿಲ್ಲ. ದೇಶದಾದ್ಯಂತ ಸಾಮಾನ್ಯ ವಿತರಣೆ ಕ್ರಮ ಮುಂದುವರಿದಿದ್ದು, ಬಹುತೇಕ ವಿತರಣೆಗಳು ಡೆಲಿವರಿ ಅಥೆಂಟಿಕೇಶನ್ ಕೋಡ್ (ಡಿಎಸಿ) ಆಧಾರದಲ್ಲಿ ನಡೆಯುತ್ತಿವೆ. ಪ್ಯಾನಿಕ್ ಬುಕ್ಕಿಂಗ್‌ಗಳು ಕೂಡ ಕಡಿಮೆಯಾಗಿದೆ ಎಂದು ಹೇಳಿದೆ. ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಹಂಚಿಕೆಯನ್ನು ಸರ್ಕಾರ ಹಂತ ಹಂತವಾಗಿ ಹೆಚ್ಚಿಸಿದೆ.

ಪ್ರಧಾನಿ ನಿವಾಸಕ್ಕೆ ಪುಟ್ಟ ಅತಿಥಿ!

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ತಮ್ಮ 7, ಲೋಕ ಕಲ್ಯಾಣ ಮಾರ್ಗದ ಅಧಿಕೃತ ನಿವಾಸದಲ್ಲಿ ಖಾಸಗಿ ಕುಟುಂಬವೊಂದರ ಭೇಟಿಯ ಸಂದರ್ಭದಲ್ಲಿ ಪುಟ್ಟ ಮಗುವಿನೊಂದಿಗೆ ಇರುವ ಭಾವಚಿತ್ರವನ್ನು ಹಂಚಿಕೊಂಡಿದ್ದು, ಇದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಕುತೂಹಲ ಮೂಡಿಸಿತು.

ಯಾರು ಈ ಅತಿಥಿಗಳು?: ವೈರಲ್ ಚಿತ್ರದಲ್ಲಿರುವ ಮಗುವನ್ನು ನೀಯೋಮ್ ಅಶ್ವಿನ್ ಕೃಷ್ಣ (ಓಮಿ) ಎಂದು ಗುರುತಿಸಲಾಗಿದೆ. ಈತ ಸಾಮಾಜಿಕ ಜಾಲತಾಣದ ಇನ್ಫ್ಲುಯೆನ್ಸರ್ ದಿಯಾ ಕೃಷ್ಣ ಅವರ ಪುತ್ರ ಮತ್ತು ಬಿಜೆಪಿ ಜತೆ ಸಂಪರ್ಕವಿರುವ ಕೇರಳದ ಪ್ರಮುಖ ನಟ ಹಾಗೂ ರಾಜಕಾರಣಿ ಕೃಷ್ಣಕುಮಾರ್ ಅವರ ಮೊಮ್ಮಗ ಎಂದು ತಿಳಿದುಬಂದಿದೆ. ಪ್ರಧಾನಿ ಮೋದಿ, ಕೃಷ್ಣಕುಮಾರ್ ಕುಟುಂಬದ ಸದಸ್ಯರಾದ ಸಿಂಧು ಕೃಷ್ಣಕುಮಾರ್ ಅಶ್ವಿನ್ ಮತ್ತು ಪುತ್ರಿಯರಾದ ಅಹಾನಾ, ದಿಯಾ, ಇಶಾನಿ ಮತ್ತು ಹನ್ಸಿಕಾ ಅವರೊಂದಿಗೆ ಒಂದು ಗಂಟೆಗಳ ಕಾಲ ಸಂವಾದ ನಡೆಸಿದ್ದಾರೆ.



ಜಾಲತಾಣದಲ್ಲಿ 'ಪುಟಾಣಿ ಮಿತ್ರ'

ಪುಟಾಣಿ ಮಿತ್ರನೊಂದಿಗೆ ಎಂಬ ಅರ್ಥ ಬರುವ ಶೀರ್ಷಿಕೆ ನೀಡಿ ಪ್ರಧಾನಿ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡ ಈ ಫೋಟೋ 1.7 ಮಿಲಿಯನ್‌ಗಿಂತಲೂ ಹೆಚ್ಚು ಲೈಕ್‌ಗಳನ್ನು ಪಡೆದುಕೊಂಡಿದೆ. ಈ ಭೇಟಿಯ ಹೆಚ್ಚಿನ ಚಿತ್ರಗಳು ಮತ್ತು ವಿಡಿಯೋಗಳು ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿವೆ. ಪ್ರಧಾನಿ ಭೇಟಿಯನ್ನು ದಿಯಾ ಕೃಷ್ಣ ಅತ್ಯಂತ ಸಂಭ್ರಮದ ಕ್ಷಣವೆಂದು ಬಣ್ಣಿಸಿದರೆ, ನಟಿ ಅಹಾನಾ ಕೃಷ್ಣ, ಪ್ರಧಾನಿ ಆತ್ಮೀಯವಾಗಿ ಮಾತನಾಡಿಸಿದರು ಎಂದು ತಮ್ಮ ಅನುಭವ ಹಂಚಿಕೊಂಡಿದ್ದಾರೆ.

1971ರ ಬಾಂಗ್ಲಾ ವಿಮೋಚನೆ ವೇಳೆ ದೌರ್ಜನ್ಯ: ಅಮೆರಿಕ ನಿರ್ಣಯ

ಹಿಂದುಗಳ ಮೇಲೆ ಪಾಕ್ ದಾಳಿ ನರಮೇಧ

ವಾಷಿಂಗ್ಟನ್: 1971ರ ಬಾಂಗ್ಲಾದೇಶ ವಿಮೋಚನಾ ಹೋರಾಟದ ವೇಳೆ ಬಂಗಾಳಿ ಹಿಂದುಗಳ ಮೇಲೆ ನಡೆದ ದೌರ್ಜನ್ಯಗಳನ್ನು 'ನರಮೇಧ' ಮತ್ತು 'ಯುದ್ಧಾಪರಾಧಗಳು' ಎಂದು ಅಧಿಕೃತವಾಗಿ ಗುರುತಿಸುವಂತೆ ಅಮೆರಿಕ ಸಂಸತ್ತಿನಲ್ಲಿ ಮಹತ್ವದ ನಿರ್ಣಯ ಮಂಡಿಸಲಾಗಿದೆ. ಓಹಿಯೋ ರಾಜ್ಯದ ಡೆಮೋಕ್ರಟಿಕ್ ಪಕ್ಷದ ಸಂಸದ ಗ್ರೆಗ್ ಲ್ಯಾಂಡ್ಸ್‌ಮನ್ ಅವರು ಈ ನಿರ್ಣಯವನ್ನು ಪ್ರತಿನಿಧಿಗಳ ಸದನದಲ್ಲಿ ಮಂಡಿಸಿದ್ದು, ಪ್ರಸ್ತುತ ವಿದೇಶಾಂಗ ವ್ಯವಹಾರಗಳ ಸಮಿತಿಗೆ ರವಾನಿಸಲಾಗಿದೆ.



ಆಪರೇಷನ್ ಸರ್ಚ್‌ಲೈಟ್: 1971ರ ಮಾರ್ಚ್ 25ರಂದು ಪಾಕಿಸ್ತಾನದ ಸರ್ಕಾರವು ಬಾಂಗ್ಲಾದೇಶದ ಸಂಸ್ಥಾಪಕ ಶೇಖ್ ಮುಜಿಬುರ್ ರೆಹಮಾನ್ ಅವರನ್ನು ಬಂಧಿಸಿತು. ಇದಾದ ನಂತರ ಪಾಕಿಸ್ತಾನ ಸೇನೆ ಮತ್ತು ಜಮಾತ್-ಎ-ಇಸ್ಲಾಮಿ ಸಂಘಟನೆ ಸೇರಿ ಆಪರೇಷನ್ ಸರ್ಚ್‌ಲೀಟ್ ಹೆಸರಿನಲ್ಲಿ ಪೂರ್ವ ಪಾಕಿಸ್ತಾನದಲ್ಲಿ ಭಾರೀ ಮಟ್ಟದ ಸೈನಿಕ ದಾಳಿಗಳನ್ನು ಆರಂಭಿಸಿತು. ಈ ಕಾರ್ಯಾಚರಣೆಯಲ್ಲಿ ನಾಗರಿಕರನ್ನು ಗುರಿಯಾಗಿಸಿಕೊಂಡು ಕ್ರೂರ ಹತ್ಯಾಕಾಂಡ ನಡೆಯಿತು.

ಹಿಂದು ಸಮುದಾಯ ಗುರಿ: ನಿರ್ಣಯದಲ್ಲಿ ಬಂಗಾಳಿ ಹಿಂದುಗಳನ್ನು ವಿಶೇಷವಾಗಿ ಗುರಿಯಾಗಿಸಿಕೊಂಡು ಹತ್ಯೆ, ಅತ್ಯಾಚಾರ ಮತ್ತು ಬಲವಂತದ ಮತಾಂತರ ನಡೆದಿದೆ ಎಂದು ಉಲ್ಲೇಖಿಸಲಾಗಿದೆ. ರಾಜಕೀಯ ನಾಯಕರು, ಬುದ್ಧಿಜೀವಿಗಳು, ವಿದ್ಯಾರ್ಥಿಗಳು ಸೇರಿದಂತೆ ಸಾಮಾನ್ಯ ನಾಗರಿಕರು ಈ ಹಿಂಸಾಚಾರದ ಬಲಿಯಾಗಿದ್ದರು. ಸಾವಿರಾರು ಮಹಿಳೆಯರನ್ನು ಲೈಂಗಿಕ ದೌರ್ಜನ್ಯಕ್ಕೆ ಒಳಪಡಿಸಲಾಗಿತ್ತು ಎಂದು ಹೇಳಲಾಗಿದೆ.

ಬ್ಲಡ್ ಟೆಲಿಗ್ರಾಮ್ ಬಹಿರಂಗಪಡಿಸಿದ ಸತ್ಯ: ಢಾಕಾದಲ್ಲಿದ್ದ ಅಮೆರಿಕದ ಕಾನ್ಸುಲ್ ಜನರಲ್ ಆರ್ಚರ್ ಬ್ಲಡ್ ಅವರು 1971ರ ಮಾರ್ಚ್ 28ರಂದು ಸೆಲೆಕ್ಟೀವ್ ಜೆನೊಸೈಡ್(ಆಯ್ದ ನರಮೇಧ) ಎಂಬ ಶೀರ್ಷಿಕೆಯಲ್ಲಿ ಕಳುಹಿಸಿದ ಟೆಲಿಗ್ರಾಮ್‌ನಲ್ಲಿ, ಪಾಕಿಸ್ತಾನ ಸೇನೆಯು ಬಂಗಾಳಿಗಳು ಮತ್ತು ಹಿಂದುಗಳನ್ನು ವ್ಯವಸ್ಥಿತವಾಗಿ ಹತ್ಯೆ ಮಾಡುತ್ತಿದೆ ಎಂದು ಎಚ್ಚರಿಸಿದ್ದರು. ಈ ಸಂದೇಶವು ನಂತರ ಬ್ಲಡ್ ಟೆಲಿಗ್ರಾಮ್ ಎಂದು ಪ್ರಸಿದ್ಧಿಯಾಯಿತು.

ಅಮೆರಿಕದ ಮೌನಕ್ಕೆ ವಿರೋಧ: ಅಂದಿನ ಹತ್ಯಾಕಾಂಡದ ಬಗ್ಗೆ ಅಮೆರಿಕ ಸರ್ಕಾರ ಮೌನ ವಹಿಸಿತ್ತು ಎಂಬುದನ್ನು ನಿರ್ಣಯದಲ್ಲಿ ಟೀಕಿಸಲಾಗಿದೆ. 1971ರ ಏ.6ರಂದು ಕಾನ್ಸುಲೇಟ್‌ನ 20 ಅಧಿಕಾರಿಗಳು 'ಬ್ಲಡ್ ಟೆಲಿಗ್ರಾಮ್' ಮೂಲಕ ಸರ್ಕಾರದ ನಿಲುವಿಗೆ ವಿರೋಧ ವ್ಯಕ್ತಪಡಿಸಿದ್ದರು. ಈ ಘಟನೆ ಅಮೆರಿಕದ ರಾಜತಾಂತ್ರಿಕ ಇತಿಹಾಸದಲ್ಲಿ ಪ್ರಮುಖ ಘಟನೆ ಎಂದು ಪರಿಗಣಿಸಲಾಗಿದೆ.

ಮಾನವ ಹಕ್ಕುಗಳ ಪರ ಒತ್ತಾಯ: ಈ ನಿರ್ಣಯವು 1971ರ ಘಟನೆಗಳನ್ನು ಮಾನವೀಯತೆಯ ವಿರುದ್ಧದ ಅಪರಾಧಗಳೆಂದು ಗುರುತಿಸಲು ಮತ್ತು ಭವಿಷ್ಯದಲ್ಲಿ ಇಂತಹ ಕ್ರೌರ್ಯಗಳು ಮರುಕಳಿಸದಂತೆ ಜಾಗತಿಕ ಮಟ್ಟದಲ್ಲಿ ಕ್ರಮ ಕೈಗೊಳ್ಳಲು ಒತ್ತಾಯಿಸುತ್ತದೆ. ಜತೆಗೆ, ಅಮೆರಿಕ ಅಧ್ಯಕ್ಷರು ಈ ವಿಷಯದಲ್ಲಿ ಸ್ಪಷ್ಟ ನಿಲುವು ಕೈಗೊಳ್ಳಬೇಕೆಂದು ಆಗ್ರಹಿಸಲಾಗಿದೆ.

ಸಿಎಂ, ಪ್ರಧಾನಿಯಾಗಿ ಮೋದಿ ಸುದೀರ್ಘ ಸಾರ್ವಜನಿಕ ಸೇವಾ ದಾಖಲೆ

ಕೇಂದ್ರ ಸಚಿವರು, ಬಿಜೆಪಿ ಅಧ್ಯಕ್ಷರ ಅಭಿನಂದನೆ

ಹೊಸದಿಲ್ಲಿ: ಮುಖ್ಯಮಂತ್ರಿ ಮತ್ತು ಪ್ರಧಾನಿಯಾಗಿ ಅತ್ಯಂತ ಸುದೀರ್ಘ ಅವಧಿಯ ಸಾರ್ವಜನಿಕ ಸೇವಾ ದಾಖಲೆ ಮಾಡಿದ ಪ್ರಧಾನಿ ನರೇಂದ್ರ ಮೋದಿಯವರನ್ನು ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಹಾಗೂ ವಿವಿಧ ಕೇಂದ್ರ ಸಚಿವರುಗಳು, ಮುಖ್ಯಮಂತ್ರಿಗಳು ಅಭಿನಂದಿಸಿದ್ದಾರೆ.



ದೇಶದ ಬಡವರು, ಜನಸಾಮಾನ್ಯರ ಬದುಕಿಗೆ ಶಕ್ತಿ ತುಂಬುವಲ್ಲಿ ಆಳ ಬದ್ಧತೆ ಮತ್ತು ಜಾಗತಿಕ ವೇದಿಕೆಗಳಲ್ಲಿ ಭಾರತದ ಗೌರವವನ್ನು ಎತ್ತಿಹಿಡಿದ ಸಮರ್ಥ ನಾಯಕತ್ವದ ಮೋದಿಯವರ ಸಾಧನೆ ದೇಶದ ಮತ್ತು ಜನತೆಯ ಹೆಮ್ಮೆ ಎಂದು ಬಣ್ಣಿಸಿದ್ದಾರೆ.

ಕೇಂದ್ರ ಸಚಿವರಾದ ಜೆ.ಪಿ.ನಡ್ಡಾ, ಪಿಯೂಷ್ ಗೋಯಲ್, ಅಶ್ವಿನಿ ವೈಷ್ಣವ್, ನಿತಿನ್ ನವೀನ್ ಅವರುಗಳು "ಮೋದಿ ಶಕೆಯು ಹೊಸ ಮೈಲುಗಲ್ಲುಗಳನ್ನು ಸ್ಥಾಪಿಸುವಲ್ಲಿ ಭಾರತವನ್ನು ವಿಸ್ಮಯಕಾರಿಯಾಗಿ ಪರಿವರ್ತಿಸಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೋದಿಯವರ ನಾಯಕತ್ವದಲ್ಲಿ ಭಾರತವು ವಿಕಸಿತ ಭಾರತದ ವಿಷನ್‌ನೊಂದಿಗೆ ಮುನ್ನುಗ್ಗುತ್ತಿದೆ. ಜನಪರವಾದ ನೀತಿಗಳ ಮೂಲಕ ಬಡವರು, ಯುವಜನತೆ, ಮಹಿಳೆಯರು ಮತ್ತು ರೈತರು ಸೇರಿದಂತೆ ದೇಶದ ಸಮಗ್ರ ಉನ್ನತಿ ಕುರಿತಾದ ಅವರ ಕಳಕಳಿ ಅನನ್ಯವಾದುದು. ಇದರಿಂದಾಗಿಯೇ ಇಂದು ಭಾರತ ಜಗತ್ತಿನಲ್ಲಿ ಅತ್ಯಂತ ಆತ್ಮವಿಶ್ವಾಸ ಮತ್ತು ಪ್ರಭಾವಿಯಾಗಿ ಮುಂದುವರಿಯಲು ಸಾಧ್ಯವಾಗಿದೆ. ಯಾಕೆಂದರೆ ಮೋದಿಯವರು ನೈಜ ಪರಿವರ್ತನೆ ತರಲು ಶ್ರಮಿಸುತ್ತಿರುವವರು. ನಂಬಿಕೆ, ಸಮರ್ಪಣೆ, ಸ್ಪಷ್ಟ ದೃಷ್ಟಿಯ ಮೂಲಕ ಅವರದು ಸಾಟಿಯಿಲ್ಲದ ಸಾಧನೆ ಎಂದು ಜೆ.ಪಿ.ನಡ್ಡಾ ಹೇಳಿದ್ದಾರೆ.

ಮೋದಿಯವರ ಜನಸೇವೆಯು ಎಲ್ಲರನ್ನೊಳಗೊಂಡ ಅಭಿವೃದ್ಧಿಯೆಡೆಗಿನ ಸಾಟಿಯಿಲ್ಲ ಬದ್ಧತೆಯಾಗಿದ್ದು, ಇದು ಭಾರತದ ಬೆಳವಣಿಗೆಯ ಯಶೋಗಾಥೆಗೆ ಶಕ್ತಿ ತುಂಬಿದೆ ಎಂದಿದ್ದಾರೆ ಸಚಿವ ಗೋಯಲ್.

ಜನಸೇವೆಯ ಸಾಧನೆ: ನಿತಿನ್ ನವೀನ್

ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಅವರು, ಪ್ರಧಾನಿ ಮೋದಿಯವರ ಅಧಿಕಾರದಲ್ಲಿ ಮೂಲಸೌಕರ್ಯಗಳ ಅಭೂತಪೂರ್ವ ಅಭಿವೃದ್ಧಿ, ಡಿಜಿಟಲ್ ಕ್ರಾಂತಿ, ಪರಿಣಾಮಕಾರಿ ಸಾರ್ವಜನಿಕ ಕಲ್ಯಾಣ ಯೋಜನೆಗಳೊಂದಿಗೆ ಆತ್ಮನಿರ್ಭರ ಭಾರತದೆಡೆಗೆ ಸಾಗುತ್ತಿರುವುದು ಹೆಮ್ಮೆಯ ಸಂಗತಿ. ಅವರದು ಸಾಟಿಯಿಲ್ಲದ ಜನಸೇವೆಯ ಸಾಧನೆ ಎಂದಿದ್ದಾರೆ.

> ಪ್ರಧಾನಿ ಮೋದಿಯವರ ಈ ಸಾಧನೆ ಅವಿಶ್ರಾಂತ ಸಮರ್ಪಣಾ ಸೇವೆ, ಸಮಗ್ರತೆ ಮತ್ತು ರಾಷ್ಟ್ರ-ಮೊದಲೆನ್ನುವ ಆಡಳಿತಕ್ಕೆ ಸಾಕ್ಷಿಯಾಗಿದೆ. ಇದು ನಂಬಿಕೆ ಮತ್ತು ಸೇವೆಯ ಪ್ರೇರಣಾದಾಯಿ ಪಯಣ.
> ■ ಕಿರಣ್ ರಿಜಿಜು, ಸಂಸದೀಯ ಸಚಿವ

ಕಿರುಸುದ್ದಿ

ಸಚಿವ ಸತೀಶ ಜಾರಕಿಹೊಳಿ ಭೇಟಿಯಾದ ನಟಿ ಪ್ರೇಮಾ

ಬೆಳಗಾವಿ: ಕನ್ನಡದ ಖ್ಯಾತ ನಟಿ ಪ್ರೇಮಾ ಅವರು ಭಾನುವಾರ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಗೋಕಾಕ ನಗರದಲ್ಲಿರುವ ಹಿಲ್ ಗಾರ್ಡನ್ ಮನೆಗೆ ಭೇಟಿ ನೀಡಿ ಸೌಜನ್ಯಯುತವಾಗಿ ಮಾತುಕತೆ ನಡೆಸಿದರು. ಖ್ಯಾತ ನಟಿ ಪ್ರೇಮಾ ಅವರು ಗೋಕಾಕಗೆ ಆಗಮಿಸಿದ್ದ ಸಂದರ್ಭದಲ್ಲಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಕೇವಲ ಸೌಜನ್ಯಯುತ ಭೇಟಿಯಾಗಿದ್ದು, ಯಾವುದೇ ವಿಶೇಷ, ರಾಜಕೀಯ ಉದ್ದೇಶವಿಲ್ಲ, ಸಿನಿಮಾ ರಂಗದ ಇತ್ತೀಚಿನ ಬೆಳವಣಿಗೆಗಳು ಮತ್ತು ಸಾಮಾಜಿಕ ಕಾರ್ಯಗಳ ಬಗ್ಗೆ ಪರಸ್ಪರ ಮಾತುಕತೆ ನಡೆಸಿದ್ದಾರೆ ಎಂದು ಸಚಿವರ ಆಪ್ತ ಸಹಾಯಕರು ಮಾಹಿತಿಯನ್ನು ನೀಡಿದ್ದಾರೆ.

ಇಂದಿನಿಂದ ಏಳು ಮಕ್ಕಳ ತಾಯಿಬಾಯಿ ಜಾತ್ರೆ

ರಾಯಬಾಗ: ತಾಲೂಕಿನ ಜಲಾಲಪುರ ಗ್ರಾಮದ ಏಳು ಮಕ್ಕಳ ತಾಯಿಬಾಯಿ ಜಾತ್ರಾ ಮಹೋತ್ಸವ ಮಾ.22ರಿಂದ 25ರವರೆಗೆ ವಿಜೃಂಭಣೆಯಿಂದ ನಡೆಯಲಿದೆ. ಮಾ.23ರಂದು ಬೆಳಗ್ಗೆ 8.30ಕ್ಕೆ ನಂದಿಕುರಳಿ ಪಂಚಲಿಂಗೇಶ್ವರ ಮಠದ ವೀರಭದ್ರೇಶ್ವರ ಸ್ವಾಮೀಜಿ ಅವರಿಂದ ಮಹಾಭಿಷೇಕ,



ಮಧ್ಯಾಹ್ನ ಮಹಾಪ್ರಸಾದ ನಡೆಯಲಿದೆ. ರಾತ್ರಿ 9 ಗಂಟೆಗೆ ಡೊಳ್ಳಿನ ಪದಗಳು ನಡೆಯಲಿವೆ. ಮಾ.24ರಂದು ಬೆಳಗ್ಗೆ 9 ಗಂಟೆಗೆ ಪಲ್ಲಕ್ಕಿ ಮೆರವಣಿಗೆ, ಮಧ್ಯಾಹ್ನ ಮಹಾಪ್ರಸಾದ ನಡೆಯಲಿದೆ. ರಾತ್ರಿ 9.30ಕ್ಕೆ ಕೊಲ್ಲಾಪುರ ತರಾನಾ ಆರ್ಕೆಸ್ಟ್ರಾ ಅವರಿಂದ ಮನರಂಜನೆ ಕಾರ್ಯಕ್ರಮ ನಡೆಯಲಿದೆ. ಮಾ.25ರಂದು ಬೆಳಗ್ಗೆ 9.30ಕ್ಕೆ ವಿವಿಧ ಶರ್ಯತ್ತುಗಳು ನಡೆಯಲಿವೆ. ಸಂಜೆ 4 ಗಂಟೆಗೆ ಕುಸ್ತಿ ಪಂದ್ಯಗಳು ಹಾಗೂ ರಾತ್ರಿ 9 ಗಂಟೆಗೆ ಡಾನ್ಸ್ ಸ್ಪರ್ಧೆ ನಡೆಯಲಿದೆ ಎಂದು ಜಾತ್ರೆ ಕಮಿಟಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ದುರ್ಗಾದೇವಿ ಜಾತ್ರಾ ಮಹೋತ್ಸವ

ಗೋಕಾಕ: ನಗರದ ಹೊರವಲಯದ ಶಿವಾಜಿ ಸರ್ಕಲ್ ಸಮೀಪದ ಶ್ರೀ ದುರ್ಗಾದೇವಿ ದೇವಸ್ಥಾನದ ಜಾತ್ರಾ ಮಹೋತ್ಸವ ಮಾ.23ರಿಂದ ಮಾ.25ರವರೆಗೆ ನಡೆಯಲಿದೆ. ಮಾ.23ರಂದು ಶ್ರೀ ದುರ್ಗಾದೇವಿಯ ಮೂರ್ತಿ ಹೊತ್ತು ಎಲ್ಲ ದೇವಸ್ಥಾನಗಳ ಭೇಟಿ ಮತ್ತು ಭಕ್ತರ ಮನೆಯಿಂದ



ಉಡಿ ತುಂಬಿಸಿಕೊಳ್ಳುವರು. ರಾತ್ರಿ ಹಲಗಿ ವಾದನ, ಭಜನಾ ಪದಗಳ ಸೇವೆ. ಮಾ.24ರಂದು ಬೆಳಿಗ್ಗೆ 6ಗಂಟೆಗೆ ಶ್ರೀ ದುರ್ಗಾದೇವಿಗೆ ಅಭಿಷೇಕ, ನೈವೇದ್ಯ, ಉಡಿ ತುಂಬುವುದು. 12.30ಕ್ಕೆ ಮಹಾಪ್ರಸಾದ ನಡೆಯುವುದು. ಸಂಜೆ 4ಗಂಟೆಗೆ ಅಗ್ನಿ ಪ್ರವೇಶ. ಮಾ.25ರಂದು ಶ್ರೀದೇವಿಗೆ ವಿಶೇಷ ಪೂಜೆಯೊಂದಿಗೆ ಜಾತ್ರೆ ಸಂಪನ್ನಗೊಳ್ಳಲಿದೆ ಎಂದು ದೇವಿ ಉಪಾಸಕರಾದ ವಸಂತ ಪೂಜೇರಿ ತಿಳಿಸಿದ್ದಾರೆ.

ಇಂದಿನಿಂದ ಕೊಡಚವಾಡ ಕಲ್ಮೇಶ್ವರ ಜಾತ್ರೆ

ಖಾನಾಪುರ: ತಾಲೂಕಿನ ಕೊಡಚವಾಡ ಗ್ರಾಮದ ಶ್ರೀ ಕಲ್ಮೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವವು ಮಾ.23ರಿಂದ ಮೂರು ದಿನಗಳ ಕಾಲ ನಡೆಯಲಿದೆ.

ಜಾತ್ರೆಯ ಅಂಗವಾಗಿ ದೇವಸ್ಥಾನದಲ್ಲಿ ರುದ್ರಾಭಿಷೇಕ, ಸಾಮೂಹಿಕ ಪೂಜೆ, ಅನ್ನ ಸಂತರ್ಪಣೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ನಿತ್ಯ ದೇವಸ್ಥಾನದ ಆವರಣದಲ್ಲಿ ಮನರಂಜನಾ ಕಾರ್ಯಕ್ರಮಗಳು ಹಾಗೂ ಕುಸ್ತಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಕೊಡಚವಾಡ ಮತ್ತು ದೇವಿಕನೊಪ್ಪ ಗ್ರಾಮಗಳ ಆರಾಧ್ಯ ದೈವವಾಗಿರುವ ಕಲ್ಮೇಶ್ವರ ದೇವಾಲಯದಲ್ಲಿ ಸೋಮವಾರ ರುದ್ರಾಭಿಷೇಕ, ಅಖಂಡ ಶಿವನಾಮ ಜಪ, ಸಹಸ್ರ ಬಿಲ್ವಾರ್ಚನೆ, ವಿಶೇಷ ಅಲಂಕಾರ ಹಾಗೂ ಮಹಾಪೂಜೆಯೊಂದಿಗೆ ಜಾತ್ರೆಯ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗುತ್ತದೆ. ಮಾ.24ರಂದು ಎರಡೂ ಗ್ರಾಮಗಳ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವ ಆಯೋಜಿಸಲಾಗಿದೆ. ಮಾ.25ರಂದು ಕೊಡಚವಾಡ ಗ್ರಾಮದ ಹೊರವಲಯದ ಅಖಾಡದಲ್ಲಿ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ. ಜಾತ್ರಾ ಮಹೋತ್ಸವದಲ್ಲಿ ಅವರೊಳ್ಳಿ-ಬಿಳಕಿ ಮಠದ ಚನ್ನಬಸವ ದೇವರು, ಶಾಸಕ ವಿಠ್ಠಲ ಹಲಗೇಕರ ಸೇರಿದಂತೆ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳ ಗಣ್ಯರು ಭಾಗವಹಿಸಲಿದ್ದಾರೆ ಎಂದು ಜಾತ್ರಾ ಸಮಿತಿಯ ಪ್ರಕಟಣೆ ತಿಳಿಸಿದೆ.



ಬೆಳಗಾವಿ: ಕನ್ನಡದ ಖ್ಯಾತ ನಟಿ ಪ್ರೇಮಾ ಅವರು ಭಾನುವಾರ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಗೋಕಾಕ ನಗರದಲ್ಲಿರುವ ಹಿಲ್ ಗಾರ್ಡನ್ ಮನೆಗೆ ಭೇಟಿ ನೀಡಿ ಸೌಜನ್ಯಯುತವಾಗಿ ಮಾತುಕತೆ ನಡೆಸಿದರು.

ಫಲಾನುಭವಿಗೆ ವಾತ್ಸಲ್ಯ ಮನೆ ಹಸ್ತಾಂತರ

ಗೋಕಾಕ: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ತಾಲೂಕಿನ ಮಾಲದಿನ್ನಿ ವಲಯದ ಉಪ್ಪಾರಹಟ್ಟಿ ಗ್ರಾಮದಲ್ಲಿ ಮಾಸಾಶನ ಫಲಾನುಭವಿ ಯಲ್ಲವ್ವ ಮದಿಹಳ್ಳಿ ಅವರಿಗೆ ವಾತ್ಸಲ್ಯ ಮನೆ ಹಸ್ತಾಂತರ ಕಾರ್ಯಕ್ರಮ ಜರುಗಿತು.

ಎಸ್‌ಕೆಡಿಆರ್‌ಡಿಪಿ ಯೋಜನೆಯ ಧಾರವಾಡ ಪ್ರಾದೇಶಿಕ ವ್ಯಾಪ್ತಿಯ ಪ್ರಾದೇಶಿಕ ನಿರ್ದೇಶಕಿ ದಯಾಶೀಲ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಡಾ. ವೀರೇಂದ್ರ ಹೆಗ್ಗಡೆ ಮತ್ತು ಮಾತೃಶ್ರೀ ಹೇಮಾವತಿ ಅಮ್ಮನವರ ಆಶಾದಾಯಕ ಕಾರ್ಯಕ್ರಮ ವಾತ್ಸಲ್ಯ ಕಾರ್ಯಕ್ರಮ ಹೇಮಾವತಿ ಅಮ್ಮನವರ ಈ ಕಲ್ಪನೆ ಬಹಳ ಅವಿಸ್ಮರಣೀಯ. ಈ ಯೋಜನೆಯಲ್ಲಿ ಸುಮಾರು 1000 ವಾತ್ಸಲ್ಯ ಮನೆ ನಿರ್ಮಾಣ ಮಾಡಲಾಗುತ್ತಿದೆ. ತಾಲೂಕಿನಲ್ಲಿ 40 ಮಾಸಾಶನ ಫಲಾನುಭವಿಗಳು ಇದ್ದು ಅಸಹಾಯಕರಿಗೆ ನೆಲೆ ಇಲ್ಲದವರಿಗೆ ಯೋಜನೆಯ ವತಿಯಿಂದ ಮನೆ ರಚನೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಬೆಳಗಾವಿ ವಿಭಾಗ ಜಿಲ್ಲಾ ನಿರ್ದೇಶಕ ಎಚ್.ಆರ್. ಲವಕುಮಾರ್, ಜ್ಞಾನವಿಕಾಸ ವಿಭಾಗದ ಯೋಜನಾಧಿಕಾರಿ ಸುಧಾ, ಬಿಸಿ ಯೋಜನಾಧಿಕಾರಿ ಉದಯ, ಜಿಲ್ಲಾ ಜನಜಾಗ್ರತಿ ವೇದಿಕೆಯ ಸದಸ್ಯ ಸುಬ್ಬಾಪುರ ಮಠ, ಮಾಜಿ ತಾಪಂ ಅಧ್ಯಕ್ಷ ಪರಸಪ್ಪ ಚುನ್ನನವರ್, ಮಾಜಿ ಗ್ರಾಪಂ ಅಧ್ಯಕ್ಷ ಈರವ್ವ ಬನಾಜ್, ಸದಸ್ಯರಾದ ಹಣಮಂತ ದುರ್ಗನವರ್, ರಂಗಪ್ಪ ನಂದಿ, ವಾಮದೇವ್ ಜಕಬಾಳ, ಪಾಂಡುರಂಗ ದುರ್ಗನವರ್, ಬಸಯ್ಯ ಮಠದ, ರಾಚಯ್ಯ ಮಠದ ಇದ್ದರು. ಜ್ಞಾನ ವಿಕಾಸ ಸಮನ್ವಯಧಿಕಾರಿ ಸವಿತಾ ಸ್ವಾಗತಿಸಿದರು. ವಲಯ ಮೇಲ್ವಿಚಾರಕ ಮಹಾಂತೇಶ್ ವಂದಿಸಿದರು.



ಗೋಕಾಕ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ತಾಲೂಕಿನ ಮಾಲದಿನ್ನಿ ವಲಯದ ಉಪ್ಪಾರಹಟ್ಟಿ ಗ್ರಾಮದಲ್ಲಿ ಮಾಸಾಶನ ಫಲಾನುಭವಿ ಯಲ್ಲವ್ವ ಮದಿಹಳ್ಳಿ ಅವರಿಗೆ ವಾತ್ಸಲ್ಯ ಮನೆ ಹಸ್ತಾಂತರ ಕಾರ್ಯಕ್ರಮ ಜರುಗಿತು.

ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಭರವಸೆ

ಸಮ್ಮೇಳನ ಯಶಸ್ಸಿಗೆ ಸಹಾಯ, ಸಹಕಾರ

ಬೆಳಗಾವಿ/ಘಟಪ್ರಭಾ: ಬೆಳಗಾವಿಯಲ್ಲಿ ನಡೆಯಲಿರುವ ರಾಜ್ಯ ಮಟ್ಟದ 6ನೇ ವೈಜ್ಞಾನಿಕ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ಆಯೋಜಿಸಲು ಸರ್ಕಾರದಿಂದ ಹಾಗೂ ವೈಯಕ್ತಿಕವಾಗಿ ಬೇಕಾದ ಎಲ್ಲಾ ರೀತಿಯ ಸಹಾಯ, ಸಹಕಾರ ನೀಡುವ ಜತೆಗೆ ಮಾರ್ಗದರ್ಶನ ನೀಡುವುದಾಗಿ ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಅವರು ಭರವಸೆ ನೀಡಿದರು.



ಘಟಪ್ರಭಾ ಪಟ್ಟಣದ ಡಾ.ಹರ್ಡಿಕರ್ ಸೇವಾದಳ ಅಕ್ಯಾಡೆಮಿಯಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಅವರ ನೇತೃತ್ವದಲ್ಲಿ ಬೆಳಗಾವಿಯಲ್ಲಿ ನಡೆಯಲಿರುವ 2026ನೇ ಸಾಲಿನ ರಾಜ್ಯ ಮಟ್ಟದ 6ನೇ ವೈಜ್ಞಾನಿಕ ಸಮ್ಮೇಳನದ ಪೂರ್ವ ಸಿದ್ಧತಾ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ವಿಜ್ಞಾನವು ಕೇವಲ ಒಂದು ವಿಷಯವಲ್ಲ, ಅದು ಸಮಾಜದ ಪ್ರಗತಿ, ನವೀನತೆ ಮತ್ತು ಒಟ್ಟಾರೆ ಅಭಿವೃದ್ಧಿಗೆ ಇರುವ ಭದ್ರ ಮೂಲಸ್ತಂಭ. ಹೊಸ ಆವಿಷ್ಕಾರಗಳು ಮತ್ತು ವೈಜ್ಞಾನಿಕ ಮನೋಭಾವ ಬೆಳೆಸುವ ಮೂಲಕ ಯುವ ಪೀಳಿಗೆಗೆ ಉಜ್ವಲ ಭವಿಷ್ಯದ ದಾರಿ ತೋರಿಸುವ ಶಕ್ತಿ ವಿಜ್ಞಾನಕ್ಕಿದೆ. ಆದಕ್ಕಾಗಿ ಬೆಳಗಾವಿಯಲ್ಲಿ ನಡೆಯಲಿರುವ ರಾಜ್ಯ ಮಟ್ಟದ 6ನೇ ವೈಜ್ಞಾನಿಕ ಸಮ್ಮೇಳನವನ್ನು ಇಡೀ ಜಿಲ್ಲೆಯು ಇದರ ಯಶಸ್ಸಿಗೆ ಶ್ರಮಿಸಬೇಕೆಂದು ಕರೆ ನೀಡಿದರು.

ಈಗಾಗಲೇ ರಾಯಚೂರು, ಮೈಸೂರು, ವಿಜಯಪುರ, ಕಲಬುರಗಿ, ಯಾದಗಿರಿಯಲ್ಲಿ ನಡೆದ ಐದು ಸಮ್ಮೇಳನಗಳನ್ನು ಹುಲಿಕಲ್ ನಟರಾಜ್ ಅವರ ನೇತೃತ್ವದಲ್ಲಿ ಯಶಸ್ಸು ಕಂಡಿವೆ. ಮುಂದೆ ಬೆಳಗಾವಿಯಲ್ಲಿ ನಡೆಯುವ ಈ ಸಮ್ಮೇಳನದಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ರಾಜ್ಯ ಮಟ್ಟದ 6ನೇ ವೈಜ್ಞಾನಿಕ ಸಮ್ಮೇಳನ ಯಶಸ್ಸು ಕಾಣಲೆಂದು ಸಚಿವರು ಕರೆ ನೀಡಿದರು.

ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಡಾ. ಹುಲಿಕಲ್ ನಟರಾಜ್, ಮಹಾಂತೇಶ ಕಂಬಾರ, ಕುಮಾರ ಕಂಬಾರ, ಸಂಗಮೇಶ ಹಚಡದ, ಬಸವರಾಜ ಹಟ್ಟಿಗೌಡರ, ಡಾ. ಸ್ವಾತಿ ವೈದ್ಯ, ನಾಗರತ್ನಾ ಖನ್ನಿನಾಯ್ಕರ, ಮಾರುತಿ ವೀರಪ್ಪಾ ವಿಜಯನಗರ, ಸವಿತಾ ಮುನ್ನೋಳಿ, ಸುನಿತಾ ಪಾಟೀಲ, ಕೆಂಪಣ್ಣಾ ಶಿರಾಸ್ಟ್, ಈರಣ್ಣ ಕಸನ, ಪರಶುರಾಮ ಟೊಣಪೆ ಸೇರಿದಂತೆ ಹಲವರು ಇದ್ದರು.

ಸತ್ಯ, ಧರ್ಮದಿಂದ ನಡೆದರೆ ನೆಮ್ಮದಿ

ಯರಗಟ್ಟಿ: ನಾನು, ನನ್ನದು ಎಂಬ ಬೇದ ಬಿಟ್ಟು ನಾವೆಲ್ಲರೂ ಒಂದು ಎಂಬ ಧರ್ಮದಿಂದ ನಡೆದರೆ ಸಕಲರಿಗೂ ಶುಭವಾಗವುದು ಎಂದು ಬಾಗಲಕೋಟೆ ಆಶ್ರಮದ ಪ್ರದೀಪ ಸ್ವಾಮೀಜಿ ಹೇಳಿದರು.

ಸಮೀಪದ ರೈನಾಪೂರ ಗ್ರಾಮದ ಶ್ರದ್ಧಾನಂದ ಸ್ವಾಮೀಜಿ ಮಠದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಿಶ್ವಶಾಂತಿಗಾಗಿ ನಡೆಯಲಿರುವ ಜಪಯಜ್ಞ, ಮತ್ತು ವೇದಾಂತ ಮಹೋತ್ಸವ, ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಅನಗವಾಡಿ ಆಶ್ರಮದ ಮಾತೋಶ್ರೀ ಅನುಸೂಯಾತಾಯಿ ಮಾತನಾಡಿ, ಧರ್ಮಾಚಣೆಗಳು ಮಾನವನಲ್ಲಿ ಚೈತನ್ಯ ಮೂಡಿಸಿ ಶಾಂತಿಯ ಸನ್ಮಾರ್ಗ ತೋರುತ್ತದೆ ಎಂದು ಹೇಳಿದರು.

ಗೊಡಗೇರಿ ಮಠದ ಮಲ್ಲಯ್ಯ ಸ್ವಾಮೀಜಿ, ಶಿಂದೋಗಿ ಮಠದ ಮುಕ್ತಾನಂದ ಸ್ವಾಮೀಜಿ, ಹಂಚಿನಾಳ ಮಠದ ಮಹೇಶಾನಂದ ಸ್ವಾಮೀಜಿ, ಮಾತೋಶ್ರೀ ಜಾನಮ್ಮತಾಯಿ ಸಾನ್ನಿಧ್ಯವಹಿಸಿದ್ದರು, ಪ್ರಥಮ ಧರ್ಜೆ ಗುತ್ತಿಗೆದಾರ ಭೀಮಪ್ಪ ಜೋಗಿ, ರೈನಾಪೂರ ಶ್ರದ್ಧಾನಂದ ಮಠದ ಮಾತೋಶ್ರೀ ಮುದ್ದಮ್ಮತಾಯಿ, ಮಾತೋಶ್ರೀ ಪಾರ್ವತಮ್ಮತಾಯಿ. ಗೋವಿಂದಪ್ಪ ಕಡೆಮನಿ, ವೆಂಕಣ್ಣ ಹುರಕನ್ನವರ, ಹಣಮಂತ ಜೂಗನರ, ಗೋಪಾಲ ಕಡೆಮನಿ, ಇದ್ದರು.



ಕನ್ನಡ ಭಾಷಾ ಪರೀಕ್ಷೆ ಬರೆದ 755 ವಿದ್ಯಾರ್ಥಿಗಳು

ಕುಡಚಿ: ಪಟ್ಟಣದ ಎರಡು ಕೇಂದ್ರಗಳಲ್ಲಿ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪ್ರಥಮ ಭಾಷಾ ಪರೀಕ್ಷೆಯು ಶಾಂತಿ ಸುವ್ಯವಸ್ಥಿತವಾಗಿ ಜರುಗಿತು. ಪಟ್ಟಣದ ಜುನ್ನೇದಿಯಾ ಪ್ರೌಢ ಶಾಲಾ ಪರೀಕ್ಷಾ ಕೇಂದ್ರದಲ್ಲಿ ಸ್ಥಳೀಯ 11 ಹಾಗೂ ಹಾರೂಗೇರಿಯ ಒಂದು ಪ್ರೌಢಶಾಲೆ ಸೇರಿದಂತೆ 406 ವಿದ್ಯಾರ್ಥಿಗಳಲ್ಲಿ 03 ವಿದ್ಯಾರ್ಥಿಗಳು ಗೈರಾಗಿದ್ದು, 192 ಗಂಡು, 212ಹೆಣ್ಣುಮಕ್ಕಳು ಸೇರಿ 403 ವಿದ್ಯಾರ್ಥಿಗಳು ಹಾಗೂ ಹೊಸ ಪ್ರೌಢಶಾಲಾ ಪರೀಕ್ಷಾ ಕೇಂದ್ರದಲ್ಲಿ ಸ್ಥಳೀಯ 11 ಹಾಗೂ ಹಾರೂಗೇರಿ 1 ಪ್ರೌಢ ಶಾಲೆ ಸೇರಿದಂತೆ 167ಗಂಡು, 185ಹೆಣ್ಣು ಸೇರಿ 352 ವಿದ್ಯಾರ್ಥಿಗಳು ಸೇರಿದಂತೆ 755 ವಿದ್ಯಾರ್ಥಿಗಳು ಪ್ರಥಮ ಭಾಷಾ ಪರೀಕ್ಷೆಗೆ ಹಾಜರಾಗುವ ಮೂಲಕ ಶಾಂತಿಯುತವಾಗಿ ಪರೀಕ್ಷೆ ಬರೆದರು. ಪರೀಕ್ಷೆ ನಿರ್ವಹಣೆಯಲ್ಲಿ ಜುನ್ನೇದಿಯಾ ಪ್ರೌಢಶಾಲೆ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಾಗಿ ಐ. ಎನ್.ಪಟೇಲ, ಮುಖ್ಯ ಉಪ ಅಧೀಕ್ಷಕರಾಗಿ ಫರೀದಾ ಬಾಗಸಿರಾಜ, ಪ್ರಶ್ನೆ ಪತ್ರಿಕೆ ಕಸ್ಟೋಡಿಯನರಾಗಿ ಮೋಪಗಾರ, ಹೊಸ ಪ್ರೌಢಶಾಲೆ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಾಗಿ ಎಮ್.ಎ. ಬಾಳಪರವೇಶ, ಮುಖ್ಯ ಉಪ ಅಧೀಕ್ಷಕರಾಗಿ ಜಿ.ಎಸ.ಮೇಲಗಡೆ ಹಾಗೂ 48 ಜನ ಕೋಠಡಿ ಮೇಲ್ವಿಚಾರಕರು, ಸಹಾಯಕರು, ವೈದ್ಯಕೀಯ ಹಾಗೂ ಇತರೆ ಸಿಬ್ಬಂದಿಗಳು ತೊಡಗಿದ್ದರು. ಎರಡು ಪರೀಕ್ಷಾ ಕೇಂದ್ರಗಳಲ್ಲಿ ಪ್ರಥಮ ಭಾಷಾ ಪರೀಕ್ಷೆ ಸುಗಮವಾಗಿ ಸಾಗಲು ಕುಡಚಿ ಪೊಲೀಸ್ ಠಾಣಾ ಸಿಬ್ಬಂದಿಯವರು ಸೂಕ್ತ ಬಂದೋಬಸ್ತ್ ಒದಗಿಸಿದರು.

ಸುನೀಲ್ ಭಾತಕಾಂಡೆಗೆ ಪ್ರಥಮ ಸ್ಥಾನ

ಬೆಳಗಾವಿ: ಜಿಲ್ಲಾ ದೇಹದಾರ್ಢ್ಯ ಪಟುಗಳ ಸಂಘದಿಂದ ಆಯೋಜಿಸಿದ್ದ ಈ ಸ್ಪರ್ಧೆಯಲ್ಲಿ 60 ಕಿಲೋ ವಿಭಾಗದಲ್ಲಿ ತುಷಾರ್ ಗಾವಡೆ ಪ್ರಥಮಸ್ಥಾನ, 65 ಕಿಲೋ ವಿಭಾಗದಲ್ಲಿ ಶ್ರೀನಿವಾಸ ವೋದಗೇಕರ ಪ್ರಥಮಸ್ಥಾನ, 70 ಕಿಲೋ ವಿಭಾಗದಲ್ಲಿ ಯೋಗೇಶ್ ಭಡಗಾವಿ ಪ್ರಥಮಸ್ಥಾನ ಮತ್ತು 70ಕ್ಕೂ ಅಧಿಕ ಕಿಲೋ ವಿಭಾಗದಲ್ಲಿ ಸುನೀಲ್ ಭಾತಕಾಂಡೆ ಪ್ರಥಮಸ್ಥಾನ ಪಡೆದುಕೊಂಡರು.

ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿಸೋಣ: ಪೂಜಾರಿ

ತೆಲಸಂಗ: ಶಿಕ್ಷಣವೆಂದರೆ ಕೇವಲ ಸರ್ಕಾರಿ ನೌಕರಿ ಪಡೆಯುವುದಲ್ಲ, ಅದು ಜ್ಞಾನಕ್ಕಾಗಿ ಮತ್ತು ಬದುಕಿನ ಶ್ರೇಷ್ಠ ಹೆಜ್ಜೆಗಾಗಿ ಎಂಬುದನ್ನು ಪಾಲಕರು ಅರಿಯಬೇಕಿದೆ ಎಂದು ಮುಖ್ಯ ಶಿಕ್ಷಕ ಶಿವಾನಂದ ಪೂಜಾರಿ ಹೇಳಿದರು.

ಗ್ರಾಮದ ಸರ್ಕಾರಿ ಶಾಸಕರ ಮಾದರಿ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಸಾಧಕ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣಾ ಹಾಗೂ ಎಂಟನೇ ತರಗತಿಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಸಿಗುವ ಶಿಕ್ಷಣ ಕೇವಲ ಅಕ್ಷರಗಳ ಕಲಿಕೆಯಲ್ಲ, ಅದು ಮಣ್ಣಿನ ವಾಸನೆ ಇರುವ ಜವಾರಿ ಶಿಕ್ಷಣ. ಇಲ್ಲಿ ಕಲಿತು ಬೆಳೆದ ಮಕ್ಕಳು ಬದುಕಿನ ಕಠಿಣ ಸವಾಲುಗಳನ್ನು ಎದುರಿಸುವ ಶಕ್ತಿಯನ್ನು ಸಹಜವಾಗಿಯೇ ಮೈಗೂಡಿಸಿಕೊಂಡಿರುತ್ತಾರೆ. ಕಲಿಕೆಗೆ ಬಡವ-ಸಿರಿವಂತ ಎಂಬ ಭೇದವಿಲ್ಲ, ಸಾಧಿಸುವ ಛಲ ಒಂದಿದ್ದರೆ ಸಾಕು, ಸರ್ಕಾರಿ ಶಾಲೆಯ ಮಗು ಆಕಾಶವನ್ನೇ ಮುಟ್ಟಬಲ್ಲದು. ಪರೀಕ್ಷೆಯಲ್ಲಿ ಹಗಲು-ರಾತ್ರಿ ಓದಿ ಚಿನ್ನದ ಪದಕ ಪಡೆದರೆ ಮಾತ್ರ ಸಾಲದು. ಸೋಲನ್ನು ಎದುರಿಸುವ ಧೈರ್ಯ, ಸಮಾಜದಲ್ಲಿ ಮಾನವೀಯ ಮೌಲ್ಯಗಳೊಂದಿಗೆ ಬದುಕುವ ಕಲೆ ನಮಗೆ ಮುಖ್ಯ. ತಂದೆ-ತಾಯಿ, ಬಂಧು-ಬಾಂಧವರನ್ನು ಗೌರವದಿಂದ ಕಾಣುವ ಸಂಸ್ಕಾರ ಇಲ್ಲದಿದ್ದರೆ ಆ ಪದಕಗಳಿಗೆ ಬೆಲೆಯಿಲ್ಲ. ಇಂತಹ ಸಂಸ್ಕಾರಯುತ ಶಿಕ್ಷಣ ನೀಡಲು ಸರ್ಕಾರಿ ಶಾಲೆಗಳು ಅತ್ಯಂತ ಸೂಕ್ತ ವೇದಿಕೆ. ಮಕ್ಕಳಿಗೆ ನೆಗೆಟಿವ್ ಮಾತುಗಳನ್ನು ಹೇಳಿ ಅವರ ಆತ್ಮಸ್ಥೈರ್ಯ ಕುಂದಿಸುವುದಕ್ಕಿಂತ, ನಿನ್ನಿಂದ ಸಾಧ್ಯ ಎಂಬ ಪಾಸಿಟಿವ್ ಮಾತುಗಳ ಮೂಲಕ ಅವರ ಶಕ್ತಿಯನ್ನು ಹೆಚ್ಚಿಸಬೇಕಿದೆ. ವಿಶೇಷವಾಗಿ ನಮ್ಮ ಬೆಳಗಾವಿ ಜಿಲ್ಲೆಯ ಮಹಾರಾಷ್ಟ್ರ ಮತ್ತು ಕರ್ನಾಟಕದ ಗಡಿಯಲ್ಲಿರುವ ಕನ್ನಡ ಸರ್ಕಾರಿ ಶಾಲೆಗಳು ನಮ್ಮ ಅಸ್ಮಿತೆಯ ಸಂಕೇತ. ಇವು ಕೇವಲ ಕಟ್ಟಡಗಳಲ್ಲ, ಕನ್ನಡದ ದೀಪಗಳು. ಈ ಶಾಲೆಗಳು ಉಳಿಯಬೇಕು ಮತ್ತು ಬೆಳೆಯಬೇಕು. ಇದು ನಮ್ಮೆಲ್ಲರ ಜವಾಬ್ದಾರಿ. ಮಕ್ಕಳನ್ನು ಕೇವಲ ಅಂಕಗಳ ಯಂತ್ರಗಳನ್ನಾಗಿ ಮಾಡದೆ, ಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡೋಣ. ಸರ್ಕಾರಿ ಶಾಲೆಗಳನ್ನು ಉಳಿಸೋಣ, ಬೆಳೆಸೋಣ ಎಂದರು.

ಶಿಕ್ಷಕಕರಾದ ಎ.ಕೆ.ಕಾಂಬಳೆ, ಪಿ.ಎ.ಹೆಗಡೆ, ಎ.ಜೆ.ಕೋಳಿ, ಎಸ್.ಪಿ.ಹಡಪದ, ಎ.ಎಂ. ಮಸಬನಾಳ, ವಿ.ಬಿ.ಪತ್ತಾರ, ಮೇಘಾ ಗುಡದಿನ್ನಿ, ಮಹಾದೇವಿ ಖ್ಯಾಡಿ, ಡಿ.ಎಮ್. ಕೋಟ್ಯಾಳ ಸೇರಿದಂತೆ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.



ಪೊಲೀಸ್ ಠಾಣೆಯ ಕಾರ್ಯವೈಖರಿ ತಿಳಿದ ವಿದ್ಯಾರ್ಥಿಗಳು

ಕುಡಚಿ: ನಿಲಜಿ ಗ್ರಾಮದ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳು ಪೊಲೀಸ್ ಠಾಣೆಯ ಮಾಹಿತಿ ಪಡೆದುಕೊಂಡರು.

ನಿಲಜಿ ಗ್ರಾಮದ ಪಬ್ಲಿಕ್ ಶಾಲೆಯ ಪ್ರೌಢಶಾಲೆಯ ಸುಮಾರು 60ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಶಿಕ್ಷಕರು ಕುಡಚಿ ಠಾಣೆಗೆ ಭೇಟಿ ನೀಡಿ ಅಧಿಕಾರಿಗಳಿಂದ ತೆರೆದ ಮನೆ ಕಾರ್ಯಕ್ರಮದಡಿ ಠಾಣೆಯ ಮಾಹಿತಿ ಪಡೆದರು.

ಎ.ಎಸ್.ಐ ಸುರೇಶ ಕಲ್ಯಾಣಪೂರಕರ ಮಾತನಾಡಿ, ಠಾಣೆಯ ನಿಯಮಗಳು, ಬಂಧಿಖಾನೆಗಳ ಮಾಹಿತಿ ನೀಡುವ ಮೂಲಕ 18 ವರ್ಷಗಳೊಳಗಿನ ಅಪ್ರಾಪ್ತ ಮಕ್ಕಳು ವಾಹನ ಚಲಾಯಿಸುವುದರಿಂದ ಆಗುವ ಅನಾಹುತಗಳು, ಲೈಸನ್ಸ್ ಇಲ್ಲದೆ ವಾಹನ ಚಲಾಯಿಸಿದರೆ ಆಗುವ ಸಮಸ್ಯೆಗಳು, ಹೆಲ್ಮೆಟ್ ಇಲ್ಲದೆ ವಾಹನ ಚಲಾಯಿಸಿದರೆ ಏನಾಗುತ್ತದೆ. ಮಕ್ಕಳ ಕಾನೂನು, ಪೋಸ್ಕೋ ಕಾಯಿದೆ, ಸಾರ್ವಜನಿಕ ಸ್ಥಳಗಳಲ್ಲಿ ಮಕ್ಕಳು ಹೇಗಿರಬೇಕು ಎಂಬುದನ್ನು ವಿದ್ಯಾರ್ಥಿಗಳಿಗೆ ಪೊಲೀಸ್ ಠಾಣೆ ಹಾಗೂ ಅಪರಾಧ, ಜಾಗೃತಿ, ಮಕ್ಕಳ ಕಾನೂನುಗಳ ಅವಶ್ಯ ಮಾಹಿತಿ ನೀಡಿದರು. ಈ ಸಂಧರ್ಭದಲ್ಲಿ ಸಿಬ್ಬಂದಿಗಳಾದ ಬಬಲೇಶ್ವರ, ಸಂಜೀವ ಕಾಂಬಳೆ, ಮಹಿಳಾ ಸಿಬ್ಬಂದಿ ಪೂಜಾ ನಾಯಿಕ ಇತರರು ಉಪಸ್ಥಿತರಿದ್ದರು.



ಇಂದಿನಿಂದ ಹಳೆ ಗುಡಗನಹಟ್ಟಿ ಬ್ರಹ್ಮದೇವರ ಜಾತ್ರಾ ಮಹೋತ್ಸವ

ಯಮಕನಮರಡಿ: ಧರ್ಮಗಳ ಬೀಡಾದ ನಮ್ಮ ಕನ್ನಡ ನಾಡು ಆಧ್ಯಾತ್ಮಿಕ ಬೀಡು ಅಪಾರ ಹಳ್ಳಿ ಪಟ್ಟಣಗಳಲ್ಲಿ ಅತಿ ಪೂರ್ವದಿಂದಲೂ ಸ್ಥಾಪನೆಗೊಂಡಿರುವ ದೇವಸ್ಥಾನಗಳು ಇಂದಿಗೂ ಗತವೈಭವದಿಂದ ರಾರಾಜಿಸುತ್ತ ಇರುವುದೊಂದು ಹೆಮ್ಮೆಪಡುವ ಸಂಗತಿ.

ಸನಾತನ ಧರ್ಮದಿಂದ ಕೂಡಿರುವ ನಮ್ಮ ದೇಶ, ನಾಡು, ಹಳ್ಳಿ, ಪಟ್ಟಣಗಳು ಇಂದಿಗೂ ತಮ್ಮ ಆಚಾರ ವಿಚಾರ ಸಂಪ್ರದಾಯ ಚಾಚು ತಪ್ಪದೇ ಆಚರಿಸುತ್ತಾ ಬಂದಿರುವ ಈ ನಮ್ಮ ನಾಡಿನಲ್ಲಿ ಜಾಗೃತ ದೇವಸ್ಥಾನಗಳು ಇಂದಿಗೂ ತಮ್ಮ ವೈಭವದೊಂದಿಗೆ ನಂಬಿದ ಭಕ್ತರ ಕಾಮಧೇನು ಗಳಾಗಿ ಸಾಕ್ಷಾತ್ಕಾರ ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲೂಕಿನ ಒಂದು ಧಾರ್ಮಿಕವಾದ ಗ್ರಾಮ ಅದೇ ಹಳೆ ಗುಡಗನಟ್ಟಿ ಗ್ರಾಮ ಈ ಗ್ರಾಮವು ಘಟಪ್ರಭಾ ನದಿ ತೀರದಲ್ಲಿ ಇರುವುದರಿಂದ ಇದಕ್ಕೆ ಪುಣ್ಯಕ್ಷೇತ್ರ ಎಂದು ಕರೆಯಲ್ಪಡುತ್ತಿದ್ದರು. ಆದರೆ, ಇತ್ತೀಚಿನ ಆಧುನಿಕ ಯುಗದಲ್ಲಿ ಬರಡು ಭೂಮಿಗಳನ್ನು ಹಸಿರನ್ನಾಗಿ



ಮಾಡಲು ಸರ್ಕಾರ ಮುಂದೆ ಬಂದು ಅನೇಕ ನದಿಗಳಿಗೆ ಆಣೆಕಟ್ಟುಗಳನ್ನು ಕಟ್ಟಿ ರೈತರಿಗೆ ನೀರಿನ ಸೌಲಭ್ಯ ಒದಗಿಸಿ ಕೊಟ್ಟಿರುವದೊಂದು ಸಂತಸದ ಸಂಗತಿ ಆದರೆ ಅದರ ಜೊತೆಗೆ ನೋವಿನ ಸಂಗತಿಯು ಇರುತ್ತದೆ.

ಹುಕ್ಕೇರಿ ತಾಲೂಕಿನಲ್ಲಿ ಹರಿದಿರುವ ನದಿಗಳಲ್ಲಿ ಘಟಪ್ರಭಾ ನದಿಯು ಪವಿತ್ರವಾದ ನದಿಯು ಈ ನದಿಯ ದಡದಲ್ಲಿ ಅನೇಕ ದೇವಸ್ಥಾನಗಳು ಇದ್ದವು. ಆದರೆ, ಸದರಿ ನದಿಗೆ ಸರ್ಕಾರವು ಬೃಹತ್ ಗಾತ್ರದ ಆಣೆಕಟ್ಟನ್ನು ಕಟ್ಟಿ ಇಡಿ ಒಂಟಮೊರಿ ಸಂಸ್ಥಾನವನ್ನು ಮುಳುಗಿಸಿ ಬಿಟ್ಟಿತು. ಅದರಲ್ಲಿ ಒಂದಾದ ಹಳೆ ಗೂಡಗನಟ್ಟಿ ಗ್ರಾಮ. ಈ ಗ್ರಾಮದ ಜಾಗ್ರತ ದೇವಸ್ಥಾನ ಶ್ರೀ ಬ್ರಹ್ಮದೇವರ ದೇವಸ್ಥಾನ ಅದು ಸಹಿತ ಹಿಡಕಲ್ ಜಲಾಶಯ ಹಿನ್ನಿರಿನಲ್ಲಿ ಮುಳುಗಡೆ ಹೊಂದಿ ಪಕ್ಕದ ಎತ್ತರ ಪ್ರದೇಶದಲ್ಲಿ ಹೊಸ ಗ್ರಾಮವು ನಿರ್ಮಾಣವಾಗಿ ಅದೇ ಗ್ರಾಮದಲ್ಲಿ ಮತ್ತೊಂದು ಬ್ರಹ್ಮದೇವರ ದೇವಸ್ಥಾನ ನಿರ್ಮಾಣಗೊಂಡಿತು. ಆದರೂ, ಸಹಿತ ಸದರಿ ಹಳೆ ಗೂಡಗನಟ್ಟಿ ಗ್ರಾಮದ ಜನರು ಅತಿ ಪೂರ್ವದಿಂದ ಸದರಿ ದೇವಸ್ಥಾನದ ಪ್ರತಿವರ್ಷದ ಹೊಸ ವರ್ಷದ ಮುಂಚಿತ ಜಾತ್ರೆ ಸಮಾರಂಭ ಮಹಾಪ್ರಸಾದ ಪಲ್ಲಕ್ಕಿ ಉತ್ಸವ ಆಚರಿಸುತ್ತ ಬಂದಿರುವ ಸಂಪ್ರದಾಯ. ಇಂದಿಗೂ ರೂಢಿಯಲ್ಲಿ ಇರುತ್ತದೆ. ಅದರಂತೆ, ಬರುವ ಮಾ.23ರಿಂದ ಮಾ. 24ವರೆಗೆ ಜರಗುವ ಬ್ರಹ್ಮದೇವರ ಜಾತ್ರೆಯು ಅತಿ ವಿಜ್ರಂಭಣೆಯಿಂದ ಜರುಗಲಿದೆ ಎಂದು ಯಾತ್ರಾ ಕಮಿಟಿ ತಿಳಿಸಿದೆ ಜಾತ್ರೆಯ ಅಂಗವಾಗಿ ವಿವಿಧ ಸ್ಪರ್ಧೆಗಳು ಪಲ್ಲಕ್ಕಿ ಉತ್ಸವ ನಡೆಯಲಿದೆ.

ನಾಡಿನ ಉದ್ದಕ್ಕೂ ಅನೇಕ ದೇವಸ್ಥಾನಗಳು ನದಿಗಳಲ್ಲಿ ಮುಳುಗಿ ಹೋದರು ಸಹಿತ ಜನರಲ್ಲಿಯ ಭಕ್ತಿ ಮಾತ್ರ ಮುಳುಗಿಲ್ಲ ಎಂಬುದಕ್ಕೆ ಸಾಕ್ಷಿಯಾಗಿರುವ ಹಳೆ ಗೂಡಗನಟ್ಟಿ ಗ್ರಾಮದ ಶ್ರೀ ಬ್ರಹ್ಮದೇವರ ಜಾತ್ರೆಯು ಸಾಕ್ಷಿಯಾಗಿದೆ.

ಶಾಸಕರಿಂದ ಹೊಲಿಗೆ ಯಂತ್ರ ವಿತರಣೆ



ರಾಯಬಾಗ: ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಸ್ವಾವಲಂಬನೆ ಸಾಧಿಸಲು ಸಹಕಾರಿಯಾಗುವ ಉದ್ದೇಶದಿಂದ ಹೊಲಿಗೆ ಯಂತ್ರಗಳನ್ನು ವಿತರಿಸಲಾಗುತ್ತಿದೆ ಎಂದು ಶಾಸಕ ಡಿ.ಎಂ. ಐಹೊಳೆ ಹೇಳಿದರು.

ಪಟ್ಟಣದ ಶಾಸಕರ ಸ್ವಗೃಹದ ಬಳಿ ನಡೆದ ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಿ ಅವರು ಮಾತನಾಡಿದರು.

'ಮಹಿಳೆಯರು ಸ್ವಂತ ಉದ್ಯಮ ಆರಂಭಿಸಿ ಕುಟುಂಬದ ಆರ್ಥಿಕ ಸ್ಥಿತಿಯನ್ನು ಬಲಪಡಿಸಿಕೊಳ್ಳಬೇಕು. ಸಾರ್ವಜನಿಕರು ವಿವಿಧ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳ ಬಹುದು' ಎಂದು ತಿಳಿಸಿದರು.

ಈ ಯೋಜನೆಯ ಮೂಲಕ ಹಲವು ಮಹಿಳೆಯರಿಗೆ ಉದ್ಯೋಗಾವಕಾಶ ಸಿಗಲಿದ್ದು, ಇದು ಸ್ವಾವಲಂಬನೆಗೆ ದಾರಿ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಸದಾಶಿವ ಗೊರ್ಪಡೆ, ಅಣ್ಣಾಸಾಹೇಬ ಖೇಮಲಾಪುರೆ, ಸದಾನಂದ ಹಳಿಂಗಳಿ, ಅರುಣ ಐಹೊಳೆ, ಗೋಪಾಲ ಕೊಚೇರಿ, ಮಹೇಶ ಕರಮಡಿ, ಮಾರುತಿ ಬಂತೆ, ಅನೀಲ್ ಕೊರವಿ, ಭಾರತಿ ಲೋಹಾರ ಸೇರಿ ಇತರರು ಇದ್ದರು.

ಕುಡಚಿಯಲ್ಲಿ ಸಂಭ್ರಮದ ರಂಜಾನ್ ಆಚರಣೆ

ಕುಡಚಿ: ಪಟ್ಟಣದ ಕೃಷ್ಣಾ ನದಿ ದಡದಲ್ಲಿ ಇರುವ ಐತಿಹಾಸಿಕ ಈದ್ಗಾದಲ್ಲಿ ಹಾಗೂ ಪಟ್ಟಣದ ವಿವಿಧ ಭಾಗಗಳ ಮಸೀದಿಗಳಲ್ಲಿ ಸಹಸ್ರಾರು ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಪವಿತ್ರ ರಂಜಾನ್ ಮಾಸ ತಿಂಗಳ ಪರ್ಯಂತ ಉಪವಾಸ ಆಚರಣೆ ಮಾಡಿ ಶನಿವಾರ ಪಟ್ಟಣದ ಈದ್ಗಾ ಹಾಗೂ ಮಸೀದಿಗಳಲ್ಲಿ ವೃದ್ಧರು, ಚಿಕ್ಕಮಕ್ಕಳು ಇತರರು ಬೆಳಗಿನ ಪ್ರಾರ್ಥನೆಗಳನ್ನು ಸಲ್ಲಿಸಿ ಈದ್-ಉಲ್-ಫಿತರ್ ಹಬ್ಬವನ್ನು ಬಹಳ ಸಂತೋಷ ಮತ್ತು ಸಹೋದರತ್ವದಿಂದ ಆಚರಿಸಲಾಯಿತು.

ನಂತರ ಜನರು ಪರಸ್ಪರ ಕೈಕುಲುಕಿ ಆಲಿಂಗ ಮಾಡಿ ಶುಭಾಶಯ ವಿನಿಮಯ ಮಾಡಿಕೊಂಡರು ತಮ್ಮ ಮೃತ ಹಿರಿಯರ ಸಮಾದಿಗಳಿಗೆ ತೆರಳಿ ಹೂಮಾಲೆ ಹಾಕಿ ನಮನ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಸಾಮೂಹಿಕ ನಮಾಜ್ ನಂತರ ಈದ್ಗಾ ಹತ್ತಿರ ಕುಡಚಿ ಶಾಸಕ ಮಹೇಂದ್ರ ತಮಣ್ಣವರ ಮುಸ್ಲಿಂ ಬಾಂದವರನ್ನು ಭೇಟಿ ಮಾಡಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಹಮಿದೋದಿನ ರೋಹಿಲೆ, ಅಶ್ಪಾಕ್ ಅಲಾಲಖಾನ್, ಅಲಿಮುರ್ತಜಾ ಚಮನಮಲಿಕ್, ಮುಶ್ತಿಕ್ ಜಿನಾಬಡೆ, ಅಬ್ದುಲ್ ಖಾದರ್ ರೋಹಿಲೆ, ಮಾಪಾಶಾ ಚಮನಶೇಖ, ಇತರರು ಉಪಸ್ಥಿತರಿದ್ದರು. ಸಾಮೂಹಿಕ ಪ್ರಾರ್ಥನೆ ಶಾಂತಿ ಸುವ್ಯವಸ್ಥಿತವಾಗಿ ಜರುಗಲು ಸಿಪಿಐ ರತನಕುಮಾರ ಜಿರಗ್ಯಾಳ, ಪಿಎಸ್ಐ ಪ್ರೀತಮ್ ನಾಯಿಕ ನೇತೃತ್ವದಲ್ಲಿ ಸೂಕ್ತ ಬಂದು ಬಸ್ತಿ ಒದಗಿಸಲಾಗಿತ್ತು.



ಧರಣಿ ಸತ್ಯಾಗ್ರಹಕ್ಕೆ ಶಾಸಕ ಮಹಾಂತೇಶ ಕೌಜಲಗಿ ಭೇಟಿ

ಬೈಲಹೊಂಗಲ: ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ನಡೆಯುತ್ತಿರುವ ಕಿತ್ತೂರು ರಾಣಿ ಚೆನ್ನಮ್ಮಾಜಿ ಅಭಿವೃದ್ಧಿ ಸಂಬಂಧಿತ ಧರಣಿ ಸತ್ಯಾಗ್ರಹ 14ನೇ ದಿನಕ್ಕೆ ಕಾಲಿಟ್ಟಿದ್ದು, ಈ ವೇಳೆ ಶಾಸಕ ಮಹಾಂತೇಶ ಕೌಜಲಗಿ ಸ್ಥಳಕ್ಕೆ ಭೇಟಿ ನೀಡಿ ಸತ್ಯಾಗ್ರಹ ಕೈಬಿಡುವಂತೆ ಮನವಿ ಮಾಡಿಕೊಂಡರು.

ವೀರರಾಣಿ ಕಿತ್ತೂರು ಚನ್ನಮ್ಮಾಜಿ ಅವರ ಐಕ್ಯಸ್ಥಳವನ್ನು ರಾಷ್ಟ್ರೀಯ ಸ್ಮಾರಕವಾಗಿ ಘೋಷಿಸಬೇಕು ಹಾಗೂ ರಾಕ್ ಗಾರ್ಡನ್ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರದಿಂದ 200 ಕೋಟಿ ರೂ.ಅನುದಾನ ನೀಡಬೇಕೆಂದು ಆಗ್ರಹಿಸಿ ವಿವಿಧ ಸಂಘಟನೆಗಳು ಧರಣಿ ನಡೆಸುತ್ತಿರುವ ಹಿನ್ನಲೆ, ಧರಣಿ ಸ್ಥಳಕ್ಕೆ ಭೇಟಿ ನೀಡಿದ ಶಾಸಕರು ಸತ್ಯಾಗ್ರಹಿಗಳೊಂದಿಗೆ ಚರ್ಚೆ ನಡೆಸಿ, ನಿಮ್ಮ ಮನವಿಗಳಿಗೆ ನಾನು ಸ್ಪಂದಿಸುವೆ. ಚನ್ನಮ್ಮಾಜಿ ಐಕ್ಯಸ್ಥಳವನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದ್ದು, ಚರಿತ್ರೆ ಸಾರುವ ರಾಕ್ ಗಾರ್ಡನ್ ನಿರ್ಮಿಸಲಾಗಿದೆ.

ಸ್ಥಳವು ಚಿಕ್ಕದಾಗಿರುವು ದರಿಂದ ಹಿಂಭಾಗದ ಜಾಗೆಯನ್ನು ಸಾರ್ವಜನಿಕರು ಸರ್ಕಾರಕ್ಕೆ ನೀಡಿದರೆ ಇನ್ನಷ್ಟು ಅಭಿವೃದ್ಧಿ ಸಾಧ್ಯ ಎಂದು ಹೇಳಿದರು.

ರಾಷ್ಟ್ರೀಯ ಸ್ಮಾರಕದ ಬೇಡಿಕೆ ಕುರಿತು ಪ್ರತಿಕ್ರಿಯಿಸಿದ ಅವರು, ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ. ಕೇಂದ್ರದ ಮಟ್ಟದಲ್ಲಿ ಅನುಮೋದನೆ ದೊರಕಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

"ಬ್ರಿಟಿಷರ ವಿರುದ್ಧ ಹೋರಾಡಿದ ಪ್ರಥಮ ಮಹಿಳೆ ಚೆನ್ನಮ್ಮಾಜಿ ದೇಶದ ಹೆಮ್ಮೆ. ಅವರ ಅಭಿವೃದ್ಧಿ ಕಾರ್ಯಗಳಲ್ಲಿ ನಾನು ಸದಾ ನಿಮ್ಮೊಂದಿಗೆ ಇರುತ್ತೇನೆ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡೋಣ" ಎಂದು ಕರೆ ನೀಡಿದರು.

ಸತ್ಯಾಗ್ರಹಿಗಳ ಪರವಾಗಿ ರಫೀಕ್ ಬಡೇಘರ ಹಾಗೂ ಶಿವಾನಂದ ಕೋಲಕಾರ ಮಾತನಾಡಿ, ಮುಖ್ಯಮಂತ್ರಿಗಳೊಂದಿಗೆ ನಿಯೋಗದ ಚರ್ಚೆಗೆ ಅವಕಾಶ ಕಲ್ಪಿಸಬೇಕೆಂದು ಮನವಿ ಮಾಡಿದಾಗ, ಶಾಸಕರು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ನಿಯೋಗವನ್ನು ಕರೆದುಕೊಂಡು ಹೋಗುವ ಭರವಸೆ ನೀಡಿದರು.



ಅಭಿವೃದ್ಧಿ ಕಾಮಗಾರಿಯಲ್ಲಿ ಭ್ರಷ್ಟಾಚಾರ ಇಲ್ಲ

ಚನ್ನಮ್ಮಾಜಿ ಐಕ್ಯಸ್ಥಳ ಅಭಿವೃದ್ಧಿ ಹಾಗೂ ರಾಕ್ ಗಾರ್ಡನ್ ನಿರ್ಮಾಣದಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿಲ್ಲ. ಕೇಂದ್ರ, ಸರ್ಕಾರ ಅಥವಾ ಸಂಬಂಧಪಟ್ಟವರು ತನಿಖೆ ನಡೆಸಬಹುದು. ನಾನು ಪಾರದರ್ಶಕತೆ ಮತ್ತು ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿದ್ದೇನೆ ಎಂದು ಶಾಸಕ ಮಹಾಂತೇಶ ಕೌಜಲಗಿ ಸ್ಪಷ್ಟಪಡಿಸಿದರು.

ಮೇನಲ್ಲಿ ಮತ್ತೆ ತುಂಗಭದ್ರಾ ಹೂಳಿನ ಜಾತ್ರೆ: ಡಾ.ಜೆ.ಪುರುಷೋತ್ತಮ ಗೌಡ



ಬಳ್ಳಾರಿ: ಲಕ್ಷಾಂತರ ರೈತರ ಜೀವನಾಡಿ ತುಂಗಭದ್ರಾ ಜಲಾಶಯದಲ್ಲಿ 33ಕ್ಕೂ ಹೆಚ್ಚು ಟಿಎಂಸಿ ಹೂಳು ತುಂಬಿದ್ದು, ಬರುವ ಮೇ ತಿಂಗಳಲ್ಲಿ ನಮ್ಮ ರೈತರ ನೇತೃತ್ವದಲ್ಲಿ ಜಲಾಶಯದ ಹೂಳೆತ್ತುವ ಮೂಲಕ ಸರ್ಕಾರದ ಗಮನ ಸೆಳೆಯಲಾಗುವುದು ಎಂದು ತುಂಗಭದ್ರಾ ರೈತಸಂಘದಸಂಸ್ಥಾಪಕ ಅಧ್ಯಕ್ಷ ಡಾ.ಜಿ.ಪುರುಷೋತ್ತಮ ಗೌಡ ಅವರು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಲಾಶಯದಲ್ಲಿ ವರ್ಷದಿಂದ ವರ್ಷಕ್ಕೆ ಹೂಳು ಸಂಗ್ರಹವಾಗುತ್ತಿದ್ದು, ನೀರಿನ ಸಂಗ್ರಹಣೆ ಪ್ರಮಾಣ ಕಡಿಮೆಯಾಗುತ್ತಾ ಬರುತ್ತಿದೆ. ಇದರಿಂದ ವ್ಯಾಪ್ತಿಯ ಎಲ್ಲ ರೈತರಿಗೂ ನೀರಿನ ಸಾಕಷ್ಟು ತೊಂದರೆ ಅನುಭವಿಸುವಂತಾಗಿದೆ. ಆಳುವ ಸರ್ಕಾರಗಳು ಹೂಳು ತೆರವುಗೊಳಿಸಲು ಮುಂದಾಗದ ಹಿನ್ನೆಲೆ ರೈತರ ಪಾಡು ಹೇಳತೀರದಾಗಿದೆ. ಕಳೆದ 2017ರಲ್ಲಿ ನಮ್ಮರೈತರೊಂದಿಗೆ, ವಿವಿಧಮಠಗಳ ಸ್ವಾಮೀಜಿಗಳು, ಪಕ್ಷಾತೀತವಾಗಿ ಎಲ್ಲ ನಾಯಕರು, ಉದ್ಯಮಿಗಳ ಸಹಕಾರದಿಂದ ಜಲಾಶಯದಲ್ಲಿ ಹೂಳೆತ್ತುವ ಮೂಲಕ ಸರ್ಕಾರದ ಗಮನಸೆಳೆದಿದ್ದೆವು. ಆದರೂ ಇಲ್ಲಿವರೆಗೆ ಯಾವುದೇ ಕ್ರಮವಿಲ್ಲ, ನಮ್ಮ ರೈತರ ಟ್ರ್ಯಾಕ್ಟರ್ ಸೇರಿ ವಿವಿಧ ವಾಹನಗಳ ಮೂಲಕ ಸುಮಾರು ಅರ್ಧ ಟಿಎಂಸಿ ಹೂಳನ್ನು ತೆರವುಗೊಳಿಸಲಾಗಿತ್ತು. ಇಲ್ಲಿವರೆಗೂ ಸರ್ಕಾರಗಳು ಹೂಳು ತೆರವಿಗೆ ಆಗತ್ಯ ಕ್ರಮ ಕೈಗೊಂಡಿಲ್ಲ, ಈ ಹಿನ್ನೆಲೆಯಲ್ಲಿ ಮತ್ತೆ ನಮ್ಮ ರೈತರು ಸೇರಿದಂತೆ ಎಲ್ಲರ ಸಹಕಾರದಿಂದ ಮುಂಬರುವ ಮೇ ತಿಂಗಳಲ್ಲಿ ಹೂಳು ತೆರವುಗೊಳಿಸುವ ಕಾರ್ಯಕ್ಕೆ ಚಾಲನೆ ನೀಡಲಾಗುವುದು. ಇದಕ್ಕೆ ಪ್ರತಿಯೊಬ್ಬರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಜಲಾಶಯದಲ್ಲಿ ಹೂಳು ತುಂಬಿದ ಹಿನ್ನೆಲೆ ಇದನ್ನು ತೆರವುಗೊಳಿಸಿ ಎಂದು ನಾವು ಸರ್ಕಾರಕ್ಕೆ ಮನವಿ ಮಾಡಿದರೆ, ಅದು ಕಷ್ಟದ ಕೆಲಸ ಸಾಕಷ್ಟು ಜಮೀನುಗಳು ಬೇಕಾಗಲಿವೆ. ಇದಕ್ಕೆ ಪರ್ಯಾಯವಾಗಿ ನವಲಿ ಬಳಿ 200 ಕೋಟಿ ವೆಚ್ಚದಲ್ಲಿ ಸಮಾನಾಂತರ ಜಲಾಶಯ ನಿರ್ಮಾಣ ಮಾಡಲಾಗುವುದು ಎಂದು ಹೇಳುತ್ತಿದೆ. ಇಲ್ಲಿವರೆಗೂ ಒಂದು ಪೈಸೆ ಕೆಲಸವು ನಡೆದಿಲ್ಲ, ಇದು ರೈತರ ಮೂಗಿಗೆ ತುಪ್ಪ ಸುರಿವ ಕೆಲಸವಾಗಿದೆ. ಆಳುವ ಸರ್ಕಾರಗಳು ಮನಸ್ಸು ಮಾಡಿದ್ರೆ, ಯಾವುದೂ ಅಸಾಧ್ಯವಲ್ಲ, ಹೂಳು ತೆರವುಗೊಳಿಸಿದರೆ ಕೊನೆ ಭಾಗದ ಎಲ್ಲ ರೈತರಿಗೂ ಸಮೃದ್ಧಿ ನೀರು ದೊರೆಯಲಿದೆ. ಈ ಹಿನ್ನೆಲೆಯಲ್ಲಿ ಮತ್ತೆ ಸರ್ಕಾರದ ಗಮನಸೆಳೆಯಲು ಹೂಳೆತ್ತುವ ಕಾರ್ಯಕ್ಕೆ ಚಾಲನೆ ನೀಡಲಾಗುವುದು. ಎಲ್ಲರ ಸಹಕಾರ ಇರಲಿ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜಾಲಿಹಾಳ ಶ್ರೀಧರ ಗೌಡ, ವೀರಭದ್ರ ನಾಯಕ, ದರೂರ ವೀರೇಶ್ ಸೇರಿದಂತೆ ಇತರರಿದ್ದರು.

ಲವ್ ಜಿಹಾದ್‌ಗೆ ಕಡಿವಾಣ ಹಾಕಿ: ಹೇಮಲತಾ

ಯಲಬುರ್ಗಾ: ಪ್ರತಿಯೊಬ್ಬ ಮಹಿಳೆಯರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನಡೆನುಡಿ, ಸಂಸ್ಕಾರ ಕೊಡಿಸುವತ್ತ ಹೆಚ್ಚು ಗಮನಹರಿಸಬೇಕು ಎಂದು ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ ಹೇಳಿದರು.

ಪಟ್ಟಣದ ಶ್ರೀಸಾಯಿ ಪ್ಯಾಲೆಸ್‌ನಲ್ಲಿ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಹಿಂದೂ ಹೆಣ್ಮಕ್ಕಳನ್ನು ಗುರಿಯಾಗಿಸಿಕೊಂಡು ಕೆಲ ಅನ್ಯಕೋಮಿನ ಯುವಕರು ಲವ್ ಜಿಹಾದ್‌ನಂತಹ ಪ್ರಕರಣಗಳು ನಡೆಯುತ್ತಿವೆ ಇವುಗಳಿಗೆ ಕಡಿವಾಣ ಹಾಕುವ ಮೂಲಕ ನಾವುಗಳು ಎಚ್ಚೆತ್ತುಕೊಂಡು ಅಂತಹವರಿಗೆ ಸರಿಯಾದ ಪಾಠ ಕಲಿಸುವ ಕಾರ್ಯ ಮಹಿಳೆಯರಿಂದಲೆ ಆಗಬೇಕು ಅಂದಾಗ ನಮ್ಮಕ್ಕಳನ್ನು ನಾವು ಸುರಕ್ಷಿತವಾಗಿ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ದಿಟ್ಟ ಮಹಿಳೆ ಪ್ರಪ್ರಥಮ ಶಿಕ್ಷಕಿ ಸಾವಿತ್ರಿಬಾಯಿ ಫುಲೆಯವರು ಎಷ್ಟು ಕಷ್ಟ,ಕಾರ್ಪಣ್ಯವನ್ನು ಅನುಭವಿಸಿ ಈ ದೇಶಕ್ಕೆ ಒಬ್ಬ ಆದರ್ಶ ಶಿಕ್ಷಕಿಯಾಗಿ ಮಾದರಿಯಾಗಿದ್ದಾಳೆ ಎಂದರು.

ಜಿಲ್ಲಾ ಮೋರ್ಚಾಧ್ಯಕ್ಷೆ ರತ್ನಾ ಕುಮಾರಿ,ರಾಜ್ಯ ಸಮಿತಿ ಸದಸ್ಯೆ ವಾಣಿಶ್ರೀ ಹಿರೇಮಠ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೀರ್ತಿ ಪಾಟೀಲ ಮಾತನಾಡಿ, ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಸಮಾನ ಸ್ಥಾನಮಾನ ಪಡೆಯಲು ಅರ್ಹಳಾಗಿದ್ದಾಳೆ. ಸಮಾಜದಲ್ಲಿ ನಮ್ಮನ್ನು ಗೌರವದಿಂದ ಕಾಣುವ ಕಾರ್ಯವಾಗಬೇಕು ಎಂದು ಹೇಳಿದರು. ತಾಲೂಕಾ ಮೋರ್ಚಾಧ್ಯಕ್ಷೆ ಸಂತೋಷಿಮಾ ಜೋಶಿ ಅಧ್ಯಕ್ಷತೆ ವಹಿಸಿದ್ದರು.

ಮಹೇಶ್ವರಿಸಾವಳಗಿಮಠ, ಶಿವಲೀಲಾ ದಳವಾಯಿ, ರಾಜ್ಯ ಕಾರ್ಯಕಾರ್ಯಣಿ ಸಮಿತಿ ಸದಸ್ಯ ಬಸವರಾಜ ಗೌರಾ, ಬಿಜೆಪಿ ತಾಲೂಕಾಧ್ಯಕ್ಷ ಮಾರುತಿ ಗವರಾಳ, ಬಿಜೆಪಿ ವಕ್ತಾರ ವೀರಣ್ಣ ಹುಬ್ಬಳ್ಳಿ, ನೀಲಮ್ಮ ಗೌಡ್ರ,ಸುನೀತಾ ಪತಂಗರಾಯ, ಪಾರ್ವತಿ ಹನಸಿ, ಅಯ್ಯನಗೌಡ ಕೆಂಚಮ್ಮನವರ್, ಕಲ್ಲೇಶ ಕರಮುಡಿ, ಕಳಕಪ್ಪ ತಳವಾರ, ಲಕ್ಷ್ಮಣ ಕಾಳೆ ಇದ್ದರು.



ಸಿಸಿ ರಸ್ತೆ ಶಂಕುಸ್ಥಾಪನೆ ವೇಳೆ ಹೈಡ್ರಾಮಾ



ಕಲಬುರಗಿ: ನಗರದ ಸಾವಿತ್ರಿಬಾಯಿ ಫುಲೆ ಬಡಾವಣೆಯಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಯ ಶಂಕುಸ್ಥಾಪನೆ ನೆರವೇರಿಸುವ ಸಂದರ್ಭದಲ್ಲಿ ಶಾಸಕ ಅಲ್ಲಮಪ್ರಭು ಪಾಟೀಲ್ ಹಾಗೂ ಬಿಜೆಪಿ ಮುಖಂಡರ ನಡುವೆ ತೀವ್ರ ಮಾತಿನ ಚಕಮಕಿ ನಡೆದು, ಕೆಲಕಾಲ ಹೈಡ್ರಾಮಾ ಸೃಷ್ಟಿಯಾದ ಘಟನೆ ಜರುಗಿದೆ.

ಬಸವಕಲ್ಯಾಣದ ಬಿಜೆಪಿ ಶಾಸಕ ಶರಣು ಸಲಗಾರ ಅವರ ಸಹೋದರ ಹಾಗೂ ಬಿಜೆಪಿ ಮುಖಂಡ ರೇಣುಕಾಚಾರ್ಯ ಅವರು ಶಾಸಕರ ವಿರುದ್ಧ ನೇರ ವಾಗ್ದಾಳಿ ನಡೆಸುವ ಮೂಲಕ ಅಭಿವೃದ್ಧಿ ಕಾರ್ಯಗಳ ಕುರಿತು ಆಕ್ರೋಶ ವ್ಯಕ್ತಪಡಿಸಿದರು.

ನಗರದ ಸಾವಿತ್ರಿಬಾಯಿ ಫುಲೆ ಬಡಾವಣೆಯಲ್ಲಿ ಸಿಸಿ ರಸ್ತೆ ಕಾಮಗಾರಿಯ ಗುದ್ದಲಿ ಪೂಜೆ ನೆರವೇರಿಸಲು ಶಾಸಕ ಅಲ್ಲಮಪ್ರಭು ಪಾಟೀಲ್ ಆಗಮಿಸಿದ್ದರು. ಈ ವೇಳೆ ಹಿರಾಪುರ ಬಡಾವಣೆಯ ಮೂರು ರಸ್ತೆಗಳನ್ನು ನಿರ್ಮಾಣ ಮಾಡಬೇಕು ಎಂದು ಸ್ಥಳೀಯರು ಹಾಗೂ ಬಿಜೆಪಿ ಮುಖಂಡರು ಬೇಡಿಕೆ ಇಟ್ಟರು.

ಆದರೆ, ಪ್ರಸ್ತುತ ಇರುವ ಅನುದಾನದಲ್ಲಿ ಒಂದು ರಸ್ತೆಯ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು, ಉಳಿದ ರಸ್ತೆಗಳನ್ನು ಅನುದಾನ ಬಂದ ನಂತರ ನಿರ್ಮಿಸುವುದಾಗಿ ಶಾಸಕರು ಭರವಸೆ ನೀಡಿದರು.

ಶಾಸಕರ ಹೇಳಿಕೆಯಿಂದ ಅಸಮಾಧಾನಗೊಂಡ ರೇಣುಕಾಚಾರ್ಯ, ನಿಮ್ಮ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿಲ್ಲ. ಗ್ಯಾರಂಟಿ ಯೋಜನೆಗಳಿಗೆ ಹಣ ಸಾಲುತ್ತಿಲ್ಲ ಎಂದು ನೀವೇ ಹೇಳುತ್ತಿದ್ದೀರಿ. ರಾಜ್ಯ ಸರ್ಕಾರದ ವೈಫಲ್ಯದಿಂದಾಗಿ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿವೆ ಎಂದು ಕಿಡಿಕಾರಿದರು.ಇದರಿಂದ ಶಾಸಕರು ಹಾಗೂ ಬಿಜೆಪಿ ಮುಖಂಡರ ಬೆಂಬಲಿಗರ ನಡುವೆ ಕೆಲಕಾಲ ವಾಗ್ವಾದ ಏರ್ಪಟ್ಟು ಸ್ಥಳದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

ಬೈಕ್ ಸಂಪೂರ್ಣ ಭಸ್ಮ

ಭಟ್ಕಳ: ಮನೆ ಮುಂದೆ ನಿಲ್ಲಿಸಿಟ್ಟಿದ್ದ ಬೈಕೊಂದಕ್ಕೆ ಬೆಂಕಿ ಹೊತ್ತಿಕೊಂಡು ಸಂಪೂರ್ಣ ಸುಟ್ಟು ಹೋಗಿರುವ ಕುರಿತು ಭಟ್ಕಳ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ತಾಲೂಕಿನ ಜಾಲಿ ಗ್ರಾಮದ ಶೇಡಕುಳಿ ಹೊಂಡದಲ್ಲಿ ತಹಸೀನ್ ಭಾನು ಮೆಹಬೂಬಅಲಿ ಶೇಖ್ ಎನ್ನುವವರು ಇದ್ದು ತಮ್ಮ ಹೆಸರಿನಲ್ಲಿ ಬಜಾಜ್ ಪಲ್ಸರ್ ಬೈಕೊಂದನ್ನು ಹೊಂದಿದ್ದಾರೆ. ಬೈಕ್‌ನ್ನು ಮಾ.19ರಂದು ತಮ್ಮ ಮನೆಯ ಮುಂದೆ ಇಟ್ಟಿರುವ ಸಂದರ್ಭದಲ್ಲಿ ಮಾ.20ರಂದು 1.30ರ ವೇಳೆಯಲ್ಲಿ ಬೈಕ್‌ಗೆ ಬೆಂಕಿ ಹೊತ್ತಿಕೊಂಡಿದ್ದು ಉರಿಯುತ್ತಿರುವುದನ್ನು ನೋಡಿದ್ದು ರಾತ್ರಿಯಲ್ಲಿ ಬೆಂಕಿ ಆರಿಸುವುದಕ್ಕೆ ಸಾಧ್ಯವಾಗಿಲ್ಲ ಎನ್ನಲಾಗಿದೆ. ಬೈಕ್ ಸಂಪೂರ್ಣ ಸುಟ್ಟು ಕರಕಲಾಗಿದ್ದು ಸುಮಾರು 70 ಸಾವಿರ ರೂಪಾಯಿ ಲುಕ್ಸಾನು ಉಂಟಾಗಿದೆ ಎಂದು ಅಂದಾಜಿಸಲಾಗಿದೆ. ಮನೆಯ ಹೊರಗಡೆ ಅಂಗಳದಲ್ಲಿ ಎಂದಿನಂತೆ ಬೈಕ್ ನಿಲ್ಲಿಸಿಟ್ಟಿದ್ದು ಬೆಂಕಿ ಹೊತ್ತಿ ಉರಿಯುವ ಯಾವ ಸಾಧ್ಯತೆಯೂ ಕೂಡಾ ಇರಲಿಲ್ಲ ಎನ್ನಲಾಗಿದೆ. ಈ ಬಗ್ಗೆ ಸಂಶಯಗೊಂಡ ಅವರು ಯಾಸೀನ್ ನಾಜೀರ್ ಖಾನ್ ಎನ್ನುವವರ ಮೇಲೆ ತಮ್ಮ ಬೈಕ್‌ಗೆ ಬೆಂಕಿ ಹಚ್ಚಿದ ಕುರಿತು ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಭಟ್ಕಳ ನಗರ ಠಾಣೆಯಲ್ಲಿ ದೂರು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಹೊಸ ಜಾಹೀರಾತು ನೀತಿಗೆ ಸಂಪಾದಕರ ಸಂಘ ವಿರೋಧ

ಸಚಿವ ಸತೀಶ ಜಾರಕಿಹೊಳಿಗೆ ಮನವಿ



ಬೆಳಗಾವಿ: ರಾಜ್ಯ ಸರ್ಕಾರದ ಹೊಸ 'ಜಾಹಿರಾತು ನೀತಿ-2026 ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳ ಅಸ್ತಿತ್ವಕ್ಕೆ ಮಾರಕವಾಗಿದೆ ಎಂದು ಬೆಳಗಾವಿ ಜಿಲ್ಲಾ ಸಂಪಾದಕರ ಸಂಘ ಆಕ್ರೋಶ ವ್ಯಕ್ತಪಡಿದರು.

ಭಾನುವಾರ ಕಾಂಗ್ರೆಸ್ ಕಚೇರಿಗೆ ಸಚಿವ ಸತೀಶ ಜಾರಕಿಹೊಳಿ ಆಗಮಿಸಿದ ವೇಳೆ ಬೆಳಗಾವಿಯ ಸಂಪಾದಕರ ಸಂಘದ ನೇತೃತ್ವದಲ್ಲಿ ನೂತನ ಜಾಹಿರಾತು ನೀತಿಯನ್ನು ವಿರೋಧಿಸಿ ಕಠಿಣ ನಿಯಮಗಳನ್ನು ಕೂಡಲೇ ಸರಳಗೊಳಿಸುವಂತೆ ಸಚಿವರಿಗೆ ಮನವಿ ಮಾಡಿಕೊಂಡರು.


ಕಾಂಗ್ರೆಸ್ ಕಚೇರಿಯಲ್ಲಿ ಸಂಪಾದಕರ ಸಂಘದ ನಿಯೋಗ, ಹೊಸ ನೀತಿಯಲ್ಲಿನ ಅವೈಜ್ಞಾನಿಕ ನಿಯಮಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿತು. ಪತ್ರಿಕೆಗಳಿಗೆ ಕಡ್ಡಾಯ ಸ್ವಂತ ಮುದ್ರಣಾಲಯ, ಹೆಚ್ಚಿನ ಸಂಖ್ಯೆಯ ಖಾಯಂ ಸಿಬ್ಬಂದಿ ಮತ್ತು ಪ್ರತಿ ಎರಡು ವರ್ಷಕ್ಕೊಮ್ಮೆ ದಾಖಲೆ ಸಲ್ಲಿಕೆಯಂತಹ ಷರತ್ತುಗಳು ಸಣ್ಣ ಪತ್ರಿಕೆಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ.

ಗಡಿ ಭಾಗದ ಕನ್ನಡ ಪತ್ರಿಕೆಗಳಿಗೆ ನೀಡುತ್ತಿದ್ದ ವಿಶೇಷ ಪ್ರೋತ್ಸಾಹವನ್ನು ಮುಂದುವರಿಸಬೇಕು ಹಾಗೂ ಜಾಹೀರಾತು ದರವನ್ನು ಕಾಲಕಾಲಕ್ಕೆ ಹೆಚ್ಚಿಸಬೇಕು ಎಂದು ಕರ್ನಾಟಕ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರು ಮುರುಗೇಶ್ ಶಿವಪೂಜಿ ಆಗ್ರಹಿಸಿದರು.

ಜಾಹೀರಾತು ದರ ಇಳಿಕೆ ಮತ್ತು ಸಿಬ್ಬಂದಿ ಸಂಖ್ಯೆಯ ಕಠಿಣ ನಿಯಮದಿಂದಾಗಿ ಅನೇಕ ಪತ್ರಿಕೆಗಳು ಅರ್ಹತೆ ಕಳೆದುಕೊಳ್ಳುವ ಭೀತಿಯಲ್ಲಿವೆ. ಇದರಿಂದ ಕನ್ನಡ ಮಾಧ್ಯಮ ಕ್ಷೇತ್ರಕ್ಕೆ ಭಾರೀ ಹೊಡೆತ ಬೀಳಲಿದ್ದು ಎ.ಬಿ.ಸಿಂಗ್ ಮತ್ತು ಪಿ. ರಾಮಯ್ಯ ಸಮಿತಿಗಳ ಶಿಫಾರಸ್ಸಿನಂತೆ ಪ್ರಾದೇಶಿಕ ಪತ್ರಿಕೆಗಳ ರಕ್ಷಣೆಗೆ ಸರ್ಕಾರ ಮುಂದಾಗಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದರು.

ಜಿಲ್ಲಾ ಪ್ರತಿಕೆ ಹಾಗೂ ಪ್ರದೇಶಿಕ ಪತ್ರಿಕೆಗಳಿಗೆ ಯಾಗುತ್ತಿರುವ ಸಮಸ್ಯೆಗಳ ಬಗ್ಗೆ ಮನವಿ ಸ್ವೀಕರಿಸಿದ ಸಚಿವರು, ಈ ವಿಷಯವನ್ನು ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ರಾಮರಾಜ್ಯ ಸ್ಥಾಪನೆಗಾಗಿ ಬ್ರಹ್ಮಧ್ವಜದ ಸಾಮೂಹಿಕ ಪ್ರತಿಜ್ಞೆ



ಹಗರಿಬೊಮ್ಮನಹಳ್ಳಿ: ಯುಗಾದಿ ಸೃಷ್ಟಿಯ ಮೊದಲ ದಿನ ಬ್ರಹ್ಮನು ಸೃಷ್ಟಿಯನ್ನು ನಿರ್ಮಿಸಿದ ಪವಿತ್ರ ದಿನವಾಗಿದೆ.ಇಂತಹ ಪವಿತ್ರ ದಿನದಂದು ರಾಮರಾಜ್ಯದ ಪುನರ್ ಪ್ರತಿಷ್ಠೆಗಾಗಿ ಹಿಂದೂ ಜನ ಜಾಗೃತಿ ಸಮಿತಿಯ ವತಿಯಿಂದ ದೇವಸ್ಥಾನಗಳಲ್ಲಿ ಹಿಂದೂ ಧರ್ಮಾಭಿಮಾನಿಗಳ ಮನೆ ಮನೆಯಲ್ಲಿ ಬ್ರಹ್ಮ ಧ್ವಜವನ್ನು ಏರಿಸುವ ಮೂಲಕ ಸಾಮೂಹಿಕ ಪ್ರಾರ್ಥನೆಯೊಂದಿಗೆ ಪ್ರತಿಜ್ಞೆ ಮಾಡಲಾಯಿತು.

ಯುಗಾದಿಯ ದಿನ ಗುರುವಾರದಂದು ಪಟ್ಟಣದ ಹಳೇ ಊರಿನ ನೀಲಕಂಠೇಶ್ವರ ಸ್ವಾಮಿ, ಬನಶಂಕರಿ, ಅಂಬಾಭವಾನಿ ಹಾಗೂ ಕೆವಿಆರ್ ಕಾಲೋನಿಯ ಶ್ರೀಪತ್ರಿ ಬಸವೇಶ್ವರ ಮತ್ತು ಪಾಂಡುರಂಗ ಇತರ ದೇವಸ್ಥಾನದಲ್ಲಿ ಬ್ರಹ್ಮ ಧ್ವಜ ಏರಿಸಲಾಯಿತು. ಹಿಂದೂ ಜನ ಜಾಗೃತಿ ವೇದಿಕೆ ಸಂಚಾಲಕಿ ಪೂಜಾ ಶ್ರೀಕಾಂತ್ ಮಾತನಾಡಿ, ಧರ್ಮ, ಪಾವಿತ್ರ್ಯತೆ ಮತ್ತು ಜಯದ ಸಂಕೇತವಾಗಿರುವ ಬ್ರಹ್ಮಧ್ವಜವನ್ನು ಯುಗಾದಿಯ ದಿನದಂದು ಬ್ರಹ್ಮಾಂಡದಲ್ಲಿನ ಪ್ರಜಾಪತಿ ಲಹರಿಗಳು ಭೂಮಿಯ ಮೇಲೆ ಹೆಚ್ಚು ಬರುತ್ತವೆ ಆ ಲಹರಿಗಳು ಕಲಶದ ಮೂಲಕ ನಮ್ಮ ಮನೆಯೊಳಗೆ ಪ್ರವೇಶಿಸಿ ವರ್ಷಪೂರ್ತಿ ಅದರ ಲಾಭ ನಮಗೆ ಸಿಗುವ ಕಾರಣ ಬ್ರಹ್ಮ ಧ್ವಜವನ್ನು ಏರಿಸಲಾಗುತ್ತದೆ.

500 ವರ್ಷಗಳ ತಪಸ್ಸಿನ ನಂತರ ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರದ ನಿರ್ಮಾಣವಾಗಿದೆ, ಅದರಂತೆ ಭಾರತದಲ್ಲಿ ಹಿಂದೂರಾಷ್ಟ್ರ ಸ್ಥಾಪನೆಯಾಗುವ ತನಕ ನಾವೆಲ್ಲರೂ ಒಗ್ಗಟ್ಟಾಗಿ ಹಿಂದೂ ಸಮಾಜ ಎದುರಿಸುತ್ತಿರುವ ಅಪಮಾನ,ಅತ್ಯಾಚಾರ, ಮತಾಂತರದ ವಿರುದ್ಧ ಹೋರಾಡುವುದು ಅವಶ್ಯಕವಾಗಿದೆ. ಸನಾತನ ಧರ್ಮದ ಜೀವಾಳವಾಗಿರುವ ದೇವಸ್ಥಾನಗಳ ರಕ್ಷಣೆ ಮತ್ತು ಸನಾತನ ಹಿಂದೂ ಸಂಸ್ಕೃತಿ ಪರಂಪರೆ ಉಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಹಿಂದೂ ಜನ ಜಾಗೃತಿ ವೇದಿಕೆಯ ಕಾರ್ಯಕರ್ತರಿಂದ ಹಿಂದೂ ಧರ್ಮಾಭಿಮಾನಿಗಳಿಂದ ಸಾಮೂಹಿಕ ಪ್ರಾರ್ಥನೆ ಪ್ರತಿಜ್ಞೆ ನಡೆಯಿತು.

CHANGE OF NAME
I, **NAVEEN PATIL** (old name) Resident of No 123/A, Hanamanth Devara Oni, Yaragatti, Belagavi - 591129, Karanataka, India, have changed my name as **NAVEEN GOVINDAGOUDA PATIL** (new name) henceforth I will be called and recognized by new name for all future purposes, dated: 21/03/2026.

CHANGE OF NAME
I, **NIMBARK REKHA KUMARIDAS** (old name) Resident of Kamari Peth Hubli 28, have changed my name as **REKHA VAISHNAV** (new name) henceforth I will be called and recognized by new name for all future purposes, dated: 20/03/2026.

CHANGE OF NAME
I, **SHABANA CHIBBALGERI** (old name) Resident of #16, 1st Cross, Opp: Gurunath Nagar Park,Gurunath Nagar, Old Hubli, Hubli, Dharwad, State: Karataka, Pin Code: 580024, have changed my name as **SHABANA KHAN** (new name) henceforth I will be called and recognized by new name for all future purposes, dated: 22/03/2026.

CHANGE OF NAME
I, **SUNEEL YALIGAR** (old name) Resident of Choudayyadanapur Kancharagatti Haveri Karnataka - 581115, have changed my name as **SUNIL VIRUPAKSHAPPA YALIGAR** (new name) henceforth I will be called and recognized by new name for all future purposes, dated: 22/03/2026.

CHANGE OF NAME
I, **VIRUPAKSHAPPA YELIGARA** (old name) Resident of Choudayyadanapur Kancharagatti Haveri Karnataka - 581115, have changed my name as **VIRUPAKSHAPPA CHANABASAPPA YALIGAR** (new name) henceforth I will be called and recognized by new name for all future purposes, dated: 22/03/2026.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.
ಜಾಹೀರಾತು ವ್ಯವಸ್ಥಾಪಕರು

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 113/2026
ಅರ್ಜಿದಾರರು: ಶ್ರೀಮತಿ ಕಮಲಿಬಾಯಿ ಗಂಡ ತೂಕ್ಯನಾಯ್ಕ, ವಯಸ್ಸು 61 ವರ್ಷ, ಸಾ॥ ಕಗ್ಗಲಕಟ್ಟಿತಾಂಡ ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ,
ವಿರುದ್ಧ
ಎದುರುದಾರರು: ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,
ಸಾರ್ವಜನಿಕ ನೋಟಿಸು
ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ತಾಯಿಯ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.
ಅರ್ಜಿದಾರರ ನನ್ನ ತಾಯಿಯಾದ ಖೇಮಣಿಬಾಯಿ ಗಂಡ ಬೋಜನಾಯ್ಕ, ಇವರು ದಿನಾಂಕ:27-07-2020 ರಂದು ಕಗ್ಗಲಕಟ್ಟಿತಾಂಡ ಗ್ರಾಮದ ತಮ್ಮ ಮನೆಯಲ್ಲಿ ಮರಣಹೊಂದಿರುತ್ತಾರೆ.
ಸದರಿಯವರ ಮರಣದ ಬಗ್ಗೆ ಎದುರುದಾರರ ಕಚೇರಿಯಲ್ಲಿ ನೋಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 01/04/2026 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ಹೂವಿನಹಡಗಲಿ ಸಿವಿಲ್ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ (ಏಕಪಕ್ಷೀಯ) ಆದೇಶ ಮಾಡಲಾಗುವುದೆಂದು ತಿಳಿಯತಕ್ಕದ್ದು.
ದಿನಾಂಕ: 16/03/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.
ಸಹಿ/-ಶಿರಸ್ತೆದಾರರು,
ಸಿ.ಜೆ. & ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.
ಸಹಿ/-ಶ್ರೀ ಜೆ. ಮಂಜುನಾಥ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 17/2026
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 18/2026
ಅರ್ಜಿದಾರರು: ಶ್ರೀ ಓರೆಣ್ಣನವರ ಗೋಣಿಸ್ವಾಮಿ ತಂದೆ ಹೆಚ್.ಭರಮಪ್ಪ ವಯಸ್ಸು 26 ವರ್ಷ, ಸಾ॥ ಗುಜನೂರು ಗ್ರಾಮ ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 119/2026
ಅರ್ಜಿದಾರರು: ಶ್ರೀಮತಿ ಎಸ್.ಠಾಲಿಬಾಯಿ ಗಂಡ ಚೇನ್ಯನಾಯ್ಕ, ವಯಸ್ಸು 58 ವರ್ಷ, ವಾಸ॥ ಅಡವಿ ಮಲ್ಲನಕೇರಿತಾಂಡ, ತಾ॥ ಹೂವಿನಹಡಗಲಿ, ವಿಜಯನಗರ ಜಿಲ್ಲೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 123/2026
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 124/2026
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 125/2026
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 126/2026
ಅರ್ಜಿದಾರರು: ಶ್ರೀ ಭೋಜನಾಯ್ಕ ತಂದೆ ಲೇಟ್ ...

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 1261/2025
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 1262/2025
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 1263/2025
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 1264/2025
ಅರ್ಜಿದಾರರು: ಶ್ರೀಮತಿ ಮುದೆಪ್ಪನವರ ಕಮಲವ್ವ ...

ಹೊಸ ದಿಗಂತ
ಕನ್ನಡ ದಿನಪತ್ರಿಕೆ
ಇಂದೇ ಕೊಳ್ಳಿರಿ, ಓದಿರಿ
ಸಂಪರ್ಕಿಸಿ : 0836-2350943

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 118/2026
ಅರ್ಜಿದಾರರು: ಶಿವಪುತ್ರಪ್ಪ ಹೆಚ್. ತಂದೆ ಲೇಟ್ ಹೊಸಮನಿ ಕಾಳಪ್ಪ ವಯಸ್ಸು 45 ವರ್ಷ, ಸಾ॥ ಗುಜನೂರು ತಾ॥ ಹೂವಿನಹಡಗಲಿ ಜಿ॥ವಿಜಯನಗರ,
ವಿರುದ್ಧ
ಎದುರುದಾರರು: ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ.
ಸಾರ್ವಜನಿಕ ನೋಟಿಸು
ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ...
ಸಹಿ/- ಶ್ರೀ ಹೊಸಮನಿ ಅಂಜಿನಪ್ಪ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ,

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 16/2026
ಅರ್ಜಿದಾರರು: ಶ್ರೀ ಜಿ.ನಿಂಗಪ್ಪ ತಂದೆ ಜಿ.ಶಿವಪ್ಪ ವಯಸ್ಸು 49 ವರ್ಷ, ಸಾ॥ ಸೋವೇನಹಳ್ಳಿ ಗ್ರಾಮ ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ,
ವಿರುದ್ಧ
ಎದುರುದಾರರು: ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,
ಸಾರ್ವಜನಿಕ ನೋಟಿಸು
ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ...
ಸಹಿ/- ಶ್ರೀ ಅಂಜಿನಪ್ಪ ಹೊಸಮನಿ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ,

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 129/2026
ಅರ್ಜಿದಾರರು: ಶ್ರೀ ಗೋಣಿಬಸಪ್ಪ ಬಿ. ತಂದೆ ಕೊಟ್ರಪ್ಪ, ವಯಸ್ಸು 77 ವರ್ಷ, ಸಾ॥ ಬಾಪಿಹಳ್ಳಿ-ಹೊಳಗುಂದಿ ಗ್ರಾಮ ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು: ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,
ಸಾರ್ವಜನಿಕ ನೋಟಿಸು
ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ...

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 192/2026
ಅರ್ಜಿದಾರರು: ಶ್ರೀ ಶಿವಯ್ಯ @ ಹೆಚ್ .ಎಂ ಶಿವಯ್ಯ ತಂದೆ ಲೇಟ್ ಪತ್ರೆಯ್ಯ, 56 ವರ್ಷ, ವೃತ್ತಿ ವ್ಯವಸಾಯ. ವಾಸ: ಮಹಾಜನದಹಳ್ಳಿ ಗ್ರಾಮ. ಹೂವಿನಹಡಗಲಿ ತಾ॥. ವಿಜಯನಗರ ಜಿ॥.
ವಿರುದ್ಧ
ಎದುರುದಾರರು: 1) ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ ಮತ್ತು ಜನನ & ಮರಣ ನೋಂದಣಾಧಿಕಾರಿಗಳು ಹೂವಿನಹಡಗಲಿ, ವಿಜಯನಗರ ಜಿ॥
2) ಗ್ರಾಮ ಲೆಕ್ಕಾಧಿಕಾರಿಗಳು ಮಹಾಜನದಹಳ್ಳಿ ಗ್ರಾಮ, ...

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 290/2026
ಅರ್ಜಿದಾರರು: ಶ್ರೀಮತಿ ಗೌರವ್ವ ಕುದುರಿಹಾಳ, ಗಂಡ ಲೇಟ್ ಬಸಪ್ಪ ಕುದುರಿಹಾಳ, ಹೊಳಲು ಗ್ರಾಮ ಹೂವಿನಹಡಗಲಿ ತಾ, ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು: ತಹಶೀಲ್ದಾರ ಹೂವಿನಹಡಗಲಿ. ಹಾಗೂ ಇನ್ನೊಬ್ಬರು.
ಸಾರ್ವಜನಿಕ ನೋಟಿಸು
ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟಿಸ್ ಏನೆಂದರೆ, ...

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 302/2026
ಅರ್ಜಿದಾರರು: ಮಡಿವಾಳರ ನಾಗರಾಜ ತಂದೆ ಲೇಟ್ ಸಿದ್ದಪ್ಪ ವಯಸ್ಸು 43 ವರ್ಷ, ಸಾ॥ ಇಟ್ಟಿಗಿ ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ,
ವಿರುದ್ಧ
ಎದುರುದಾರರು: ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,
ಸಾರ್ವಜನಿಕ ನೋಟಿಸು
ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ...

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 291/2026
ಅರ್ಜಿದಾರರು: ಶ್ರೀ ಗುರುಸಿದ್ದಪ್ಪನವರ ರಾಜಪ್ಪ, ವಯಸ್ಸು: 34 ವರ್ಷ. ಹೊಳಲು ಗ್ರಾಮ, ಹೂವಿನಹಡಗಲಿ ತಾ, ವಿಜಯನಗರ ಜಿಲ್ಲೆ,
ವಿರುದ್ಧ
ಎದುರುದಾರರು: ತಹಶೀಲ್ದಾರರು, ಹೂವಿನಹಡಗಲಿ ಹಾಗೂ ಇನ್ನೊಬ್ಬರು
ಸಾರ್ವಜನಿಕ ನೋಟಿಸು
ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟಿಸ್ ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ...

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 116/2026
ಅರ್ಜಿದಾರರು: ಶ್ರೀ ಮೇವುಂಡಿ ಶೇಖಪ್ಪ ತಂದೆ ಸಂಗಪ್ಪ ವಯಸ್ಸು 43 ವರ್ಷ, ಸಾ॥ ಹಿರೇಹಡಗಲಿ ಗ್ರಾಮ. ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ,
ವಿರುದ್ಧ
ಎದುರುದಾರರು: ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,
ಸಾರ್ವಜನಿಕ ನೋಟಿಸು
ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ...

... ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ (ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು, ದಿನಾಂಕ: 10-03-26 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ
ಸಹಿ/-ಶಿರಸ್ತೆದಾರರು
ಸಿ.ಜೆ.& ಜೆ.ಎಂ.ಎಫ್.ಸಿ.ನ್ಯಾಯಾಲಯ,
ಸಹಿ/- ಶ್ರೀ.ಕೆ.ಚಂದ್ರಪ್ಪ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

... ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ (ಏಕಪಕ್ಷಿಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು. ದಿನಾಂಕ: 10-03-26 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ
ಸಹಿ/-ಶಿರಸ್ತೆದಾರರು
ಸಿ.ಜೆ.& ಜೆ.ಎಂ.ಎಫ್.ಸಿ.ನ್ಯಾಯಾಲಯ,
ಸಹಿ/- ಶ್ರೀ.ಬಿ.ಪರಶುರಾಮ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ,

ಕಿರುಸುದ್ಧಿ

ಕರ್ರನ್ ಬದಲಿಗೆ ಶಣಕ

ಮುಂಬೈ: ಸಂಜು ಸ್ಯಾಮ್ಸನ್ ಬದಲಿಗೆ ರಾಜಸ್ಥಾನ ರಾಯಲ್ಸ್ ತಂಡಕ್ಕೆ ಟ್ರೇಡ್ ಆಗಿದ್ದ ಇಂಗ್ಲೆಂಡ್ ಆಲ್ ರೌಂಡರ್ ಸ್ಯಾಮ್ ಕರ್ರನ್ ಬದಲಿಗೆ ದಾಸುನ್ ಶಣಕ ಅವರನ್ನು ರಾಜಸ್ಥಾನ ರಾಯಲ್ಸ್ ಆಯ್ಕೆ ಮಾಡಿಕೊಂಡಿದೆ. ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಕ್ಕೆ ಆಯ್ಕೆಯಾಗಿದ್ದ ಶ್ರೀಲಂಕಾ ಬ್ಯಾಟರ್ ದಾಸುನ್ ಶಣಕ ಭಾರತದತ್ತ ತಿರುಗಿದ್ದಾರೆ. ಐಪಿಎಲ್ ಹರಾಜಿಗೂ ಮುನ್ನ ಸಂಜು ಸ್ಯಾಮ್ಸನ್ ಚೆನ್ನೈಗೆ ಟ್ರೇಡ್ ಆಗಿದ್ದರು. ಬದಲಿಗೆ ಚೆನ್ನೈ ತಂಡದಿಂದ ರವೀಂದ್ರ ಜಡೇಜಾ ಮತ್ತು ಸ್ಯಾಮ್ ಕರ್ರನ್ ಅವರನ್ನು ಆಯ್ಕೆ ಮಾಡಲಾಗಿತ್ತು. ವಿಶ್ವಕಪ್‌ನಲ್ಲಿ ಇಂಗ್ಲೆಂಡ್ ತಂಡದ ಭಾಗವಾಗಿದ್ದ ಸ್ಯಾಮ್ ಕರ್ರನ್ ಗಾಯದಿಂದ ಬಳಲುತ್ತಿದ್ದರು. ಪರಿಣಾಮ ಐಪಿಎಲ್ ಪಂದ್ಯಾವಳಿಯಿಂದಲೇ ಹೊರಬಿದ್ದಿದ್ದಾರೆ. ಅವರ ಬದಲಿಗೆ ದಾಸುನ್ ಶಣಕ ಅವರನ್ನು ಫ್ರಾಂಚೈಸಿ ಸಹಿ ಮಾಡಿಕೊಂಡಿದೆ. ಈ ಬಗ್ಗೆ ಅಧಿಕೃತವಾಗಿ ತಿಳಿಸಲಾಗಿದೆ.

ಈಜು: ಸಜನ್ ಪ್ರಕಾಶ್‌ಗೆ ಚಿನ್ನ



ಹೊಸದಿಲ್ಲಿ: ಭಾರತದ ಈಜುಗಾರ ಸಜನ್ ಪ್ರಕಾಶ್ ಸಿಂಗಾಪುರ್ ನ್ಯಾಷನಲ್ ಏಜ್ ಗ್ರೂಪ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಶಕ್ತಿಶಾಲಿ ಪ್ರದರ್ಶನ ನೀಡಿ ಪುರುಷರ 200 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸಿದರು. ಫೈನಲ್‌ನಲ್ಲಿ ಸಜನ ಪ್ರಕಾಶ್ 1:57.09 ಸೆಕೆಂಡ್ ಸಮಯ ದಾಖಲಿಸಿ ಎರಡನೇ ಸ್ಥಾನ ಪಡೆದರು. ಚೈನೀಸ್ ತೈಪೆಯ ಕ್ವಾನ್ ಹಂಗ್ ವಾಂಗ್ 1:56.18 ಸಮಯದೊಂದಿಗೆ ಚಿನ್ನದ ಪದಕ ಗೆದ್ದರು. ಇದರೊಂದಿಗೆ ಸಜನ ಪ್ರಕಾಶ್ ಕಾಮನ್‌ವೆಲ್ತ್ ಕ್ರೀಡಾಕೂಟ ಅರ್ಹತಾ ಮಾನದಂಡವನ್ನೂ ತಲುಪಿದರು. ಈ ಸ್ಪರ್ಧೆಗೆ ನಿಗದಿಪಡಿಸಿದ್ದ 1:57.12 ಸಮಯಕ್ಕಿಂತ ಕಡಿಮೆ ಅವಧಿಯಲ್ಲಿ ಅವರು ಈ ಸಾಧನೆ ಮಾಡಿದ್ದಾರೆ. ಎರಡು ಬಾರಿ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿರುವ ಸಜನ್ ಪ್ರಕಾಶ್, ಟೋಕಿಯೊ 2020 ಒಲಿಂಪಿಕ್ಸ್‌ಗೆ ಎ' ಮಾನದಂಡದ ಮೂಲಕ ಅರ್ಹತೆ ಪಡೆದ ಮೊದಲ ಭಾರತೀಯ ಈಜುಗಾರರಾಗಿದ್ದಾರೆ. ಅವರು ದಕ್ಷಿಣ ಏಷ್ಯನ್ ಕ್ರೀಡಾಕೂಟಗಳಲ್ಲಿ ಹಲವು ಬಾರಿ ಪದಕ ವಿಜೇತರಾಗಿದ್ದು, 200 ಮೀಟರ್ ಬಟರ್‌ಫ್ಲೈ ವಿಭಾಗದಲ್ಲಿ 1:56.38 ರಾಷ್ಟ್ರೀಯ ದಾಖಲೆಯನ್ನು ತಮ್ಮ ಹೆಸರಿನಲ್ಲಿ ಹೊಂದಿದ್ದಾರೆ.

ದೇಶಿ ಕ್ರಿಕೆಟಿಗರ ಮೇಲೆ ಜನರ ಚಿತ್ತ | ಕಿರಿಯ ಆಟಗಾರರ ಮೇಲೆ ನಿರೀಕ್ಷೆ | ಎಲ್ಲಾ ತಂಡಗಳ ಕಠಿಣ ಅಭ್ಯಾಸ

ಐಪಿಎಲ್‌ನಲ್ಲಿ ಯುವಕರದ್ದೇ ದರ್ಬಾರ್!





ಮುಂಬೈ: ಕ್ರಿಕೆಟ್ ಹಬ್ಬ, ಜಗತ್ತಿನ ಅತಿದೊಡ್ಡ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಒಂದಾದ, ಅತಿ ಶ್ರೀಮಂತ ಫ್ರಾಂಚೈಸಿ ಕ್ರಿಕೆಟ್ ಕೂಟ ಐಪಿಎಲ್‌ಗೆ ಭರ್ಜರಿ ಸಿದ್ಧತೆಗಳು ನಡೆಯುತ್ತಿವೆ. ಶನಿವಾರದಂದು ಬೆಂಗಳೂರಿನ ಚಿನ್ನಸ್ವಾಮಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡದ ನಡುವೆ ಉದ್ಘಾಟನಾ ಪಂದ್ಯ ನಡೆಯಲಿದೆ. ಪಂದ್ಯಾವಳಿಗೆ ದಿನಗಣನೆ ಶುರುವಾದಂತೆ ಭಾರತಾದ್ಯಂತ ಐಪಿಎಲ್ ಭರಾಟೆ ಪಸರಿಸಿದೆ. ಈ ಮಧ್ಯೆ ಇದೇ ಬಾರಿ ಆಯ್ಕೆಯಾಗಿರುವ ಮತ್ತು ಕಳೆದ ಸೀಸನ್‌ಗಳಿಂದಲೂ ಅವಕಾಶಕ್ಕಾಗಿ ಕಾಯುತ್ತಿರುವ ಯುವ ಕ್ರಿಕೆಟಿಗರು ಗಮನ ಸೆಳೆಯಲು ಸಿದ್ಧರಾಗಿದ್ದಾರೆ. ಎಲ್ಲಾ ತಂಡಗಳು ತಮ್ಮ ತಮ್ಮ ಅಭ್ಯಾಸದಲ್ಲಿ ನಿರತರಾಗಿದ್ದಾರೆ. ಮೈದಾನಗಳು ಐಪಿಎಲ್ ಪಂದ್ಯಗಳಿಗಾಗಿ ಸಜ್ಜುಗೊಳ್ಳುತ್ತಿವೆ. ಇದೇ ವೇಳೆ ತಂಡಗಳು, ಕೋಚ್‌ಗಳು ಮತ್ತು ವಿವಿಧ ಸಂಬಂಧಪಟ್ಟ ಜನರು ಲೆಕ್ಕಾಚಾರಗಳನ್ನು ಮಾಡುತ್ತಿದ್ದಾರೆ. ಗಾಯದ ನಿವಾರಣೆ, ಬದಲಿ ಆಟಗಾರರ ಆಯ್ಕೆ, ಹೊಸ ಸ್ಟ್ರಾಟರ್ಜಿಗಳನ್ನು ಮಾಡತೊಡಗಿದ್ದಾರೆ.

ಮೊದಲಿನಿಂದಲೂ ಐಪಿಎಲ್‌ನಲ್ಲಿ ವಿದೇಶಿ ಆಟಗಾರರು ಭರ್ಜರಿ ಪ್ರದರ್ಶನ ನೀಡಿ ಗಮನ ಸೆಳೆದಿದ್ದಾರೆ. ಮೊದಲ ಶತಕ, ಮೊದಲ ಹ್ಯಾಟ್ರಿಕ್ ಮತ್ತು ಮೊದಲ ಇನ್ನೂರು ದಾಟುವಲ್ಲಿ ವಿದೇಶಿ ಆಟಗಾರರು ಮುಂದಿದ್ದರು. ದೇಶಿ ಕ್ರಿಕೆಟಿಗರಿಗೆ ಅವಕಾಶ ಸಿಕ್ಕಂತೆ ಅವರೂ ಕೂಡ ದೊಡ್ಡ ಮಟ್ಟದಲ್ಲಿ ಹೆಸರು ಮಾಡಿಲ್ಲ. ಮಾಡಿದ್ದರೂ ವಿದೇಶಿ ಆಟಗಾರರಷ್ಟು ಗಮನ ಸೆಳೆಯಲಾಗುವುದಿಲ್ಲ. ಆದರೆ ಇತ್ತೀಚಿನ ಐಪಿಎಲ್‌ನಲ್ಲಿ ದೇಶಿ ಯುವಕರದ್ದೇ ದರ್ಬಾರ್ ನಡೆದಿದೆ. ಕಳೆದ ಸೀಸನ್‌ಗಳಲ್ಲಿ ದೇಶಿ ಕ್ರಿಕೆಟಿಗರೆ ಹೆಚ್ಚು ಗಮನ ಸೆಳೆದಿದ್ದಾರೆ. ಈ ಬಾರಿಯೂ ಕೂಡ ಪ್ರಮುಖ ಆಟಗಾರರು ಗಮನ ಸೆಳೆಯಲು ಸಿದ್ಧರಾಗಿದ್ದಾರೆ.

ಹರಾಜಿನಲ್ಲೇ ಕಮಾಲ್

ರಣಜಿ, ವಿಜಯ್ ಹಜಾರೆ ಸೇರಿದಂತೆ ಪ್ರಮುಖ ದೇಶಿ ಕ್ರಿಕೆಟ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿರುವ ಭಾರತದ ದೇಶಿ ಕ್ರಿಕೆಟಿಗರಿಗೆ ಈ ಬಾರಿ ಐಪಿಎಲ್‌ನಲ್ಲಿ ಅವಕಾಶ ನೀಡಲಾಗಿದೆ. ಡಿಸೆಂಬರ್‌ನಲ್ಲಿ ನಡೆದಿದ್ದ ಹರಾಜಿನಲ್ಲಿ ದೇಶಿ ಕ್ರಿಕೆಟಿಗರದ್ದೇ ಹವಾ ಎದ್ದಿತ್ತು. ದೊಡ್ಡ ದೊಡ್ಡ ಪರ್ಸ್‌ಗಳೊಂದಿಗೆ ಹರಾಜಿಗಿಳಿದಿದ್ದ ಚೆನ್ನೈ ಅಂತಹ ಫ್ರಾಂಚೈಸಿಗಳು ದೇಶಿ ಆಟಗಾರರ ಮೇಲೆ ಹೆಚ್ಚಿನ ಖರ್ಚು ಮಾಡಿತ್ತು. ಪ್ರಶಾಂತ್ ವೀರ್, ಕಾರ್ತಿಕ್ ಶರ್ಮ ಅಂತಹ ದೇಶಿ ಆಟಗಾರರು ದೊಡ್ಡ ಮೊತ್ತಕ್ಕೆ ಬಿಕರಿಯಾದರೆ, ಜಿಮ್ಮಿ ಸ್ಮಿತ, ಡೇವಿಡ್ ಕಾನ್ವೇ ಅಂತಹ ಪ್ರಮುಖ ಆಟಗಾರರು ಅನ್ ಸೋಲ್ಡ್ ಆಗಿ ಉಳಿದರು. ಇನ್ನುಳಿದಂತೆ ರಣಜಿ ಪಂದ್ಯಾವಳಿಯ ಸರಣಿ ಶ್ರೇಷ್ಠ ಆಟಗಾರ ಆಕಿಬ್ ನಬಿ ಕೂಡ ಹೆಚ್ಚಿನ ಮೊತ್ತ ಪಡೆದಿದ್ದರು.

ವಿದೇಶಿಯರು ಅಲಭ್ಯ, ಅವಕಾಶ ಖಚಿತ?

ಗಾಯದ ಕಾರಣದಿಂದಾಗಿ ಪ್ರಮುಖ ಆಟಗಾರರು ಅಲಭ್ಯರಾಗಿದ್ದಾರೆ. ಹೈದರಾಬಾದ್‌ನ ಪ್ಯಾಟ್ ಕಮ್ಮಿನ್ಸ್, ಆರ್‌ಸಿಬಿಯ ಹ್ಯಾಜೆಲ್ವುಡ್, ಕೆಕೆಆರ್ ತಂಡದ ರಾಣಾ ಸೇರಿದಂತೆ ಪ್ರಮುಖ ಆಟಗಾರರು ಅಲಭ್ಯರಾಗಿದ್ದಾರೆ. ಈ ಮಧ್ಯೆ ದೇಶಿ ಕ್ರಿಕೆಟಿಗರಿಗೆ ಹೆಚ್ಚಿನ ಅವಕಾಶ ಸಿಗುವ ಸಾಧ್ಯತೆಗಳಿವೆ. ಪ್ರತಿಯೊಂದು ಫ್ರಾಂಚೈಸಿಯೂ ಹೆಚ್ಚಿನ ದೇಶಿ ಆಟಗಾರರನ್ನು ಆಯ್ಕೆ ಮಾಡಿಕೊಂಡಿವೆ. ಹೀಗಿರುವಾಗ ವಿದೇಶಿ ಆಟಗಾರರ ಮೇಲಿದ್ದ ಅವಲಂಬನೆ ಕಮ್ಮಿಯಾಗಿದೆ. ವಿದೇಶಿ ಆಟಗಾರರ ಅಲಭ್ಯತೆ ದೇಶಿ ಕ್ರಿಕೆಟಿಗರಿಗೆ ಅವಕಾಶ ಸಿಗುವ ಸಾಧ್ಯತೆ ಹೆಚ್ಚಿಸಿದೆ. ಪ್ರತಿಯೊಂದು ತಂಡದಲ್ಲೂ ಗಾಯದ ಚಿಂತೆಗಳಿವೆ. ಕೆಲವು ಆಟಗಾರರು ಪಂದ್ಯಾವಳಿಯಿಂದಲೇ ಹೊರನಡೆದಿದ್ದಾರೆ.

ಯಾರ ಮೇಲೆ ಜನರ ಗಮನ?

ಕಳೆದ ಐಪಿಎಲ್‌ನಿಂದಲೂ ಹಲವು ದೇಶಿ ಕ್ರಿಕೆಟಿಗರು ಭಾರೀ ಗಮನ ಸೆಳೆದಿದ್ದಾರೆ. ಮುಖ್ಯವಾಗಿ ಅಂಡರ್-19 ತಂಡದ ಪ್ರಮುಖ ಆಟಗಾರರು ಕೇಂದ್ರ ಬಿಂದುವಾಗಿದ್ದಾರೆ. ಭಾರತ ತಂಡಕ್ಕೆ ಆಯ್ಕೆಯಾಗಬೇಕಾದರೆ ಐಪಿಎಲ್ ಪ್ರಮುಖ ಪಾತ್ರ ವಹಿಸಲಿದೆ. ಹೀಗಿರುವಾಗ ಪಂದ್ಯಾವಳಿಯಲ್ಲಿ ಎಲ್ಲರ ಕಣ್ಣುಗಳೂ ಕೆಲವು ದೇಶಿ ಕ್ರಿಕೆಟಿಗರ ಮೇಲೆ ನೆಟ್ಟಿರಲಿವೆ.

1 ವೈಭವ್ ಸೂರ್ಯವಂಶಿ


15 ವರ್ಷದ ಕ್ರಿಕೆಟಿಗ ವೈಭವ್ ಕಳೆದ ಐಪಿಎಲ್‌ನಲ್ಲೇ ದೊಡ್ಡ ದಾಖಲೆ ಮಾಡಿದ್ದರು. ಅಂಡರ್-19 ವಿಶ್ವಕಪ್‌ನಲ್ಲೂ ಅದೇ ಪ್ರದರ್ಶನ ನೀಡಿ ಗಮನ ಸೆಳೆದಿರುವ ಅವರು ಆರ್‌ಆರ್ ತಂಡದಲ್ಲೇ ಇದ್ದಾರೆ.

2 ಆಯುಷ್ ಮಾಥ್ರೆ

ಅಂಡರ್-19 ವಿಶ್ವಕಪ್ ಗೆದ್ದ ತಂಡದ ನಾಯಕ ಆಯುಷ್ ಮಾಥ್ರೆ ಮೇಲೆ ಎಲ್ಲರ ಕಣ್ಣು ನೆಟ್ಟಿರಲಿದೆ. ಕಳೆದ ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಅವರು, ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲೂ ಗಮನ ಸೆಳೆದಿದ್ದರು. ಚೆನ್ನೈ ತಂಡದ ಆರಂಭಿಕರಾಗಿ ಕಣಕ್ಕಿಳಿಯಲಿದ್ದಾರೆ.

3 ಕಾರ್ತಿಕ್ ಶರ್ಮ

ಅತ್ಯಂತ ದುಬಾರಿ ಅನ್‌ಕ್ಯಾಪ್ಡ್ ಆಟಗಾರ ಅನ್ನಿಸಿಕೊಂಡಿರುವ ಕಾರ್ತಿಕ್ ಶರ್ಮ ಮಿಂಚಲು ಸಿದ್ಧರಾಗಿದ್ದಾರೆ. ರಾಜಸ್ಥಾನ ಮೂಲದ ಈ ಕ್ರಿಕೆಟಿಗನಿಗೆ ಚೆನ್ನೈ ಸೂಪರ್ ಕಿಂಗ್ಸ್ 14.25 ಕೋಟಿ ಕೊಟ್ಟು ಖರೀದಿಸಿದೆ. ಮಧ್ಯಮ ಕ್ರಮಾಂಕದಲ್ಲಿ ಬಿರುಸಿನ ಬ್ಯಾಟಿಂಗ್ ಮಾಡುವ ಸಾಮರ್ಥ್ಯ ಹೊಂದಿದ್ದಾರೆ.



4 ವಿಹಾನ್ ಮಲ್ಹೋತ್ರಾ

ಆರ್‌ಸಿಬಿ ತಂಡಕ್ಕೆ ಆಯ್ಕೆಯಾಗಿರುವ ಭಾರತ ಅಂಡರ್-19 ತಂಡದ ಪ್ರಮುಖ ಆಟಗಾರ ವಿಹಾನ್ ಮಲ್ಹೋತ್ರಾ ಅವರನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಖರೀದಿಸಿದೆ. ಮುಖ್ಯವಾಗಿ ವಿಶ್ವಕಪ್‌ನಲ್ಲಿ ಗಮನಾರ್ಹ ಪ್ರದರ್ಶನ ನೀಡಿರುವ ಅವರು, ದಾಖಲೆಗಳನ್ನೂ ಮಾಡಿದ್ದಾರೆ. ಬೆಂಗಳೂರು ತಂಡದಲ್ಲಿ ಮಧ್ಯಮ ಕ್ರಮಾಂಕದ ಬ್ಯಾಟರ್ ಆಗಿ ಕಾಣಿಸಿಕೊಳ್ಳಲಿದ್ದಾರೆ.

5 ಪ್ರಶಾಂತ್ ವೀರ್

14.25 ಕೋಟಿ ರೂ.ಗೆ ಚೆನ್ನೈ ತಂಡದ ಪಾಲಾಗಿರುವ ಪ್ರಶಾಂತ್ ವೀರ್ ಕೂಡ ಈ ಬಾರಿ ಗಮನ ಸೆಳೆಯಲು ಸಿದ್ಧರಾಗಿದ್ದಾರೆ. ತಮ್ಮ ಸ್ಫೋಟಕ ಬ್ಯಾಟಿಂಗ್‌ಗಾಗಿ ಖ್ಯಾತರಾದ ಇವರು, ಗಮನ ಸೆಳೆಯಬಲ್ಲ ಯುವಕರ ಪಟ್ಟಿಯಲ್ಲಿದ್ದಾರೆ.

6 ಆಕಿಬ್ ನಬಿ

ಜಮ್ಮು-ಕಾಶ್ಮೀರದ ಆಕಿಬ್ ನಬಿ ದಾರ್ ದೇಶಿ ಕ್ರಿಕೆಟ್‌ನಲ್ಲಿ ಭಾರೀ ಗಮನ ಸೆಳೆದ ಆಟಗಾರ. ತಮ್ಮ ಬೌಲಿಂಗ್ ಮೂಲಕ ಜಮ್ಮು-ಕಾಶ್ಮೀರ ತಂಡವನ್ನು ಚಾಂಪಿಯನ್ ಪಟ್ಟಕ್ಕೇರಿಸಿರುವ ಅವರು, ದಿಲ್ಲಿ ಕ್ಯಾಪಿಟಲ್ಸ್ ಪರ ಕಣಕ್ಕಿಳಿಯಲಿದ್ದಾರೆ.

ಇನ್ನುಳಿದಂತೆ ಪ್ರಿಯಾನ್ಶ್ ಆರ್ಯ, ವಂಶ ಭೇದಿ, ಮಂಗೇಶ್ ಯಾದವ್, ಸಮೀರ್ ರಿಜ್ವಿ ಸೇರಿದಂತೆ ವಿವಿಧ ಆಟಗಾರರು ಕೂಡ ಗಮನ ಸೆಳೆಯುವುದಕ್ಕೆ ಸಿದ್ಧರಾಗಿದ್ದಾರೆ.

ಮೂರು ತಿಂಗಳಿಗೊಮ್ಮೆ ಕಂದಾಯ ಅಧಿಕಾರಿಗಳಿಂದ ಪರಿಶೀಲನೆ

ಒತ್ತುವರಿ ತಡೆಗೆ ಬೀಟ್ ವ್ಯವಸ್ಥೆ

ನಂದಿನಿ ಎನ್.

ಬೆಂಗಳೂರು: ರಾಜ್ಯದಲ್ಲಿ ಸರ್ಕಾರಿ ಭೂಮಿ ಒತ್ತುವರಿ ಗಂಭೀರ ಸಮಸ್ಯೆಯಾಗಿದ್ದು, ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸಾವಿರಾರು ಎಕರೆ ಅತಿಕ್ರಮಣವಾಗಿದೆ. ಇದನ್ನು ತಡೆಯಲು ಸರ್ಕಾರ ಬೀಟ್ ವ್ಯವಸ್ಥೆ ಜಾರಿಗೊಳಿಸಿದ್ದು, ಪ್ರತಿ 3 ತಿಂಗಳಿಗೊಮ್ಮೆ ಕಂದಾಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ 15 ದಿನಗಳಲ್ಲಿ ಒತ್ತುವರಿ ತೆರವುಗೊಳಿಸುವುದು ಕಡ್ಡಾಯವಾಗಿದೆ. ಅಕ್ರಮ-ಸಕ್ರಮ ಯೋಜನೆ ಹಾಗೂ ಬಗರ್ ಹುಕುಂ ಸಾಗುವಳಿ ಮೂಲಕವೂ ಭೂಮಿ ಸಕ್ರಮಗೊಳಿಸಲು ಅವಕಾಶವಿದೆ.

ಮೂರು ವರ್ಷಗಳಲ್ಲಿ ಸುಮಾರು 79 ಸಾವಿರಕ್ಕೂ ಹೆಚ್ಚು ಎಕರೆ ಸರ್ಕಾರಿ ಭೂಮಿ ಒತ್ತುವರಿ ಮಾಡಿಕೊಳ್ಳಲಾಗಿದ್ದು, ಸುಮಾರು 37,156 ಎಕರೆ ಸರ್ಕಾರಿ ಜಮೀನನ್ನು ಒತ್ತುವರಿಯಿಂದ ತೆರವುಗೊಳಿಸಲಾಗಿದೆ. 3 ವರ್ಷಗಳಲ್ಲಿ ಒತ್ತುವರಿಯಾದ ಸರ್ಕಾರಿ ಭೂಮಿಯಲ್ಲಿ ಸ್ವತಃ ಕಂದಾಯ ಸಚಿವರೇ ಉಸ್ತುವಾರಿ ಆಗಿರುವ ಹಾಸನ ಜಿಲ್ಲೆಯದ್ದೇ ಸಿಂಹಪಾಲಿದೆ. ಅಂದರೆ ಸುಮಾರು 31,565 ಎಕರೆ ಸರ್ಕಾರಿ ಭೂಮಿ ಒತ್ತುವರಿಯಾಗಿದೆ. ಇದರಲ್ಲಿ ಶೇ.11ರಷ್ಟು ಮಾತ್ರ ಅಂದರೆ 3323 ಎಕರೆ ಜಮೀನು ತೆರವುಗೊಳಿಸಲಾಗಿದೆ.

ಇನ್ನು ಒತ್ತುವರಿಯಲ್ಲಿ ಎರಡನೆ ಸ್ಥಾನದಲ್ಲಿ ಕಲಬುರಗಿ ಇದ್ದು, ಸುಮಾರು 9,891 ಎಕರೆ ಸರ್ಕಾರಿ ಜಮೀನು ಒತ್ತುವರಿಯಾಗಿದೆ. ಇದರಲ್ಲಿ 7,909 ಎಕರೆ ತೆರವುಗೊಳಿಸಲಾಗಿದೆ. ಕೋಲಾರದಲ್ಲಿ 9,479 ಎಕರೆ ಒತ್ತುವರಿ ಯಾಗಿದ್ದು, ಮೂರನೇ ಸ್ಥಾನದಲ್ಲಿದೆ. 5,989 ಎಕರೆ ಜಮೀನು ತೆರವುಗೊಳಿಸಲಾಗಿದೆ. ಅದರಂತೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 7,213 ಎಕರೆ ಒತ್ತುವರಿಯಾಗಿದ್ದರೆ, ದಾವಣಗೆರೆಯಲ್ಲಿ 6,465 ಎಕರೆ ಒತ್ತುವರಿಯಾಗಿದೆ.



> ಒತ್ತುವರಿ ತೆರವು ಮಾಡಿ ಸರ್ಕಾರದ ವಶಕ್ಕೆ ಪಡೆದ ಜಮೀನುಗಳು ಪುನಃ ಒತ್ತುವರಿಯಾಗದಂತೆ ಸಂರಕ್ಷಣಾ ಕ್ರಮ ಅಂದರೆ ಸಂದರ್ಭಾನುಸಾರ ಸಾರ್ವಜನಿಕ ಉದ್ದೇಶಕ್ಕೆ ಮೀಸಲಿಟ್ಟು, ಪುನಃ ಒತ್ತುವರಿಯಾಗದಂತೆ ತಂತಿ ಬೇಲಿ ಹಾಕಿಸಬೇಕು. ಸುತ್ತಲೂ ಕಂದಕ ನಿರ್ಮಿಸುವುದು ಅಥವಾ ನಾಮ ಫಲಕ ಹಾಕಿಸಬೇಕು.
>
> ■ ಕೃಷ್ಣ ಬೈರೇಗೌಡ, ಕಂದಾಯ ಸಚಿವ

ನಕಲಿ ದಾಖಲೆಗಳಿದ್ದರೆ ಕ್ರಿಮಿನಲ್ ಮೊಕದ್ದಮೆ

ನಕಲಿ ದಾಖಲೆಗಳ ಆಧಾರದ ಮೇಲೆ ಭೂ ಕಬಳಿಕೆಯಾಗಿದೆಯೆಂದು ಬಂದಿರುವ ದೂರು ಅಥವಾ ಸ್ವತ: ಗಮನಿಸಿರುವ ಪ್ರಕರಣಗಳನ್ನು ತೀರ್ಮಾನಿಸಲು ನಿರ್ದಿಷ್ಟ ಕಾಲಮಿತಿ ನಿಗದಿಪಡಿಸುವುದು, ಪ್ರಕರಣಗಳನ್ನು ಪ್ರತ್ಯೇಕವಾಗಿ ಪರಾಮರ್ಶಿಸಬೇಕು. ನಕಲಿ ದಾಖಲೆಗಳನ್ನು ಸೃಷ್ಟಿಸುವಲ್ಲಿ ಸರ್ಕಾರಿ ಅಧಿಕಾರಿ/ಸಿಬ್ಬಂದಿ ಶಾಮೀಲಾಗಿರುವ ಬಗ್ಗೆ ಕಂಡು ಬಂದರೆ ತ್ವರಿತ ಸೇವೆಯಿಂದ ಅಮಾನತ್ತಿನಲ್ಲಿಡುವುದು. ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಟ್ಟಿರುವುದು ಸಾಬೀತು ಆದಲ್ಲಿ ತಕ್ಷಣವೇ ಅಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವುದು. ನ್ಯಾಯಾಲಯ ತಡೆಯಾಜ್ಞೆ ಜಾರಿಯಲ್ಲಿದ್ದರೆ, ತಡೆಯಾಜ್ಞೆ ತೆರವು ಮಾಡಿಸಲು ತಕ್ಷಣವೇ ಕ್ರಮ ಜರುಗಿಸಿ ತ್ವರಿತ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳುವುದು. ಸರ್ಕಾರಿ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ದಾಖಲಾಗಿರುವ ನ್ಯಾಯಾಲಯ ಪ್ರಕರಣ ಗಳನ್ನು ಪರಿಣಾಮಕಾರಿಯಾಗಿ ಕ್ಷೇತ್ರ ಮಟ್ಟದ ಅಧಿಕಾರಿಗಳು ನಿರ್ವಹಿಸುವುದನ್ನು ಖಚಿತಪಡಿಸಿ ಕೊಳ್ಳುವುದು.

ಒತ್ತುವರಿ ತೆರವಿಗೆ ಸರ್ಕಾರದ ಕ್ರಮ: ಜಿಲ್ಲಾಧಿಕಾರಿಗಳು ಒತ್ತುವರಿ ತೆರವುಗೊಳಿಸಲು ಬಾಕಿ ಇರುವ ಪ್ರಕರಣಗಳು ಹಾಗೂ ಸ್ವೀಕೃತವಾಗಿರುವ ದೂರುಗಳನ್ನು ಇನ್ನು 15 ದಿನಗಳ ಅವಧಿಯೊಳಗೆ ಸಂಪೂರ್ಣವಾಗಿ ಪರಾಮರ್ಶಿಸುವುದು. ನಗರಪ್ರದೇಶ/ ವಾಣಿಜ್ಯ/ಕೈಗಾರಿಕೆ/ ಇನ್ನಿತರ ಉದ್ದಿಮೆಗಳಿಗೆ ಅನಧಿಕೃತವಾಗಿ ಸರ್ಕಾರಿ ಜಮೀನು ಬಳಸಿರುವ ಒತ್ತುವರಿ ಪ್ರಕರಣಗಳನ್ನು ಅತಿ ಗಂಭೀರ ಎಂದು ಪರಿಗಣಿಸಿ ಒತ್ತುವರಿದಾರರ ವಿರುದ್ಧ ಕಾನೂನು ಕ್ರಮಗಳನ್ನು ಜರುಗಿಸುವ ಅಧಿಕಾರ ನೀಡಲಾಗಿದೆ. ಕಾಲಮಿತಿಯಲ್ಲಿ ಕ್ರಮ ಜರುಗಿಸದೇ ಇರುವುದು, ನಿರ್ಲಕ್ಷತನ ತೋರಿಸುವುದು, ವಿಳಂಬ ನೀತಿ ಅನುಸರಿಸುವುದು, ಒತ್ತುವರಿ ತೆರವುಗೊಳಿಸಲು ವಿಫಲರಾದ ಅಧಿಕಾರಿ, ಸಿಬ್ಬಂದಿಯನ್ನು ಗುರುತಿಸಿ ಕಲಂ 192ಎ/192ಬಿ ಅನ್ವಯ ತಪ್ಪದೇ ಕ್ರಮ ಜರುಗಿಸುವುದು. ಸದರಿ ಒತ್ತುವರಿ ತೆರವುಗೊಳಿಸಲು ಪರ್ಯಾಯ ವ್ಯವಸ್ಥೆ ಮಾಡುವುದು.

ಯುದ್ಧದ ಬೆನ್ನಲ್ಲೇ ಪಿಸಿಬಿಗೆ ಭಾರೀ ಹಿನ್ನಡೆ | ಎರಡೇ ಕ್ರೀಡಾಂಗಣದಲ್ಲಿ ಪಂದ್ಯ

ಪ್ರೇಕ್ಷಕರಿಲ್ಲದೆ ಪಾಕಿಸ್ತಾನ ಸೂಪರ್ ಲೀಗ್!

ಲಾಹೋರ್: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷಕ್ಕೆ ಪಾಕಿಸ್ತಾನ ಕ್ರಿಕೆಟ್ ಸಂಸ್ಥೆಯ ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಾವಳಿ ತತ್ತರಿಸಿದ್ದು, ಭಾರೀ ಹಿನ್ನಡೆ ಅನುಭವಿಸಿದೆ. ಐಸಿಸಿ ಟೂರ್ನಿಗಳಲ್ಲಿ ಕೆಟ್ಟ ಪ್ರದರ್ಶನ ನೀಡಿ ಆರ್ಥಿಕವಾಗಿ ಮತ್ತು ಐಸಿಸಿ ಕ್ಷೇತ್ರದಲ್ಲಿ ತೀರಾ ಕುಗ್ಗಿರುವ ಪಾಕಿಸ್ತಾನ ಕ್ರಿಕೆಟ್ ಸಂಸ್ಥೆ ಪಂದ್ಯಾವಳಿಯನ್ನು ಪ್ರೇಕ್ಷಕರಿಲ್ಲದೆ ನಡೆಸುವುದಕ್ಕೆ ಮುಂದಾಗಿದೆ.

ಗಲ್ಫ್ ದೇಶಗಳಲ್ಲಿ ನಡೆಯುತ್ತಿರುವ ಯುದ್ಧಕ್ಕೆ ತುತ್ತಾದವರಲ್ಲಿ ಪಾಕಿಸ್ತಾನ ಕ್ರಿಕೆಟ್ ಸಂಸ್ಥೆ ಕೂಡ ಎಂಬುದಕ್ಕೆ ಆಟಗಾರರ ಅಲಭ್ಯತೆಯೇ ಸಾಕ್ಷಿ. ಹಲವಾರು ಆಟಗಾರರು ಪಾಕಿಸ್ತಾನಕ್ಕೆ ಹೋಗಲು ನಿರಾಕರಿಸಿದ್ದಾರೆ. ಹತ್ತಾರು ಕ್ರಿಕೆಟಿಗರು ತಮ್ಮ ಹಾಜರಾತಿ ಹಿಂಪಡೆದಿದ್ದಾರೆ. ಇನ್ನು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಆಯ್ಕೆಯಾದ ಹಲವು ಆಟಗಾರರು ಹೊರಬಿದ್ದ ಕಾರಣ ಕೆಲವು ಪಿಎಸ್ಎಲ್ ಆಟಗಾರರು ಪಿಸಿಬಿಗೆ ಕೈಕೊಟ್ಟು ಬದಲಿ ಆಟಗಾರರಾಗಿ ಭಾರತಕ್ಕೆ ಬಂದಿಳಿದಿದ್ದಾರೆ. ಇದು ಕೂಡ ಪಿಸಿಬಿಗೆ ಹೊಡೆತ ನೀಡಿದೆ.

ಅಭಿಮಾನಿಗಳಿಲ್ಲದೆ ಪಂದ್ಯ: ಮಾರ್ಚ್ 26ರಂದು ಶುರುವಾಗಲಿರುವ ಪಿಎಸ್ಎಲ್ ಪಂದ್ಯಾ ವಳಿಗೆ ಅಭಿಮಾನಿಗಳ ಪ್ರವೇಶವಿರುವುದಿಲ್ಲ, ಭಾನುವಾರದಂದು ಮಾಧ್ಯಮವನ್ನುದ್ದೇಶಿಸಿ ಮಾತನಾಡಿರುವ ಪಿಸಿಬಿ ಅಧ್ಯಕ್ಷ ಮೋಹ್ಸಿನ್ ನಖ್ವಿ, ಪಿಎಸ್ಎಲ್ ನಮ್ಮ ದೇಶದ ಕ್ರಿಕೆಟ್ ಹಬ್ಬ ನಾವು ರದ್ದುಗೊಳಿಸಲಾಗುವುದಿಲ್ಲ, ಟೂರ್ನಿ ವೇಳಾ ಪಟ್ಟಿಯಂತೆ ನಡೆಯುತ್ತದೆ. ಆದರೆ ಅಭಿಮಾನಿಗಳಿಗೆ ಪಂದ್ಯ ನೋಡುವುದಕ್ಕೆ ಅವಕಾಶವಿರುವುದಿಲ್ಲ, ಸದ್ಯ ವಿಶ್ವದಲ್ಲಿ ನಡೆಯುತ್ತಿರುವ ಸಂಘರ್ಷ ಮುಂದಿಟ್ಟುಕೊಂಡು ಈ ಬಗ್ಗೆ ತೀರ್ಮಾನ ಮಾಡಲಾಗಿದೆ ಎಂದಿದ್ದಾರೆ.

ಎರಡೇ ಮೈದಾನದಲ್ಲಿ ಪಂದ್ಯ: ಪಿಎಸ್ಎಲ್ ಪಂದ್ಯಾವಳಿ ವಾಸ್ತವವಾಗಿ ಆರು ಕ್ರೀಡಾಂಗಣಗಳಲ್ಲಿ ನಡೆಯಬೇಕಿತ್ತು. ಆದರೆ ಲಾಜಸ್ಟಿಕ್ಸ್, ಮತ್ತು ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಾದ ಸಂಘರ್ಷಗಳಿಂದ ಎರಡೇ ಸ್ಥಳಗಳಲ್ಲಿ ನಡೆಯಲಿದೆ. ಮೊದಲಿನ ವೇಳಾಪಟ್ಟಿ ಪ್ರಕಾರ ಮುಲ್ತಾನ್, ಪೇಶಾವರ, ಫೈಸಲಾಬಾದ್, ಕರಾಚಿ, ರಾವಲ್ಪಿಂಡಿ ಮತ್ತು ಲಾಹೋರದಲ್ಲಿ ಪಂದ್ಯಗಳು ನಡೆಯಬೇಕಿದ್ದವು. ಆದರೆ ಲಾಹೋರ್ ಮತ್ತು ಕರಾಚಿಯಲ್ಲಿ ಮಾತ್ರ ಪಂದ್ಯಾವಳಿ ನಡೆಸುವುದಕ್ಕೆ ಪಿಸಿಬಿ ಮುಂದಾಗಿದೆ. ಅದಲ್ಲದೆ ಆರಂಭಿಕ ಪಂದ್ಯಕ್ಕೂ ಮುನ್ನ ಯಾವುದೇ ಉದ್ಘಾಟನಾ ಸಮಾರಂಭ ನಡೆಯುವುದಿಲ್ಲ ಎಂದು ಪಿಸಿಬಿ ತಿಳಿಸಿದೆ.

ಇಂಧನ ವ್ಯತ್ಯೆ: ಎರಡೇ ಕ್ರೀಡಾಂಗಣದಲ್ಲಿ ಪಂದ್ಯಾವಳಿ ನಡೆಸುವುದಕ್ಕೆ ಪ್ರಮುಖ ಕಾರಣ ಇಂಧನ ಎಂದು ಬಣ್ಣಿಸಲಾಗಿದೆ. ಯುದ್ಧದ ಪರಿಣಾಮದಿಂದಾಗಿ ವಿಶ್ವವೇ ಇಂಧನ ಬಿಕ್ಕಟ್ಟನ್ನು ಎದುರಿಸುತ್ತಿದೆ. ಹೀಗಿರುವಾಗ ಪಾಕಿಸ್ತಾನ ಪ್ರಧಾನ ಮಂತ್ರಿ ಶರೀಫ್, ಪಿಎಸ್ಎಲ್‌ನಲ್ಲಿ ಭಾಗವಹಿಸುವ ಆಟಗಾರರಿಗೆ ಮತ್ತು ಸಿಬ್ಬಂದಿಗಳಿಗೆ ಇಂಧನ ಉಳಿತಾಯದತ್ತ ಗಮನಹರಿಸಿ ಎಂದಿದ್ದಲ್ಲದೆ, ನಾವು ಶಾಲಾ-ಕಾಲೇಜುಗಳನ್ನು ಬಂದ್ ಮಾಡಿದ್ದೇವೆ. ಜನರಿಗೆ ವರ್ಕ್ ಫ್ರಾಮ್ ಹೋಮ್ ಕೊಟ್ಟಿದ್ದೇವೆ. ಇಂಧನ ಉಳಿತಾಯ ನಮಗೆ ಅತ್ಯವಶ್ಯಕ ಎಂದು ಅಳಲು ತೋಡಿಕೊಂಡಿದ್ದಾರೆ.



ಪಿಎಸ್ಎಲ್‌ಗೆ ಆಟಗಾರರೇ ಇಲ್ಲ

ತಂಡಗಳು ಹರಾಜಿನಲ್ಲಿ ವಿವಿಧ ದೇಶಗಳ ಆಟಗಾರರನ್ನು ಆಯ್ಕೆ ಮಾಡಿಕೊಂಡಿದ್ದವು. ಹ್ಯಾರಿ ಬ್ರೂಕ್ ಅಂತಹ ಪ್ರಮುಖ ಆಟಗಾರರನ್ನೂ ತಂಡಗಳು ಖರೀದಿಸಿದ್ದವು. ಒಬ್ಬೊಬ್ಬರಂತೆ ವಿವಿಧ ಕಾರಣಗಳನ್ನು ಹೇಳಿದ ಆಟಗಾರರು ಅಲಭ್ಯತೆ ಖಚಿತಪಡಿಸಿದರು. ಇದಲ್ಲದೆ, ಐಪಿಎಲ್‌ಗಾಗಿ ಇಬ್ಬರು ಆಟಗಾರರು ಭಾರತಕ್ಕೆ ಬರಲಿದ್ದು ಪಿಸಿಬಿಗೆ ಇನ್ನಷ್ಟು ಹಿನ್ನಡೆಯಾಗಿದೆ.

ಆಫ್ರಿಕಾಗೆ ಗೆಲುವು, ಸರಣಿ ಸಮಬಲ

ವಿಲ್ಲಿಂಗ್ಟನ್: ಕಾನರ್ ಎಸ್ಟರ್‌ಹುಯಿಜೆನ್ ಅವರ ಸ್ಫೋಟಕ ಬ್ಯಾಟಿಂಗ್ ಹಾಗೂ ತಂಡ ಸಾಂಘಿಕ ಬೌಲಿಂಗ್ ದಾಳಿಗೆ ನ್ಯೂಜಿಲೆಂಡ್ ತಂಡ ತತ್ತರಿಸಿದ್ದು ಇಲ್ಲಿ ಮುಕ್ತಾಯಗೊಂಡಿರುವ ನಾಲ್ಕನೇ ಟಿ20 ಪಂದ್ಯದಲ್ಲಿ ಆಫ್ರಿಕಾ ವಿರುದ್ಧ ಸೋಲನುಭವಿಸಿತು.

ವಿಶ್ವಕಪ್ ಮುಗಿದ ತಕ್ಷಣವೇ ನ್ಯೂಜಿಲೆಂಡ್ ಹಾಗೂ ದ.ಆಫ್ರಿಕಾ ತಂಡಗಳು ಎದುರಾಗಿವೆ. ಈ ಹಂತದಲ್ಲಿ ಮೊದಲಿನ ಮೂರು ಪಂದ್ಯದಲ್ಲಿ ಮುನ್ನಡೆ ಸಾಧಿಸಿದ್ದ ಕಿವೀಸ್ ಮುನ್ನಡೆ ಸಾಧಿಸಿತ್ತು. ಈ ಪಂದ್ಯದಲ್ಲಿ ಗೆದ್ದರೆ ಸರಣಿ ವಶಪಡಿಸಿಕೊಳ್ಳಲಿತ್ತು. ಆದರೆ ಭಾನುವಾರದ ಪಂದ್ಯದಲ್ಲಿ ಆಫ್ರಿಕನ್ನರು ಮಿಂಚಿದರು.

ಬ್ಯಾಟಿಂಗ್ ಆಹ್ವಾನ ಪಡೆದ ನಂತರ ಆರಂಭಿಕ ಹಿನ್ನಡೆ ಅನುಭವಿಸಿದರೂ, ಕಾನರ್ ಎಸ್ಟರ್‌ಹುಯಿಜೆನ್ ಅವರ ಅರ್ಧಶತಕದ ನೆರವಿನಿಂದ ಚೇತರಿಸಿಕೊಂಡ ಆಫ್ರಿಕಾ ರುಬಿನ್ ಅವರ ಫಿನಿಶಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 165 ರನ್ ಗಳಿಸಿತು. ಗುರಿ ಬೆನ್ನತ್ತಿದ ನ್ಯೂಜಿಲೆಂಡ್ ಆರಂಭದಿಂದಲೂ ಹಿನ್ನಡೆ ಅನುಭವಿಸಿತು. ರಾಬಿಸನ್ ಹಾಗೂ ಕ್ಲೆವರ್ ಅವರ ಉತ್ತಮ ಬ್ಯಾಟಿಂಗ್‌ನೊಂದಿಗೆ ಅಲ್ಪ ಹೊತ್ತು ನಿಂತರೂ 18.5 ಓವರ್‌ಗಳಲ್ಲಿ 145 ರನ್ ಗಳಿಸಿ ಆಲೌಟ್ ಆಗಿ ಸೋಲೊಪ್ಪಿಕೊಂಡಿತು. 57 ರನ್ ಗಳಿಸಿದ ಕಾನರ್ ಎಸ್ಟರ್‌ಹುಯಿಜೆನ್ ಪಂದ್ಯದ ಹೀರೋ ಎನಿಸಿದರು. ಹರಿಣರ ವೇಗಿ ಕೋಸಿ 3 ವಿಕೆಟ್ ಪಡೆದು ಬೆಸ್ಟ್ ಬೌಲರ್ ಎನಿಸಿಕೊಂಡರು. ಆಫ್ರಿಕಾ ಪರ ಬಾರ್ಟಮನ್, ಸುಬರೈಣ್ ಹಾಗೂ ಕೇಶವ್ ಕೂಡ ತಲಾ 2 ವಿಕೆಟ್ ಪಡೆದರು. ಐದನೇ ಹಾಗೂ ನಿರ್ಣಾಯಕ ಪಂದ್ಯ ಬುಧವಾರದಂದು ನಡೆಯಲಿದೆ.

ಸಿಎಸ್‌ಕೆ ಆಟಗಾರರ ಸಮಾಗಮ



ಚೆನ್ನೈ: ಶನಿವಾರದಿಂದ ಶುರುವಾಗಲಿರುವ ಐಪಿಎಲ್ ಪಂದ್ಯಾವಳಿಗೂ ಮುನ್ನ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿ ಅಭಿಮಾನಿಗಳಿಗಾಗಿ ಕಾರ್ಯಕ್ರಮವೊಂದನ್ನು ಮಾಡಿದ್ದು, ತನ್ನ ಫ್ರಾಂಚೈಸಿಗೆ ಆಡಿರುವ ಹಲವು ಆಟಗಾರರನ್ನು ಕರೆಸಿ ಸನ್ಮಾನ ಮಾಡಿತು.

ಚೆನ್ನೈನ ಚೆಪಾಕ್ ಕ್ರೀಡಾಂಗಣ ಅಭಿಮಾನಿಗಳಿಗೆ ಹಳೆ ನೆನಪುಗಳ ಗೂಡಾಗಿ ಗೋಚರಿಸಿತ್ತು. ಚೆನ್ನೈ ತಂಡ ಚಾಂಪಿಯನ್ ಪಟ್ಟಕ್ಕೇರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಬ್ಯಾಟರ್ ಸುರೇಶ್ ರೈನಾ, ಆಲ್‌ರೌಂಡರ್ ಡ್ವೇನ್ ಬ್ರಾವೊ, ಸ್ಪಿನ್ನರ್ ಮುತ್ತಯ್ಯಾ ಮುರುಳಿಧರನ್, ವೇಗಿ ಬಾಲಿಂಜರ್, ಸುಬ್ರಮಣ್ಯ ಬದರಿನಾಥ, ಅಂಬಾಟಿ ರಾಯುಡು, ಹರ್ಭಜನ್ ಸಿಂಗ್ ಸೇರಿದಂತೆ ವಿವಿಧ ಮಾಜಿ ಆಟಗಾರರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ ಗೌರವ ಸಲ್ಲಿಸಿದೆ.

ಕಾರ್ಯಕ್ರಮದ ಸಮಯದಲ್ಲಿ ಮಹೇಂದ್ರ ಸಿಂಗ್ ಧೋನಿ ಮಾಜಿ ಆಟಗಾರರೊಂದಿಗೆ ಅಣಕು ಆಟವಾಡಿದರು. ರೈನಾ ಸೇರಿದಂತೆ ಪ್ರಮುಖ ಬ್ಯಾಟಿಗರು ಬ್ಯಾಟಿಂಗ್ ಮಾಡಿದರು. ಚೆನ್ನೈ ಸೂಪರ್ ಕಿಂಗ್ಸ್ ಗೆದ್ದ ಎಲ್ಲಾ ಟ್ರೋಫಿಗಳೊಂದಿಗೆ ಫೋಟೋ ಸೆಷನ್ ಕೂಡ ನಡೆಯಿತು.

ವಿಶ್ವ ಚಾಂಪಿಯನ್‌ಗಳಿಗೆ ಸನ್ಮಾನ: ಕಾರ್ಯಕ್ರಮಕ್ಕೂ ಮುನ್ನ ಟಿ20 ವಿಶ್ವಕಪ್ ಗೆದ್ದ ತಂಡದ ಭಾಗವಾಗಿದ್ದ ಶಿವಂ ದುಬೆ, ಸಂಜು ಸ್ಯಾಮ್ಸನ್ ಮತ್ತು ಅಂಡರ್-19 ವಿಶ್ವಕಪ್ ಗೆಲ್ಲಿಸಿಕೊಟ್ಟ ನಾಯಕ ಆಯೂಷ್ ಮಾಥ್ರೆ ಅವರಿಗೆ ಚೆನ್ನೈ ಸೂಪರ್ ಕಿಂಗ್ಸ್ ವಿಶೇಷ ಪಾರಿತೋಷಕ ನೀಡಿತು. ಧೋನಿ ಈ ಆಟಗಾರರಿಗೆ ಸನ್ಮಾನಿಸಿದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ

5932

1		■	2		3	■	4	5
	■	■		■		■	■	
6		7		■	8	9		
	■		■	■	■		■	
■	■		■	■	■		■	■
10	■		■	■	■		■	11
12			13	■	14			
	■	■		■		■	■	
15		■	16			■	17	

ಎಡದಿಂದ ಬಲಕ್ಕೆ
1.ಪಾಠಕನಿಗಾಗಿ ತಯಾರಿಸಿದ ಅಡುಗೆ (2)
2. ನನಗಾಗಿ ವಾದಿಸಲು ಬಂದ ಸಚಿವ (3)
4.ತಾಡಪತ್ರಿಯಲ್ಲಿರುವ ಬಿಸಿ (2)
6. ಹಾಡಿನಿಂದ ಕೂಡಿದ ಪ್ರಪಂಚ (4)
8. ಮದುವೆಗೆ ಸಿದ್ಧನಾದ ಗಂಡು (3)
12.ಕ್ಷಾಮದ ದಿನಗಳು ತಿರುಗಿ ಮೂಡಿವೆ (4)
14. ವಿಚಿತ್ರವಾದರೂ ಇದನ್ನು ಬರೆದಿಡಲಾಗಿದೆ (4)
15.ಬೆಣ್ಣೆ ಕಾಯಿಸಿ ತೆಗೆದ ಸಾರ (2)
16. ಸಭಾ ಸದರೆಡೆಗೆ ನುಗ್ಗಿ ಬಂದವರ ವೇಗ (3)
17.ಪೂರ್ಣ ಪದಾರ್ಥದ ಒಂದು ಅಂಶ (2)

ಮೇಲಿನಿಂದ ಕೆಳಕ್ಕೆ
1.ಆಸ್ತಿಯಲ್ಲಿ ಭಾಗಸ್ಥನೀತ (4)
2.ತಾರೀಖನ್ನು ಹೀಗೂ ಹೇಳುತ್ತೇವೆ (3)
3.ದಮನವಾಗದ ಮಾರ ತಲೆಕೆಳಗಾಗಿದ್ದಾನೆ (3)
5.ಇದು ನಾಡಿನ ಒಂದು ಭಾಗ (4)
7.ಜನರ ಕಷ್ಟ-ನಷ್ಟಗಳಿಗೆ ಸಹಾಯ ಮಾಡುವ ಗುಣ (5)
9.ಅನುಚಿತವಾದ ಜಂಭವಿದು (5)
10.ರಸಾಯನಿಕವಾಗಿ ವಿಭಜಿಸಲು ಅಸಾಧ್ಯವಾದ ಘಟಕ (4)
11.ಮನದಲ್ಲುಂಟಾಗುವ ಭಾವನೆ-ವಿಚಾರ (4)
13.ಬರದ ನಡುವೆ ಕಾಳಗವಡಗಿದೆ (3)
14.ಇಚ್ಚೆಗೆ ವಿರುದ್ಧವಾದುದು (3)

5931 ಉತ್ತರ

ಎಡದಿಂದ ಬಲಕ್ಕೆ:
3.ಅಲ್ಲಮಪ್ರಭು
5.ಕೇಳುಗ 6.ಚರ್ವಿತ
7.ಹವಳ 9.ತಂಗುದಾಣ
11.ಪರಂತಪಾ 14.ಗಣಕ
16.ಅಪಾರ 17.ಜವಾರಿ
18.ಕೊರಳುಪಟ್ಟಿ

ಮೇಲಿನಿಂದ ಕೆಳಕ್ಕೆ :
1.ತೊಡೆಚಲ್ಲಣ 2.ಸಂಕೇತ
3.ಅಗಣಿತ 4.ಮಣಿಹ
8.ವರ್ಜಿತ 10.ದಾರುಣ
12.ಪಾತರಗಿತ್ತಿ
13.ಜಗಜಟ್ಟಿ 15.ಕರುಳು
16.ಅರಿಕೆ

ಕಿರುಸುದ್ದಿ

ಹೆಚ್ಚುವರಿ ಕೊಠಡಿ ಉದ್ಘಾಟನೆ



◆**ಗದಗ:** ಕಾನೂನು, ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಭಾನುವಾರ ಗದಗ-ಬೆಟಗೇರಿಯ ವೆಲ್ಫೇರ್ ಟೌನ್ ಶಿಪ್‌ನಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದ ನೂತನ ಹೆಚ್ಚುವರಿ ಕೊಠಡಿಗಳನ್ನು ಉದ್ಘಾಟಿಸಿದರು. ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಡಾ.ನಂದಾ ಹಣಬರಟ್ಟಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಗೋಪಾಲ ಲಮಾಣಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ, ತಾಲೂಕು ಅಧ್ಯಕ್ಷ ಅಶೋಕ್ ಮಂದಾಲಿ, ನಗರಸಭೆ ಸದಸ್ಯ ಸುರೇಶ್ ಕಟ್ಟಿಮನಿ, ಮೋಹನ್ ಕಟ್ಟಿಮನಿ, ಎಸ್.ಎನ್. ಬಳ್ಳಾರಿ, ಶರೀಫ್ ಬೆಳೆಯಲಿ, ರಮೇಶ್ ಕೊಳೂರ, ಆನಂದ್ ಸಿಂಗಾಡಿ, ನಿರ್ಮಿತಿ ಕೇಂದ್ರದ ಅಧಿಕಾರಿ ಜಿ.ವಿ. ಶಿರೋಳ ಸೇರಿದಂತೆ ಇತರರಿದ್ದರು.

ಮಹಿಳೆಯರು ಉದ್ಯಮಿಗಳಾಗಲಿ: ರೆಡ್ಡಿ



◆**ಗದಗ:** ಇಂದು ಪ್ರತಿಯೊಬ್ಬ ಮಹಿಳೆ ಕೂಡ ಪುರುಷರಷ್ಟೇ ಸರಿಸಮಾನರಾಗಿ, ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾಳೆ. ಮಹಿಳೆ ಉದ್ಯಮ ಕ್ಷೇತ್ರದಲ್ಲಿ ಇದ್ದಾಗ ಮಾತ್ರ ಸಮಾಜ ನಮ್ಮನ್ನು ಗುರುತಿಸುತ್ತದೆ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆಯ ಅಧ್ಯಕ್ಷೆ ಉಮಾ ರೆಡ್ಡಿ ಹೇಳಿದರು.

ನಗರದ ಕೆ.ಎಚ್.ಪಾಟೀಲ ಸಭಾಭವನದಲ್ಲಿ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಮಹಿಳಾ ಘಟಕದಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರತಿಯೊಬ್ಬ ಮಹಿಳೆಯರಲ್ಲಿ ಒಂದಲ್ಲ ಒಂದು ಕೌಶಲ ಇರುತ್ತದೆ. ಅದನ್ನು ಸರಿಯಾಗಿ ಬಳಸಿಕೊಂಡಾಗ ನಾವು ಹತ್ತಾರು ಜನರಿಗೆ ಉದ್ಯೋಗ ದೊರಕಿಸಿಕೊಡಲು ಸಾಧ್ಯವಾಗುತ್ತದೆ. ಹಿಂದಿನ ಕಾಲದಲ್ಲಿ ಮಹಿಳೆ ಮನೆಯಿಂದ ಹೊರಗೆ ಬರುತ್ತಿರಲಿಲ್ಲ, ಈಗ ಮಹಿಳೆಯರು ಹೆಚ್ಚು ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಸಮಾಜದಲ್ಲಿ ತಮ್ಮ ಸ್ಥಾನಮಾನ ಗುರುತಿಸಿಕೊಂಡಿದ್ದಾರೆ ಎಂದರು.

ಮಕ್ಕಳ ಸಂರಕ್ಷಣಾಧಿಕಾರಿ ರಾಜೇಶ್ವರಿ ಮೇಟಿ ಮಾತನಾಡಿ, ಮಹಿಳೆಯರು ಮಕ್ಕಳ ಬಗ್ಗೆ ಜಾಗೃತಿ ವಹಿಸುವುದು ಅವಶ್ಯವಾಗಿದೆ. ಮಹಿಳೆ ಮತ್ತು ಮಕ್ಕಳ ರಕ್ಷಣೆಗಾಗಿ ಸ್ಥಳೀಯ ಸಿಡಿಪಿಒ ಕಚೇರಿ ಸಂಪರ್ಕಿದರೆ ರಕ್ಷಣೆ ದೊರಕುತ್ತದೆ ಎಂದರು.

ಫಕೀರ ದಿಂಗಾಲೇಶ್ವರ ಸ್ವಾಮೀಜಿ ಮಾತನಾಡಿ, ಪ್ರತಿಯೊಬ್ಬರೂ ಮಹಿಳೆ ಕೂಡ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ಯೋಗ ವ್ಯಾಯಾಮ ಮಾಡುವುದರಿಂದ ನೆಮ್ಮದಿಯಿಂದ ಇರಬಹುದು. ನೋವುಗಳು ಬಂದಾಗ ಎದುರಿಸಿ ಸಾಧನೆಯ ಕಡೆಗೆ ಗಮನ ಕೊಡಬೇಕು. ಆಗ ಮಾತ್ರ ಯಶಸ್ವಿಯಾಗಲು ಸಾಧ್ಯ ಎಂದರು. ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ರಾಮನಗೌಡ ದಾನಪ್ಪಗೌಡ್ರ ಮಾತನಾಡಿದರು. ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಶರಣಬಸಪ್ಪ ಗುಡಿಮನಿ ಮಾತನಾಡಿದರು. ಶ್ರೀಗೌರಿ ಮಠದ ಪ್ರಾರ್ಥಿಸಿದರು. ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ರಾಮನಗೌಡ ದಾನಪ್ಪಗೌಡ್ರ ಸ್ವಾಗತಿಸಿದರು. ಯಶಸ್ವಿ ಮಹಿಳಾ ಉದ್ಯಮಿಗಳಾದ ಸುವರ್ಣ ಎಸ್. ಮದರಿಮಠ ಹಾಗೂ ಸುನೀತಾ ಕೆ. ಪಾಟೀಲ ಅವರನ್ನು ಸನ್ಮಾನಿಸಲಾಯಿತು. ಜಯಶ್ರೀ ತಾತನಗೌಡ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಪೂರ್ಣಿಮಾ ಆಟದ ವಂದಿಸಿದರು.

ಸಿದ್ದರಾಮಪ್ಪ ಕೋರಿ ನಿಧನ

◆**ನರಗುಂದ:** ಪಟ್ಟಣದ ಸೋಮಾಪೂರ ಓಣಿ ನಿವಾಸಿ ಸಿದ್ದರಾಮಪ್ಪ ಈಶ್ವರಪ್ಪ ಕೋರಿ (82) ಭಾನುವಾರ ನಿಧನರಾದರು. ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.





ನರಗುಂದ: ಬಾಬಾಸಾಹೇಬ ಭಾವೆ ತಾಲೂಕು ಆಸ್ಪತ್ರೆಯಲ್ಲಿ ಜನನಿ ವಿವಿಧೋದ್ದೇಶಗಳ ಸಂಘದಿಂದ ಮಾರ್ಚ್ ತಿಂಗಳ ದಾನಿ ಕೆಎಎಸ್ ಅಧಿಕಾರಿ ಮಧುಮತಿ ಹಿರೇಮಠ ಅವರು ಕೊಡಮಾಡಿದ ಪೌಷ್ಟಿಕ ಆಹಾರ ಕೀಟ್‌ಗಳನ್ನು ತಾಲೂಕಿನಲ್ಲಿ ಕಡುಬಡತನದಲ್ಲಿರುವ ಎಚ್‌ಐವಿ ಸೋಂಕಿತರು, ಕ್ಷಯರೋಗಿಗಳು, ಮಾನಸಿಕ ಅಸ್ವಸ್ಥರು ಹಾಗೂ ಕುಷ್ಠರೋಗಿಗಳಿಗೆ ವಿತರಿಸಲಾಯಿತು. ನೀಲಕಂಠ ಮಡಿವಾಳರ, ಚಿಕ್ಕಮಕ್ಕಳ ತಜ್ಞ ಡಾ.ರಿಯಾಜ್, ಚರ್ಮರೋಗ ತಜ್ಞೆ ಡಾ.ಪೌಜಿಯಾ ಶಿವಳ್ಳಿ, ಶಿವಾನಂದ ಕುರಹಟ್ಟಿ, ಐ.ಆರ್. ಗಂಜಿ, ಹನುಮಂತ ಗುಂಡಳ್ಳಿ, ಎನ್.ಎಲ್. ಮಡಿವಾಳರ, ಭುವನೇಶ್ವರಿ, ಪ್ರತಿಭಾ ಎ.ಕೆ. ಪ್ರದೀಪ ಕುರುಗೋವಿನಕೊಪ್ಪ ಇತರರಿದ್ದರು.

ಸಮಾಜದೊಂದಿಗೆ ಸೌಹಾರ್ದಯುತವಾಗಿ ಬದುಕಿ

◆**ರೋಣ:** ಏಕತೆ ಮತ್ತು ಸಹೋದರತೆ ಇಸ್ಲಾಂ ಧರ್ಮದ ಮೂಲ ತತ್ವವಾಗಿದ್ದು, ಈ ಹಿನ್ನೆಲೆಯಲ್ಲಿ ಮುಸ್ಲಿಮರು ಸರ್ವ ಸಮಾಜದೊಂದಿಗೆ ಸೌಹಾರ್ದತೆಯಿಂದ ಬಾಳಬೇಕು ಎಂದು ಅಂಜುಮನ್ ಸಂಸ್ಥೆ ಅಧ್ಯಕ್ಷ ಬಾವಾಸಾಬ ಬೆಟಗೇರಿ ಹೇಳಿದರು. ಅವರು ಪಟ್ಟಣದ ಅಂಜುಮನ್ ಪ್ರೌಢ ಶಾಲಾ ಆವರಣದಲ್ಲಿ ಜರುಗಿದ ರಂಜಾನ್ ಹಬ್ಬದ ಸಾಮೂಹಿಕ ಪ್ರಾರ್ಥನೆಯಲ್ಲಿ ಸಮಾಜವನ್ನು ಉದ್ದೇಶಿಸಿ ಮಾತನಾಡಿದರು. ಈ ಹಬ್ಬದಲ್ಲಿ ದಾನಕ್ಕೆ ಅತ್ಯಂತ ಮಹತ್ವ ಸ್ಥಾನವನ್ನು ನಿಡಲಾಗಿದ್ದು, ಮುಸ್ಲಿಮರು ಬಡವರಿಗೆ ತಮ್ಮಿಂದಾದ ಸಹಾಯವನ್ನು ತಪ್ಪದೆ ಮಾಡಬೇಕು ಅಂದಾಗ ಮಾತ್ರ ನಮ್ಮ ಉಪವಾಸ ಮತ್ತು ವ್ರತಗಳಿಗೆ ಪುಣ್ಯದ ಫಲ ದೊರಕಲಿದೆ ಎಂದರು. ಜಿಲ್ಲಾವಕ್ಫ್ ಬೋರ್ಡ್ ಜಿಲ್ಲಾಧ್ಯಕ್ಷ ಯೂಸುಫ್ ಇಟಗಿ ಮಾತನಾಡಿ, ಸಮಾಜದ ಬಂಧುಗಳು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸಬೇಕು. ಮಕ್ಕಳಲ್ಲಿ ಅಕ್ಷರ ಜ್ಞಾನ ಮುಖ್ಯವಾಗಿ ಸಮಾಜ ಅಭಿವೃದ್ಧಿಯತ್ತ ಸಾಗಬೇಕಾದರೆ ಇಂದಿನ ಮಕ್ಕಳು ಧರ್ಮದ ಪದ್ಧತಿಯ ಜೊತೆಗೆ ಶಿಕ್ಷಣವನ್ನು ಪಡೆಯಬೇಕು ಎಂದರು. ರಾಜ್ಯ ಯುವ ಕಾಂಗ್ರೆಸ್ ಪ್ರಧಾನಕಾರ್ಯದರ್ಶಿ ಅಕ್ಷಯ ಪಾಟೀಲ ಮಾತನಾಡಿ, ನಮ್ಮ ದೇಶದಲ್ಲಿ ಹಲವು ಧರ್ಮಗಳು ಹಾಗೂ ಭಾಷೆಗಳಿವೆ. ಹಾಗೆ ನಾವೆಲ್ಲರೂ ಕೂಡಿಕೊಂಡು ಎಲ್ಲ ಧರ್ಮಗಳ ಹಬ್ಬಗಳನ್ನು ಆಚರಿಸಿದಾಗ ಮಾತ್ರ ಪ್ರತಿ ಧರ್ಮಗಳ ಹಬ್ಬಗಳಿಗೆ ವಿಶೇಷ ಮೆರಗು ನೀಡಿದಂತಾಗುತ್ತದೆ ಎಂದರು. ಜನಾಬ ಶಬ್ಬೀರಅಹ್ಮದ ಖಾಜಿ ಸಾಮೂಹಿಕ ಪ್ರಾರ್ಥನೆ ನೆರವೇರಿಸಿದರು. ಕಲೀಕ ರಾಮದುರ್ಗ, ಮಲಿಕ ಯಲಿಗಾರ, ಇನಾಯತ್ ತರಪದಾರ, ಎ.ಐ.ಶೇಖ, ಶಫೀಕ ಮೂಗನೂರ, ಸಲೀಂ ಹೊಸುರ, ದಾವಲಸಾಬ ಬಾಡಿನ, ಅಸ್ಲಾಂ ಕೊಪ್ಪಳ, ರಿಯಾಜ್ ಮುಲ್ಲಾ, ಕೆ.ಕೆ.ಮುಲ್ಲಾ, ಬಾಷಾಸಾಬ ಚಿನ್ನೂರ ಸೇರಿದಂತೆ ಇತರರಿದ್ದರು.



ರೋಣ: ಪಟ್ಟಣದ ಅಂಜುಮನ್ ಪ್ರೌಢ ಶಾಲಾ ಆವರಣದಲ್ಲಿ ಜರುಗಿದ ರಂಜಾನ್ ಹಬ್ಬದ ಸಾಮೂಹಿಕ ಪ್ರಾರ್ಥನೆಯಲ್ಲಿ ಹಲವರು ಭಾಗಿಯಾಗಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ದಿನದಿಂದ ದಿನಕ್ಕೆ ಜಿಲ್ಲೆಯಲ್ಲಿ ಹೆಚ್ಚುತ್ತಿದೆ ಬಿಸಿಲ ತಾಪ | ಬಸವಳಿದ ಜನ

ದಾಹ ನೀಗಿಸುತ್ತಿರುವ ಅರವಟಿಗೆ

▸ ರುದ್ರಗೌಡ ಪಾಟೀಲ

◆**ಗದಗ:** ದಿನದಿಂದ ದಿನಕ್ಕೆ ಜಿಲ್ಲೆಯಲ್ಲಿ ಬಿಸಿಲ ತಾಪ ಹೆಚ್ಚುತ್ತಲೇ ಇದೆ. ಅದರಲ್ಲೂ ಅವಳಿ ನಗರಗಳಾದ ಗದಗ-ಬೆಟಗೇರಿಯಲ್ಲಿ ಬಿಸಿಲಿನ ಪ್ರತಾಪ ತುಸು ಹೆಚ್ಚೇ ಎನ್ನುವಂತಿದೆ. ಮಧ್ಯಾಹ್ನದ ಬಿಸಿಲಲ್ಲಿ ನಾಲ್ಕೈದು ಹೆಜ್ಜೆ ನಡೆಯುವಷ್ಟರಲ್ಲಿ ಜನ ದಾಹದಿಂದ ಬಸವಳಿಯುತ್ತಿದ್ದಾರೆ. ಪರಿಣಾಮ ನಾನಾ ಕೆಲಸ-ಕಾರ್ಯಗಳಿಗಾಗಿ ಜಿಲ್ಲಾ ಕೇಂದ್ರಕ್ಕೆ ಆಗಮಿಸುವ ಗ್ರಾಮೀಣರು, ಕಾರ್ಮಿಕರು ಕುಡಿಯುವ ನೀರಿಗಾಗಿ ಪರಿತಾಪ ಪಡುವಂತಾಗಿದ್ದು, ಅರವಟಿಗೆಗಳೇ ಅವರ ದಾಹ ನೀಗಿಸುತ್ತಿವೆ. ಬೇಸಿಗೆ ಆರಂಭವಾದರೆ ಸಾಕು ನಗರದ ಪ್ರಮುಖ ವೃತ್ತ ಮಾರುಕಟ್ಟೆ ಸೇರಿದಂತೆ ಇತರೆ ಪ್ರದೇಶಗಳಲ್ಲಿ ಕೆಲ ಸಂಘಟನೆಗಳು, ಉದ್ಯಮಿಗಾರರು, ಇನ್ನೂ ಕೆಲವರು ವೈಯಕ್ತಿಕವಾಗಿ ಸ್ಥಾಪಿಸಿರುವ ಅರವಟ್ಟಿಗೆಗಳು ಬಿಸಿಲಿಗೆ ಬಸವಳಿದು ಬಂದ ಜನರ ದಾಹ ತಣಿಸುವಲ್ಲಿ ನಿರತವಾಗಿವೆ. ತಂಪಾದ ನೀರು ಕುಡಿದು ಜನ ಅರವಟ್ಟಿಗೆ ಸ್ಥಾಪಿಸಿದವರಿಗೆ ಪುಣ್ಯ ಬರಲಿ ಎಂದು ಹಾರೈಸಿ ಮುಂದೆ ಸಾಗುತ್ತಿದ್ದಾರೆ.

ವಿವಿಧ ಕಾರಣಗಳಿಂದ ಸಾವಿರಾರು ಜನರು ನಿತ್ಯವೂ ನಗರಕ್ಕೆ ಆಗಮಿಸುತ್ತಾರೆ. ನೀರು ಸೇವಿಸಲು ಅನಿವಾರ್ಯವಾಗಿ ಹೋಟೆಲ್‌ಗಳಿಗೆ ಹೋಗಿ ಅಲ್ಲಿ ಚಹಾ ಇಲ್ಲವೆ ಉಪಾಹಾರ ಮಾಡಬೇಕು. ಅಂದಾಗಲೇ ಬೇಡಿದಷ್ಟು ನೀರು ಸಿಗುತ್ತದೆ. ಇನ್ನೂ ಕೆಲವರು ಹೋಟೆಲ್‌ನಲ್ಲಿ ನೀರು ಸರಿ ಇರುವುದಿಲ್ಲ ಎಂದು ಕೊಂಡು ಒಂದು ಲೀಟರ್ ಮಿನರಲ್ ವಾಟರ್ ಬಾಟಲಿ ಖರೀದಿಸಿ ಕುಡಿಯುತ್ತಾರೆ. ಇದಕ್ಕೆ 20 ರೂಪಾಯಿ ನೀಡಬೇಕು. ಅಂಗಡಿಗಳಲ್ಲಿ 200 ಮಿಲೀ ನೀರಿನ ಪೌಚ್‌ಗೆ 2 ರೂ. ದರವಿದೆ. ಅಷ್ಟು ಪ್ರಮಾಣದ ನೀರು ದಾಹ ತಣಿಸುವುದಿಲ್ಲ, 2 ಲೀಟರ್ ನೀರಿನ ಬಾಟಲ್‌ಗೆ 30 ರೂ. ದರವಿದೆ. ಪರ ಊರುಗಳಿಂದ ಬರುವ ಬಡವರಿಗೆ ಮತ್ತು ವಿದ್ಯಾರ್ಥಿಗಳಿಗೆ ಮತ್ತು ನಗರದ ವಿವಿಧೆಡೆ ಕೆಲಸ ಮಾಡುವ ಕಾರ್ಮಿಕರಿಗೆ ಹೆಚ್ಚು ಅನುಕೂಲವಾಗಿದೆ. ಕಾರ್ಮಿಕರು ನೀರು ಸೇವಿಸಿ ಒಂದು ಬಾಟಲ್ ತುಂಬಿಕೊಂಡು ಹೋಗುತ್ತಿದ್ದಾರೆ.

> ಬಿಸಿಲು ಹೆಚ್ಚಿದ್ದರಿಂದ ಜನರಿಗೆ ನೀರಡಿಕೆಯಾದರೆ ಬೇಗ ನೀರು ಸಿಗುವುದಿಲ್ಲ, ಇದನ್ನು ತಪ್ಪಿಸಲು ಪ್ರಮುಖ ಸ್ಥಳಗಳಲ್ಲಿ ಅರವಟಿಕೆ ಇಡುವ ಮೂಲಕ ಸಾರ್ವಜನಿಕರಿಗೆ ಬಾಹಳ ಅನೂಕುಲವಾಗಿದೆ. ಸಂಘ ಸಂಸ್ಥೆಗಳಿಗೆ ತುಂಬಾ ಧನ್ಯವಾದಗಳು.
> ■ ಗೀತಾ, ವಿದ್ಯಾರ್ಥಿ

> ಅವಳಿ ನಗರದ ಹಲವೆಡೆ ವಿವಿಧ ಸಂಘಟನೆಯಿಂದ ನೀರಿನ ವ್ಯವಸ್ಥೆ ಮಾಡಲಾಗಿದೆ. ಬೇಸಿಗೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಿಂದ ಅನೂಕಲವಾಗುತ್ತಿದೆ. ರೋಟರಿ ಸಂಸ್ಥೆ ಹಾಗೂ ವಿವಿಧ ಸಂಘಟನೆ ಕೆಲಸ ಉತ್ತಮವಾಗಿದೆ.
> ■ ವಿಶ್ವನಾಥ ಖಾನಪೂರ, ವಿಕಾಸ ವೇದಿಕೆಯ ಜಿಲ್ಲಾಧ್ಯಕ್ಷ

ದಿಗಂತ ವಿಶೇಷ



ವಿವಿಧೆಡೆ ಅರವಟಿಗೆ

ಗದಗ-ಬೆಟಗೇರಿ ನಗರಸಭೆ ಮುಂಭಾಗ, ನಗರದ ಹಳೆಯ ಬಸ್ ನಿಲ್ದಾಣ, ಬಸವೇಶ್ವರ ವೃತ್ತ, ಕೆ.ಸಿ.ರಾಣಿ ರಸ್ತೆ, ಬ್ಯಾಂಕ್ ರಸ್ತೆ, ಸರಾಫ್ ಬಜಾರ್, ಜನತಾ ಬಜಾರ್, ಹಳೆಯ ಜಿಲ್ಲಾಧಿಕಾರಿ ಕಚೇರಿ, ಬನ್ನಿ ಮಹಾಂಕಾಳಿ ದೇವಸ್ಥಾನ, ಕನ್ನಿಕಾಪರಮೇಶ್ವರಿ ದೇವಸ್ಥಾನ ಸೇರಿದಂತೆ ವಿವಿಧೆಡೆ ಅರವಟಿಗೆಗಳಿವೆ. ಸೇರಿದಂತೆ ನಗರದ ಪ್ರಮುಖ ಮಾರ್ಗ, ವೃತ್ತಗಳಲ್ಲಿ ನಾನಾ ಸಂಘಟನೆಗಳು ಬೇಸಿಗೆ ದಾಹ ನೀಗಿಸಲೆಂದು ಅರವಟಿಗೆಗಳನ್ನು ಸ್ಥಾಪಿಸಿವೆ. ಸಂಘಟನೆಗಳ ಪದಾಧಿಕಾರಿಗಳು ನಿತ್ಯವೂ ಅರವಟಿಗೆಗಳಿಗೆ ನೀರು ತುಂಬಿಸುತ್ತಾರೆ. ಕೆಲವೆಡೆ ಮಣ್ಣಿನ ಮಡಕೆ, ಇನ್ನೂ ಕೆಲವೆಡೆ ನೀರಿನ ಕ್ಯಾನ್‌ಗಳನ್ನು ಇಡಲಾಗಿದೆ. ಕಾರ್ಯ ನಿಮಿತ್ತ ನಗರಕ್ಕೆ ಬರುವ ಜನತೆ, ಅಲ್ಲಲ್ಲಿ ಸ್ಥಾಪಿಸಿರುವ ಅರವಟಿಗೆ ನೀರು ಕುಡಿದೇ ಮುಂದೆ ಹೋಗುತ್ತಾರೆ.



ಬಿಡಾಡಿ ದನಗಳಿಗೂ ನೀರಿನ ವ್ಯವಸ್ಥೆ

ನಗರದ ವೀರನಾರಾಯಣ ದೇವಸ್ಥಾನದ ಹತ್ತಿರದಲ್ಲಿ ಪ್ರತಿ ವರ್ಷ ಬಿಡಾಡಿ ದನಗಳಿಗೆ ದನದ ಅರವಟ್ಟಿಗೆ ನಿರ್ಮಾಣ ಮಾಡಲಾಗಿದೆ. ಅಲ್ಲಿ ಪ್ರತಿ ದಿನ ಅವುಗಳಿಗೆ ನೀರು ಹಾಕಲಾಗುತ್ತಿದೆ. ಬಿಸಿಲಿನ ಸಮಯದಲ್ಲಿ ಬಿಡಾಡಿ ದನಗಳು ದಾಹ ನೀಗಿಸಲು ಇಲ್ಲಿನ ನೀರನ್ನು ಕುಡಿದು ದಾಹ ನೀಗಿಸಿಕೊಳ್ಳುತ್ತಿದೆ.

ವಿದ್ಯುತ್ ಪರಿವರ್ತಕಗಳ ಕೆಳಗೆ ಕಸದ ರಾಶಿ!

◆**ಲಕ್ಷ್ಮೇಶ್ವರ:** ಪಟ್ಟಣದ ಅನೇಕ ಕಡೆ ಅಲ್ಲಲ್ಲಿ ವಿದ್ಯುತ್ ಪರಿವರ್ತಕಗಳು ಟ್ರಾನ್ಸ್‌ಫಾರ್ಮರ್ ಇದ್ದು, ವಿದ್ಯುತ್ ಪರಿವರ್ತಕಗಳ ಕೆಳಗಡೆ ಕಸದ ತಿಪ್ಪೆಗಳ ರಾಶಿಗಳು ರಾರಾಜಿಸುತ್ತಿದ್ದು, ವಿದ್ಯುತ್ ಸಮಸ್ಯೆಗಳು ಇದ್ದಾಗ ಹೆಸ್ಕಾಂ ಸಿಬ್ಬಂದಿ ಹೈರಾಣಾಗುತ್ತಿದ್ದು, ಅವರಿಗೆ ಕೆಲಸ ಮಾಡಲು ತೊಂದರೆಯಾಗುತ್ತಿದೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

ಪರಿವರ್ತಕಗಳ ಕೆಳಗೆ ಕಸದ ರಾಶಿ, ಪ್ಲಾಸ್ಟಿಕ್, ತಾಜ್ಯ ವಸ್ತುಗಳು ಇರುವುದರಿಂದ ಅರ್ಥಿಂಗ್ ಆಗುವ ಸಂಭವವಿರುತ್ತದೆ. ಅಲ್ಲದೇ ವೈಯರ್ ತಂತಿ ಅಲ್ಲೇ ಹಾಯ್ದು ಹೋಗಿದೆ. ಆ ಸಮಯದಲ್ಲಿ ಅಲ್ಲಿ ಆಕಸ್ಮಿಕವಾಗಿ ಜನರು, ಪ್ರಾಣಿಗಳು ಹೋದರೆ ವಿದ್ಯುತ್ ಶಾಕ್ ತಗಲುವ ಸಂಭವವಿರುತ್ತದೆ. ವಿದ್ಯುತ್ ಕಡಿತಗೊಂಡಾಗ ಅಂತಹ ಜಾಗದಲ್ಲಿ ಲೈನ್‌ಮನ್‌ಗಳಿಗೂ ಕೆಲಸ ಮಾಡಲು ಆಗುವುದಿಲ್ಲ, ಹೆಚ್ಚಿನ ಅಪಘಾತ ಸಂಭವಿಸುವುದಕ್ಕಿಂತ ಮೊದಲೇ ಪುರಸಭೆ ಎಚ್ಚೆತ್ತುಕೊಂಡು ಪರಿವರ್ತಕಗಳ ಕೆಳಗಿನ ಕಸದ ರಾಶಿ, ಪ್ಲಾಸ್ಟಿಕ್, ತಾಜ್ಯ ವಸ್ತುಗಳನ್ನು ತೆರವುಗೊಳಿಸಲು ಮುಂದಾಗಬೇಕು ಮತ್ತು ವಿದ್ಯುತ್ ಪರಿವರ್ತಕಗಳ ಕೆಳಗಡೆ ಈ ರೀತಿ ಕಸದ ರಾಶಿ ತಂದು ಹಾಕುವವರ ವಿರುದ್ಧ ಕ್ರಮಕೈಗೊಂಡು ಮುಂದೆ ಕಸದ ರಾಶಿ ಬೀಳದಂತೆ ಜಾಗೃತಿ ವಹಿಸಬೇಕು ಎಂಬುದು ಜನರ ಒತ್ತಾಯವಾಗಿದೆ.

» ಪಟ್ಟಣದ ಮೆಟ್ರೋ ಬಜಾರ ಹತ್ತಿರ, ಹಳೆ ಪೊಲೀಸ್ ಠಾಣೆ, ಸಮುದಾಯ ಅರೋಗ್ಯ ಕೇಂದ್ರದ ಹಿಂದೆ ಬಸಾಪುರ ಓಣಿ, ಅರೋಗ್ಯ ಸಿಬ್ಬಂದಿ ವಸತಿ ಗ್ರಹ ಕಾಂಪೌಂಡ್ ಮುಂದೆ, ಪಟ್ಟಣದ ಅನೇಕ ಕಡೆ ವಿದ್ಯುತ್ ಪರಿವರ್ತಕಗಳ ಕಡೆ ಬಿದ್ದಿದೆ ಕಸದ ರಾಶಿ

» ವಿದ್ಯುತ್ ಶಾಕ್‌ನಂತಹ ಘಟನೆಗಳು ಸಂಭವಿಸುವ ಮೊದಲೇ ಪುರಸಭೆ ಪೌರ ಕಾರ್ಮಿಕರನ್ನು ಕಳಿಸಿ ಸ್ವಚ್ಛತೆಗೆ ಮುಂದಾಗಬೇಕು ಎಂಬುದು ನಾಗರಿಕರ ಒತ್ತಾಯ

> ವಿದ್ಯುತ್ ಟಿಸಿ ಇರುವ ಕಡೆ ಸಾರ್ವಜನಿಕರು ಕಸವನ್ನು ಹಾಕಬಾರದು. ಅಲ್ಲಿ ಪೌರಕಾರ್ಮಿಕರು ಕಸವನ್ನು ತೆಗೆಯಲು ಹೋದಾಗ ವಿದ್ಯುತ್ ಶಾಕ್ ಆಗುವ ಸಂಭವವಿರುತ್ತದೆ.
> ■ ಮಂಜುನಾಥ ಮುದಗಲ್, ಪುರಸಭೆ ಹಿರಿಯ ಆರೋಗ್ಯ ನಿರೀಕ್ಷಕ



ರಾಣಿ ಚನ್ನಮ್ಮ ಸಾಂಸ್ಕೃತಿಕ ಭವನ ಮಾದರಿಯಾಗಲಿ

◆**ಗಜೇಂದ್ರಗಡ:** ವೀರಶೈವ ಪಂಚಮಸಾಲಿ ಜಾಗೃತ ಸೇವಾ ಸಂಘ ಗಜೇಂದ್ರಗಡ ಉಣಚಗೇರಿ ವತಿಯಿಂದ ರಾಣಿ ಚನ್ನಮ್ಮ ಸಾಂಸ್ಕೃತಿಕ ಭವನದ ಭೂಮಿಪೂಜಾ ಕಾರ್ಯಕ್ರಮ ಭಾನುವಾರ ನಡೆಯಿತು.

ಭೂಮಿಪೂಜೆ ನೇರವೇರಿಸಿದ ಶಾಸಕ ಜಿ.ಎಸ್.ಪಾಟೀಲ ಮಾತನಾಡಿ, ರಾಷ್ಟ್ರಮಾತೆ ಚನ್ನಮಾಜಿಯ ಹೆಸರಿನಲ್ಲಿ ನಿರ್ಮಾಣಗೊಳ್ಳಲಿರುವ ಈ ಭವ್ಯ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ಪಂಚಮಸಾಲಿ ಸಮಾಜದ ಅನೇಕ ಹಿರಿಯರ ಶ್ರಮ ಅಡಗಿದೆ.

ಈ ಭವನವನ್ನು 1.5 ಎಕರೆಯಲ್ಲಿ ಅಂದಾಜು 2 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಗುರಿ ಇದ್ದು ನನ್ನ ಅನುದಾನದಲ್ಲಿ ಸು.25 ಲಕ್ಷ ರೂ. ನೀಡಿದ್ದೇನೆ. ಸಮಾಜದ ಪ್ರತಿಯೊಬ್ಬರೂ ಕೈಜೋಡಿಸಿ ಗದಗ ಜಿಲ್ಲೆಯಲ್ಲಿಯೇ ಮಾದರಿ ಸಾಂಸ್ಕೃತಿಕ ಭವನ ನಿರ್ಮಾಣ ಮಾಡುವಲ್ಲಿ ಶ್ರಮಿಸಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ಹಾಲಕೇರಿ ಮಠದ ಪೀಠಾದಿಪತಿ ಮುಪ್ಪಿನ ಬಸವಲಿಂಗ ಸ್ವಾಮೀಜಿ ಆರ್ಶಿವಚನ ನೀಡಿ, ಸಾಂಸ್ಕೃತಿಕ ಭವನ ಕೇವಲ ಪಂಚಮಸಾಲಿ ಸಮಾಜಕ್ಕೆ ಸೀಮಿತವಾಗದೆ ಸರ್ವ ಸಮಾಜದ ವರ್ಗದವರಿಗೂ ಸಹ ಬಳಕೆಗೆ ಸಿಗುವಂತಾಗಲಿ ಎಂದರು.

ವೀರಶೈವ ಪಂಚಮಸಾಲಿ ಸಮಾಜದ ತಾಲೂಕು ಅಧ್ಯಕ್ಷ ಸಿದ್ದಣ್ಣ ಬಂಡಿ ಮಾತನಾಡಿ, ಈ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ಅನೇಕ ಹಿರಿಯರ ಶ್ರಮ ಅಡಗಿದೆ. ಈ ಭವನವನ್ನು ಸರ್ವ ಸಮಾಜದವರಿಗೂ ಅನುಕೂಲಕರವಾಗಲಿ ಎನ್ನುವ ಉದ್ದೇಶ ಇಟ್ಟುಕೊಂಡು ಭವನ ನಿರ್ಮಾಣ ಮಾಡಲಿದ್ದು, ಭವನ ನಿರ್ಮಾಣಕ್ಕೆ ಎನ್.ಎ. ಮಾಡಿಸಿ ಸರ್ಕಾರದ ಸವಲತ್ತುಗಳನ್ನು ಪಡೆಯಲು ಅನೇಕರು ಶ್ರಮವಹಿಸಿದ್ದಾರೆ ಎಂದರು.

ಮಲ್ಲಿಕಾರ್ಜುನ ಹಿರೇಕೊಪ್ಪ, ಮಹಾಂತೇಶ ಬನ್ನಿಗೋಳ ಪ್ರಾಸ್ತಾವಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಈಶಣ್ಣ ಮ್ಯಾಗೇರಿ ವಹಿಸಿದ್ದರು. ಸಿದ್ದಣ್ಣ ಬಂಡಿ, ವಿಶ್ವನಾಥ ಜಿಡ್ಡಿಬಾಗಿಲ, ಅನಿಲ ಕುಮಾರ ಪಲ್ಲೇದ, ರಮೇಶ ಪಲ್ಲೇದ, ಮಲ್ಲಿಕಾರ್ಜುನ ಬದರೂರ, ಪ್ರಭು ಮೇಟಿ, ರಾಕೇಶ ಮಾರನಬಸರಿ, ಬಸಣ್ಣ ಮೂಲಿಮನಿ, ಬಸಪ್ಪ ಅಕ್ಕಿ, ಶಿವಾನಂದ ಗುಗ್ಗರಿ, ಸಂಗಣ್ಣ ಮುದಗಲ್, ಶಿವಪ್ಪ ಅಕ್ಕಿ, ವೀರಪ್ಪ ಚಿನ್ನೂರ, ರಾಜೂ ಬಾಣದ, ಶಾಂತಗೌಡ ಪಾಟೀಲ, ಬಸವತಪ್ಪ ಪಲ್ಲೇದ, ಸುರೇಶ ಚವಡಿ, ಮಹೇಶ ಪಲ್ಲೇದ, ತುಳಸಪ್ಪ ಸುಳ್ಳದ, ಕೆ.ಜಿ.ಸಂಗಟಿ, ವಿಜಯ ಬೂದಿಹಾಳ, ಮಂಜುನಾಥ ಪಲ್ಲೇದ, ಎಸ್.ಕೆ.ಉಳ್ಳಾಗಡ್ಡಿ, ಕಳಕಪ್ಪ ಪಂತಗರಾಯ, ಸಂಗಪ್ಪ ಜಾಲಿಹಾಳ, ಶಿವಣ್ಣ ಬಬಲಿ, ವಿರೇಶ ಸಂಗಮದ, ಶರಣಪ್ಪ ಯಲಿಗಾರ, ಅರುಣ ಉಗಲಾಟದ, ಕಳಕಪ್ಪ ತೊಂಡಿಹಾಳ, ನಿಂಗಪ್ಪ ಯಲಬುರ್ಗಿ, ಮಹಾಂತೇಶ ಬನ್ನಿಗೋಳ, ಉಮೇಶ ಚನ್ನುಪಾಟೀಲ ಸೇರಿದಂತೆ ಇತರರಿದ್ದರು.



ವಿದ್ಯಾರ್ಥಿಗಳು ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಲಿ: ಡಾ.ನಂದಾ

◆**ಗದಗ:** ರಾಜ್ಯ ಸರ್ಕಾರವು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ರೂಪಿಸಿದ್ದು ವಿಶೇಷವಾಗಿ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ನೀಡಿರುವ ಯೋಜನೆಗಳ ಸೌಲಭ್ಯಗಳನ್ನು ವಿದ್ಯಾರ್ಥಿಗಳು ಸದುಪಯೋಗ ಮಾಡಿಕೊಳ್ಳಬೇಕೆಂದು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ.ನಂದಾ ಹನಬರಟ್ಟಿ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವೃತ್ತಿಪರ ಬಾಲಕಿಯರ ವಸತಿ ನಿಲಯದಲ್ಲಿ ಆಯುಷ್ ಇಲಾಖೆಯು ಬಾಲಕಿಯರಿಗೆ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಹಮ್ಮಿಕೊಂಡಿದ್ದ ವಿದ್ಯಾರ್ಥಿ ಚೇತನ ಕಾರ್ಯಕ್ರಮದಲ್ಲಿ ಔಷಧಿ ಕಿಟ್ ವಿತರಿಸಿ ಮಾತನಾಡಿದರು. ವಿದ್ಯಾರ್ಥಿಗಳು ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಆಸಕ್ತಿ ಹೊಂದಬೇಕೆಂದು ಸಲಹೆ ನೀಡಿದರು. ಜಿಲ್ಲಾ ಆಯುಷ್ ಅಧಿಕಾರಿ ಡಾ.ಅಶೋಕ ಮತ್ತಿಗಟ್ಟಿ ಮಾತನಾಡಿ, ವಿದ್ಯಾರ್ಥಿಗಳು ಒತ್ತಡ ರಹಿತ ಜೀವನ ನಡೆಸಬೇಕು. ಮನೋವಿಕಾಸಕ್ಕೆ, ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗಿರುವ ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಅಭ್ಯಾಸ, ಆರೋಗ್ಯ ಕಡೆ ಹೆಚ್ಚಿನ ಒತ್ತು ನೀಡಬೇಕೆಂದರು. ವಿದ್ಯಾರ್ಥಿ ಚೇತನ ಯೋಜನೆಯ ನಿರ್ವಹಣಾಧಿಕಾರಿ ಡಾ.ಸಾಯಿಪ್ರಕಾಶ ಮಡಿವಾಳರ ಅವರು, ಔಷಧ ಕಿಟ್‌ದಲ್ಲಿರುವ ಔಷಧಗಳ ಮಾಹಿತಿ ಮತ್ತು ಅವುಗಳನ್ನು ಉಪಯೋಗಿಸುವ ರೀತಿಯನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು. ವಸತಿ ನಿಲಯದ 250 ವಿದ್ಯಾರ್ಥಿನಿಯರಿಗೆ ಔಷಧ ಕಿಟ್‌ಗಳನ್ನು ಹಾಗೂ ವಸತಿ ನಿಲಯಕ್ಕೆ ಐಇಸಿ ಎರಡು ಪ್ರೇಮ್‌ಗಳನ್ನು ಆಯುಷ್ ಇಲಾಖೆಯಿಂದ ವಿತರಿಸಲಾಯಿತು. ವಿದ್ಯಾರ್ಥಿ ನಿಲಯದ ಮೇಲ್ವಿಚಾರಕಿ ಸುಜಾತಾ ಪಾಟೀಲ ಸ್ವಾಗತಿಸಿದರು. ಗಾಯತ್ರಿ ಲಮಾಣಿ ಪ್ರಾರ್ಥಿಸಿದರು. ಸುಧಾ ನಿರೂಪಿಸಿದರು. ಗೀತಾ ವಂದಿಸಿದರು. ಕಾರ್ಯಕ್ರಮದಲ್ಲಿ ಯೋಗ ಪ್ರಾತ್ಯಕ್ಷಿಕೆಯನ್ನು ನೀಡಲಾಯಿತು. ವಿದ್ಯಾರ್ಥಿಗಳು ಉತ್ಸುಕತೆಯಿಂದ ಪಾಲ್ಗೊಂಡಿದ್ದರಲ್ಲದೆ ಆರೋಗ್ಯದ ಸಂದೇಹಗಳಿಗೆ ಉತ್ತರವನ್ನು ಕಂಡುಕೊಂಡರು.



ಚುಟುಕು ಸಾಹಿತ್ಯದ ಬೆಳವಣಿಗೆಗೆ ಪದಾಧಿಕಾರಿಗಳು ಶ್ರಮಿಸಲಿ

◆**ರೋಣ:** ತಾಲೂಕು ಪದಾಧಿಕಾರಿಗಳು ಚುಟುಕು ಸಾಹಿತ್ಯ ಬೆಳವಣಿಗೆಗೆ ಪ್ರಾಮಾಣಿಕವಾಗಿ ಶ್ರಮಿಸಬೇಕು ಎಂದು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತನ ಪ್ರಧಾನ ಕಾರ್ಯದರ್ಶಿ ವಿ.ಬಿ.ಸೋಮನಕಟ್ಟಿಮಠ ಹೇಳಿದರು.

ಅವರು ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಜರುಗಿದ ತಾಲೂಕು ಚುಟುಕು ಸಾಹಿತ್ಯ ಪರಿಷತ್‌ನ ಪದಾಧಿಕಾರಿಗಳ ಸಭೆಯ ನೇತೃತ್ವ ವಹಿಸಿ ಮಾತನಾಡಿ, ಚುಟುಕು ಸಾಹಿತ್ಯ ಅತ್ಯಂತ ವೇಗವಾಗಿ ಜನರ ನಾಡಿ ಮಿಡಿತವನ್ನು ಅರಿಯುವ ಶಕ್ತಿಯನ್ನು ಹೊಂದುವ ಮೂಲಕ ಜೀವನಕ್ಕೆ ಶಕ್ತಿ ನೀಡಲು ಪ್ರೇರಿಪಿಸುತ್ತದೆ. ಚುಟಕು ಸಾಹಿತ್ಯದಿಂದ ಅನೇಕ ಕ್ಷೇತ್ರಗಳಲ್ಲಿ ಸಾಧನೆಗೈದಿರುವ ಮಹನೀಯರುಗಳಿದ್ದಾರೆ ಎಂಬುದನ್ನು ನಾವು ಮರೆಯಬಾರದು. ಪದಾಧಿಕಾರಿಗಳು ಚುಟುಕು ಸಾಹಿತ್ಯದ ಬೆಳವಣಿಗೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು. ಶಹರ ಹಾಗೂ ಗ್ರಾಮೀಣ ಭಾಗಗಳಲ್ಲಿ ಚುಟಕು ಸಾಹಿತ್ಯದ ಬಗ್ಗೆ ಒಲವು ಹೊಂದಿರುವ ಸಾಕಷ್ಟು ಜನರು ನಮಗೆ ಸಿಗುತ್ತಾರೆ. ಅವರನ್ನು ಗುರುತಿಸುವ ಕಾರ್ಯವನ್ನು ನಾವೆಲ್ಲರೂ ಮಾಡಬೇಕಿದೆ. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಚುಟಕು ಸಾಹಿತ್ಯದ ಬಗ್ಗೆ ತಿಳುವಳಿಕೆ ನೀಡುವ ಹಾಗೂ ಅವರಿಂದ ಸಾಹಿತ್ಯದ ಪರಿಕಲ್ಪನೆಯನ್ನು ಪಡೆಯುವ ಮೂಲಕ ಸಾಹಿತ್ಯದ ಪರಿಚಯವನ್ನು ಹೆಚ್ಚಿಸುವ ಕೆಲಸವನ್ನು ಮಾಡಬೇಕಿದೆ ಎಂದ ಅವರು, ಮುಂದಿನ ದಿನಗಳಲ್ಲಿ ತಾಲೂಕು ಮಟ್ಟದ ಚುಟಕು ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಳ್ಳೋಣ ಎಂದರು.

ವಿರುಪಮಾ ಹಿರೇಮಠ ಅಧ್ಯಕ್ಷತೆಯನ್ನು ವಹಿಸಿದ್ದರು. ಚುಟುಕು ಸಾಹಿತ್ಯ ಪರಿಷತ್‌ನ ಪದಾಧಿಕಾರಿಗಳು, ಶಿಕ್ಷಕರು, ಸಾಹಿತಿಗಳು ಉಪಸ್ಥಿತರಿದ್ದರು.



ವೀರಭದ್ರೇಶ್ವರ ಜಾತ್ರಾಮಹೋತ್ಸವ ಇಂದು

◆**ಮುಂಡರಗಿ:** ಮಾ.23 ರಂದು ಸಂಜೆ 5ಕ್ಕೆ ವೀರಭದ್ರೇಶ್ವರ ಮಹಾರಥೋತ್ಸವ ಕಾರ್ಯಕ್ರಮ ನಡೆಯಲಿದ್ದು, ನಂತರ ಜರುಗುವ ಧರ್ಮಸಭೆಯ ಸಾನ್ನಿಧ್ಯವನ್ನು ಮುದುಕೇಶ್ವರ ಶಿವಾಚಾರ್ಯರು, ಡಾ.ಸುಜ್ಞಾನದೇವ ಶಿವಾಚಾರ್ಯರು ಮತ್ತು ಅಭಿನವ ಸಿದ್ದವೀರ ಶಿವಾಚಾರ್ಯರು ವಹಿಸುವರು. ಅಧ್ಯಕ್ಷತೆಯನ್ನು ಕರಬಸಪ್ಪ ಹಂಚಿನಾಳ ವಹಿಸುವರು. ಮುಖ್ಯ ಅತಿಥಿಗಳಾಗಿ ಎಂ.ಜಿ.ಗಚ್ಚಣ್ಣವರ ಆಗಮಿಸುವರು. ಡಾ.ನಿಂಗು ಸೊಲಗಿ ಉಪನ್ಯಾಸ ನೀಡುವರು. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗುವವು.

ತಾಲೂಕಿನ ಶಿಂಗಟಾಲೂರ ವೀರಭದ್ರೇಶ್ವರ ಕ್ಷೇತ್ರವು ಜಿಲ್ಲೆಯ ಒಂದು ಸುಪ್ರಸಿದ್ಧ ಯಾತ್ರಾ ಸ್ಥಳವಾಗಿದ್ದು, ವರ್ಷದುದ್ದಕ್ಕೂ ಅಲ್ಲಿ ಹಲವಾರು ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ. ಪ್ರತೀ ವರ್ಷ ನಾಡಿನ ವಿವಿಧ ಭಾಗಗಳ ಲಕ್ಷಾಂತರ ಭಕ್ತರು ವೀರಭದ್ರೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ಪುನೀತರಾಗುತ್ತಾರೆ. ವೀರಭದ್ರೇಶ್ವರನು ನೆಲೆಸಿರುವ ಈರಣ್ಣನ ಗುಡ್ಡವು ಕಪ್ಪತಗುಡ್ಡದ ದಕ್ಷಿಣ ಭಾಗದ ಕೊನೆಯಲ್ಲಿದ್ದು, ಗುಡ್ಡದ ಮುಂದೆ ತುಂಗಭದ್ರಾ ನದಿ ಹರಿಯುತ್ತಲಿದೆ. ಹಿಂದೆ ವಿಶಾಲವಾದ ಹಚ್ಚ ಹಸುರಿನಿಂದ ಆವೃತ್ತವಾಗಿರುವ ಅರಣ್ಯ ಪ್ರದೇಶವಿದ್ದು, ಯಾತ್ರಾರ್ಥಿಗಳನ್ನು ಸದಾ ಕೈಬೀಸಿ ಕರೆಯುತ್ತಿದೆ. ಸುಮಾರು 800-900 ವರ್ಷಗಳ ಹಿಂದೆ ಈಗಿರುವ ವೀರಭದ್ರೇಶ್ವರ ದೇವಸ್ಥಾನದ ಎಡ ಭಾಗದಲ್ಲಿರುವ ಗವಿಸಿದ್ದಪ್ಪನ ಗುಡಿಯಲ್ಲಿ ಸಾದು, ಸಂತರು ವಾಸಿಸುತ್ತಿದ್ದರು. ಆ ಸಂದರ್ಭದಲ್ಲಿ ಶಿಂಗಟಾಲೂರ ಗ್ರಾಮದ ಬಳಿ ಇರುವ ಸಂಜೀವಿನಿ ಹನುಮಪ್ಪನ ಗುಡ್ಡದ ಕೊರಕಲು ಪ್ರದೇಶವೊಂದರಲ್ಲಿ ವೀರಭದ್ರೇಶ್ವರನ ಮೂರ್ತಿ ಪ್ರತ್ಯಕ್ಷವಾಯಿತು ಎಂದು ಹೇಳಲಾಗುತ್ತದೆ. ನಂತರ ಗವಿಸಿದ್ದಪ್ಪನ ಗುಡಿಯಲ್ಲಿದ್ದ ಸಾಧು, ಸಂತರ ಅಣತಿಯಂತೆ ಗವಿಸಿದ್ದಪ್ಪನ ಗುಡಿಯ ಪಕ್ಕದಲ್ಲಿ ದೇವಸ್ಥಾನ ನಿರ್ಮಿಸಿ ಅಲ್ಲಿ ವೀರಭದ್ರೇಶ್ವರ ಮೂರ್ತಿಯನ್ನು ಪ್ರತಿಷ್ಠಿಸಲಾಯಿತು. ಅಂದಿನಿಂದ ಅದು ಜಾಗೃತ ಕೇಂದ್ರವಾಗಿ ನಾಡಿನಾದ್ಯಂತ ಈರಣ್ಣನ ಗುಡ್ಡವೆಂದು ಪ್ರತೀತಿಯಾಯಿತು. ಈರಣ್ಣನ ಗುಡ್ಡದ ಸುತ್ತಮುತ್ತಲಿನ ಶಿಂಗಟಾಲೂರ ಗ್ರಾಮ, ಹಮ್ಮಿಗಿ ಗ್ರಾಮ ಹಾಗೂ ತುಂಗಭದ್ರಾ ನದಿಯಾಚೆ ಇರುವ ನವಲಿ ಗ್ರಾಮದ ಭಕ್ತರು ಶ್ರದ್ಧಾ, ಭಕ್ತಿಯಿಂದ ಈರಣ್ಣನನ್ನು ಪೂಜಿಸತೊಡಗಿದರು. ಕಾಲಕ್ರಮೇಣ ವೀರಭದ್ರೇಶ್ವರ ದೇವಸ್ಥಾನದ ಕೀರ್ತಿಯು ನಾಡಿನಾದ್ಯಂತ ಹರಡಿ ಇಂದು ಅದು ರಾಜ್ಯದ ಒಂದು ಪ್ರಸಿದ್ಧ ಯಾತ್ರಾಸ್ಥಳವಾಗಿ ಮಾರ್ಪಟ್ಟಿದೆ.

ಪ್ರತೀ ವರ್ಷ ಯುಗಾದಿ ಅಮವಾಸೆಯ ಐದು ದಿನಗಳ ನಂತರ ಸಡಗರ, ಸಂಭ್ರಮದಿಂದ ಮೂರು ದಿನಗಳು ಅದ್ದೂರಿಯಿಂದ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ನಡೆಯುತ್ತದೆ. ನಾಡಿನ ವಿವಿಧ ಭಾಗಗಳ ಸಾವಿರಾರು ಭಕ್ತರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಪ್ರತೀ ವರ್ಷ ಶ್ರಾವಣ ಹಾಗೂ ಕಾರ್ತಿಕ ಮಾಸಗಳ ಸೋಮವಾರಗಳಂದು ವೀರಭದ್ರೇಶ್ವರನ ಪಲ್ಲಕ್ಕಿ ಉತ್ಸವ ಜರುಗುತ್ತದೆ. ಸಂಕ್ರಾಂತಿ ಸೇರಿದಂತೆ ವಿವಿಧ ಸಂದರ್ಭಗಳಲ್ಲಿ ಸಾವಿರಾರು ಭಕ್ತರು ವೀರಭದ್ರೇಶ್ವರನ ಸನ್ನಿಗೆ ಆಗಮಿಸಿ ದೇವರ ದರ್ಶನ ಪಡೆದುಕೊಳ್ಳುತ್ತಾರೆ. ಕರಬಸಪ್ಪ ಹಂಚಿನಾಳ ಅವರು ದೇವಸ್ಥಾನ ಟ್ರಸ್ಟ ಕಮಿಟಿಯ ಅಧ್ಯಕ್ಷರಾದ ಮೇಲೆ ಅನೇಕ ಜನಪರ ಕಾರ್ಯಗಳು ನಡೆದಿವೆ.



» ಜಾತ್ರೆ ಅಂಗವಾಗಿ ಜರುಗುವ ಅಗ್ನಿ ಮಹೋತ್ಸವ ಜನಪ್ರಿಯ

» ಅಗ್ನಿ ಹಾಯುವ ಸಾವಿರಾರು ಭಕ್ತರು ಹಾಗೂ ಪುರವಂತರು

ಆಕರ್ಷಣೀಯ ಕೇಂದ್ರ

ಭವ್ಯವಾದ ದೇವಸ್ಥಾನ ನಿರ್ಮಾಣವಾಗಿದೆ. ಸುಮಾರು 5 ಕೋಟಿ ರೂ. ವೆಚ್ಚದಲ್ಲಿ ಕಲ್ಯಾಣ ಮಂಟಪವನ್ನು ನಿರ್ಮಿಸುತ್ತಿದ್ದಾರೆ. ದೇವಸ್ಥಾನದ ಮುಂಭಾಗದಲ್ಲಿ ಈಚೆಗೆ ಶ್ರೀವೀರಭದ್ರೇಶ್ವರ ಉದ್ಯಾನವನವನ್ನು ನಿರ್ಮಿಸಲಾಗಿದ್ದು, ಅದು ಈರಣ್ಣನ ಗುಡ್ಡದ ಒಂದು ಆಕರ್ಷಣೀಯ ಕೇಂದ್ರವಾಗಿದೆ. ಪ್ರತೀವರ್ಷ ಲಕ್ಷಾಂತರ ಜನರು ಉದ್ಯಾನವನ ವೀಕ್ಷಿಸಿ ಸಂಭ್ರಮಿಸುತ್ತಾರೆ.

ಉಚಿತ ದಾಸೋಹ

ದೇವಸ್ಥಾನಕ್ಕೆ ಆಗಮಿಸುವ ಭಕ್ತಾಧಿಗಳಿಗೆ ವೀರಭದ್ರೇಶ್ವರ ಟ್ರಷ್ಟ್ ಕಮಿಟಿ ವತಿಯಿಂದಿ ನಿತ್ಯ ಉಚಿತ ದಾಸೋಹ ನಡೆಯುತ್ತದೆ. ಯಾತ್ರಾರ್ಥಿಗಳ ವಸತಿಗೆ ಯಾತ್ರಿ ನಿವಾಸಗಳನ್ನು ನಿರ್ಮಿಸಲಾಗಿದ್ದು, ಭಕ್ತರ ವಸತಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಲಾಗುತ್ತದೆ. ವಿವಿಧ ಭಾಗಗಳಿಂದ ಆಗಮಿಸುವ ಭಕ್ತರಿಗೆ ಸೂಕ್ತ ಬಸ್ ವ್ಯವಸ್ಥೆ ಮಾಡಲಾಗಿದೆ.

ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯಲಿ: ಜಿಎಸ್‌ಪಾ



◆**ರೋಣ:** ಗುಣಮಟ್ಟದಿಂದ ನಿರ್ಮಿಸಲಾದ ಕಟ್ಟಡದಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಅಕ್ಷರ ಜ್ಞಾನ ದೊರಕಬೇಕು ಎಂದು ರಾಜ್ಯ ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷ, ಶಾಸಕ ಜಿ.ಎಸ್.ಪಾಟೀಲ ಹೇಳಿದರು.

ಅವರು ಭಾನುವಾರ ಎಂಆರ್‌ಬಿಸಿ ಹತ್ತಿರ 1ಕೋಟಿ 42 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾದ ನೂತನ ಸರ್ಕಾರಿ ಸ್ವಾತಂತ್ರ್ಯ ಪದವಿಪೂರ್ವ ಕಾಲೇಜು ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು. ಸರ್ಕಾರಿ ಕಾಲೇಜಿಗೆ ಬರುವ ವಿದ್ಯಾರ್ಥಿಗಳು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಾಗಿರುತ್ತಾರೆ. ಆದರೆ ಅವರಲ್ಲಿ ಪ್ರತಿಭೆ ಇರುತ್ತೆ ಎನ್ನುವುದನ್ನು ಯಾರು ಕೂಡ ಮರೆಯಬಾರದು. ಹೀಗಾಗಿ ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರಕಬೇಕು ಎಂಬುದು ನನ್ನ ಸೇರಿದಂತೆ ಸರ್ಕಾರದ ಇಚ್ಛೆಕೂಡಯಿದ್ದು, ಈ ನಿಟ್ಟಿನಲ್ಲಿ ಉಪನ್ಯಾಸಕರು ಕಾರ್ಯ ಪ್ರವೃತ್ತರಾಗಬೇಕು ಎಂದರು.

ರಾತ್ರಿ ಕಾಲೇಜು ಕಟ್ಟಡದ ಆವರಣದಲ್ಲಿ ಅಕ್ರಮ ಸಾರಾಯಿ ಸೇವನೆ ನಡೆಯುತ್ತದೆ. ಹಳೆ ಕಟ್ಟಡದ ಕಿಟಕಿ ಗ್ಲಾಸ್‌ಗಳನ್ನು ಒಡೆದು ಹಾಕಿ ಸಾರಾಯಿ ಪಾಕಿಟ್‌ಗಳನ್ನು ಕೊಠಡಿ ಒಳಗಡೆ ಎಸೆಯುತ್ತಾರೆ ಎಂದು ಪ್ರಭಾರಿ ಪ್ರಾಚಾರ್ಯ ಬಡಿಗೇರ ಅವರು ಶಾಸಕರ ಗಮನಕ್ಕೆ ತರುತ್ತಿದ್ದಂತೆ ಆಕ್ರೋಶಗೊಂಡ ಶಾಸಕರು, ಕಾಲೇಜಿನ ಎಸ್‌ಡಿಎಂಸಿ ಸದಸ್ಯರುಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡು ಕಾಲೇಜಿನ ಸುಧಾರಣೆಗಾಗಿ ನಿಮ್ಮನ್ನು ನೇಮಕ ಮಾಡಲಾಗಿದ್ದು, ನಿಷ್ಕಾಳಜಿ ವಹಿಸಿದರೆ ಹೇಗೆ ಎಂದು ಪ್ರಶ್ನಿಸಿದರಲ್ಲದೇ ಇಂತಹ ಕೆಟ್ಟ ಘಟನೆಗಳು ಮರುಕಳಿಸದಂತೆ ನಿಗಾವಹಿಸಿ. ಎಸ್‌ಡಿಎಂಸಿ ಸದಸ್ಯರುಗಳು ರಾತ್ರಿ ಸಮಯದಲ್ಲಿ ಸಂಚರಿಸಿ ಕಿಡಿಗೇಡಿಗಳು ಸಿಕ್ಕಲ್ಲಿ ಪೊಲೀಸರಿಗೆ ಒಪ್ಪಿಸಿ ಭಯ ಪಡಬೇಡಿ ಎಂದರು.

ಬಸವರಾಜ ನವಲಗುಂದ, ರಾಜಣ್ಣ ಸುಂಕದ, ಯೂಸುಫ್ ಇಟಗಿ, ವಿ.ಬಿ.ಸೋಮನಕಟ್ಟಿಮಠ, ಬಾವಾಸಾಬ ಬೆಟಗೇರಿ, ಮೌನೇಶ ಹಾದಿಮನಿ, ಮಹೇಶ ಕಳಸಣ್ಣವರ, ಅಸ್ಲಂ ಕೊಪ್ಪಳ, ಬಸವರಾಜ ಜಗ್ಗಲ, ಕೆ.ಕೆ.ಮುಲ್ಲಾ, ಶಬ್ಬೀರಹ್ಮದ ಖಾಜಿ, ಎಚ್.ಬಿ.ದಿಂಡೂರ, ದುರ್ಗಪ್ಪ ಹಿರೇಮನಿ, ದಾವಲಸಾಬ ಬಾಡಿನ ಸೇರಿದಂತೆ ಕಾಲೇಜಿನ ಉಪನ್ಯಾಸಕರುಗಳು ಉಪಸ್ಥಿತರಿದ್ದರು.

ರಾಜ್ಯ ಸರ್ಕಾರದ ಜನವಿರೋಧಿ ನೀತಿಗೆ ಮತದಾರರಿಂದ ತಕ್ಕ ಪಾಠ

ಬಿಜೆಪಿ ಗೆಲುವು ಖಚಿತ: ವಿಜಯೇಂದ್ರ



ಬಾಗಲಕೋಟೆ: ರಾಜ್ಯ ಸರ್ಕಾರದ ಜನವಿರೋಧಿ, ಬಡವರ ವಿರೋಧಿ ಆಡಳಿತ ಹಾಗೂ ಯುವಕರ ಭವಿಷ್ಯ ಹಾಳು ಮಾಡಿರುವ ರಾಜ್ಯ ಸರ್ಕಾರದ ವಿರುದ್ಧ ಜನ ಆಕ್ರೋಶಗೊಂಡಿದ್ದು, ದಾವಣಗೆರೆ ಮತ್ತು ಬಾಗಲಕೋಟೆಯಲ್ಲಿ ಬಿಜೆಪಿ ಪರವಾದ ವಾತಾವರಣ ಸೃಷ್ಟಿಯಾಗಿದ್ದು ಎರಡೂ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಗಳು ಹೆಚ್ಚು ಮತಗಳ ಅಂತರದಿಂದ ಗೆಲ್ಲುತ್ತಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ನವನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಮಾಧ್ಯಮ ಕೇಂದ್ರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆಜಾಸ್ತಿಯಾಗಿದ್ದು,ಬಿಜೆಪಿಯನ್ನು ಬೆಂಬಲಿಸಲು ತುದಿಗಾಲ ಮೇಲೆ ಜನ ನಿಂತಿದ್ದಾರೆ. ದಾವಣಗೆರೆ, ಬಾಗಲಕೋಟೆಯಲ್ಲಿ ಅಚ್ಚರಿಯ ಫಲಿತಾಂಶ ಬರಲಿದೆ. ಕೇಂದ್ರ ಸರ್ಕಾರದ ಸಾಧನೆ ಮತ್ತು ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಾಡಿದ ಅಭಿವೃದ್ಧಿ ಕೆಲಸಗಳನ್ನು ಮೆಚ್ಚಿ ಜನ ಬಿಜೆಪಿಯನ್ನು ಬೆಂಬಲಿಸಲಿದ್ದಾರೆ ಎಂದು ಹೇಳಿದರು. ಬಿಜೆಪಿ ಅಭ್ಯರ್ಥಿಗಳ ಗೆಲುವು ತಡೆಯಲು ಯಾರಿಂದಲೂ ಸಾಧ್ಯವಿಲ್ಲ, ರಾಜ್ಯ ಸರ್ಕಾರದ ಅಭಿವೃದ್ಧಿ ಶೂನ್ಯವಾಗಿದೆ. ಸರ್ಕಾರ ಹಿಂದೂ ವಿರೋಧಿ ನೀತಿಯನ್ನು ಕೂಡ ಅನುಸರಿಸುತ್ತಿದ್ದು ಎಲ್ಲವನ್ನು ಮತದಾರರು ಮನಸ್ಸಿನಲ್ಲಿಟ್ಟುಕೊಂಡಿದ್ದು ಈ ಬಾರಿ ಬಾಗಲಕೋಟೆಯಿಂದ ಹಿರಿಯರಾದ ವೀರಣ್ಣ ಚರಂತಿಮಠ, ದಾವಣಗೆರೆಯಲ್ಲಿ ಶ್ರೀನಿವಾಸ ಅವರು ಅಧಿಕ ಮತಗಳ ಅಂತರದಿಂದ ಗೆಲ್ಲುತ್ತಾರೆ ಎಂದರು.

ಬಿಜೆಪಿ ಕಾರ್ಯಕರ್ತರಲ್ಲಿ ರಣೋತ್ಸವ ಇದ್ದು, ಮತದಾರರು ಕೂಡ ರಾಜ್ಯದ ಸರ್ಕಾರದ ಆಡಳಿತಕ್ಕೆ ಬೇಸತ್ತು ಹೋಗಿದ್ದಾರೆ. ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಗುಜರಾತ್ ಸಿಎಂ ಆಗಿ ಮತ್ತು ಪ್ರಧಾನಿಯಾಗಿ 8931 ದಿನಗಳ ನಿರಂತರ ಆಡಳಿತ ನಡೆಸುತ್ತಿರುವುದು ದಾಖಲೆಯಾಗಿದ್ದು ಇದೊಂದು ದೇಶದ ಜನ ಖುಷಿ ಪಡುವಂತಾಗಿದೆ. ದೇಶಾದ್ಯಂತ ಮೋದಿಯವರ ಆಡಳಿತವನ್ನು ಶ್ಲಾಘನೆ ಮಾಡಲಾಗುತ್ತಿದೆ. ಮೂರು ಬಾರಿ ಮೋದಿಯವರು ದೇಶದ ಪ್ರಧಾನಿಯಾದರೂ ಅವರ ಜನಪ್ರಿಯತೆ ಕುಗ್ಗಿಲ್ಲ, ಅವರ ದಿಟ್ಟ ನಾಯಕತ್ವಕ್ಕೆ ದೇಶಾದ್ಯಂತ ಬೆಂಬಲ ದೊರೆಯುತ್ತಿದೆ ಎಂದು ಹೇಳಿದರು.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ, ಸಂಸದ ಗೋವಿಂದ ಕಾರಜೋಳ, ರಾಜ್ಯ ಸಭೆ ಸದಸ್ಯ ನಾರಾಯಣಸಾ ಭಾಂಡಗೆ, ಅರುಣ್ ಶಹಾಪೂರ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಮಾಜಿ ಶಾಸಕ ಎಂ.ಡಿ.ಲಕ್ಷ್ಮೀನಾರಾಯಣ, ಎಂ.ಕೆ.ಪಟ್ಟಣಶೆಟ್ಟಿ ಮತ್ತಿತರರು ಇದ್ದರು.

ಸಿಎಂ,ಡಿಸಿಎಂ ಸೇರಿ ಹಲವು ನಾಯಕರು ಭಾಗಿ

ಕಾಂಗ್ರೆಸ್ ಅಭ್ಯರ್ಥಿ ಇಂದು ನಾಮಪತ್ರ ಸಲ್ಲಿಕೆ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭೆಯ ಮತಕ್ಷೇತ್ರದಲ್ಲಿ ಶಾಸಕ ಎಚ್.ವೈ.ಮೇಟಿಯವರು ನಿಧನ ನಂತರ ನಡೆಯುತ್ತಿರುವ ಉಪಚುನಾವಣೆಗೆ ಟಿಕೆಟ್ ಪಡೆಯಲು ಅವರ ಕುಟುಂಬದವರ ಮಧ್ಯೆಯೇ ಪೈಪೋಟಿ ಹೆಚ್ಚಾಗಿತ್ತು. ನಾಲ್ಕು ಜನ ಕೂಡ ಟಿಕೆಟ್ ಆಕಾಂಕ್ಷಿಗಳು ಆಗಿದ್ದರೂ ಕೊನೆಗೆ ಉಪಸಮರಕ್ಕೆ ಮೇಟಿಯವರ ಕಿರಿಯ ಪುತ್ರ ಉಮೇಶ ಮೇಟಿಯವರಿಗೆ ಕೊನೆಗೂ ಕಾಂಗ್ರೆಸ್ ಹೈಕಮಾಂಡ್ ಟಿಕೆಟ್ ನೀಡಿದೆ.

> ಮಾ.23ರಂದು ನಾಮಪತ್ರ ಸಲ್ಲಿಸುತ್ತೇನೆ. ವಿದ್ಯಾಗಿರಿಯ ಕಾಲೇಜ್ ಸರ್ಕಲ್‌ದಿಂದ ನವನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆದು ನಂತರ ಚುನಾವಣಾಧಿಕಾರಿಗಳಿಗೆ ಮನವಿ ನಾಮಪತ್ರ ಸಲ್ಲಿಕೆ ಮಾಡಲಾಗುವುದು. ಮುಖ್ಯಮಂತ್ರಿ, ಡಿಸಿಎಂ ಸೇರಿ ಹಲವು ನಾಯಕರು ಬರಲಿದ್ದಾರೆ.
> ■ **ಉಮೇಶ ಮೇಟಿ, ಕಾಂಗ್ರೆಸ್ ಅಭ್ಯರ್ಥಿ**



ಕಳೆದ ಒಂದು ವಾರದಿಂದ ಮೇಟಿಯವರ ಕುಟುಂಬದಲ್ಲಿ ಯಾರಿಗೆ ಟಿಕೆಟ್ ಸಿಗುತ್ತದೆ ಎಂಬುದು ಒಂದು ಕಡೆ ಲೆಕ್ಕಾಚಾರ'ವಾದ'ರೆ, ಇನ್ನೊಂದೆಡೆ ಮಲ್ಲಿಕಾರ್ಜುನ ಮೇಟಿಯವರೇ ಟಿಕೆಟ್ ಪಡೆಯುವುದು ಖಚಿತ ಎಂದು ಹೇಳಲಾಗಿತ್ತು. ಉಮೇಶ ಮೇಟಿಯವರಿಗೆ ಟಿಕೆಟ್ ನೀಡಬೇಕು ಎಂದು ಅವರ ಅಭಿಮಾನಿಗಳು ಹೇಳುತ್ತಿದ್ದರು. ಇದರ ಮಧ್ಯೆ ಮೇಟಿಯವರ ಕಿರಿಯ ಪುತ್ರಿ ಮಹಾದೇವಿ ಮೇಟಿಯವರು ಕೂಡ ನಾನೂ ಟಿಕೆಟ್ ಆಕಾಂಕ್ಷಿ ಎಂದು ಸಾಮಾಜಿಕ ಜಾಲತಾಣ ಮೂಲಕ ಫುಲ್ ವೈರಲ್ ಮಾಡಿದ್ದರು.

ಮೇಟಿ ಕುಟುಂಬದವರ ಮಧ್ಯೆ ಇರುವ ಅಸಮಾಧಾನವನ್ನು ಶಮನ ಮಾಡಲು ಸ್ವತಃ ಮುಖ್ಯಮಂತ್ರಿಯವರೇ ಅಖಾಡಕ್ಕೆ ಇಳಿದು ನಾಲ್ಕು ಜನರನ್ನು ಬೆಂಗಳೂರಿಗೆ ಕರೆಸಿಕೊಂಡು ಟಿಕೆಟ್ ಗೊಂದಲ ನಿವಾರಣೆ ಮಾಡಿ ಕಳುಹಿಸಿದ್ದರು.

ಕೊನೆ ಗಳಿಗೆಯಲ್ಲಿ ಉಮೇಶಮೇಟಿಯವರಿಗೆ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಅಳಿದು ತುಳಿದು ನೋಡಿ ಟಿಕೆಟ್ ಫೈನಲ್ ಮಾಡಿದೆ. ಯಾರಿಗೆ ಟಿಕೆಟ್ ಕೊಟ್ಟರೆ ಉತ್ತಮ ಎಂಬುದನ್ನು ಕೂಡ ಮಾಹಿತಿ ಸಂಗ್ರಹಿಸಿಕೊಂಡು ಉಮೇಶ ಮೇಟಿಯವರಿಗೆ ಟಿಕೆಟ್ ನೀಡಲಾಗಿದೆ.

ಟಿಕೆಟ್ ಗಿಟ್ಟಿಸಿಕೊಂಡ ನಂತರ ಕಾಂಗ್ರೆಸ್ ಕಚೇರಿಗೆ ಬಂದ ಉಮೇಶ ಮೇಟಿ ಜಿಲ್ಲಾಧ್ಯಕ್ಷರ ಜೊತೆ ಮಾಧ್ಯಮದವರೊಂದಿಗೆ ಮಾತನಾಡಿ, ನಮ್ಮ ತಂದೆಯವರ ಸಮನಾಗಿ ನಿಂತು ಜಿಲ್ಲೆಯ ನಾಯಕರು ನಮ್ಮ ಕುಟುಂಬಕ್ಕೆ ಟಿಕೆಟ್ ಕೊಡಿಸಿದ್ದಾರೆ. ನಮ್ಮ ತಂದೆಯವರ ಮೇಲಿನ ಪ್ರೀತಿಯಿಂದ ಕ್ಷೇತ್ರದ ಯಾವ ನಾಯಕರು ಕೂಡ ಕಾಂಗ್ರೆಸ್ ಟಿಕೆಟ್ ಕೇಳಿರಲಿಲ್ಲ. ನಮ್ಮ ಕುಟುಂಬದಲ್ಲಿಯೂ ಕೂಡ ಯಾವುದೇ ಗೊಂದಲ ಇಲ್ಲ. ಎಲ್ಲರೂ ಒಗ್ಗಟ್ಟಾಗಿ ಚುನಾವಣೆ ಎದುರಿಸುತ್ತೇವೆ ಎಂದರು.

ನಮ್ಮ ತಂದೆಯವರ ಜತೆಗೆ ಹಲವಾರು ಚುನಾವಣೆ ಮಾಡಿದ್ದೇವೆ. ನಮ್ಮ ತಂದೆಯವರು ಕ್ಷೇತ್ರಕ್ಕೆ ಮಾಡಿದ ಅಭಿವೃದ್ಧಿ ಕೆಲಸಗಳು, ರಾಜ್ಯ ಸರ್ಕಾರದ ಸಾಧನೆಗಳು ನಮ್ಮ ಗೆಲುವಿಗೆ ಶ್ರೀರಕ್ಷೆಯಾಗಲಿದೆ. ನಾವೂ ಹಿಂದೂಗಳೇ ಸಂವಿಧಾನ ಅಡಿ ಚುನಾವಣೆ ಮಾಡುತ್ತೇವೆ ಎಂದರು.

ವೀರಣ್ಣ ಚರಂತಿಮಠ ನಾಮಪತ್ರ ಸಲ್ಲಿಕೆ ಇಂದು: ಶಾಂತಗೌಡ ಪಾಟೀಲ



ಬಾಗಲಕೋಟೆ: ಬಾಗಲಕೋಟೆ ವಿಧಾನಭೆ ಮತಕ್ಷೇತ್ರದ ಉಪಚುನಾವಣೆಯ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠವರು ಮಾ.23ರಂದು ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ತಿಳಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೀರಣ್ಣ ಚರಂತಿಮಠವರು ನಾಮಪತ್ರ ಸಲ್ಲಿಸುವ ಮುನ್ನ ಬೆಳಗ್ಗೆ 9.30ಕ್ಕೆ ಕಣವಿ ವೀರಭದ್ರೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ನಂತರ ಅಲ್ಲಿಂದ ಮೆರವಣಿಗೆ ಆರಂಭಗೊಂಡು ಅಡತ ಬಜಾರ್, ಹಳಪೇಟೆ, ವಲ್ಲಭಭಾಯಿ ವೃತ್ತ ಎಂ.ಜಿ.ರಸ್ತೆ ಮೂಲಕ ಬಸವೇಶ್ವರ ವೃತ್ತವನ್ನು ಮೆರವಣಿಗೆ ತಲುಪಿ ಸಾರ್ವಜನಿಕ ಸಭೆಯಾಗಿ ಮಾರ್ಪಟ್ಟು ನಂತರ ಬಾಗಲಕೋಟೆ ಉಪವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸುವ ಕಾರ್ಯಕ್ರಮ ಇದೆ ಎಂದರು. ನಾಮಪತ್ರ ಸಲ್ಲಿಸುವ ಮುನ್ನ ನಡೆಯುವ ಮೆರವಣಿಗೆಯಲ್ಲಿ 15ರಿಂದ 20 ಸಾವಿರ ಜನ ಕ್ಷೇತ್ರದಿಂದ ಬರಲಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ, ಮಾಜಿ ಸಚಿವರು, ಹಾಲಿ ಶಾಸಕರು, ವಿಧಾನ ಪರಿಷತ್ ಸದಸ್ಯರು, ಮಾಜಿ ಶಾಸಕರು ಸೇರಿದಂತೆ ರಾಜ್ಯದ ನಾಯಕರು ಹೆಚ್ಚಿನ ಸಂಖ್ಯೆಯಲ್ಲಿ ಬರಲಿದ್ದಾರೆ ಎಂದು ಹೇಳಿದರು.

» ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಕೇಂದ್ರ ಸಚಿವ ಜೋಶಿ ಸೇರಿ ಹಲವು ನಾಯಕರು ಭಾಗಿ

ಸಚಿವ ಸತೀಶ ಜಾರಕಿಹೊಳಿ ಭರವಸೆ

ಮಹದಾಯಿ ಅನುಮತಿಗೆ ಸರ್ವ ಪಕ್ಷದ ನಿಯೋಗ



ಬೆಳಗಾವಿ: ಮಹದಾಯಿ, ಕಳಸಾ ಬಂಡೂರಿ ಯೋಜನೆ ಜಾರಿ ಮಾಡಲು ಕೇಂದ್ರ ಸರ್ಕಾರದ ಅರಣ್ಯ, ಪರಿಸರ ಇಲಾಖೆಯ ರಾಷ್ಟ್ರೀಯ ವನ್ಯಜೀವಿ ಮಂಡಳಿಯಿಂದ ಅನುಮತಿ ದೊರೆತಿಲ್ಲ. ಆದ್ದರಿಂದ ಈಗಾಗಲೇ ಸಿದ್ಧತೆ ಮಾಡಿಕೊಂಡಿದ್ದು ನನ್ನ ನೇತೃತ್ವದಲ್ಲಿಯೇ ಸರ್ವ ಪಕ್ಷದ ನಿಯೋಗ ಕೊಂಡ್ಯೊಯ್ಯುತ್ತೇನೆ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಭಾನುವಾರ ನಗರದ ಕಾಂಗ್ರೆಸ್ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಪ್ಪರಗಿ ಬ್ಯಾರೇಜ್‌ನ ಗೇಟ್ ಸಂಖ್ಯೆ 22 ಮುರಿದು ಬಿದ್ದ ಪರಿಣಾಮ ಸುಮಾರು 2.5ರಿಂದ 3.5 ಟಿಎಂಸಿ ನೀರು ವ್ಯರ್ಥವಾಗಿ ಹರಿದು ಹೋಗಿದ್ದು, ಈ ಗಂಭೀರ ಜಲಸಂಕಷ್ಟ ಪರಿಹರಿಸಲು ಮಹಾರಾಷ್ಟ್ರ ಸರ್ಕಾರದಿಂದ ಹೆಚ್ಚುವರಿ ನೀರನ್ನು ಬಿಡುಗಡೆಗೊಳಿಸುವಂತೆ ಕೋರಲು ಕರ್ನಾಟಕದ ಜನಪ್ರತಿನಿಧಿಗಳ ನಿಯೋಗವು ಮಹಾರಾಷ್ಟ್ರಕ್ಕೆ ಭೇಟಿ ನೀಡಲು ನಿರ್ಧರಿಸಿದೆ ಎಂದು ಇದೇ ವೇಳೆ ಸಚಿವರು ತಿಳಿಸಿದರು.

ಕಸ ವಿಲೇವಾರಿ ಸಮಸ್ಯೆ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಬೆಳಗಾವಿ ನಗರದ ಕಸ ವಿಲೇವಾರಿ ಸಮಸ್ಯೆ ಕಳೆದ ಇಪ್ಪತ್ತು ವರ್ಷದಿಂದ ಇದೆ. ಶಾಶ್ವತವಾಗಿ ಸಮಸ್ಯೆ ಬಗೆಹರಿಸಲು ನಗರದ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು ಹೊಸ ಘನತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ನಾನು ಅನೇಕ ಬಾರಿ ಸೂಚಿಸಿದ್ದೇನೆ. ಆದರೆ, ಇದಕ್ಕೆ ಶಾಸಕ ಅಭಯ ಪಾಟೀಲ್ ಅವರು ಆಸಕ್ತಿ ವಹಿಸುತ್ತಿಲ್ಲ. ವರ್ಷಕ್ಕೊಬ್ಬರು ಮಹಾನಗರ ಪಾಲಿಕೆ ಆಯುಕ್ತರು ಬದಲಾಗುತ್ತಾರೆ. ಮೇಯರ್, ಉಪಮೇಯರ್ ಮಾಡುವುದೇ ಅವರ ದೊಡ್ಡ ಸಾಧನೆಯಾಗಿದೆ ಎಂದು ಶಾಸಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಬೆಳಗಾವಿ ಜಿಲ್ಲಾ ಗ್ರಾಮೀಣ ಕಾಂಗ್ರೆಸ್ ಅಧ್ಯಕ್ಷ ವಿನಯ ನಾವಲಗಟ್ಟಿ ಸೇರಿದಂತೆ ಹಲವು ಕಾಂಗ್ರೆಸ್ ಕಾಯಕರುಗಳು ಇದ್ದರು.

ಪ್ರಧಾನಿ ಮೋದಿಗೆ ಸಂಸದ ಬಾಲಯೋಗಿ ಮನವಿ

ಅಯೋಧ್ಯೆಯಲ್ಲಿ ವಾಲ್ಮೀಕಿ ದೇವಸ್ಥಾನ ಸ್ಥಾಪಿಸಿ



ವಿಜಯನಗರ: ಅಯೋಧ್ಯೆಯ ರಾಮ ಜನ್ಮಭೂಮಿ ದೇವಸ್ಥಾನದಲ್ಲಿ ಭಗವಾನ್ ಶ್ರೀ ಮಹರ್ಷಿ ವಾಲ್ಮೀಕಿ ದೇವಸ್ಥಾನ ನಿರ್ಮಿಸಬೇಕು ಎಂದು ರಾಜ್ಯಸಭಾ ಸದಸ್ಯರೂ ಆಗಿರುವ ಸಾಧು ಬಾಲಯೋಗಿ ಉಮೇಶನಾಥ ಜಿ ಮಹಾರಾಜ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದರು.

ಭಾನುವಾರ ನವದೆಹಲಿಯಲ್ಲಿ ಭೇಟಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ಉಮೇಶ್ ಜಿ. ಮಹಾರಾಜ್, ರಾಮಾಯಣ ಬರೆದಿರುವ ಶ್ರೀ ವಾಲ್ಮೀಕಿ ಮಹರ್ಷಿಗಳ ದೇವಸ್ಥಾನ ಸ್ಥಾಪನೆ ಅಗತ್ಯ. ಅಲ್ಲದೇ, ಅಯೋಧ್ಯೆಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶ್ರೀ ವಾಲ್ಮೀಕಿ ಮಹರ್ಷಿಗಳ ಹೆಸರು ನಾಮಕರಣ ಮಾಡಬೇಕು.

ದೇಶಾದ್ಯಂತದ ಇಡೀ ವಾಲ್ಮೀಕಿ ಸಮುದಾಯದ ನೈರ್ಮಲ್ಯ ಕಾರ್ಮಿಕರಿಗೆ ಕೆನೆಪದರ ಮೀಸಲಾತಿ ಮತ್ತು ನೈರ್ಮಲ್ಯ ಕಾರ್ಯದಲ್ಲಿ ತೊಡಗಿದವರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಗಂಭೀರತೆಯನ್ನು ಪ್ರಧಾನಿಮಂತ್ರಿಗೆ ಮನದಟ್ಟು ಮಾಡಿಕೊಟ್ಟರು. ಸ್ವಚ್ಛ ಭಾರತ ಮಿಷನ್, ಸಾಮಾಜಿಕ ಸಾಮರಸ್ಯ ಮತ್ತು ಸಮಾಜದಲ್ಲಿ ಶಿಕ್ಷಣದ ಉತ್ತೇಜನದಂತಹ ಹಲವು ವಿಷಯಗಳ ಬಗ್ಗೆಯೂ ಚರ್ಚೆ ನಡೆಸಿದರು.

ಇದೇ ವೇಳೆ ಪಂಜಾಬ್‌ನ ಆದಂಪುರ್ ವಿಮಾನ ನಿಲ್ದಾಣಕ್ಕೆ ಸಂತ ರವಿದಾಸ್ ಜಿ ಮಹಾರಾಜ್ ಅವರ ಹೆಸರನ್ನು ಮರುನಾಮಕರಣ ಮಾಡಿದ್ದಕ್ಕಾಗಿ ಪ್ರಧಾನ ಮಂತ್ರಿಗೆ ಗೌರವಪೂರ್ವಕವಾಗಿ ಧನ್ಯವಾದ ಅರ್ಪಿಸಿದರು.

ಶ್ರೀ ವೀರಭದ್ರೇಶ್ವರ ಪ್ರಸನ್







ಮುಂಡರಗಿ ತಾಲೂಕ ಸುಕ್ಷೇತ್ರ ಶಿಂಗಟಾಲೂರ ಶ್ರೀ ವೀರಭದ್ರೇಶ್ವರ ದೇವರ ರಥೋತ್ಸವ–ಧರ್ಮಸಭೆ–ಅಗ್ನಿ–ಓಕಳಿ ಕಾರ್ಯಕ್ರಮಕ್ಕೆ ಆಗಮಿಸುವ ಪೂಜ್ಯರಿಗೆ, ಶಾಸಕರಿಗೆ, ಗಣ್ಯಮಾನ್ಯರಿಗೆ ಆದರದ ಸುಸ್ವಾಗತ.

ರಥೋತ್ಸವ: ದಿನಾಂಕ: 23–03–2026ರ ಸೋಮವಾರ ಸಾಯಂಕಾಲ 5–00 ಘಂಟೆಗೆ.
ಧರ್ಮಸಭೆ: ದಿನಾಂಕ: 23–03–2026ರ ಸೋಮವಾರ ಸಂಜೆ 7–00 ಘಂಟೆಗೆ.
ಅಗ್ನಿ: ದಿನಾಂಕ: 24–03–2026ರ ಮಂಗಳವಾರ ಬೆಳಗ್ಗೆ 7–00 ಘಂಟೆಗೆ.
ಓಕಳಿ: ದಿನಾಂಕ: 25–03–2026ರ ಬುಧವಾರ ಸಾಯಂಕಾಲ 6–00 ಘಂಟೆಗೆ.



ನಿರ್ಮಾಣಗೊಳ್ಳುತ್ತಿರುವ ಕಲ್ಯಾಣ ಮಂಟಪ

ಸರ್ವರಿಗೂ ಆದರದ ಸ್ವಾಗತ

ಸ್ವಾಗತ ಕೋರುವವರು: **ಅಧ್ಯಕ್ಷರು ಹಾಗೂ ಸರ್ವ ಪದಾಧಿಕಾರಿಗಳು, ಶ್ರೀ ವೀರಭದ್ರೇಶ್ವರ ದೇವಸ್ಥಾನ ಟ್ರಸ್ಟ ಕಮೀಟಿ ಶಿಂಗಟಾಲೂರ ಕ್ಷೇತ್ರ**



ಶ್ರೀ ಕರಬಸಪ್ಪ ವಿ. ಹಂಚಿನಾಳ ಅಧ್ಯಕ್ಷರು (ಮುಂಡರಗಿ) | ಶ್ರೀ ಶೇಖರಪ್ಪ ಜಿ. ಬಾಲೇಹೊಸೂರ ಉಪಾಧ್ಯಕ್ಷರು (ಹಮ್ಮಿಗಿ) | ಶ್ರೀ ಕೊಟ್ರೇಶ ವೀ. ಬಳ್ಳೊಳ್ಳಿ ನಿರ್ದೇಶಕರು (ಶಿಂಗಟಾಲೂರ) | ಶ್ರೀ ಸುಭಾಸಪ್ಪ ಈ. ಬಾಗೇವಾಡಿ ನಿರ್ದೇಶಕರು (ಶಿಂಗಟಾಲೂರ) | ಶ್ರೀ ಕಾಶಯ್ಯ ಪಿ. ಬೆಂತೂರಮಠ ನಿರ್ದೇಶಕರು (ಹಮ್ಮಿಗಿ) | ಶ್ರೀ ಕರ್ಣಂ ಸಣ್ಣತಮ್ಮಪ್ಪ ನಿರ್ದೇಶಕರು (ನವಲಿ)



ಶ್ರೀ ಸಿ.ಕೆ.ಎಂ. ಬಸವಲಿಂಗಸ್ವಾಮಿ ನಿರ್ದೇಶಕರು (ಹೂ.ಹಡಗಲಿ) | ಶ್ರೀ ಅಮದಪ್ಪ ಬ. ಗೋಡಿ ನಿರ್ದೇಶಕರು (ಮುಂಡರಗಿ) | ಶ್ರೀ ಪಾಲಾಕ್ಷಗೌಡ ಎಂ. ಪಾಟೀಲ ನಿರ್ದೇಶಕರು (ಕಲಕೇರಿ) | ಶ್ರೀ ಬಸವರಾಜಪ್ಪ ಆರ್. ಉಮನಾಬಾದಿ ನಿರ್ದೇಶಕರು (ಗದಗ) | ಶ್ರೀ ಮುತ್ತಯ್ಯ ಹಿರೇಮಠ ಕಾರ್ಯದರ್ಶಿ

(ಧರ್ಮಸಭೆಯ ನಂತರ ಹಾಸ್ಯ ಕಲಾವಿದರಾದ ಮಲ್ಲಪ್ಪ ಹೊಂಗಲ್, ಶರಣು ಯಮನೂರು, ಪ್ರಶಾಂತಕುಮಾರ ತಡಸದ ಇವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು)

ದೇವಸ್ಥಾನದ ಬ್ಯಾಂಕ್ ಖಾತೆಗೆ ದೇಣಿಗೆ ಸಲ್ಲಿಸುವ ಭಕ್ತರು ಈ ಕೆಳಗಿನ ಅಕೌಂಟ್ ನಂಬರಿಗೆ ಸಲ್ಲಿಸಲು ಕೋರಲಾಗಿದೆ.
ಎಸ್.ಬಿ.ಆಯ್. ಮುಂಡರಗಿ ಬ್ರ್ಯಾಂಚ್ : ಅಕೌಂಟ್ ನಂ. 64098713159, ಆಯ್.ಎಫ್.ಎಸ್.ಸಿ. ಎಸ್‌ಬಿಆಯ್‌ಎನ್0011278
ಮತ್ತು ಕೆನರಾ ಬ್ಯಾಂಕ್ ಅಕೌಂಟ್ ನಂ. 12092200137478, ಆಯ್.ಎಫ್.ಎಸ್.ಸಿ. ಸಿಎನ್‌ಆರ್‌ಬಿ0011209



KANNADA VERSION

PVR Orion Mall Yashwantpur | cinépolis ETA Namma Mall Binny Pete | GOPALAN CINEMAS Arch Mall Kenchenhalli | MIRAJ CINEMAS TGN Lotus Elite Magadi Road | Bharath Cinemas Mangalore | Manipal | Shimoga | Kundapura | Padubidri | Puttur | Udupi : Times Square | Sullia | Udupi : City Centre Mall | Deralakatte. | VENKATESHWARA K.R. Nagar & Gundlupet

GAYATHRI Mysuru. | SAYADHRI Hassan. | BHARGAVI Nanjangudu | VISION Mysuru. | GURUSHREE Mandya. | NARTHAKI Banglore | SIDDALINGESHWAR Banglore | TRISHUL Davanagere.

DEEPAK - Bidadi | MAHARAJ THEATRE - Chitradurga | and other cinemas.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇನ್ಸ್ಪೈರ್ ಅವಾರ್ಡ್‌ಗೆ ವಿದ್ಯಾರ್ಥಿಗಳ ಆಯ್ಕೆ



ಗೋಕರ್ಣ: ಸಗಡಗೇರಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಯರಾದ ಚಿತ್ರಾ ರಾಜು ಗೌಡ ಹಾಗೂ ದೀಕ್ಷಿತಾ ಸುಭಾಷ್ ಗೌಡ 2025-26ನೇ ಸಾಲಿನ ಪ್ರತಿಷ್ಠಿತ ಇನ್ಸ್ಪೈರ್ ಅವಾರ್ಡ್‌ಗೆ ಆಯ್ಕೆಯಾಗಿದ್ದಾರೆ. ಚಿತ್ರಾ ಆರನೇ ತರಗತಿ ಹಾಗೂ ದೀಕ್ಷಿತಾ ಏಳನೇ ತರಗತಿ ತರಗತಿಯಲ್ಲಿ ಓದುತ್ತಿದ್ದು, ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ, ಮಾರ್ಗದರ್ಶಕರಾಗಿ ಪ್ರೋತ್ಸಾಹಿಸಿದ ಶಿಕ್ಷಕರಿಗೆ ಶಾಲಾಭಿವೃದ್ಧಿ ಸಮಿತಿಯರು, ಮುಖ್ಯಾಧ್ಯಾಪಕರು, ಪಾಲಕರು ಅಭಿನಂದಿಸಿ ಶುಭಕೋರಿದ್ದಾರೆ.

ವಾತ್ಸಲ್ಯ ಮನೆ ಹಸ್ತಾಂತರ



ಸಿದ್ದಾಪುರ: ತಾಲೂಕಿನ ಕ್ಯಾದಗಿಯ ವಯೋವೃದ್ಧೆ ಸುಬ್ಬಿಯವರಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ವಾತ್ಸಲ್ಯ ಮನೆ ಹಸ್ತಾಂತರ ನಡೆಯಿತು. ಮನೆ ಹಸ್ತಾಂತರಿಸಿ ಮಾತನಾಡಿದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಶಿರಸಿ ಜಿಲ್ಲಾ ನಿರ್ದೇಶಕ ದಿನೇಶ ಎಂ. ಸಮಾಜದಲ್ಲಿ ಅತ್ಯಂತ ಕಷ್ಟದಲ್ಲಿ ಬದುಕುತ್ತಿರುವ ಜೀವಗಳಿಗೆ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ಮತ್ತು ಡಾ.ಹೇಮಾವತಿ ಹೆಗ್ಗಡೆ ಅಮ್ಮನವರು ಸಾಮಾಜಿಕ ಕಳಕಳಿಯಿಂದ ತೋರಿದ ಪ್ರೀತಿ ಮತ್ತು ನೀಡಿದ ಸಹಾಯ ಅವರ ಜೀವನದಲ್ಲಿ ಬೆಳಕು ಚೆಲ್ಲಿದೆ. ಇಲ್ಲಿಯವರೆಗೆ 700ಕ್ಕೂ ಹೆಚ್ಚು ವಾತ್ಸಲ್ಯ ಮನೆ, 24800 ವಾತ್ಸಲ್ಯ ಕಿಟ್, 80392 ಅಶಕ್ತರಿಗೆ ಮಾಸಾಶನಗಳನ್ನು ಕ್ಷೇತ್ರ ಧರ್ಮಸ್ಥಳ ಯೋಜನೆಯಿಂದ ನೀಡಲಾಗಿದೆ. ಸೂರಿಲ್ಲದ ನಿರ್ಗತಿಕರಿಗೆ ಹಾಗೂ ವೃದ್ಧಾಪ್ಯ ಜೀವನಕ್ಕೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಆಸರೆ ಒದಗಿಸಿದೆ ಎಂದು ಅವರು ಹೇಳಿದರು.ಲಕ್ಕಿಜಡ್ಡಿಯ ಕಾಳಿಂಗೇಶ್ವರ ದೇವಸ್ಥಾನದ ತಿಮ್ಮಪ್ಪ ಸ್ವಾಮೀಜಿ ಸಾನ್ನಿಧ್ಯವಹಿಸಿದ್ದರು. ಒಕ್ಕೂಟದ ಅಧ್ಯಕ್ಷ ಗೋವಿಂದ ನಾಯ್ಕ, ತಾಲೂಕು ಯೋಜನಾಧಿಕಾರಿ ಗಿರೀಶ ಜಿ.ಪಿ., ಗ್ರಾಪಂ ಮಾಜಿ ಉಪಾಧ್ಯಕ್ಷೆ ಶಾಂತಲಾ, ಎಸ್.ಆರ್.ನಾಯ್ಕ, ಒಕ್ಕೂಟದ ಪದಾಧಿಕಾರಿಗಳು, ಗ್ರಾಮಾಭಿವೃದ್ಧಿ ಯೋಜನೆಯ ಸಿಬ್ಬಂದಿ ಉಪಸ್ಥಿತರಿದ್ದರು. ವಲಯ ಮೇಲ್ವಿಚಾರಕ ಕೃಷ್ಣ ಸ್ವಾಗತಿಸಿದರು. ಜ್ಞಾನವಿಕಾಸ ಸಮನ್ವಯಾಧಿಕಾರಿ ಲಲಿತಾ ಕಾರ್ಯಕ್ರಮ ನಿರೂಪಿಸಿದರು. ಸೇವಾ ಪ್ರತಿನಿಧಿ ಮಂಜುನಾಥ ವಂದಿಸಿದರು.

ನಾಳೆಯಿಂದ ಯಕ್ಷಗಾನ ತರಬೇತಿ

ಗೋಕರ್ಣ: ಇಲ್ಲಿನ ಕವಳೇ ಮಠದಲ್ಲಿ ಮಾ.24ರಿಂದ ಯಕ್ಷಗಾನ ತರಬೇತಿ ತರಗತಿ ಆರಂಭವಾಗಲಿದೆ. ಕರಾವಳಿಯ ಗಂಡು ಕಲೆಯನ್ನ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಈ ತರಬೇತಿ ವಾರದ ಎರಡು ದಿನ ಸಂಜೆ 4 ಗಂಟೆಯಿಂದ ನಡೆಯಲಿದೆ. ಸಂಪನ್ಮೂಲ ವ್ಯಕ್ತಿಯಾಗಿ ಬನ್ನಂಜೆ ಸಂಜೀವ್ ಸುವರ್ಣರವರ ಶಿಷ್ಯರಾದ ಸುಬ್ರಮಣ್ಯ ಪ್ರಸಾದ ಮುದ್ರಾಡಿ ಪಾಲ್ಗೊಂಡು ತರಬೇತಿ ನೀಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ಕೋರಲಾಗಿದೆ.

ನಿಧನ ಸುದ್ದಿ

ಉಲ್ಲಾಸ ನಾಯಕ

ಗೋಕರ್ಣ: ಹಿರೇಗುತ್ತಿ ನಿವಾಸಿ ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕುಮಟಾ ಘಟಕದ ನಿರ್ವಾಹಕರಾಗಿದ್ದ ಉಲ್ಲಾಸ ರಮಾಕಾಂತ ನಾಯಕ(55) ನಿಧನರಾದರು. ಮೃತರಿಗೆ ತಾಯಿ, ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಬಳಗವಿದೆ. ಸರಳ ಸಜ್ಜನಿಕೆಯಿಂದ ಊರಿನ ಎಲ್ಲರಿಗೂ ಆತ್ಮೀಯರಾಗಿದ್ದ ಉಲ್ಲಾಸರವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.





ಸಿದ್ದಾಪುರ: ಬಿಳಗಿ ಸೀಮೆಯ ವೈದಿಕ ವೃಂದದ 28ನೇ ವರ್ಷದ ಧಾರ್ಮಿಕ ಕಾರ್ಯಕ್ರಮ, ತಾಲೂಕಿನ ದೊಡ್ಮನೆ ಕರ್ಕಿಮಕ್ಕಿಯ ಮಹಾಗಣಪತಿ ದೇವಾಲಯ ಮತ್ತು ಲಕ್ಷ್ಮೀ ನಾರಾಯಣ ದೇವಾಲಯಗಳ ಆಶ್ರಯದಲ್ಲಿ ಹಿರಿಯ ವೈದಿಕರಿಗೆ ಸನ್ಮಾನ ಹಾಗೂ ವೈದಿಕ ಯಕ್ಷಗಾನ ಅಭಿಮಾನಿ ಬಳಗ ಇವರಿಂದ ಸಂಘಟಿಸಿದ್ದ ಯಕ್ಷಪಲ್ಲವಿ ಟ್ರಸ್ಟ ಯಕ್ಷಗಾನ ಮಂಡಳಿ ಮಾಳಕೋಡ ಇವರ ಶಿವಭಕ್ತ ಮಾಲಿ ಯಕ್ಷಗಾನ ಪ್ರದರ್ಶನಗೊಂಡಿತು.

ಶಾಂತಿ,ಸೌಹಾರ್ದತೆಯ ಹಬ್ಬ ರಂಜಾನ್

ಮುಂಡಗೋಡ: ತಾಲೂಕಾದ್ಯಂತ ಈದುಲ್-ಫಿತರ್ ರಂಜಾನ್ ಹಬ್ಬವನ್ನು ಮುಸ್ಲಿಂ ಬಾಂದವರು ಸಡಗರ ಸಂಭ್ರಮದಿಂದ ಶ್ರದ್ಧಾಭಕ್ತಿಯಿಂದ ಆಚರಿಸಿದರು. ರಂಜಾನ್ ಹಬ್ಬದ ವಿಶೇಷ ನಮಾಜನ್ನು ಬೆಳಗ್ಗೆ ಪೂರೈಸಿ ನಂತರ ಒಬ್ಬರನ್ನೊಬ್ಬರು ಆಲಿಂಗಿಸಿ ರಂಜಾನ್ ಹಬ್ಬದ ಸಂತೋಷವನ್ನು ವಿನಿಮಯ ಮಾಡಿಕೊಂಡರು. ಸಣ್ಣ-ಮಕ್ಕಳು ಸಹಿತ ತಮ್ಮ ಸ್ನೇಹಿತರಿಗೆ ಆಲಿಂಗಿಸಿಕೊಂಡು ಸಂತೋಷ ವಿನಿಮಯ ಮಾಡಕೊಳ್ಳುತ್ತಿರುವುದು ಕಂಡ ಬಂದಿತು.ಪಟ್ಟಣದ ಮುಸ್ಲಿಂ ಸಮುದಾಯದವರು ಬೆಳಗ್ಗೆ ಯಲ್ಲಾಪುರ ರಸ್ತೆಯಲ್ಲಿರುವ ನೂರಾನಿ ಮಸೀದಿ ಹತ್ತಿರ ಪಟ್ಟಣದ ಐದು ಮಸೀದಿಗಳ ಮುಸ್ಲಿಂ ಮುಖಂಡರು, ಸಮುದಾಯದವರು ಹಾಗೂ ಅಕ್ಕಪಕ್ಕದ ಗ್ರಾಮಸ್ಥರು ಶುಭ್ರವಾದ ಹೊಸಬಟ್ಟೆಗಳನ್ನು ಧರಿಸಿ ಜಮಾವಣೆಗೊಂಡು ನಂತರ ಅಲ್ಲಾಹನ ನಾಮಸ್ಮರಣೆ ಮಾಡುತ್ತ ಕಲಘಟಗಿ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಈದುಲ್ ಫಿತ್ ರಂಜಾನ್ ಹಬ್ಬದ ವಿಶೇಷ ನಮಾಜ ಸಾಮೂಹಿಕವಾಗಿ ಸಲ್ಲಿಸಿದರು. ವಿಶೇಷ ಪ್ರಾರ್ಥನೆಯನ್ನು ಮೌಲಾನ ರವರ ನೇತೃತ್ವದಲ್ಲಿ ಮುಸ್ಲಿಂ ಬಾಂದವರು ಈದುಲ್ ಫಿತ್ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ವಿಶೇಷ ಪ್ರಾರ್ಥನೆ ಮುಗಿದ ನಂತರ ಮುಖಂಡ ಮಹ್ಮದಸಲೀಂ ನಂದಿಗಟ್ಟಿ ಐದು ಮಸೀದಿಗಳ ಅಧ್ಯಕ್ಷರ ಪರವಾಗಿ ಮುಸ್ಲಿಂ ಬಾಂದವರಿಗೆ ಶುಭಾಶಯ ಕೋರಿದರು. ರಂಜಾನ್ ಹಬ್ಬದ ಪ್ರಯುಕ್ತ ಸಿಪಿಐ ರಂಗನಾಥ ನೀಲಮ್ಮನವರ ಮತ್ತು ಪಿಎಸ್ಐ ಮಂಜುನಾಥ ಗೌಡರ ಅವರ ನೇತೃತ್ವದಲ್ಲಿ ಬಿಗಿ ಪೊಲೀಸ ಬಂದೋಬಸ್ತ್ ಏರ್ಪಡಿಸಿದ್ದರು.



ಮುಂಡಗೋಡ: ತಾಲೂಕಾದ್ಯಂತ ಈದುಲ್-ಫೀತರ್ ರಂಜಾನ್ ಹಬ್ಬವನ್ನು ಮುಸ್ಲಿಂ ಬಾಂದವರು ಸಡಗರ ಸಂಭ್ರಮದಿಂದ ಶ್ರದ್ಧಾಭಕ್ತಿಯಿಂದ ಆಚರಿಸಿದರು. ರಂಜಾನ್ ಹಬ್ಬದ ವಿಶೇಷ ನಮಾಜನ್ನು ಬೆಳಗ್ಗೆ ಪೂರೈಸಿ ನಂತರ ಒಬ್ಬರನ್ನೊಬ್ಬರು ಆಲಿಂಗಿಸಿ ರಂಜಾನ್ ಹಬ್ಬದ ಸಂತೋಷವನ್ನು ವಿನಿಮಯ ಮಾಡಿಕೊಂಡರು.

ಯುಗಾದಿ ಉತ್ಸವ | ವಾಗ್ಮಿ ಹಾರಿಕಾ ಮಂಜುನಾಥ ಹೇಳಿಕೆ

ಹಿಂದು ಧರ್ಮದ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯ

ಭಟ್ಕಳ: ನಮ್ಮ ಸನಾತನ ಹಿಂದು ಧರ್ಮದ ಬಗ್ಗೆ ನಾವೇ ಕೀಳರಿಮೆ ಹೊಂದಿದರೆ ಬೇರೆ ಯಾರು ಬಂದು ಧರ್ಮ ಉಳಿಸುತ್ತಾರೆ. ಹೀಗಾಗಿ ನಮ್ಮ ಧರ್ಮವನ್ನು ನಾವೇ ಉಳಿಸಿ, ರಕ್ಷಿಸಿಕೊಳ್ಳುವುದು ಅಗತ್ಯವಿದೆ. ಮನೆಮನೆಯಲ್ಲೂ ಧರ್ಮ ಜಾಗೃತಿ ಆಗಬೇಕು ಎಂದು ಬೆಂಗಳೂರಿನ ಖ್ಯಾತ ವಾಗ್ಮಿ ಹಾರಿಕಾ ಮಂಜುನಾಥ ಹೇಳಿದರು.

ಅವರು ಭಾನುವಾರ ಕೋಣಾರದಲ್ಲಿ ಯುಗಾದಿ ಉತ್ಸವ ಸಮಿತಿಯಿಂದ ಏರ್ಪಡಿಸಲಾದ ಯುಗಾದಿ ಉತ್ಸವ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದರು. ಸನಾತನ ಹಿಂದೂ ಧರ್ಮದ ಮೇಲೆ ಹಲವು ದಾಳಿ ನಡೆದರೂ ಏನೂ ಮಾಡಲು ಸಾಧ್ಯವಾಗಿಲ್ಲ, ಆಚರಣೆ, ಸಂಸ್ಕೃತಿಯಿಂದ ಸನಾತನ ಹಿಂದು ಧರ್ಮ ಜೀವಂತವಾಗಿದ್ದು, ಹಿಂದುಗಳು ಸಂಘಟಿತರಾಗುವುದರ ಮೂಲಕ ಹಿಂದೂ ಧರ್ಮವನ್ನು ಉಳಿಸಿಕೊಳ್ಳಬೇಕು

ಹಿಂದುಗಳು ಜಾತಿಗಿಂತ ಧರ್ಮಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು. ಧರ್ಮವೇ ಇಲ್ಲದಿದ್ದರೆ ಜಾತಿ ಹೇಗೆ ಉಳಿದೀತು ಎಂದ ಅವರು ಮನೆ ಮನೆಗಳಲ್ಲಿಯೂ ಹಿಂದೂ ಧರ್ಮದ ಜಾಗೃತಿ, ಆಚಾರ ವಿಚಾರ, ಸಂಸ್ಕೃತಿ ಬೆಳಗಬೇಕು. ಜಾತಿಯನ್ನು ಮನೆಗೆ ಸೀಮಿತಗೊಳಿಸಿ ಹೊರಗೆ ನಾವೆಲ್ಲರೂ ಹಿಂದೂ ಎಂದು ಸಾರಬೇಕು.

ನಮ್ಮ ಮಕ್ಕಳಿಗೆ ಸನಾತನ ಧರ್ಮದ ಮಹತ್ವ, ಸಂಸ್ಕೃತಿ, ಆಚಾರ ವಿಚಾರದ ಬಗ್ಗೆ ತಿಳುವಳಿಕೆ ಮೂಡಿಸಬೇಕು. ಪ್ರತಿ ಮನೆಯಲ್ಲೂ ಮಕ್ಕಳಿಗೆ ಸನಾತನ ಧರ್ಮದ ಪಾಠ ಆಗಬೇಕು. ಈ ಕಾರ್ಯವನ್ನು ಮನೆಯ ಹಿರಿಯರು ಮಾಡಬೇಕು. ಮಕ್ಕಳಿಗೆ ಚಿಕ್ಕವರಿರುವಾಗಲೇ ಧರ್ಮದ ಬಗ್ಗೆ



> ನಾವು ನಮ್ಮ ಆಚಾರ, ಸಂಸ್ಕೃತಿ ಮರೆಯಬಾರದು. ನಾವು ನಮ್ಮ ಮೌಲ್ಯಗಳನ್ನು ಉಳಿಸಿಕೊಂಡು ಜೀವನ ನಡೆಸಬೇಕು. ಧರ್ಮ ಜಾಗೃತಿಗೋಸ್ಕರ ಇಂತಹ ಕಾರ್ಯಕ್ರಮ ಆಯೋಜಿಸಲಾಗಿದೆ.
>
> ■ ನಾರಾಯಣ ಶೆಟ್ಟಿ, ಯುಗಾದಿ ಉತ್ಸವ ಸಮಿತಿಯ ಅಧ್ಯಕ್ಷ

ಜಾಗೃತಿ ಮೂಡಿಸಬೇಕು. ಶಿಕ್ಷಣದ ಜತೆಗೆ ನಮ್ಮ ಸಂಸ್ಕೃತಿಯೂ ಅವರಿಗೆ ಕಲಿಸಬೇಕು.

ಕಾಶ್ಮೀರದಲ್ಲಿ ಹಿಂದೂಗಳಲ್ಲಿ ಸಂಘಟನೆ, ಧರ್ಮ ಜಾಗೃತಿ ಇಲ್ಲದಿರುವುದರಿಂದ ಅಲ್ಲಿನ ಹಿಂದೂಗಳ ಪರಿಸ್ಥಿತಿ ಹೇಗಾಗಿದೆ ಎಂದು ನೋವು ಕಣ್ಣಾರೆ ನೋಡುತ್ತಿದ್ದೇವೆ. ಕಾಶ್ಮೀರದ ಹಿಂದು ಪರಿಸ್ಥಿತಿ ನಮಗೆ ಬಾರದೇ ಇರಲು ಮಕ್ಕಳಿಗೆ ಸನಾತನ ಧರ್ಮದ ಆಚಾರ, ವಿಚಾರ, ಸಂಸ್ಕೃತಿ ಮತ್ತು ಧರ್ಮದ ಬಗ್ಗೆ ತಿಳಿಸಬೇಕು ಎಂದ ಅವರು ಹಿಂದುಗಳಿಗೆ ಭಾರತ ಮಾತ್ರ ದೇಶವಾಗಿದೆ. ಭಾರತದಲ್ಲಿ ಹಿಂದೂಗಳಿಗೆ ತೊಂದರೆ ಆದರೆ ಅವರು ಎಲ್ಲಿಗೆ ಹೋಗಬೇಕು ಎಂದು ಪ್ರಶ್ನಿಸಿದ ಅವರು ಇದಕ್ಕಾಗಿ ಸನಾತನ ಹಿಂದೂ ಧರ್ಮದ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯವಾಗಿದೆ. ಸನಾತನ ಧರ್ಮ ಉಳಿದರೆ ಭಾರತವೂ ಸುರಕ್ಷಿತವಾಗಿರುತ್ತದೆ. ಸನಾತನ ಹಿಂದು ಧರ್ಮಕ್ಕೆ ಬೇರೆ ಧರ್ಮಗಳಿಂದ ಏನೂ ಮಾಡಲು ಸಾಧ್ಯವಾಗಲಿಲ್ಲ, ಆದರೆ ಹಿಂದು ಧರ್ಮದಲ್ಲಿದ್ದ ಧರ್ಮ ವಿರೋಧಿಗಳಿಂದಲೇ ಧರ್ಮಕ್ಕೆ ತೊಂದರೆ ಆಗುತ್ತಿದೆ. ಇದು ನಿಲ್ಲಬೇಕು. ಹಿಂದೂಗಳು ಸಂಘಟಿತರಾಗಿ ಸನಾತನ ಹಿಂದು ಧರ್ಮದ ರಕ್ಷಣೆಗೆ ಮುಂದಾಗಬೇಕು. ಮನೆಮನೆಗಳಲ್ಲಿ ಈ ಕುರಿತು ಜಾಗೃತಿ ಆಗಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಮುಖಂಡ ಹಾಗೂ ಮಾಜಿ ಗ್ರಾಪಂ ಉಪಾಧ್ಯಕ್ಷ ರಾಮಕೃಷ್ಣ ಶೆಟ್ಟಿ ಮಾತನಾಡಿ, ಧರ್ಮ ಜಾಗೃತಿಗೋಸ್ಕರ ಯುಗಾದಿ ಉತ್ಸವವನ್ನು ಮಾಡಲಾಗಿದೆ. ಮನೆಮನೆ ಭೇಟಿ, ಶೋಭಾ ಯಾತ್ರೆ, ಹಿಂದೂ ಸಮಾವೇಶ ಮುಂತಾದ ಕಾರ್ಯಕ್ರಮ ನಡೆಸಿ ಜಾಗೃತಿಗೊಳಿಸಲಾಗಿದೆ ಎಂದರು.

ವೇದಿಕೆಯಲ್ಲಿ ಸಮಿತಿಯ ಕಾರ್ಯದರ್ಶಿ ರಾಧಾಕೃಷ್ಣ ಉಪಾಧ್ಯಾಯ ಇದ್ದರು.

ವೇ.ಮೂ ಯೋಗೇಶ ಹೆಬ್ಬಾರ ಮತ್ತು ವಿನಯ ಉಪಾಧ್ಯಾಯ ವೇದಘೋಷ ಮಾಡಿದರು. ಶ್ರೀಶಹೆಬ್ಬಾರ ಶಂಕನಾದಗೈದರು. ಸುಷ್ಮಾ ಗಣೇಶ ಹೆಬ್ಬಾರ ಪ್ರಾರ್ಥಿಸಿದರು. ಶ್ರೀಕರ ಹೆಬ್ಬಾರ ದೇಶಭಕ್ತಿಗೀತೆ ಹಾಡಿದರು. ಹಿರಿಯ ಮುಖಂಡ ಗೋವಿಂದ ನಾಯ್ಕ ಸ್ವಾಗತಸಿದರು.

ವಿನಾಯಕ ಭಟ್ಟ ತೆಕ್ಕನಗದ್ದೆ ನಿರೂಪಿಸಿದರು. ಸುಬ್ರಹ್ಮಣ್ಯ ಮಧ್ಯಸ್ಥ ವಂದಿಸಿದರು. ಕಾರ್ಯಕ್ರಮದಲ್ಲಿ ನೂರಾರು ಜನರು ಪಾಲ್ಗೊಂಡಿದ್ದರು.

ಯೋಜನೆಗಳ ಸದುಪಯೋಗ ಪಡೆದುಕೊಳ್ಳಿ



ಜೋಯಿಡಾ: ಸರ್ಕಾರದಿಂದಯಾವುದೇ ಸೌಲಭ್ಯ ಪಡೆದು ಕೊಂಡರೂ ಅದರ ಸರಿಯಾದ ಉಪಯೋಗ ಮಾಡಿಕೊಳ್ಳಬೇಕು, ಅಂದಾಗ ಮಾತ್ರ ಕೊಟ್ಟ ಸರ್ಕಾರಕ್ಕೂ ಪಡೆದು ಕೊಂಡವರಿಗೂ ಒಳ್ಳೆಯದಾಗುತ್ತದೆ ಎಂದು ಶಾಸಕರು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಹೇಳಿದರು. ಅವರು ತಾಲೂಕಿನ ಕುಂಬಾರವಾಡದಲ್ಲಿ ಅರಣ್ಯ ಇಲಾಖೆ ಹಮ್ಮಿಕೊಂಡ ಸಮುದಾಯ ಆಧಾರಿತ ಸಂರಕ್ಷಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನನ್ನ ಕ್ಷೇತ್ರದಲ್ಲಿ ಅರಣ್ಯ ಇಲಾಖೆಯ ಕಾಳಿ ಹುಲಿ ಸಂರಕ್ಷಿತ ಪ್ರದೇಶಕ್ಕೆ ಉತ್ತಮ ನಿರ್ದೇಶಕರು ದೊರಕಿದ್ದಾರೆ, ಅವರ ಅವಧಿಯಲ್ಲಿ ತುಂಬಾ ಉತ್ತಮ ಕಾರ್ಯ ನಡೆಯುತ್ತಿದೆ, ಜನರ ಸಹಭಾಗಿತ್ವದಲ್ಲಿ ಅವರು ಕೈಕೊಂಡ ಕೆಲಸಕ್ಕೆ ನಾನು ನಿರ್ದೇಶಕರಾದ ನಿಲೇಶ್ ಶಿಂದೆ ಅವರನ್ನು ಅವರ ಇಲಾಖೆಯ ಅಧಿಕಾರಿಗಳು ಸಿಬ್ಬಂದಿಗಳನ್ನು ಅಭಿನಂದಿಸುತ್ತೇನೆ ಎಂದು ಹೇಳಿದರು.ಅರಣ್ಯ ಇಲಾಖೆ ವತಿಯಿಂದ 18 ಮಜಿರೆಗಳಿಗೆ 6.75 ಲಕ್ಷ ವೆಚ್ಚದಲ್ಲಿ ಸೋಲಾರ್ ಲೈಟ್ಸ್ ಗುಂದ, ಕ್ಯಾಸಲ್ ರಾಕ್, ಕುಂಬಾರವಾಡಾ ವಲಯಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 12.75 ಲಕ್ಷ ವೆಚ್ಚದ ಆಸ್ಪತ್ರೆಯ ಉಪಕರಣಗಳು, ಮತ್ತು 27 ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ 3 ಲಕ್ಷದ ಶಿಷ್ಯ ವೇತನ ಮತ್ತು 9 ಶಾಲೆಗಳಿಗೆ ಕ್ರೀಡಾ ಸಾಮಗ್ರಿಗಳು, ಮತ್ತು ವಿಭಾಗದ ವಿವಿಧ ಮಜಿರೆಗಳಿಗೆ 11 ಲಕ್ಷ ವೆಚ್ಚದಲ್ಲಿ ಜೇನು ಪೆಟ್ಟಿಗೆಗಳು ಹಾಗೂ ಜೇನು ಸಾಕಾಣಿಕೆ ಸಂಬಂಧಿಸಿದ ಉಪಕರಣಗಳನ್ನು ವಿತರಿಸಲಾಯಿತು.

ನಿಲೇಶ ಶಿಂದೆ, ಕಾಳಿ-ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ನಿರ್ದೇಶಕರು, ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ವಲಯ ಅರಣ್ಯ ಅಧಿಕಾರಿಗಳು ಹಾಗೂ ಇಲಾಖಾ ಸಿಬ್ಬಂದಿ ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೆ ತಾಪಂ, ಗ್ರಾಪಂ ಅಧಿಕಾರಿಗಳು ಮತ್ತು ಸಿಬ್ಬಂದಿ, ಆರೋಗ್ಯ ಇಲಾಖೆ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಸ್ವಯಂ ಯೋಜನೆಗಳ ಫಲಾನುಭವಿಗಳು ಮತ್ತು ಸಾರ್ವಜನಿಕರು ಇದ್ದರು.ಜೋಯಿಡಾ ಸರ್ಕಾರಿ ಆಸ್ಪತ್ರೆಯಲ್ಲಿ ಮಕ್ಕಳ ಉಚಿತ ಆರೋಗ್ಯ ಶಿಬಿರವನ್ನು, ತಾಪಂದಲ್ಲಿ ವಿಶಿಷ್ಟಚೇತನರಿಗೆ ಉಚಿತ ವಾಹನ ವಿತರಿಸಿದರು.ಹಳಿಯಾಳ ಎಪಿಎಂಸಿ ಉಪ ಶಾಖೆಯನ್ನು ಜೋಯಿಡಾದಲ್ಲಿ ಪ್ರಾರಂಭಿಸಲಾಯಿತು.

ಅಪ್ರಾಯೋಗಿಕ ಮೀಸಲಾತಿ ವರ್ಗೀಕರಣಕ್ಕೆ ವಿರೋಧ



ಮುಂಡಗೋಡ: ಅಪ್ರಾಯೋಗಿಕ ಪರಿಶಿಷ್ಟ ಜಾತಿಗಳ ಮೀಸಲಾತಿ ವರ್ಗೀಕರಣ ಮಾಡದಂತೆ ಒತ್ತಾಯಿಸಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ತಾಲೂಕು ಘಟಕದವರು ಇಲ್ಲಿನ ತಹಶೀಲ್ದಾರರ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು.

ಹಳೆಯ ಮೀಸಲಾತಿಯ ನಿಯಮ ಶೇ.50ರ ಅನ್ವಯ ನೇಮಕಾತಿ ಮತ್ತು ಶೈಕ್ಷಣಿಕ ಪ್ರವೇಶ ಪ್ರಕ್ರಿಯೆಯನ್ನು ಮುಂದುವರೆಸುವುದಾಗಿ ರಾಜ್ಯ ಸರ್ಕಾರ ಪ್ರಕಟಣೆ ಮಾಡಿರುವುದು ಸ್ವಾಗತಾರ್ಹ ಇದಕ್ಕೆ ತ್ವರಿತವಾಗಿ ನೇಮಕಾತಿ ಅಧಿಸೂಚನೆ ಹೊರಡಿಸಬೇಕು. ಈ ಹಿಂದೆ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಹೆಚ್ಚಳ ಮಾಡಿರುವ ಆದೇಶವನ್ನು ಸಂವಿಧಾನದ 9ನೇ ಷೆಡ್ಯೂಲಿನಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ಪ್ರಧಾನಮಂತ್ರಿಗಳ ಬಳಿ ನಿಯೋಗ ಹೋಗಬೇಕು. ಈ ಕುರಿತು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು. ರಾಜ್ಯದಲ್ಲಿ ಒಳಮೀಸಲಾತಿಯ ಪ್ರಕ್ರಿಯೆಯನ್ನು ನಡೆಸುವ ಮುನ್ನ ನಮ್ಮ ಸಮುದಾಯಗಳ ಮುಖಂಡರ ಜೊತೆಗೆ ಸಮಾಲೋಚನೆ ಮಾಡಬೇಕು. ಶಿಕ್ಷಣ ಪ್ರವೇಶ, ಹಾಸ್ಟೆಲ್ ಪ್ರವೇಶ ಮತ್ತು ಉದ್ಯೋಗ ನೇಮಕಾತಿ ರೋಸ್ಟರ್ ಹಂಚಿಕೆ ಮಾಡಿ ಈ ಹಿಂದೆ ಸರ್ಕಾರ ಹೊರಡಿಸಿರುವ ಎಲ್ಲ ಆದೇಶ, ಸುತ್ತೋಲೆಗಳನ್ನು ಹಿಂಪಡೆಯಬೇಕು. ಈಗಾಗಲೇ ನಡೆಸಲಾಗಿರುವ ವಿವಿಧ ಇಲಾಖೆ, ನಿಗಮ, ಪ್ರಾಧಿಕಾರದ ನೇಮಕಾತಿಗಳನ್ನು ರದ್ದುಗೊಳಿಸಬೇಕು. ಪರಿಶಿಷ್ಟ ಜಾತಿ ಪ್ರವರ್ಗ ಎಬಿಸಿ ಎಂದು ನಮೂದಿಸಿ ನೀಡಲಾಗಿರುವ ಜಾತಿ ಪ್ರಮಾಣಪತ್ರಗಳನ್ನು ವಾಪಸ್ಸು ಪಡೆಯಬೇಕು. ಹಕ್ಕೊತ್ತಾಯಗಳನ್ನು ಮುಂಬರುವ ಅಧಿವೇಶನದಲ್ಲಿ ಚರ್ಚಿಸಬೇಕು. ಯಾರದ್ದೋ ಒತ್ತಡಕ್ಕೆ ಮಣಿದು ಏಕಪಕ್ಷೀಯವಾಗಿ ವರ್ಗೀಕರಣ ಮಾಡಲು ಹೊರಟರೆ ಬಂಜಾರ, ಭೋವಿ, ಚರ್ಮಕಾರ ಕೊರಮ, ಕೊರಚ ಆಲೆಮಾರಿ, ಸೂಕ್ಷ್ಮ ಸಮುದಾಯಗಳು ಜಂಟಿಯಾಗಿ ಬೃಹತ್ ಹೋರಾಟ ಸಂಘಟಿಸಬೇಕಾಗುತ್ತದೆ ಎಂದು ಮನವಿಯಲ್ಲಿ ಎಚ್ಚರಿಸಿದ್ದಾರೆ.ದಯಾನಂದ ಕಳಸಾಪುರ, ಹನುಮಂತ ಭೋವಿ, ಹನುಮಂತಪ್ಪ ಆರೆಗೊಪ್ಪ, ಹನುಮಂತಪ್ಪ ಭಜಂತ್ರಿ, ಹುಲಗಪ್ಪ ಭೋವಿ, ನಾಗರಾಜ ಕೊರವರ, ಹನುಮಂತ ಕೊರವರ, ಅಶೋಕ ಚಲವಾದಿ ಇದ್ದರು.

ಸಿಲಿಂಡರ್ ಕೊರತೆ: ಇಂದಿರಾ ಕ್ಯಾಂಟೀನ್ ಬಂದ್

ಮುಂಡಗೋಡ: ಸಿಲಿಂಡರ್ ಕೊರತೆಯಿಂದಾಗಿ ಪಟ್ಟಣದಲ್ಲಿರುವ ಇಂದಿರಾ ಕ್ಯಾಂಟೀನಿಗೂ ಬಿಸಿ ತಟ್ಟಿದ್ದು, ಕಳೆದ ಮೂರು ದಿನಗಳಿಂದ ಬಂದಾಗಿ ಬಡ ಗ್ರಾಹಕರಿಗೆ ಸಮಸ್ಯೆಯಾಗಿದೆ.

ಹುಬ್ಬಳ್ಳಿ ರಸ್ತೆಯಲ್ಲಿ ಪಪಂ ಪಕ್ಕದಲ್ಲಿರುವ ಇಂದಿರಾ ಕ್ಯಾಂಟಿನ್ ಗ್ಯಾಸ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾದ ಹಿನ್ನೆಲೆಯಲ್ಲಿ ಬಂದಾಗಿದೆ.

ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ಇಂಧನ ಸರಬರಾಜಿನಲ್ಲಿ ಉಂಟಾದ ಅಸ್ಥಿರತೆ ಎಲ್ಲಾ ವಲಯಗಳ ಮೇಲೂ ಪರಿಣಾಮ ಬೀರಿದೆ.

ಅದರಲ್ಲಿಯೂ ಬಡವರ ಪಾಲಿಗೆ ಕ್ಯಾಂಟೀನ್ ಅನ್ನದಾಸೋಹ ಎಂದು ಹೆಸರುವಾಸಿವಾಗಿದ್ದ ಕ್ಯಾಂಟೀನ್ ಮೂರು ದಿನಗಳಿಂದ ಬಂದಾಗಿದೆ. 5 ರೂ ಉಪಹಾರ 20ರೂ ಗೆ ಚಪಾತಿ ಊಟ ಸಿಗುತ್ತದೆ. ನಿತ್ಯವೂ ನೂರಾರು ಸಂಖ್ಯೆಯಲ್ಲಿ ಗ್ರಾಹಕರು ಬರುತ್ತಾರೆ. ಆದರೆ ಕಳೆದ ಮೂರು ದಿನಗಳಿಂದ ಕ್ಯಾಂಟೀನ್ ಬಂದ್ ಆಗಿದ್ದರಿಂದ ನಿರ್ಗತಿಕರಿಗೆ, ಬಡಜನರಿಗೆ ಮತ್ತು ಕಾಲೇಜ ವಿದ್ಯಾರ್ಥಿಗಳಿಗೆ ತೊಂದರೆ ಆಗಿದೆ. ಗ್ರಾಹಕರು ಬುಕ್ ಮಾಡಿ ಒಟಿಪಿ ಬಂದವರಿಗೆ ಮಾತ್ರ ವಿತರಣೆ ಮಾಡುತ್ತಿದ್ದೇವೆ ಎಂದು ಏಜೆನ್ಸಿಯವರು ಹೇಳುತ್ತಾರೆ ಹಾಗಾದರೆ ಗ್ರಾಹಕರೆ ಹೆಚ್ಚಿನ ಹಣಕ್ಕೆ ಸಿಲಿಂಡರ್ ಮಾರಾಟ ಮಾಡುತ್ತಿದ್ದಾರೋ ಅಥವಾ ಸಿಲಿಂಡರ್ ವಿತರಣೆ ಮಾಡುವ ಕೆಲಸಗಾರರು ಮಾರಾಟ ಮಾಡುತ್ತಿದ್ದಾರೋ ಎಂಬುವುದು ಸಂಬಂಧಪಟ್ಟ ಅಧಿಕಾರಿಗಳು ತನಿಖೆ ನಡೆಸಬೇಕು. ಸಮಸ್ಯೆ ಶೀಘ್ರ ಪರಿಹಾರವಾಗಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

> ನಾನು ಪ್ರತಿದಿನ ಕ್ಯಾಂಟೀನಲ್ಲಿಯೇ ಬಂದು ಉಪಹಾರ, ಊಟ ಮಾಡುತ್ತೇವೆ. ಆದರೆ ಮೂರು ದಿನಗಳಿಂದ ಬಂದಾಗಿದೆ. ಕಾರಣ ಕೇಳಿದರೆ ಸಿಲಿಂಡರ್ ಇಲ್ಲದಿರುವುದ್ದರಿಂದ ಬಂದ ಮಾಡಲಾಗಿದೆ ಎನ್ನುತ್ತಿದ್ದಾರೆ. ಹಾಗಿದ್ದರೆ ಹೋಟೆಲ್‌ಗಳಲ್ಲಿ ಗೃಹಬಳಕೆಯ ಸಿಲಿಂಡರ್‌ದಿಂದಲೇ ಅಡುಗೆ ತಯಾರು ಮಾಡುತ್ತಿದ್ದಾರೆ. ಅಲ್ಲಿ ಸಿಗುವ ಸಿಲಿಂಡರ್ ಕ್ಯಾಂಟೀನ್‌ಗೆ ಏಕೆ ಸಿಗುತ್ತಿಲ್ಲ. ಈ ಬಗ್ಗೆ ಅಧಿಕಾರಿಗಳು ತನಿಖೆ ನಡೆಸಬೇಕು. ಅಧಿಕಾರಿಗಳ ತುರ್ತಾಗಿ ಸಿಲಿಂಡರ್ ಪೂರೈಕೆ ಮಾಡಿ ಬಡಜನರಿಗೆ ಅನುಕೂಲ ಮಾಡಬೇಕು.
>
> ■ ನಟರಾಜ ಪೂಟೋೀ,ಗ್ರಾಹಕ

ಪಕ್ಷ ಬಲಪಡಿಸಲು ಸಂಘಟನಾ ಪರ್ವ

ಶಿರಸಿ: ಪ್ರಾದೇಶಿಕ ಪಕ್ಷವಾದ ಜೆಡಿಎಸ್ ರಜತ ಮಹೋತ್ಸವ ಆಚರಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಂಘಟನಾ ಪರ್ವ ಕಾರ್ಯಕ್ರಮದ ಮೂಲಕ ಜಿಲ್ಲೆಯಲ್ಲಿ ಪಕ್ಷವನ್ನು ಸಂಘಟಿಸಿ, ಬಲಿಷ್ಠಗೊಳಿಸಲಾಗುತ್ತದೆ ಎಂದು ಜೆಡಿಎಸ್ ನೂತನ ಜಿಲ್ಲಾಧ್ಯಕ್ಷ ಸೂರಜ ನಾಯ್ಕ ಸೋನಿ ತಿಳಿಸಿದರು.

ಅವರುನಗರದಲ್ಲಿಸುದ್ದಿಗೋಷ್ಠಿಯಲ್ಲಿಮಾತನಾಡಿ,ನೂತನಜಿಲ್ಲಾಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ಬಳಿಕ ಸಭೆಯಲ್ಲಿ ಪ್ರಮುಖರ ತೀರ್ಮಾನದಂತೆ ಜಿಲ್ಲೆಯ ಎಲ್ಲ ವಿಧಾನಸಭಾ ಕ್ಷೇತ್ರದಲ್ಲಿಯೂ ಪ್ರವಾಸ ಕೈಗೊಂಡು ಸಕ್ರಿಯ ಕಾರ್ಯಕರ್ತರನ್ನು ಗುರುತಿಸಿ, ಜಿಲ್ಲಾ ಪದಾಧಿಕಾರಿಗಳ ಪಟ್ಟಿ ಬಿಡುಗಡೆ ಮಾಡಲಾಗುತ್ತದೆ. ಯುವಕರು ಪಕ್ಷಕ್ಕೆ ಸೆಳೆಯಲು ಪ್ರಯತ್ನಿಸಲಾಗುವುದು. ರೈತರ ಸಾಲಮನ್ನಾ ಮಾಡಿ ರೈತರ ಆಶಾಕಿರಣವಾಗಿರುವ ಕುಮಾರಸ್ವಾಮಿ ಮತ್ತೊಮ್ಮೆ ಮುಖ್ಯಮಂತ್ರಿಯಾಗಬೇಕೆಂಬುದು ಎಲ್ಲರ ಆಶಯವಾಗಿದೆ. ನಮ್ಮ ಸ್ವಾರ್ಥಕ್ಕಿಂತ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಜೆಡಿಎಸ್ ಪಕ್ಷ ಸಂಘಟನೆಗೊಳ್ಳಬೇಕಿದೆ ಎಂದರು.

ಮುಂದಿನ ದಿನಗಳಲ್ಲಿ ಜಿಲ್ಲೆ ಹಾಗೂ ತಾಲೂಕು ಮಟ್ಟದಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಸೇರಿದಂತೆ ವಿವಿಧ ಪದಾಧಿಕಾರಿಗಳ ಆಯ್ಕೆ ಮತ್ತು ಪದಗ್ರಹಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಸದ್ಯದಲ್ಲಿಯೇ ಸಭೆಯ ದಿನಾಂಕ ನಿಗದಿಯಾಗಲಿದ್ದು, ಪಕ್ಷದ ವರಿಷ್ಠರಾದ ಸಿ.ಕೆ. ಕೃಷ್ಣರೆಡ್ಡಿ ಹಾಗೂ ನಿಖಿಲ್ ಕುಮಾರಸ್ವಾಮಿ ಮತ್ತಿತರರ ನಾಯಕರು ಆಗಮಿಸಲಿದ್ದಾರೆ ಎಂದರು.



ಜೆಡಿಎಸ್ ಮುಖಂಡ ಉಪೇಂದ್ರ ಪೈ ಮಾತನಾಡಿ, ಪಕ್ಷ ಸಂಘಟನೆ ದೃಷ್ಟಿಯಿಂದ ಸೂರಜ ನಾಯ್ಕ ಸೋನಿ ಜಿಲ್ಲಾಧ್ಯಕ್ಷರಾದ ಬಳಿಕ ಜಿಲ್ಲೆಯಲ್ಲಿ ಪ್ರವಾಸ ಹಮ್ಮಿಕೊಂಡು ಜೆಡಿಎಸ್ ಬಲವರ್ಧನೆಗೆ ಶ್ರಮಿಸುತ್ತಿದ್ದಾರೆ. ಎಲ್ಲ ಕಡೆಗಳಲ್ಲಿಯೂ ಪಕ್ಷದ ಪರ ಒಲುವು ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸತೀಶ ಹೆಗಡೆ ಸಿದ್ದಾಪುರ, ರಾಜು ಅಂಬಿಗಾರ ಶಿರಸಿ, ನಾಗಭೂಷಣ ಕೊಂಡ್ಲಿ, ಪುರುಷೋತ್ತಮ ಅಂಬಿಗ, ಮಂಜುನಾಥ ಚಂದಾವರಕರ, ನಾಗಪತಿ ಗೌಡ ಮತ್ತಿತರರು ಇದ್ದರು.

ಮೊಸಳೆ ಪ್ರತ್ಯಕ್ಷ: ಜನರಲ್ಲಿ ಆತಂಕ

ಯಲ್ಲಾಪುರ: ಪಟ್ಟಣದ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತಿ ರುವ ಜೋಡುಕೆರೆಯಲ್ಲಿ ಕಳೆದೆರಡು ಮೂರು ತಿಂಗಳ ಹಿಂದೆ ಡಿಸೇಂಬರ್‌ನಲ್ಲಿ ಮೊಸಳೆ ಕಾಣಿಸಿಕೊಂಡಿತ್ತು. ಮತ್ತೆ ಕಾಣಿಸಿದ್ದಿಲ್ಲ ಆದರೆ ಶನಿವಾರ ತಡರಾತ್ರಿ ಮೊಸಳೆ ಕಾಣಿಸಿಕೊಂಡಿದ್ದು ಸ್ಥಳೀಯರು ಭಯಭೀತರಾಗಿದ್ದಾರೆ.

ಜೋಡು ಕೆರೆಯಲ್ಲಿ ಪ್ರತ್ಯಕ್ಷವಾಗಿದ್ದ ಮೊಸಳೆಯನ್ನು ಹಿಡಿದು ಬೇರೆ ಕಡೆ ಸ್ಥಳಾಂತರಿಸುವ ರಕ್ಷಣಾ ಕಾರ್ಯಾಚರಣೆಯ ಪೂರ್ವಭಾವಿಯಾಗಿ ಸ್ಥಳ ಪರಿಶೀಲಿಸಿ ಸೂಕ್ತ ಸಲಹೆ-ಸೂಚನೆ ನೀಡಿ ರಕ್ಷಣಾ ಕಾರ್ಯಾಚರಣೆಯ ಪೂರ್ವ ತಯಾರಿ ಮಾಡಿಕೊಳ್ಳಲು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಿಮವತಿ ಭಟ್ ನಿರ್ದೇಶಿಸಿದ್ದಾರೆ.

ಅಪಾಯವನ್ನು ಅರಿತ ಅರಣ್ಯ ಇಲಾಖೆ ಮೊಸಳೆಯನ್ನು ಹಿಡಿಯಲು ಬೋನ್ ಇಟ್ಟು ಕಾಯುತ್ತಿದ್ದರೂ ಮೊಸಳೆ ಮಾತ್ರ ಬಲೆಗೆ ಬಿದ್ದಿಲ್ಲ, ಆದರೆ ಜೋಡುಕೆರೆ ಯಲ್ಲಿ ಇದ್ದಕ್ಕಿದ್ದಂತೆ ಮೊಸಳೆ ಮತ್ತೆ ಕಾಣಿಸಿಕೊಂಡಿದೆ.



ಕೆರೆಯಿಂದ ಮೊಸಳೆ ಹೊರಬಂದು ದಡದಲ್ಲಿ ಕಾಣಿಸಿಕೊಂಡು ಮತ್ತೆ ಕೆರೆಯಲ್ಲಿ ಹೋಗಿರುವ ದೃಶ್ಯವನ್ನು ಸಾರ್ವಜನಿಕರೊಬ್ಬರು ವಿಡಿಯೊ ಮಾಡಿ ಹರಿಬಿಟ್ಟಿದ್ದಾರೆ. ಇದರಿಂದ ಇದೇ ಮಾರ್ಗದಲ್ಲಿ ತಾಲೂಕು ಆಸ್ಪತ್ರೆ, ಎದುರಿಗೆ ಪ್ರೌಢ ಶಾಲೆ, ಹಾಗೂ ಕೆರೆದಂಡೆಯ ಮೇಲೆ ಸಂಜೆ ಮತ್ತು ಬೆಳಗಿನ ಅವಧಿಯಲ್ಲಿ ಅನೇಕ ಜನರು ವಾಯುವಿಹಾರಕ್ಕಾಗಿ ಬರುತ್ತಾರೆ. ಪಕ್ಕದಲ್ಲಿಯೇ ಅಯ್ಯಪ್ಪ ಸ್ವಾಮೀ ಸಾನಿಧ್ಯ ಇರುವದರಿಂದ ಬೇರೆ ಬೇರೆ ಕಡೆಯ ಜನರು ಅರಿವಿಲ್ಲದೆ ನೀರಲ್ಲಿ ಇಳಿಯುವ ಸಾಧ್ಯತೆಯಿರುವದರಿಂದ ಸುತ್ತ ಮುತ್ತಲಿನ ಜನರಲ್ಲಿ ಮೊಸಳೆಯಿಂದಾಗಿ ಭಯಾಂತಕ ಮನೆ ಮಾಡಿದೆ.

ನಾಟಿ ವೈದ್ಯಕೀಯ ಚಿಕಿತ್ಸಾ ಕೇಂದ್ರಕ್ಕೆ ಶ್ರೀಗಳ ಭೇಟಿ



ಅಂಕೋಲಾ: ಬಾರ್ಕೂರು ಮಹಾಸಂಸ್ಥಾನದ ಪೀಠಾಧೀಶ ವಿದ್ಯಾ ವಾಚಸ್ಪತಿ ಶ್ರೀವಿಶ್ವಸಂತೋಷ ಭಾರತಿ ಶ್ರೀಪಾದರು ತಾಲೂಕಿನ ಬೆಳಂಬಾರದ ನಾಟಿ ವೈದ್ಯ ಹನುಮಂತ ಗೌಡ ಅವರ ಮನೆ ಹಾಗೂ ನಾಟಿ ವೈದ್ಯಕೀಯ ಚಿಕಿತ್ಸಾ ಕೇಂದ್ರಕ್ಕೆ ಭೇಟಿ ನೀಡಿದರು.

ನಾಟಿ ವೈದ್ಯ ಹನುಮಂತ ಗೌಡ ಮತ್ತು ಕುಟುಂಬದವರು ಬಾರ್ಕೂರು ಶ್ರೀಗಳನ್ನು ಸ್ವಾಗತಿಸಿ ಆಶೀರ್ವಾದ ಪಡೆದರು.

ಪರಂಪರೆಯಿಂದ ಪಾರ್ಶ್ವವಾಯು ಕಾಯಿಲೆಗೆ ನಾಟಿ ವೈದ್ಯಕೀಯ ಚಿಕಿತ್ಸೆ ನೀಡುತ್ತ ಬಂದಿರುವ ಬೆಳಂಬಾರದ ಹನುಮಂತ ಗೌಡ ಅವರ ಮನೆತನದ ಸೇವಾ ಕಾರ್ಯಕ್ಕೆ ಹಾಗೂ ಚಿಕಿತ್ಸಾಲಯದಲ್ಲಿ ನೀಡುವ ಚಿಕಿತ್ಸಾ ಪದ್ಧತಿ, ರೋಗಿಗಳ ವ್ಯಾಯಾಮಕ್ಕೆ ಸ್ಥಳೀಯವಾಗಿ ಸಿದ್ಧಗೊಳಿಸಿರುವ ಸಾಧನಗಳ ಕುರಿತಂತೆ ವಿಶ್ವ ಸಂತೋಷ ಸ್ವಾಮಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.ಅರ್ಧಾಂಗ ವಾಯುವಿನಂತ ಕಾಯಿಲೆಗೆ ನಿಸರ್ಗದಲ್ಲಿ ದೊರಕುವ ಗಿಡ ಮೂಲಿಕೆ ನಾಟಿ ವೈದ್ಯಕೀಯ ಪದ್ಧತಿಯಿಂದ ಪರಂಪರಾಗತವಾಗಿ ಚಿಕಿತ್ಸೆ ನೀಡುತ್ತ ಬಂದಿರುವ ಬೆಳಂಬಾರದ ಬೊಮ್ಮು ಗೌಡರ ಮನೆತನದ ಸೇವೆ ನಿರಂತರವಾಗಿ ಮುಂದುವರಿದು ಕಾಯಿಲೆ ಪೀಡಿತರ ಬದುಕಿಗೆ ಆಶಾಕಿರಣವಾಗಲಿ ಎಂದು ಬಾರ್ಕೂರು ಸ್ವಾಮಿಗಳು ಆಶೀರ್ವದಿಸಿದರು.

ವಕೀಲ ನಾಗರಾಜ ನಾಯಕ ಉಪಸ್ಥಿತರಿದ್ದು ಬೆಳಂಬಾರ ನಾಟಿ ವೈದ್ಯಕೀಯ ಪರಂಪರೆ ಕುರಿತು ತಿಳಿಸಿದರು.

ಏ.6 ರಿಂದ ಉಚಿತ ಸಿಇಟಿ ತರಬೇತಿ

ಹಳಿಯಾಳ: ಸಾಮಾನ್ಯ ಪ್ರವೇಶಾತಿ ಪರೀಕ್ಷೆ (ಸಿಇಟಿ)ಗೆ ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ ಏ.6ರಿಂದ 11ರ ವರೆಗೆ ಉಚಿತ ತರಬೇತಿ ಶಿಬಿರ ಆಯೋಜಿಸಲಾಗಿದೆ. ನುರಿತ ಅನುಭವಿ ಶಿಕ್ಷಕರು ಭೌತಶಾಸ್ತ್ರ, ರಾಸಾಯನ ಶಾಸ್ತ್ರ ಹಾಗೂ ಗಣಿತ ವಿಷಯದ ಕುರಿತಾಗಿ ತರಬೇತಿ ನೀಡಲಿದ್ದಾರೆ. ಉನ್ನತ ಶಿಕ್ಷಣ ಆಕಾಂಕ್ಷಿತ ವಿದ್ಯಾರ್ಥಿಗಳಿಗೆ ಇದೊಂದು ಉತ್ತಮ ಅವಕಾಶವಾಗಿದ್ದು, ಮಹಾವಿದ್ಯಾಲಯವು ಉಚಿತವಾಗಿ ಊಟ ಮತ್ತು ವಸತಿ ವ್ಯವಸ್ಥೆ ಕಲ್ಪಿಸುತ್ತಿದೆ. ಹುಬ್ಬಳ್ಳಿ, ಧಾರವಾಡ, ದಾಂಡೇಲಿ ಮತ್ತು ಬೆಳಗಾವಿಯಿಂದ ಬರುವ ವಿದ್ಯಾರ್ಥಿಗಳು ಮಹಾವಿದ್ಯಾಲಯದ ಬಸ್ ಸೌಲಭ್ಯ ಪಡೆಯಬಹುದೆಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಹೇಳಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಡಾ. ಸಮೀರ್ ಜಿ (9916186186), ಡಾ. ಸ್ನೇಹಾ ಕೆ (9986133660) ಹಾಗೂ ಡಾ. ವಿನೋದ್ ನಾಯ್ಕ (9980321240) ಸಂಪರ್ಕಿಸಲು ಸೂಚಿಸಲಾಗಿದೆ.



ತಲೆಮರೆಸಿಕೊಂಡಿದ್ದ ಆರೋಪಿ ಬಂಧನ

ಅಂಕೋಲಾ: ಬಾಲಕಾರ್ಮಿಕರ ನಿಷೇಧ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾದ 7 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಅಂಕೋಲಾ ಪೊಲೀಸರು ತಮಿಳುನಾಡಿನ ವೇದಗೂಬೆಟ್ಟದಿಂದ ಬಂಧಿಸಿ ಕರೆತಂದಿದ್ದಾರೆ.



ತಮಿಳುನಾಡಿನ ಮದುರೈ ನಿವಾಸಿ ಪಿ.ರಾಮರ್ ಪೆರುಮಾ ತೇವರ್ ಬಂಧಿತ ಆರೋಪಿಯಾಗಿದ್ದು ಈತ 2019ರಲ್ಲಿ ತಮಿಳುನಾಡಿನ 14 ವರ್ಷದ ಬಾಲಕರನ್ನು ಕರೆತಂದು ಅಂಕೋಲಾ ತಾಲೂಕಿನ ಮಾದನಗೇರಿಯ ತಮ್ಮ ಮನೆಯಲ್ಲಿ ಬೇಕರಿ ತಿಂಡಿ ತಯಾರಿಕೆ, ಪ್ಯಾಕಿಂಗ್ ಕೆಲಸಕ್ಕೆ ದುಡಿಸಿಕೊಳ್ಳುತ್ತಿದ್ದ. ಬಾಲಕಾರ್ಮಿಕರ ಬಳಕೆಗೆ ಸಂಬಂಧಿಸಿದಂತೆ ಕುಮಟಾ ಸಹಾಯಕ ಆಯುಕ್ತರು ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸಿದ್ದರು ಮೂರನೇ ಆರೋಪಿತ ತಲೆಮರೆಸಿಕೊಂಡು ನಾಪತ್ತೆಯಾಗಿದ್ದ.

ಕಾರವಾರ ಡಿವೈಎಸ್‌ಪಿ ಅಂಕೋಲಾ ಪೊಲೀಸ್ ನಿರೀಕ್ಷಕ ಚಂದ್ರಶೇಖರ ಮಠಪತಿ, ಉಪ ನಿರೀಕ್ಷಕ ಗುರುನಾಥ ಹಾದಿಮನಿ ಅವರ ಮಾರ್ಗದರ್ಶನದಲ್ಲಿ ಎ.ಎಸ್.ಐ ಮಹಾಬಲೇಶ್ವರ ಗಡೇರ್, ಎಚ್.ಸಿ ಮೋಹನ ಗೌಡ,


ಪಿ.ಸಿ ಸುರೇಶ ಬೆಳ್ಳುಳ್ಳಿ ಮತ್ತು ತಾಂತ್ರಿಕ ಸಿಬ್ಬಂದಿ ಕೇರಳ ವಧುಗಪಟ್ಟಿ ಪೊಲೀಸ್ ಸಿಬ್ಬಂದಿ ಸಹಕಾರದಿಂದ

ಆರೋಪಿತನನ್ನು ಬಂಧಿಸಿ ಕರೆತಂದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನ ನೀಡಲಾಗಿದೆ.

ಕಿರುಸುದ್ದಿ

ಮಾ.25ಕ್ಕೆ ಮರಡಿ ಬಸವೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ

ಬ್ಯಾಡಗಿ: ತಾಲೂಕಿನ ಬನ್ನಿಹಟ್ಟಿ ಗ್ರಾಮದ ಆರಾಧ್ಯ ದೈವ ಶ್ರೀ ಮರಡಿ ಬಸವೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಮಾ.25ರಿಂದ ಮಾ.29ರವರೆಗೆ ನಡೆಯಲಿದೆ. ಮಾ.25ರಂದು ಕಂಕಣ ಕಟ್ಟುವುದರ ಮೂಲಕ ಪ್ರಾರಂಭಗೊಳ್ಳುತ್ತದೆ. ಮಾ.26ರಂದು ದೇವತಾ ಕಾರ್ಯ ಮಾ.27ರಂದು ಮಧ್ಯಾಹ್ನ 12.30 ಕ್ಕೆ ಹೂವಿನ ರಥೋತ್ಸವ ಹಾಗೂ ಮಾ.28ರಂದು ಮರಡಿ ಬಸವೇಶ್ವರ ದೇವರ ದೊಡ್ಡ ರಥೋತ್ಸವ ನಡೆಯಲಿದೆ. ಮಾ.29ರಂದು ಓಕಳಿ ನಡೆಯುವದು. ಕಾರಣ ಗ್ರಾಮದ ಮತ್ತು ಸುತ್ತಮುತ್ತಲಿನ ಗ್ರಾಮದ ಎಲ್ಲ ಭಕ್ತಾದಿಗಳು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ತನು-ಮನ ಧನದಿಂದ ಸೇವೆ ಸಲ್ಲಿಸಲು ಶ್ರೀಮರಡಿ ಬಸವೇಶ್ವರ ಪಂಚ ಕಮಿಟಿಯ ಸದಸ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಪಶ್ಚಿಮ ಪದವೀಧರರ ಸಭೆ



ಹಾವೇರಿ: ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಪಶ್ಚಿಮ ಪದವೀಧರರ ಚುನಾವಣೆ ಪೂರ್ವ ತಯಾರಿ ಹಾಗೂ ಬೂತ್ ಅಧ್ಯಕ್ಷರ ಮತ್ತು ಬಿಎಲ್‌ಎಗಳ ಪಟ್ಟಿ ತಯಾರಿ ಕುರಿತು ಜಿಲ್ಲಾಧ್ಯಕ್ಷ ಸಂಜೀವಕುಮಾರ ನೀರಲಗಿ ನೇತೃತ್ವದಲ್ಲಿ ಸಭೆ ನಡೆಸಲಾಯಿತು. ಈ ವೇಳೆ ಶಾಸಕ ರುದ್ರಪ್ಪ ಲಮಾಣಿ,ನಿಯೋಜಿತ ಅಭ್ಯರ್ಥಿ ಮೋಹನ ಲಿಂಬಿಕಾಯಿ, ಮುಖಂಡರಾದ ಎಂ.ಎಂ. ಹಿರೇಮಠ ಆನಂದ ಸ್ವಾಮಿ ಗಡ್ಡದೇವರಮಠ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಂಕರ ಮೆಹರವಾಡೆ, ಜಿಲ್ಲಾ ಕಾಂಗ್ರೆಸ್ ಮಹಿಳಾ ಅಧ್ಯಕ್ಷೆ ಪ್ರೇಮಾ ಪಾಟೀಲ, ಎಂ.ಎಂ. ಮೈದೂರ, ಎಸ್.ವಿ. ಪಾಟೀಲ, ಎ.ಎಂ. ಖಾಜಿ, ವಿವಿಧ ಬ್ಲಾಕ್, ಮುಂಚೂಣಿ ಘಟಕಗಳ ಅಧ್ಯಕ್ಷರು ಮತ್ತು ಮುಖಂಡರು ಇದ್ದರು.

ಟಾಂಗಾಕೂಟ ಬಯಲು ಜಾಗೆ: ನಿಷೇಧಿತ ಸ್ಥಳ ಘೋಷಣೆ

ಹಾವೇರಿ: ರಾಣೇಬೆನ್ನೂರು ನಗರದ ಟಾಂಗಾಕೂಟ ಬಯಲು ಜಾಗೆಯನ್ನು ಮೇ 15ರ ವರೆಗೆ ನಿಷೇಧಿತ ಸ್ಥಳವೆಂದು ಘೋಷಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಆದೇಶ ಹೊರಡಿಸಿದ್ದಾರೆ. ಈ ಅವಧಿಯಲ್ಲಿ ಯಾವುದೇ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಸಭೆ-ಸಮಾರಂಭಗಳನ್ನು ನಡೆಸುವುದನ್ನು ನಿಷೇಧಿಸಿ ಆದೇಶಿಸಲಾಗಿದೆ.

ಇಂದು ವಿಚಾರ ಸಂಕಿರಣ

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗ, ಪ್ರಧಾನಮಂತ್ರಿ ಉಚ್ಚತ್ತರ ಶಿಕ್ಷಾ ಅಭಿಯಾನ ಯೋಜನೆಯಡಿ ಭಾರತೀಯ ಜ್ಞಾನ ಪದ್ಧತಿ ಬಗ್ಗೆ ಎರಡು ದಿನದ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ನಗರದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ನಡೆಯಲಿದೆ. ಮಾ.23ರ ಬೆಳಗ್ಗೆ 10ಕ್ಕೆ ಕುಲಪತಿ ಡಾ. ಎ.ಎಂ.ಖಾನ್ ಉದ್ಘಾಟಿಸಲಿದ್ದು, ಜೈನ್ ವಿವಿ ಪ್ರಾಧ್ಯಾಪಕಿ ರಜನಿ ಜಯರಾಮ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಕವಿವಿ ಕುಲಸಚಿವ ಎನ್.ವೈ. ಮಟ್ಟಿಹಾಳ, ಪ್ರೊ. ಆರ್.ಎಫ್ .ಭಜಂತ್ರಿ ಪಾಲ್ಗೊಳ್ಳಲಿದ್ದು, ಡಾ. ಮೃತ್ಯುಂಜಯ ಅಗಡಿ ಅಧ್ಯಕ್ಷತೆ ವಹಿಸಲಿದ್ದಾರೆ. ಎರಡು ದಿನಗಳ ವಿಚಾರ ಸಂಕಿರಣದಲ್ಲಿ ಸಂಸ್ಕೃತ ವಿದ್ವಾಂಸರು, ಪಂಡಿತರು, ಸಂಶೋಧಕರು ಪ್ರಬಂಧ ಮಂಡಿಸಲಿದ್ದು, ಸಂಸ್ಕೃತ ಕುರಿತ ವಿವಿಧ ತಾಂತ್ರಿಕ ಗೋಷ್ಠಿಗಳು ನಡೆಯಲಿವೆ ಎಂದು ಆಯೋಜಕಿ ಡಾ.ರಜನಿ ಎಚ್, ಪದ್ಮಾವತಿ ಸಿಂಗಾರಿ ತಿಳಿಸಿದ್ದಾರೆ.

ಇಂದು ದಾಸಿಮಯ್ಯ ಜಯಂತಿ

ಧಾರವಾಡ: ಜಿಲ್ಲಾಡಳಿತ, ಕನ್ನಡ-ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ದೇವರ ದಾಸಿಮಯ್ಯ ಜಯಂತಿ ಮಾ.23ರಂದು ಬೆಳಗ್ಗೆ 10ಕ್ಕೆ ನಗರದ ಆಲೂರು ವೆಂಕಟರಾವ್ ಭವನದಲ್ಲಿ ಹಮ್ಮಿಕೊಂಡಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಉದ್ಘಾಟಿಸಲಿದ್ದು, ಶಾಸಕ ಅರವಿಂದ ಬೆಲ್ಲದ ಅಧ್ಯಕ್ಷತೆ ವಹಿಸುವರು. ಸಚಿವ ಪ್ರಹ್ಲಾದ್ ಜೋಶಿ, ಸಭಾಪತಿ ಬಸವರಾಜ ಹೊರಟ್ಟಿ, ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು, ವಿವಿಧ ನಿಗಮ ಮಂಡಳಿ ಅಧ್ಯಕ್ಷರು, ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ತಡಸ: ಶಿಗ್ಗಾವಿ ತಾಲೂಕಿನ ತಡಸ ಗ್ರಾಮದಲ್ಲಿ ಭಾರತ ಸೇವಾ ಸಂಸ್ಥೆ ಏರ್ಪಡಿಸಿದ ಕಂಚಗಾರಗಟ್ಟಿ ಕೆರೆ ಹೂಳೆತ್ತುವ ಕಾಮಗಾರಿಗೆ ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ್ ಬೊಮ್ಮಾಯಿ ಚಾಲನೆ ನೀಡಿದರು.ಈ ವೇಳೆ ನಟ ಅನಿರುದ್ಧ ವಿಷ್ಣುವರ್ಧನ್ ಮಾತನಾಡಿದರು.

ಸಂಭ್ರಮದಿಂದ ರಂಜಾನ್ ಆಚರಣೆ

ಶಿಗ್ಗಾವಿ: ಪವಿತ್ರ ರಂಜಾನ್ ಹಬ್ಬ ಕೇವಲ ಉಪವಾಸವಲ್ಲದೆ, ಕೆಟ್ಟ ಆಲೋಚನೆಗಳಿಂದ ದೂರವಿದ್ದು, ಬಡವರಿಗೆ ದಾನ (ಝಕಾತ್) ಮಾಡುವುದು ಮತ್ತು ಪ್ರಾರ್ಥನೆ ಸಲ್ಲಿಸುವುದು ಮುಖ್ಯವಾಗಿದೆ ಎಂದು ಮಾಜಿ ಶಾಸಕ ಹಾಗೂ ಹೆಸ್ಕಾಂ ಅಧ್ಯಕ್ಷ ಅಜ್ಜಂಪೀರ್ ಎಸ್ ಖಾದ್ರಿ ಹೇಳಿದರು. ತಾಲೂಕಿನ ಹುಲಗೂರ ಗ್ರಾಮದ ನಿವಾಸದಲ್ಲಿ ರಂಜಾನ್ ಹಬ್ಬದ ಅಂಗವಾಗಿ ಪ್ರಾರ್ಥನೆ ಸಲ್ಲಿಸಿ ನಂತರ ವಿವಿಧ ಮುಖಂಡರಿಂದ ಸನ್ಮಾನಗೊಂಡು ಮಾತನಾಡಿದ ಅವರು, ಮಾನವ ಕುಲದ ಒಳಿತಿಗಾಗಿ ಸರ್ವರೂ ಪ್ರಾರ್ಥಿಸುವುದು ಅತ್ಯಂತ ಅವಶ್ಯ. ಮಾನವೀಯತೆಯಿಂದ ಪರಸ್ಪರ ಪ್ರೀತಿ ವಿಶ್ವಾಸದಿಂದ ಬಾಳುವುದು ಮುಖ್ಯ. ಭಾರತ ದೇಶ ವಿವಿಧ ಜಾತಿ ಸಂಸ್ಕೃತಿಗಳಿಂದ ಕೂಡಿದೆ. ವಿವಿಧತೆಯಲ್ಲಿ ಏಕತೆಯಿರುವ ನಮ್ಮ ದೇಶದಲ್ಲಿ ಎಲ್ಲರೂ ಒಟ್ಟಾಗಿ ಬಾಳಬೇಕು. ಇದನ್ನು ಅರಿತು ಬಾಳಿದರೆ ಸಮಾಜದಲ್ಲಿ ಶಾಂತಿ-ಸೌಹಾರ್ದತೆ ನೆಲೆಸಲು ಸಾಧ್ಯ ಎಂದರು. ದಲಿತ ಮುಖಂಡ ಡಿ.ಎಸ್.ಮಾಳಗಿ ಮಾತನಾಡಿ, ಹಜರೇಷಾ ಖಾದ್ರಿ ದರ್ಗಾಕ್ಕೆ ಅದರದೇ ಆದ ಇತಿಹಾಸವಿದೆ, ಆ ವಂಶಸ್ಥರಾದ ಅಜ್ಜಂಪೀರ್ ಖಾದ್ರಿಯವರು ಸರ್ವ ಮುದಾಯದವರ ಪ್ರೀತಿಗೆ ಪಾತ್ರರಾಗಿದ್ದಾರೆ, ಈ ರಂಜಾನ್ ತಿಂಗಳು ಸಹಾನುಭೂತಿ, ಶಾಂತಿ ಮತ್ತು ಶಿಸ್ತನ್ನು ಬೋಧಿಸುತ್ತದೆ ಎಂದರು. ಮುಖಂಡರಾದ ಕರಿಯಪ್ಪ ಕಟ್ಟಿಮನಿ, ಮಹದೇವಪ್ಪ ವಡ್ಡರ, ಮಂಜುನಾಥ ಮಣ್ಣವರ, ರವಿ ಕೋಣಪ್ಪನವರ, ರಾಮನಗೌಡ ಪಾಟೀಲ, ಅಣ್ಣಪ್ಪ ನಡಟ್ಟಿ, ಬಿರೇಶ ಜಟೆಪ್ಪನವರ ಸೇರಿದಂತೆ ವಿವಿಧ ಮುಖಂಡರು ಇದ್ದರು.



ಶಿಗ್ಗಾವಿ: ತಾಲೂಕಿನ ಹುಲಗೂರ ಗ್ರಾಮದ ನಿವಾಸದಲ್ಲಿ ರಂಜಾನ್ ಹಬ್ಬವನ್ನು ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಈ ವೇಳೆ ಮಾಜಿ ಶಾಸಕ ಹಾಗೂ ಹೆಸ್ಕಾಂ ಅಧ್ಯಕ್ಷ ಅಜ್ಜಂಪೀರ್ ಎಸ್ ಖಾದ್ರಿ ಮತ್ತಿತರರಿದ್ದರು.

ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಶಾಲಾ ದರ್ಶನ ಕಾರ್ಯಕ್ರಮ

ರಾಷ್ಟ್ರೋತ್ಥಾನ ಪರಿಷತ್ ಕೊಡುಗೆ ಅಪಾರ

ಹಾವೇರಿ: ದಾಸ ಸಾಹಿತ್ಯ ಮತ್ತು ಜಿಲ್ಲೆಯ ಸಾಹಿತ್ಯಿಕ ಶ್ರೀಮಂತಿಕೆಯನ್ನು ಕನಕದಾಸರು ತಮ್ಮ ಕೃತಿಗಳ ಮೂಲಕ ಸಾರಿದ್ದಾರೆ. ಗಳಗನಾಥರ ಕೃತಿಗಳನ್ನು ಹೊತ್ತು ಮಾರಾಟ ಮಾಡುವ ಮೂಲಕ ಕನ್ನಡದ ಅಸ್ಮಿತೆ ಉಳಿವಿಗೆ ಹೋರಾಡಿದ್ದು ಅವರೆಲ್ಲರೂ ಈ ನಾಡಿನ ಸಾಹಿತ್ಯಿಕ ಶಕ್ತಿಗಳು ಎಂದು ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ.ದಿನೇಶ ಹೆಗ್ಡೆ ಸ್ಮರಿಸಿದರು.

ನಗರದ ಹೊರವಲಯದಲ್ಲಿ ಆರಂಭಗೊಳ್ಳುತ್ತಿರುವ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಶಾಲಾ ದರ್ಶನ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದ ಅವರು, ಪ್ರಸ್ತುತ ರಾಷ್ಟ್ರೋತ್ಥಾನ ಪರಿಷತ್‌ಗೆ 60 ಸಂವತ್ಸರಗಳು ತುಂಬಿದ ಬೆನ್ನಲ್ಲೇ ಇದೀಗ ಹಾವೇರಿ ನಗರದಲ್ಲೂ ಶಾಲೆ ಆರಂಭಗೊಳ್ಳುತ್ತಿದೆ. ಇದು ರಾಜ್ಯದ 21ನೇ ಶಾಲೆಯಾಗಿದೆ. ಮುಂದಿನ ಐದು ವರ್ಷಗಳಲ್ಲಿ ರಾಜ್ಯದ 21 ಜಿಲ್ಲೆಗಳಲ್ಲಿ 30 ಶಾಲೆಗಳನ್ನು ಆರಂಭಿಸುವ ಗುರಿಯನ್ನು ಇರಿಸಿಕೊಂಡಿದ್ದೇವೆ ಎಂದರು.

ಒಂದು ವರ್ಷದ ಹಿಂದೆ ಭೂಮಿ ಪೂಜೆ ಮಾಡಿದ್ದೆವು, ಆಗ ಹೇಳಿದಂತೆ ಈಗ ಕಟ್ಟಡ ನಿರ್ಮಾಣದ ನೀಲನಕ್ಷೆ ಮತ್ತು ಕಟ್ಟಡ ನಿಮ್ಮ ಮುಂದಿದೆ. ಒಳ್ಳೆಯ ಜನರ ನಿರ್ಮಾಣ, ಉತ್ತಮ ರಾಷ್ಟ್ರದ ನಿರ್ಮಾಣದ ಕಲ್ಪನೆಯೊಂದಿಗೆ ದೇಶದ ಚಿಂತನೆ, ಸಮಾಜಕ್ಕೆ ಬದ್ಧತೆ ಉಳ್ಳವರನ್ನು ನೀಡಬೇಕಿದೆ. ಈ ನಿಟ್ಟಿನಲ್ಲಿ ರಾಷ್ಟ್ರೋತ್ಥಾನ ಶಾಲೆಗಳು ಕೆಲಸ ಮಾಡುತ್ತಿವೆ ಎಂದರು.

ನಗರದಲ್ಲಿನ 7ನೇ ಸಿಬಿಎಸ್‌ಇ ಶಾಲೆ ನಮ್ಮದು. ರಾಜ್ಯದಲ್ಲಿ ಮಠಮಾನ್ಯಗಳು ಸಾಕಷ್ಟು ಶಾಲೆಗಳು ನಡೆಯುತ್ತಿವೆ. ತುಮಕೂರಿನ ಸಿದ್ದಗಂಗಾ ಮಠದ ಸಾಧನೆ ಅಸಾಧ್ಯ. ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆ, ಬಾಲಗಂಗಾಧರನಾಥ ಸ್ವಾಮೀಜಿಗಳ ಶೈಕ್ಷಣಿಕ ಕಾರ್ಯ ಸಾಧನೆಗಳೂ ಅಗಣಿತ, ಅಂಥ ನೂರಾರು ಸಂತರು ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯುತ್ತಮ ಕಾರ್ಯ ನಡೆಸುತ್ತಿದ್ದಾರೆ. ಅದೇ ರೀತಿ ರಾಷ್ಟ್ರೋತ್ಥಾನ ಶಾಲೆಗಳು ತಾಲೂಕಿಗೊಂದರಂತೆ ಆಗಲಿ ಎಂಬ ಅಪೇಕ್ಷೆ, ಬಯಕೆ ಕೂಡ ಕೇಳಿ ಬಂದಿದೆ ಎಂದರು.

ಸಮಾಜದ ಪರಿವರ್ತನೆಗೆ ನಮ್ಮ ಮಕ್ಕಳನ್ನು ಸಿದ್ಧಪಡಿಸಬೇಕೆಂಬ ಕಳಕಳಿ ಪ್ರತಿ ತಂದೆ-ತಾಯಂದಿರಲ್ಲಿದೆ. ಇದನ್ನು ನೀಡುವ ನಿಟ್ಟಿನಲ್ಲಿ ಹಾಗೂ ಸಾಮಾಜಿಕ ಚಟುವಟಿಕೆ ಮೂಲಕ ಸಮಾಜಕ್ಕೆ, ದೇಶಕ್ಕೆ, ವಿಶ್ವಕ್ಕೆ ಶಕ್ತಿಗಳಾಗಿ, ಆಸ್ತಿಗಳನ್ನಾಗಿ ನಿರ್ಮಾಣ ಮಾಡುವ ಕೆಲಸವನ್ನು ರಾಷ್ಟ್ರೋತ್ಥಾನ ಪರಿಷತ್ ಮಾಡುತ್ತಿದೆ ಎಂದರು.

ರಾಷ್ಟ್ರೋತ್ಥಾನ ಪರಿಷತ್ ಸದಸ್ಯರಾದ ಜಯಣ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಉದ್ಯಮಿ ಪವನ ಬಹಾದ್ದೂರ ದೇಸಾಯಿ ವೇದಿಕೆ ಮೇಲಿದ್ದರು. ಕಾವೇರಿ ಮಾತಾಜಿ ವಂದಿಸಿದರು.



ಯುದ್ಧಕ್ಕೆ ಭಾರತ ಪರಿಹಾರ ಸೂತ್ರ

ಭಾರತದಲ್ಲಿ ಪ್ರತಿಭಾವಂತರು ಸಾಕಷ್ಟಿದ್ದಾರೆ, ಅದೇ ರೀತಿ ಯುವ ಸಮುದಾಯದ ಧೀಃಶಕ್ತಿ ಭಾರತಕ್ಕೇ ಸದ್ವಿನಿಯೋಗ ಆದಾಗ ಮತ್ತಷ್ಟು ಬಲಿಷ್ಠ ಭಾರತ ಕಾಣಲು ಸಾಧ್ಯ. ಮೇಕ್ ಇನ್ ಇಂಡಿಯಾ ಮೂಲಕ ಈಗಾಗಲೇ ನಮ್ಮ ಪ್ರಾಚೀನ ಹಡಗು ನಿರ್ಮಾಣ ತಜ್ಞತೆಯನ್ನು ಅಳವಡಿಸಿಕೊಂಡು ಸಾಧನೆಯಲ್ಲಿ ತೊಡಗಿದ್ದೇವೆ. ಅದೇ ರೀತಿ ವಿಶ್ವದಲ್ಲಿನ ಯುದ್ಧದ ಕಾವೋಡಕ್ಕೆ ಭಾರತವೇ ಪರಿಹಾರ ಸೂತ್ರ ಒದಗಿಸಬಲ್ಲುದು ಎಂದು ಹಲವರು ಭಾರತದತ್ತ ನೋಡುತ್ತಿದ್ದಾರೆ. ಯುದ್ಧ ನಿಲ್ಲಿಸಲು, ತೈಲ ಸಂದಿಗ್ಧತೆ ನಿವಾರಣೆಗೆ ಭಾರತ ಪ್ರಯತ್ನಿಸಲಿ ಎಂಬುದಾಗಿ ಕೇಳಿಬರುತ್ತಿದೆ. ಇದು ಅತ್ಯುತ್ತಮ ಬೆಳವಣಿಗೆ.

ಮೇ 21ಕ್ಕೆ ರಾಷ್ಟ್ರೋತ್ಥಾನ ಶಾಲೆ ಉದ್ಘಾಟನೆ

ಮುಂಬರುವ ಮೇ 21ಕ್ಕೆ ಹಾವೇರಿಯ ರಾಷ್ಟ್ರೋತ್ಥಾನ ಶಾಲೆ ಉದ್ಘಾಟನೆ, ಸಾರ್ವಜನಿಕ ಲೋಕಾರ್ಪಣೆ ನಡೆಯಲಿದೆ. ಈಗಾಗಲೇ ದಕ್ಷಿಣಭಾಗದ ಕಟ್ಟಡ ಪೂರ್ಣಗೊಂಡು ಸುಮಾರು 20ತರಗತಿ ಕೊಠಡಿಗಳು ಸಿದ್ಧಗೊಂಡಿವೆ. ಅದರಲ್ಲಿ ಲ್ಯಾಬ್, ಗ್ರಂಥಾಲಯ, ಶಿಕ್ಷಕ ಸಿಬ್ಬಂದಿಗಳ ಕೊಠಡಿ, ಆಡಳಿತ ಕಚೇರಿ ಮತ್ತಿತರ ಸೌಲಭ್ಯಗಳಿರಲಿವೆ. ಒಟ್ಟು 7 ಎಕರೆ ವಿಸ್ತೀರ್ಣದಲ್ಲಿ 85000 ಚದರ ಅಡಿಯ ಕಟ್ಟಡದ ಮೇಲೆ ಒಟ್ಟು 1.40ಲಕ್ಷ ಚದರ ಅಡಿಯ ಕಟ್ಟಡ ನಿರ್ಮಾಣಗೊಂಡು ಕಾರ್ಯಾರಂಭಿಸಲಿದೆ.

ಕೆರೆ ಹೂಳೆತ್ತುವ ಕಾಮಗಾರಿಗೆ ಚಾಲನೆ

ತಡಸ/ಶಿಗ್ಗಾವಿ: ಒಳ್ಳೆಯ ಕೆಲಸಮಾಡಲು ರೂಢಿ ಮಾಡಿಕೊಂಡರೆ ಬದುಕಿನಲ್ಲಿ ಒಳ್ಳೆಯ ಸಾಧನೆ ಮಾಡುತ್ತೇವೆ, ಯಶಸ್ಸು ನಮ್ಮ ಬದುಕಿನ ಒಂದು ಸಣ್ಣ ಭಾಗ. ಸಾಧನೆ ಬಹಳ ದೊಡ್ಡದು. ಯಶಸ್ಸು ಮತ್ತು ಸಾಧನೆಗೆ ಇರುವ ವ್ಯತ್ಯಾಸವೆಂದರೆ, ಯಶಸ್ಸು ನನ್ನ ಸ್ವಂತಕ್ಕಾಗಿ. ಸಾಧನೆ ನನ್ನ ಯಶಸ್ಸಿನ ಮೂಲಕ ಸಮಾಜಕ್ಕೆ ಬಡವರಿಗೆ ಸಹಾಯ ಮಾಡುವುದು ಅದೇ ಸಾಧನೆಯಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ತಾಲೂಕಿನ ತಡಸ ಗ್ರಾಮದಲ್ಲಿ ಭಾರತ ಸೇವಾ ಸಂಸ್ಥೆ ಏರ್ಪಡಿಸಿದ ಕಂಚಗಾರಗಟ್ಟಿ ಕೆರೆ ಹೂಳೆತ್ತುವ ಕಾಮಗಾರಿಯ ಪ್ರಾರಂಭೋತ್ಸವದಲ್ಲಿ ಅವರು ಮಾತನಡಿದರು.

ಭಾರತ ಸೇವಾ ಸಂಸ್ಥೆ ಏಳೆಂಟು ವರ್ಷಗಳಿಂದ ಕೆರೆ ಹೂಳೆತ್ತುವ ಕೆಲಸ ಮಾಡಿದ್ದರು. ಮೂರು ವರ್ಷಗಳಿಂದ ಮಳೆಯಾಗಿದ್ದರಿಂದ ಹೂಳು ತೆಗೆಯಲು ಆಗಿರಲಿಲ್ಲ, ಕೆರೆಗಳನ್ನ ಅಭಿವೃದ್ಧಿ ಮಾಡುವುದರಿಂದ ರೈತರಿಗೆ ಅನುಕೂಲವಾಗುತ್ತದೆ. ಪುಣ್ಯ ಪ್ರಾಪ್ತಿಯಾಗುವ ಕಾರ್ಯವನ್ನ ಭಾರತ ಸೇವಾ ಸಂಸ್ಥೆಯ ಮೂಲಕ ಶ್ರೀಕಾಂತ ದುಂಡಿಗೌಡ್ರ ಮಾಡುತ್ತಿದ್ದಾರೆ ಎಂದರು.

ನಟ ಅನಿರುದ್ಧ ವಿಷ್ಣುವರ್ಧನ್ ಮಾತನಾಡಿ, ಪ್ರತಿಯೊಬ್ಬರಲ್ಲಿಯೂ ಒಂದು ಶಕ್ತಿ ಇರುತ್ತದೆ, ಆ ಶಕ್ತಿಯಿಂದ ಕೆಲಸ ಕಾರ್ಯಗಳು ಆಗಲಿ, ಶ್ರೀಕಾಂತ ದುಂಡಿಗೌಡ್ರ ಅವರ ಸಾಮಾಜಿಕ ಸೇವಾ ಕಾರ್ಯಕ್ರಮಗಳು ರಾಜ್ಯವ್ಯಾಪಿ ವ್ಯಾಪಿಸಲಿ ಎಂದರು.

ಗಂಜೀಗಟ್ಟಿ ಮಠದ ವೈಜಿನಾಥ ಶಿವಲಿಂಗ ಶಿವಾಚಾರ್ಯ ಶ್ರೀಗಳು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಭಾರತ ಸೇವಾ ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ ದುಂಡಿಗೌಡ್ರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿ ಮಂಡಳದ ಅಧ್ಯಕ್ಷ ವಿಶ್ವನಾಥ ಹರವಿ, ಮುಖಂಡರಾದ ಮಹೇಂದ್ರ ಸಿಂಘಿ, ಜಯಣ್ಣ ಅಗಡಿ, ಪ್ರಕಾಶ ದಾಸನೂರ, ಬಿ.ಟಿ ಇನಾಮತಿ, ಶಿವಾನಂದ ಮ್ಯಾಗೇರಿ, ತಿಪ್ಪಣ್ಣ ಸಾತಣ್ಣವರ, ಅರ್ಜುನ ಹಂಚಿನಮನಿ, ವರುಣಗೌಡ ಪಾಟೀಲ್, ಶಿವಾನಂದ ಸೊಬರದ ಸೇರಿದಂತೆ ಪ್ರಮುಖರು ಹಾಗೂ ಮುಖಂಡರು, ರೈತ ಮಹಿಳೆಯರು ಇದ್ದರು.



ಎಲ್ಲ ಕ್ಷೇತ್ರದಲ್ಲಿ ಮಹಿಳೆ ಮುಂಚೂಣಿ: ಶ್ರೀಗಳು

ರಾಣೇಬೆನ್ನೂರ: ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ವಿಶೇಷ ಸ್ಥಾನಮಾನವಿದೆ. ಅಂತಹ ಮಹಿಳೆಗೆ ಯಾವ ಮನೆಯಲ್ಲಿ ಗೌರವ ಸ್ಥಾನವಿದೆಯೋ ಆ ಮನೆಯಲ್ಲಿ ಲಕ್ಷ್ಮೀ ವಾಸವಾಗಿರುತ್ತಾಳೆ. ಇಂದು ಮಹಿಳೆ ಅಬಲೆಯಲ್ಲ, ಪ್ರತಿಯೊಂದು ರಂಗದಲ್ಲಿಯೂ ತನ್ನದೆಯಾದ ಛಾಪು ಮೂಡಿಸಿದ್ದಾಳೆ ಎಂದು ಚಿತ್ರದುರ್ಗದ ಬಂಜಾರ ಸಮಾಜ ಗುರುಪೀಠದ ಪೀಠಾಧ್ಯಕ್ಷ ಸರ್ದಾರ ಸೇವಾಲಾಲ್ ಸ್ವಾಮೀಜಿ ಹೇಳಿದರು.

ನಗರದ ಎರೇಕುಪ್ಪಿ ರಸ್ತೆಯ ನೀಲಕಂಠೇಶ್ವರ ದೇವಸ್ಥಾನದ ಸಭಾಭವನದಲ್ಲಿ ಭಾನುವಾರ ಜಾತ್ಯಾತೀತ ಜನತಾದಳದ ಜಿಲ್ಲಾಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ ಅಭಿಮಾನಿಗಳ ಬಳಗದ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ತಾಲೂಕಿನ ಆಶಾ ಕಾರ್ಯಕರ್ತೆಯರು, ನಗರಸಭೆಯ ಮಹಿಳಾ ಪೌರಕಾರ್ಮಿಕರು ಹಾಗೂ ಗ್ರಾಪಂ ಗಳಲ್ಲಿ ಘನತ್ಯಾಜ್ಯ ವಿಲೇವಾರಿ ಮಾಡುತ್ತಿರುವ ಮಹಿಳೆಯರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಬಡವರ, ದೀನದಲಿತರ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವ ಮಂಜುನಾಥ ಗೌಡಶಿವಣ್ಣನವರ ಸಾಧಕ ಮಹಿಳೆಯರಿಗೆ ಸನ್ಮಾನಿಸುತ್ತಿರುವುದು ಮತ್ತು ಅವರನ್ನು ಗುರುತಿಸಿ ಒಂದೇ ವೇದಿಕೆಯಡಿಯಲ್ಲಿ ತಂದು ಅವರ ಕಾರ್ಯವೈಖರಿಯನ್ನು ಗುರುತಿಸುತ್ತಿರುವುದು ಶ್ಲಾಘನೀಯ ಎಂದು ಶ್ರೀಗಳು ಹೇಳಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ ಮಾತನಾಡಿ, ಇಂದು ಮಹಿಳೆ ಅಬಲೆಯಲ್ಲ, ಪೌರ ಕಾರ್ಮಿಕರಿಂದ ಹಿಡಿದು ಗಗನಯಾನಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರಿಗೆ ಪುರುಷ ಪ್ರಧಾನವಾದ ಸಮಾಜವು ಪ್ರೋತ್ಸಾಹ ನೀಡಿದಾಗ ಇನ್ನೂ ಹೆಚ್ಚಿನ ಜವಾಬ್ದಾರಿಯನ್ನು ನಿಭಾಯಿಸಬಲ್ಲಳು ಎಂದು ಹೇಳಿದರು. ನ್ಯಾಯವಾದಿ ಜಯಶ್ರೀ ಜಂಬಗಿ ಮಹಿಳೆಯರ ಕಾಯ್ದೆ ಹಾಗೂ ರಕ್ಷಣೆ ಕುರಿತು ಉಪನ್ಯಾಸ ನೀಡಿದರು. ಹುಬ್ಬಳ್ಳಿ- ಧಾರವಾಡದ ಮಾಜಿ ಶಾಸಕ ವೀರಭದ್ರಪ್ಪ ಹಾಲಹರವಿ, ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಕೆ ಎಸ್ ಸಿದ್ದಬಸಪ್ಪ ಯಾದವ್, ಮಹಿಳಾ ಘಟಕದ ಸದಸ್ಯೆ ಲಕ್ಷ್ಮೀ ಕದರಮಂಡಲಗಿ,ಹುಬ್ಬಳ್ಳಿ- ಧಾರವಾಡ ಜೆಡಿಎಸ್ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಪೂರ್ಣಿಮಾ ಸವದತ್ತಿ, ರಾಧ ಅಗಡಿ ಮಾತನಾಡಿದರು.

ಶಶಿಕಲಾ ಗೌಡಶಿವಣ್ಣನವರ, ಉಷಾ ಚಾಡಮಲಿ, ಮಹೇಶ ಹೊನ್ನಜ್ಜೇರ, ಶಕುಂತಲಾ ನೀರಲಗಿ, ಲಲಿತಾ ನೀರಲಗಿ, ಸಿದ್ದಪ್ಪ ಗುಡಿಮುಂದ್ಲರ್, ನಿಂಗಪ್ಪ ಸತ್ಯಪ್ಪನವರ, ಲಿಂಗರಾಜ ಹೊನ್ನಾಳಿ, ಸಿದ್ದು ಪಟ್ಟಣಶೆಟ್ಟಿ ಶಿವು ಕಡೂರ, ಪ್ರಕಾಶ ಗಚ್ಚಿನಮಠ, ಕಸ್ತೂರಿ ಆರ್ಕಾಚಾರಿ, ಮಂಜುಳಾ ಶಿಕಾರಿಪುರ ಸೇರಿದಂತೆ ಮತ್ತಿತರರಿದ್ದರು.



ಲಂಕೇಶ ಸಾಹಿತ್ಯ ಸಾಧನೆ ಅನುಕರಣೀಯ

ಹಾವೇರಿ: ಪಿ.ಲಂಕೇಶ್ ಅವರು ಸಾಹಿತ್ಯ ಮತ್ತು ಪತ್ರಿಕೋದ್ಯಮ ಎರಡರಲ್ಲಿಯೂ ತೋರಿದ ಪ್ರಾಮಾಣಿಕತೆ ಮತ್ತು ಧೈರ್ಯ ಹೊಸ ತಲೆಮಾರಿನ ಬರಹಗಾರರು ಹಾಗೂ ಪತ್ರಕರ್ತರಿಗೆ ಅನುಕರಣೀಯವಾಗಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯ ಡಾ.ಮಲ್ಲಿಕಾರ್ಜುನ ಮಾನ್ಪಡೆ ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಚಕೋರ ಸಾಹಿತ್ಯ ವಿಚಾರ ವೇದಿಕೆ ಸಹಯೋಗದಲ್ಲಿ ಎಸ್.ಜಿ.ಎಸ್.ಎಲ್.ಪಿ. ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಹಾಗೂ ಪಿ.ಲಂಕೇಶ್ ಅವರ ಬದುಕು, ಬರಹ, ಪತ್ರಿಕೋದ್ಯಮದಲ್ಲಿನ ಚಿಂತನೆಗಳ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಯುವಜನತೆಯಲ್ಲಿ ಓದುವ ಹವ್ಯಾಸ ಈಚೆಗೆ ಕಡಿಮೆಯಾಗುತ್ತಿದ್ದು, ಲಂಕೇಶ ಅವರ ಮೌಲ್ಯಯುತ ಸಾಹಿತ್ಯದ ಓದು ಯುವ ಬರಹಗಾರರಿಗೆ ಅಗತ್ಯವಾಗಿದೆ ಎಂದರು.

ಚಕೋರ ವೇದಿಕೆಯ ಸಂಚಾಲಕ ಪ್ರೊ.ಶೇಖರ ಭಜಂತ್ರಿ ಪ್ರಾಸ್ತಾವಿಕವಾಗಿ ಮಾತನಾಡಿ, ಕಾಲೇಜು ವಿದ್ಯಾರ್ಥಿಗಳಲ್ಲಿ ಉತ್ತಮ ಸಾಹಿತ್ಯ ಓದುವ ಅಭಿರುಚಿಯನ್ನು ಬೆಳೆಸುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿ ಯುವ ಸಮುದಾಯವನ್ನು ಕೇಂದ್ರೀಕರಿಸಿ, ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಲಂಕೇಶ್ ಅವರ ಸಾಹಿತ್ಯ ಮತ್ತು ಪತ್ರಿಕೋದ್ಯಮದಲ್ಲಿನ ಸಾಧನೆ ಪ್ರೇರಣಾದಾಯಕವಾಗಿದೆ. ಸಾಹಿತ್ಯದ ವಿದ್ಯಾರ್ಥಿಗಳು, ಬರಹಗಾರರು ಅವರ ಸಮಗ್ರ ಸಾಹಿತ್ಯದ ಅಧ್ಯಯನಕ್ಕೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ಸರಕಾರಿ ಮಹಿಳಾ ಪದವಿ ಕಾಲೇಜಿನ ಪ್ರಾಧ್ಯಾಪಕ ಡಾ.ಕಾಂತೇಶ ಅಂಬಿಗೇರ ಉಪನ್ಯಾಸ ನೀಡಿದರು. ಪ್ರಾ. ಪ್ರೊ.ಇಂದಿರಾ ಬಾಗಲಕೋಟಿ ಅಧ್ಯಕ್ಷತೆವಹಿಸಿದ್ದರು. ಹಿರಿಯ ಸಾಹಿತಿ ಸತೀಶ ಕುಲಕರ್ಣಿ, ಮಾರುತಿ ತಳವಾರ, ಪ್ರೊ.ರಾಮಚಂದ್ರಪ್ಪ ಬಿ.ಎಂ., ಡಾ.ಶಿವಾನಂದ ಕೆಂಪಳ್ಳೇರ, ಡಾ.ಬೀಬಿ ಫಾತಿಮಾ, ಡಾ.ಸಂಧ್ಯಾಕುಮಾರಿ, ಪ್ರೊ.ಮೆಹಬೂಬ್ ಸುಭಾನಿ ಉಪಸ್ಥಿತರಿದ್ದರು. ಕಾವ್ಯಾ ಮಡಿವಾಳರ, ಮಧು ಉಪ್ಪಾರ ನಿರೂಪಿಸಿದರು. ಡಾ.ಭಾಗ್ಯವತಿ ವಂದಿಸಿದರು.



ಮನಸ್ಸಿನ ನೆಮ್ಮದಿಗೆ ಧಾರ್ಮಿಕ ಕಾರ್ಯ ಅಗತ್ಯ

ಬ್ಯಾಡಗಿ: ಜನರು ಇವತ್ತಿನ ದಿನಮಾನಗಳಲ್ಲಿ ಒತ್ತಡದಲ್ಲಿ ಸಿಲುಕಿ ನೆಮ್ಮದಿ ಕಳೆದುಕೊಳ್ಳುತ್ತಿದ್ದಾರೆ. ನೆಮ್ಮದಿಯ ಬದುಕಿಗೆ ದೇವಸ್ಥಾನಗಳಲ್ಲಿ ಆಗಾಗ ಇಂತಹ ಧಾರ್ಮಿಕ ಕಾರ್ಯಗಳು ನಡೆಯಬೇಕು ಎಂದು ಹಾವೇರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಶ್ರೀ ಲಿಂಗಯ್ಯ ಹಿರೇಮಠ ಹೇಳಿದರು.

ಪಟ್ಟಣದ ಶಿಕ್ಷಕರ ಕಾಲೋನಿಯಲ್ಲಿರುವ ಈಶ್ವರ ದೇವಸ್ಥಾನದಲ್ಲಿ ಯುಗಾದಿಯ ಹೊಸ ವರ್ಷದಂಗವಾಗಿ ನಡೆದ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಮಾತನಾಡಿ, ನಾವು ಮಠ ಮಂದಿರಗಳಿಗೆ ಬಂದಾಗ ಉಂಟಾಗುವ ಏಕಾಗ್ರತೆಯಿಂದ ಶಾಂತಿ ನೆಮ್ಮದಿ ದೊರೆಯುತ್ತದೆ. ನಾವು ಆರೋಗ್ಯವಂತರಾಗಬೇಕೀದರೆ ಇಂತಹ ಧಾರ್ಮಿಕ ಕಾರ್ಯಗಳು ನಡೆಯಬೇಕು ಹಿಂದೂಗಳಿಗೆ ಯುಗಾದಿ ಪವಿತ್ರವಾದ ಹಬ್ಬ ಇಲ್ಲಿಂದಲೇ ಹೊಸ ವರ್ಷ ಪ್ರಾರಂಭವಾಗುತ್ತದೆ. ಹೊಸ ವರ್ಷ ನಾಡಿನ ಜನರಿಗೆ ಶಾಂತಿ ನೆಮ್ಮದಿ ನೀಡಲಿ ಎಂದರು.



ದೇವಸ್ಥಾನದ ದ್ವಿತೀಯ ಹಂತದ ಧಾನಿಗಳಿಗೆ ಸನ್ಮಾನಿಸಲಾಯಿತು. ದೇವಸ್ಥಾನ ಸಮಿತಿ ಗೌರವಾಧ್ಯಕ್ಷ ಪಿ.ಎಂ.ಶಿಡೇನೂರ, ಕಸಾಪ ಅಧ್ಯಕ್ಷ ಬಿ.ಎಂ.ಜಗಾಪೂರ, ಬಿ.ಎಫ್.ದೊಡ್ಡಮನಿ, ಆರ್.ಎಂ.ಪಾಟೀಲ, ಆರ್.ಡಿ ವಾಲ್ಮೀಕಿ, ಮಹೇಶ ನಾಯಕ, ವೈ.ಟಿ.ಹೆಬ್ಬಳ್ಳಿ, ರವಿಕುಮಾರ್ ದೇವಿ ಹೊಸೂರ್ ಉಪಸ್ಥಿತರಿದ್ದರು.

ಸಂಭ್ರಮದ ಮುಳ್ಳುಗದ್ದುಗೆ ಜಾತ್ರಾ ಮಹೋತ್ಸವ

ಹಾವೇರಿ: ತಾಲೂಕಿನ ಸುಕ್ಷೇತ್ರ ಹನುಮನಹಳ್ಳಿ ಹಾಲಸ್ವಾಮಿ ಮಠದಲ್ಲಿಸದ್ಗುರುಹಾಲಶಿವಯೋಗಿ ಗಳವರಪರಂಪರೆಯಮುಳ್ಳುಗದ್ದುಗೆ ಜಾತ್ರಾ ಮಹೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ಅತ್ಯಂತ ಸಡಗರ ಸಂಭ್ರಮದಿಂದ ಜರುಗಿತು.



ಪ್ರತಿ ವರ್ಷದ ಪದ್ಧತಿಯಂತೆ ಈ ವರ್ಷವೂ ಜಾತ್ರಾ ಮಹೋತ್ಸವದ ಪ್ರಮುಖ ಆಚರಣೆಯಾಗಿರುವ ಮುಳ್ಳು ಗದ್ದುಗೆ ಮಹೋತ್ಸವವು ಶ್ರೀ ಮಠದ ಸಣ್ಣ ಹಾಲಸ್ವಾಮಿಗಳ ನೇತೃತ್ವದಲ್ಲಿ ಅದ್ದೂರಿಯಾಗಿ ನೆರವೇರಿತು. ಶ್ರೀಗಳ ಮುಳ್ಳುಗದ್ದುಗೆ ಉತ್ಸವಕ್ಕೆ ಹಲಿಗೆ ಬಾರಿಸುವವರು, ಸಮ್ಮಾಳ ಕಲಾ ತಂಡದವರು, ಡೊಳ್ಳು, ಕಂಸಾಳೆ ಹಾಗೂ ಲಂಬಾಣಿ ನೃತ್ಯ ತಂಡದವರು ಸಾಥ್ ನೀಡಿ ಜಾತ್ರೆಯ ಮೆರುಗನ್ನು ಹೆಚ್ಚಿಸಿದರು. ಮಹಾಸ್ವಾಮಿಗಳು ಕಳೆದ ಒಂಭತ್ತು ದಿನಗಳ ಉಪವಾಸ ವ್ರತ ಆಚರಣೆ ಮಾಡಿ ಶನಿವಾರ ಬೆಳಗ್ಗೆಯಿಂದ ತಪಸ್ಸನ್ನು ಆಚರಿಸಿ ಕತ್ತಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿದರು. ಯಾವುದೇ ಅಂಗವಸ್ತ್ರ ವಿನ್ಯಾಸವಿಲ್ಲದೇ, ಶ್ರೀಗಳು ಕೌಪೀನ ಬಾಳೆ ಎಲೆ ಧರಿಸಿಕೊಂಡು ರಾತ್ರಿ 11 ಗಂಟೆಯ ಸುಮಾರಿಗೆ ಮುಳ್ಳುಗದ್ದುಗೆಯನ್ನು ಏರಿದರು. ಹಾಲಸ್ವಾಮಿ ಮಠದ ಆವರಣದಿಂದ ಆರಂಭವಾದ ಮೆರವಣಿಗೆಯು ಸತತ ಎರಡು ಗಂಟೆಗಳವರೆಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮೂಲ ಸ್ಥಳಕ್ಕೆ ಆಗಮಿಸಿ ವಿರಾಜಮಾನಗೊಂಡಿತು.

ನೂರಾರು ವರ್ಷಗಳ ಧಾರ್ಮಿಕ ಇತಿಹಾಸ ಹೊಂದಿರುವ ರಾಂಪುರ ಹಾಲಸ್ವಾಮಿ ಮಠ, ಹೂವಿನ ಹಡಗಲಿ, ಸಂಕಥಾಳ ಪುಣ್ಯಕ್ಷೇತ್ರಗಳ ಸಂಸ್ಥಾನ ಮಠವಾದ ಹನುಮನಹಳ್ಳಿ ಗ್ರಾಮದ ಹಾಲೇಶ್ವರ ಮಠದ ಮುಳ್ಳುಗದ್ದುಗೆ ಉತ್ಸವದಲ್ಲಿ ಸ್ಥಳೀಯರು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜನತೆ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕುಗಳಿಂದ ಹಾಗೂ ಹೊರ ಜಿಲ್ಲೆಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಮುಳ್ಳುಗದ್ದುಗೆ ಉತ್ಸವವನ್ನು ನೋಡಿ ಕಣ್ತುಂಬಿಕೊಂಡರು.

ಆಕರ್ಷಕ ಸಿಡಿಮದ್ದು ಪ್ರದರ್ಶನ: ಮುಳ್ಳುಗದ್ದುಗೆ ಜಾತ್ರಾ ಮಹೋತ್ಸವದಲ್ಲಿ ಆಕರ್ಷಕ ಸಿಡಿಮದ್ದು ಪ್ರದರ್ಶನ ನಡೆಯಿತು. ತರಾವರಿ ಬಗೆಯ ಪಟಾಕಿಗಳು ಬಾನೆತ್ತರದಲ್ಲಿ ಸಿಡಿಯುತ್ತಿದ್ದು, ಜನಾಕರ್ಷಣೆಗೆ ಒಳಗಾಗಿತ್ತು. ಜಾತ್ರೆಯಲ್ಲಿ ಪಾಲ್ಗೊಂಡ ಭಕ್ತರು ಸಿಡಿಮದ್ದು ಪ್ರದರ್ಶನ ವೀಕ್ಷಣೆ ಮಾಡಿದರು.

ಹಾಲಪ್ಪಜ್ಜನ ಮಹಾ ರಥೋತ್ಸವ

ಮುಳ್ಳುಗದ್ದುಗೆ ಜಾತ್ರಾ ಮಹೋತ್ಸವದ ಎರಡನೇ ದಿನವಾದ ಭಾನುವಾರ ಸಂಜೆ ಹಾಲಸ್ವಾಮಿ ಮಹಾರಥೋತ್ಸವ ನಡೆಯಿತು. ಶ್ರೀಮಠದ ಆವರಣದಲ್ಲಿ ಸಕಲ ವಾದ್ಯ ವೈಭವಗಳೊಂದಿಗೆ ಆರಂಭವಾದ ರಥೋತ್ಸವಕ್ಕೆ ಸಣ್ಣ ಹಾಲಸ್ವಾಮಿಗಳು ಹಾಗೂ ಓಂಕಾರ ಹಾಲಸ್ವಾಮಿಗಳು ಚಾಲನೆ ನೀಡಿದರು.

ಉತ್ಸವದಲ್ಲಿ ಮಠದ ಸಿದ್ಧರಾಮ ಹಾಲಶಿವಯೋಗಿಗಳು, ಹಾಲ ಮುದುಕೇಶ್ವರ ಶ್ರೀಗಳು, ಹಿರೇಹಡಗಲಿ ಹಾಲಸ್ವಾಮಿ ಮಠದ ಹಾಲಸಿದ್ದೇಶ್ವರ ಶ್ರೀಗಳು, ಅಭಿನವ ಹಾಲವೀರಪ್ಪಜ್ಜ ಶ್ರೀಗಳು, ಹಾಲ ಅಭಿಷೇಕ ಸ್ವಾಮೀಜಿ, ನಾಗತಿ ಬಸಾಪೂರದ ಗಿರಿರಾಜ ಹಾಲಸ್ವಾಮಿಗಳು ಸೇರಿದಂತೆ ಹಿರೇಹಡಗಲಿ, ಸಂಕಥಾಳ, ರಾಂಪುರ, ಗುಂಡೇರಿ ಕ್ಷೇತ್ರಗಳ ವಿವಿಧ ಮಠಾಧೀಶರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಭಕ್ತರು ಜಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಸಂಸ್ಕಾರಯುತ ಶಿಕ್ಷಣ ಜೀವನದ ಯಶಸ್ಸಿಗೆ ಬುನಾದಿ

ಹಾವೇರಿ: ಬಾಲ್ಯದಲ್ಲಿ ಮಕ್ಕಳಿಗೆ ನೀಡುವ ಸಂಸ್ಕಾರಯುತ ಶಿಕ್ಷಣ ಜೀವನದ ಯಶಸ್ಸಿಗೆ ಭದ್ರ ಬುನಾದಿಯಾಗಿದೆ. ಪಾಲಕರು ಬೇರೆ ಮಕ್ಕಳಿಗೆ ತಮ್ಮ ಮಕ್ಕಳನ್ನು ಹೋಲಿಕೆ ಮಾಡಿ ದೂರಬೇಡಿ ಎಂದು ನಿವೃತ್ತ ಶಿಕ್ಷಕ ಶಿವಾನಂದ ಮರಳಿಹಳ್ಳಿ ಹೇಳಿದರು.



ತಾಲೂಕಿನ ಟಾಟಾ ಮಣ್ಣೂರ ಗ್ರಾಮದಲ್ಲಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಗ್ರಾಮಸ್ಥರು, ಹಳೆಯ ವಿದ್ಯಾರ್ಥಿಗಳಿಂದ ಸನ್ಮಾನ ಸ್ವೀಕರಿಸಿ ಮಾತನಾಡಿ, ಯುವಕರು ಜೀವನದಲ್ಲಿ ಪ್ರಾಮಾಣಿಕತೆ ಅಳವಡಿಸಿಕೊಳ್ಳಬೇಕು. ಕೆಟ್ಟ ಹವ್ಯಾಸಗಳಿಂದ ಸಾಧ್ಯವಾದಷ್ಟು ದೂರವಿರಿ, ಹೆತ್ತು ಹೊತ್ತು ಬೆಳೆಸಿದ ತಂದೆ-ತಾಯಿಗಳನ್ನು ಜೀವನದ ಕೊನೆ ಅವಧಿಯಲ್ಲಿ ಚೆನ್ನಾಗಿ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಗದಗ ಜಿಲ್ಲೆಯ ವಾರ್ತಾಧಿಕಾರಿ ವಸಂತ ಮಡ್ಲೂರ ಮಾತನಾಡಿ,ನೀವು ಕಲಿಸಿದ ಪಾಠಗಳು ಪುಸ್ತಕಕ್ಕೆ ಮಾತ್ರ ಸೀಮಿತವಾಗಿರದೆ, ನಮ್ಮ ಜೀವನದ ಪ್ರತಿಯೊಂದು ಹೆಜ್ಜೆಯಲ್ಲೂ ನಮ್ಮನ್ನು ದಾರಿದೀಪದಂತೆ ನಡೆಸುತ್ತಿವೆ. ನಿಮ್ಮ ಶಿಷ್ಯರು ಇಂದು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವುದು ನಿಮ್ಮ ಪರಿಶ್ರಮದ ಫಲ ಆಗಿದೆ ಎಂದರು. ಶಿಕ್ಷಕ ವಿರುಪಾಕ್ಷಪ್ಪ ತೋರಗಲ್ಲ, ಶಿಕ್ಷಕ ಬಸವರಾಜ ಮಡ್ಲೂರ ಮಾತನಾಡಿದರು.

ಪ್ರೌಢ ಶಾಲಾ ಮುಖ್ಯ ಶಿಕ್ಷಕ ಚಂದ್ರು ಮರಳಿಹಳ್ಳಿ, ರಮೇಶ ಮಡ್ಲೂರ, ಪೀರಸಾಬ ಅಗಸರ, ಸಿದ್ದಲಿಂಗೇಶ ಮಡ್ಲೂರ ಸೇರಿದಂತೆ ಇತರರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಚೆನ್ನೂರಿನ ಶಿದ್ದಲಿಂಗಪ್ಪ ಗೌರಿಮನಿ, ಗ್ರಾಮಸ್ಥರಾದ ಶೇಖಪ್ಪ ಕಮತರ, ಪುಟ್ಟಪ್ಪ ಹೊಸಮನಿ, ಬಸಪ್ಪ ಹೊಸಮನಿ, ಪುಟ್ಟಪ್ಪ ಕಮತರ, ಹುಸೇನಸಾಬ ಅಗಸರ, ಪುಟ್ಟಪ್ಪ ಕ್ಷೌರದ, ಜ್ಯೋತೆಪ್ಪ ಹೊಸಮನಿ, ಹೊಳಲಪ್ಪ ಪೂಜಾರ, ಶಾಂತಪ್ಪ ತಳವಾರ ಪಾಲ್ಗೊಂಡಿದ್ದರು. ಶಿಕ್ಷಕ ಶಿವಾನಂದ ಮಡ್ಲೂರ, ಗದಿಗೇಶ ಮರಳಿಹಳ್ಳಿ ಕಾರ್ಯಕ್ರಮ ನಿರ್ವಹಿಸಿದರು.

ಕಿರುಸುದ್ದಿ

ಕೊತ್ತಲೇಶನ ದರ್ಶನ ಪಡೆದ ಉಮೇಶ ಮೇಟಿ



◆**ಬಾಗಲಕೋಟೆ:** ನಗರದ ಐತಿಹಾಸಿಕ ಕೊತ್ತಲೇಶ ದೇವಸ್ಥಾನದಲ್ಲಿ ಚೈತ್ರ ಉತ್ಸವ ನಿಮಿತ್ತ ಭಾನುವಾರ ಹಮ್ಮಿಕೊಂಡಿದ್ದ ಹೋಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಭಾಗವಹಿಸಿ ವಿಶೇಷ ಪೂಜೆ ಸಲ್ಲಿಸಿದರು.

ಅಭಿಮಾನಿಗಳೊಂದಿಗೆ ದೇವಸ್ಥಾನಕ್ಕೆ ಆಗಮಿಸಿದ್ದ ಅವರು ಕೊತ್ತಲೇಶನ ದರ್ಶನ ಪಡೆದು ದೇವಸ್ಥಾನ ಆವರಣದಲ್ಲಿ ನಡೆಯುತ್ತಿದ್ದ ಪವಮಾನ ಹೋಮದಲ್ಲಿ ಭಾಗವಹಿಸಿದ್ದರು. ನಂತರ ಅವರು ಮಾತನಾಡಿ, ನಮ್ಮ ತಂದೆ ದಿ.ಎಚ್.ವೈ.ಮೇಟಿ ಅವರ ಕಾಲದಿಂದಲೂ ನಮ್ಮ ಕುಟುಂಬದವರು ಈ ದೇವಸ್ಥಾನಕ್ಕೆ ನಡೆದುಕೊಳ್ಳುತ್ತಿದ್ದೇವೆ. ಇಲ್ಲಿ ಬಂದು ಆಂಜನೇಯನ ಆಶೀರ್ವಾದ ಪಡೆದು ನಮ್ಮ ತಂದೆಯವರು ಜನಪ್ರತಿನಿಧಿಯಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು ಎಂಬುದನ್ನು ಸ್ಮರಿಸಿದರು. ಪೂರ್ಣಾಹುತಿ ನಂತರ ದೇವಸ್ಥಾನ ವತಿಯಿಂದ ಉಮೇಶ ಅವರನ್ನು ಸತ್ಕರಿಸಲಾಯಿತು. ಕಾಂಗ್ರೆಸ್ ಮುಖಂಡರು, ವಿಪ್ರ ಸಮಾಜದ ಹಿರಿಯರು ಉಪಸ್ಥಿತರಿದ್ದರು.

ವಚನ ಗಾಯನ ಇಂದು

◆**ಗುಳೇದಗುಡ್ಡ:** ಫ. ಗು. ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ್‌ನ ಸ್ಥಳೀಯ ಘಟಕದ ವತಿಯಿಂದ ಆದ್ಯ ವಚನಕಾರ ಜೇಡರ ದಾಸಿಮಯ್ಯನವರ ಜಯಂತ್ಯುತ್ಸವದ ಅಂಗವಾಗಿ ಮಾ. 23ರಂದು ಸಂಜೆ 6 ಗಂಟೆಗೆ ಪಟ್ಟಣದ ಶ್ರೀ ಸಾಲೇಶ್ವರ ದೇವಸ್ಥಾನದ ಪ್ರಾಂಗಣದಲ್ಲಿ ಸ್ಥಳೀಯ ಜ್ಞಾನಸಿಂಧು ಕಲಾಬಳಗದ ಶಂಕರ ಮುಂದಿನಮನಿ ಅವರು ಜೇಡರ ದಾಸಿಮಯ್ಯ ನಾಟಕ ಪ್ರದರ್ಶನದಲ್ಲಿ ಅಳವಡಿಸಿದ ವಚನಗಳನ್ನು ಸಂಗೀತದ ಮೂಲಕ ಪ್ರಸ್ತುತಪಡಿಸಲಿದ್ದಾರೆ ಎಂದು ಫ. ಗು. ಹಳಕಟ್ಟಿ ರಾಷ್ಟ್ರೀಯ ಟ್ರಸ್ಟಿನ ಗುಳೇದಗುಡ್ಡ ಘಟಕದ ಅಧ್ಯಕ್ಷ ಡಾ. ವಿ. ಎ. ಬೆನಕನಾಳ ತಿಳಿಸಿದ್ದಾರೆ.

ಸಂಭ್ರಮದ ರಂಜಾನ್ ಆಚರಣೆ



◆**ಕಲಾದಗಿ:** ಸುತ್ತಮುತ್ತಲಿನ ಗ್ರಾಮಗಳ ಮುಸ್ಲಿಂ ಬಾಂಧವರು ಪವಿತ್ರ ರಂಜಾನ್ ಹಬ್ಬವನ್ನು ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸಿದರು. ಕಳೆದ 30 ದಿನಗಳಿಂದ ಉಪವಾಸ ವ್ರತ ಆಚರಿಸುತ್ತಿದ್ದ ಮುಸ್ಲಿಂ ಬಾಂಧವರು ಈದ್ ಉಲ್ ಫಿತರ್ ದಿನದಂದು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಉಪವಾಸವನ್ನು ಕೊನೆಗೊಳಿಸಿದರು. ಈದ್ಗಾ ಮೈದಾನದ ಹತ್ತಿರದಲ್ಲಿರುವ ತಮ್ಮ ಪೂರ್ವಜರ ಗೋರಿಗಳಿಗೆ ನಮಸ್ಕರಿಸಿ, ತದನಂತರ ಒಬ್ಬರಿಗೊಬ್ಬರು ಆಲಿಂಗಿಸುವ ಮುಖಾಂತರ ಶುಭಾಶಯ ಕೋರಿದರು. ಗ್ರಾಮೀಣ ಭಾಗದಲ್ಲಿರುವ ತಮ್ಮ ಸಂಬಂಧಿಕರಿಗೆ, ಬಾಂಧವರಿಗೆ ಶುಭಾಶಯ ಕೋರಲು ಬೈಕ್ ಕಾರುಗಳ ಮೂಲಕ ತೆರಳಿ ಶುಭಾಶಯ ಕೋರಿ ಬಂದರು. ಸಮೀಪದ ಶಾರದಾಳ ಗ್ರಾಮದಲ್ಲಿನ ಮಸೀದಿಯಲ್ಲಿಯೂ ಕಲಾದಗಿ ಹಾಗೂ ಶಾರದಾಳ ಗ್ರಾಮದ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ರಂಜಾನ್ ಹಬ್ಬದ ಸಂತೋಷವನ್ನು ಪರಸ್ಪರ ಶುಭಾಶಯ ಕೋರಿ ಸಂತಸ ಪಟ್ಟರು.

ಮಹಿಳೆಯರಿಂದ ಘನಗೌರ ಪೂಜೆ

◆**ರಬಕವಿ-ಬನಹಟ್ಟಿ:** ಇಲ್ಲಿನ ಮಾಹೇಶ್ವರಿ ಸಮಾಜದ ಮಹಿಳೆಯರು ಶನಿವಾರ ಘನಗೌರ ಪೂಜೆಯ ಅಂಗವಾಗಿ ಶಿವ ಪಾರ್ವತಿಯರ ಮೂರ್ತಿಗಳ ಮೆರವಣಿಗೆಯನ್ನು ನಗರದ ಪ್ರಮುಖ ಬೀದಿಗಳಲ್ಲಿ ನಡೆಸಿದರು.

ನಗರದ ಬಾಲಾಜಿ ಮಂದಿರದಿಂದ ಆರಂಭಗೊಂಡ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ವಾದ್ಯ ಮೇಳದೊಂದಿಗೆ ನಡೆಯಿತು. ಮೆರವಣಿಗೆಯಲ್ಲಿ ಮಾಹೇಶ್ವರಿ ಸಮಾಜದ ಮಹಿಳೆಯರು ಶಿವ ಪಾರ್ವತಿಯರ ಮೂರ್ತಿಗಳಿಗೆ ಪೂಜೆ ಸಲ್ಲಿಸಿ, ದೇವರಿಗೆ ನೈವೇದ್ಯ ಸಲ್ಲಿಸಿ ಸಿಹಿ ಹಂಚಿದರು.

ಮಾಹೇಶ್ವರಿ ಸಮಾಜದ ಪ್ರಮುಖರಾದ ಜ್ಯೋತಿ ಕಾಬರಾ, ಪದ್ಮಾ ಮಾಲಪಾಣಿ, ಶೀತಲ ಲಡ್ಡಾ, ಗೀತಾ ಭಟ್ಟಡ, ಭಾಗ್ಯಶ್ರೀ ರಾಠಿ, ಅನುರಾಧಾ ಭಟ್ಟಡ, ತಾರಾ ಡಾಗಾ, ಹೇಮಾ ಚಂಡಕ, ಅನಿತಾ ಚಂಡಕ, ಪ್ರಜಕ್ತಾ ಲಡ್ಡಾ, ಜ್ಯೋತಿ ಭಟ್ಟಡ, ನೀಲಾ ಚಂಡಕ, ರಶ್ಮಿ ಕಾಬರಾ ಅನೇಕರಿದ್ದರು.



ಬಾದಾಮಿ: ಮುಸ್ಲಿಂ ಸಮಾಜ ಬಾಂಧವರ ಪವಿತ್ರ ರಂಜಾನ್ ಹಬ್ಬವನ್ನು ಶನಿವಾರ ಸಮಾಜ ಬಾಂಧವರು ಸಡಗರ ಸಂಭ್ರಮದಿಂದ ಆಚರಣೆ ಮಾಡಿದರು. ಶಾಸಕ ಭೀಮಸೇನ ಚಿಮ್ಮನಕಟ್ಟಿ, ಮುಖಂಡರಾದ ಇಸುಪ್ ಪೀರ್ಜಾದೆ, ಇಲಿಯಾಸ ಜಮಾದಾರ, ಜಬ್ಬಾರ್ ಖಾಜಿ, ಶೌಕತ ಅಲಿ ವಾಟಮೇಕರ, ಜಮಾಲ್ ಹಕೀಮ್, ಜಮೀಲ್ ನಾಯಕ್, ಬಬಲು ನಾಯಕ್, ರಜಾಕ್ ರಾಜೂರ, ಮಹ್ಮದ ಅಲಿ ಕಲಿಫ್, ಇಸ್ಲಾಮ್ ಕಮಿಟಿಯ ಎಲ್ಲಾ ಸದಸ್ಯರು, ಸಮಾಜದ ಎಲ್ಲಾ ಭಾಂದವರು ಇದ್ದರು.

ನೀರಿನ ತೊಂದರೆಯಾಗದಂತೆ ಕ್ರಮ ಕೈಗೊಳ್ಳಿ

◆**ಬಾದಾಮಿ:** ಜನ ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆ ಆಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕೆಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ತಾಪಂ ಸಭಾಭವನದಲ್ಲಿ ಜರುಗಿದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ತಾಲೂಕುಮಟ್ಟದ ಅಧಿಕಾರಿಗಳೊಂದಿಗೆ ಕುಡಿಯುವ ನೀರಿನ ಕುರಿತು ವಿಸ್ತೃತ ಚರ್ಚಿಸಿ



ಮಾತನಾಡಿ ಕೆಲ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವ ಬಗ್ಗೆ ಮಾಹಿತಿ ಇದ್ದು ಕೂಡಲೇ ಅದನ್ನು ಸರಿಪಡಿಸುವಂತೆ ಸಲಹೆ ನೀಡಿದರು. ಜಿಪಂ ಹಾಗೂ ಆರ್.ಡಬ್ಲ್ಯೂ.ಎಸ್ ಇಲಾಖೆಯ ಸಹಯೋಗದಲ್ಲಿ ನೀರಿನ ಬವಣೆ ಆಗದಂತೆ ನೋಡಿಕೊಳ್ಳಬೇಕೆಂದು ಹೇಳಿದ ಶಾಸಕ ಚಿಮ್ಮನಕಟ್ಟಿ ವಿಶೇಷವಾಗಿ ಜಾನುವಾರುಗಳಿಗೆ ಕುಡಿಯುವ ನೀರು ಪೂರೈಕೆಗೆ ಮಲಪ್ರಭಾ ನದಿ ಸೇರಿದಂತೆ ಇರುವ ಹಳ್ಳ ಕೊಳ್ಳಗಳಲ್ಲಿ ನೀರಿನ ವ್ಯವಸ್ಥೆ ಮಾಡಿಕೊಳ್ಳಲು ಸೂಚಿಸಿದರು. ಈಗಾಗಲೇ ಅನುಷ್ಠಾನಗೊಂಡಿರುವ ಮತ್ತು ಅನುಷ್ಠಾನಗೊಳ್ಳಬೇಕಾಗಿರುವ ಅಭಿವೃದ್ಧಿ ಅನುದಾನದ ಕಾಮಗಾರಿಗಳು ನಿಗಧಿತ ಸಮಯದಲ್ಲಿ ಪೂರ್ಣಗೊಳ್ಳುವುದರ ಜೊತೆಗೆ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕೆಂದು ತಾಕೀತು ಮಾಡಿದರು. ಇನ್ನು ಕೃಷಿ ಇಲಾಖೆಗೆ ಸಂಬಂದಿಸಿದಂತೆ ರಸಗೊಬ್ಬರಗಳ ಸಂಗ್ರಹಣೆ ಮತ್ತು ಕನಿಷ್ಠ ದರ ನಿಗದಿಯತ್ತ ಹೆಚ್ಚಿನ ಗಮನ ನೀಡಬೇಕು ಎಂದು ಹೇಳಿದ ಶಾಸಕ ಚಿಮ್ಮನಕಟ್ಟಿ ನಮ್ಮ ಕ್ಷೇತ್ರದಲ್ಲಿರುವ ಮೇವು ಲಭ್ಯತೆ ಕುರಿತು ಜಿಪಿಎಸ್ ಫೋಟೊ ಸಮೇತ ಮಾಹಿತಿ ನೀಡಲು ಸೂಚಿಸಿದರು.



ಬೀಳಗಿ: ಪಟ್ಟಣದ ಜಾಮೀಯಾ ಈದ್ಗಾ ಮೈದಾನದಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ಉಪವಾಸ ವ್ರತ ಕೈಗೊಂಡಿದ್ದ ಮುಸ್ಲಿಂ ಬಾಂಧವರು ಶನಿವಾರ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಮೂಲಕ ಪವಿತ್ರ ರಂಜಾನ್ ಹಬ್ಬವನ್ನು ಸಡಗರ, ಸಂಭ್ರಮದಿಂದ ಆಚರಿಸಿದರು. ಸಮಾಜ ಬಾಂಧವರು ಪರಸ್ಪರ ಆಲಂಗನ ಮಾಡಿಕೊಂಡು ಕೈಕೈ ಕುಲುಕಿ ಶುಭಾಶಯ ವಿನಿಮಯ ಮಾಡಿಕೊಂಡರು.

ಮ್ಯಾರಾಥಾನ್ ಓಟ | ವಕೀಲ ಸರೋಜಾ ಬಟಕುರ್ಕಿ ಅಭಿಮತ

ಮಹಿಳೆ ಮನಸ್ಸು ಮಾಡಿದರೆ ಸಾಧನೆ ಸಾಧ್ಯ

◆**ಲೋಕಾಪುರ:** ನಾನು ಸಾಮಾನ್ಯ ವಕೀಲೆಯಾಗಿ ಕಾರ್ಯನಿರ್ವಹಿಸಿ, ಹಲವು ಏಳು ಬೀಳುಗಳನ್ನು ಕಂಡು ಇಂದು, ಸರ್ಕಾರಿ ವಕೀಲೆಯಾಗಿ ಬೆಳೆದಿರುವೆ, ಮಹಿಳೆ ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ನಾನೇ ಸಾಕ್ಷಿ ಎಂದು ವಕೀಲ ಸರೋಜಾ ಬಟಕುರ್ಕಿ ಹೇಳಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಮಹಿಳಾ ಸಬಲೀಕರಣ ಸಂಸ್ಥೆ ಲೋಕಾಪುರ ವತಿಯಿಂದ ಹಮ್ಮಿಕೊಂಡ 3 ಕಿ.ಲೋ ಮ್ಯಾರಥಾನ್ ಓಟ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು ಸಾರ್ವಜನಿಕರ ಸಮಸ್ಯೆಗಳಿಗೆ ತಕ್ಷಣವೇ ಸ್ಪಂದಿಸುತ್ತಿದ್ದೇನ, ಜನರು ಯಾವ ಕೆಲಸ ಆಗುವುದಿಲ್ಲ, ಅದನ್ನು ನಮ್ಮ ಹತ್ರ ತೆಗೆದುಕೊಂಡು ಬರುತ್ತಾರೆ, ಅಂತಹ ಕೆಲಸಗಳನ್ನು ಮಾಡಿಕೊಡುವುದೇ ವಕೀಲರ ಕೆಲಸ. ಎಲ್ಲಾ ಮಹಿಳೆಯರಿಗೆ ಸ್ಪಂದಿಸುವ ಕೆಲಸವನ್ನು ಮಾಡುತ್ತಿರುವೆ, ನಾನು ತುಂಬಾ ಅಧ್ಯಯನ ಮಾಡಿ ಮಾತನಾಡುವೆ, ಮಹಿಳೆಯರಿಗೆ ವಿಶೇಷ ಕಾನೂನುಗಳು ಇವೆ ಇದರ ಬಗ್ಗೆ ತಿಳಿದುಕೊಳ್ಳಬೇಕು ಎಂದು ತಿಳಿಸಿದರು.

ನಿವೃತ್ತ ಪ್ರಾಚಾರ್ಯ ಹಾಗೂ ಹಿರಿಯ ನಾಗರಿಕ ವೇದಿಕೆ ಕಾರ್ಯದರ್ಶಿ ವ್ಹಿ.ಬಿ.ಮಾಳಿ ಮಾತನಾಡಿ, ಮಹಿಳಾ ಸಬಲೀಕರಣ ಎಂದರೆ ಮಹಿಳೆಯರು ತಮ್ಮ ಜೀವನದ ನಿರ್ಧಾರಗಳನ್ನು ಸ್ವತಂತ್ರವಾಗಿ ತೆಗೆದುಕೊಳ್ಳುವ, ಶಿಕ್ಷಣ ಆರ್ಥಿಕತೆ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಪುರುಷರಿಗೆ ಸಮಾನ ಅವಕಾಶಗಳನ್ನು ಪಡೆಯುವ ಮತ್ತು ಸಮಾಜದಲ್ಲಿ ಗೌರವಯುತ ಸ್ಥಾನವನ್ನು ಗಳಿಸುವ ಪ್ರಕ್ರಿಯೆಯಾಗಿದೆ. ಇದು ಲಿಂಗ



ತಾರತಮ್ಯವನ್ನು ತೊಡೆದುಹಾಕಿ, ಆತ್ಮವಿಶ್ವಾಸ, ನಾಯಕತ್ವದ ಗುಣಗಳನ್ನು ಬೆಳೆಸುವ ಮೂಲಕ ಮಹಿಳೆಯರನ್ನು ಶಸಕ್ತರನ್ನಾಗಿ ಮಾಡುವ ಜಾಗತಿಕ ಆಂದೋಲನವಾಗಿದೆ ಎಂದರು.

ಡಾ. ಸಂತೋಷ ಶೆಟ್ಟರ ಮಾತನಾಡಿ, ಮಹಿಳಾ ಸಬಲೀಕರಣ ಮತ್ತು ಶಿಕ್ಷಣ ಮಹತ್ವದ ಕುರಿತು ತಿಳಿಸಿ, ಮಹಿಳೆಯರಿಗಿರುವ ಅವಕಾಶಗಳು ಹಾಗೂ ಕಾನೂನಿನ ಬೆಂಬಲದ ಕುರಿತು ಮಹಿಳೆಯರು ತಿಳಿದುಕೊಳ್ಳಬೇಕು. ಮಹಿಳೆಯರು ಆತ್ಮವಿಶ್ವಾಸದಿಂದ ತಮ್ಮದೇ ಆದ ವ್ಯವಹಾರ ಆರಂಭಿಸಿ ಆರ್ಥಿಕ ಸ್ವಾವಲಂಬನೆ ಸಾಧಿಸಲು ಪೂರಕವಾಗಿ ಸರಕಾರ ಸಾಕಷ್ಟು ಯೋಜನೆ ಅನುಷ್ಠಾನಗೊಳಿಸುತ್ತಿದೆ ಇದರ ಸದುಪಯೋಗ ಪಡೆದುಕೊಂಡು ತಮ್ಮ ಆರ್ಥಿಕ ಗುಣಮಟ್ಟ ಹೆಚ್ಚಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಹಿಳಾ ಸಬಲೀಕರಣ ಸಂಸ್ಥೆ ಅಧ್ಯಕ್ಷ ಭಾಗ್ಯಲಕ್ಷ್ಮೀ ಮುದ್ದಾಪುರ, ಪಟ್ಟಣ ಪಂಚಾಯತ ಆರೋಗ್ಯಾಧಿಕಾರಿ ಭಾಗ್ಯಾಶ್ರೀ ಪಾಟೀಲ, ವನಜಾಕ್ಷಿ ಮಂಟೂರ, ಸವಿತಾ ಗಂಗಾವತಿ, ಲಕ್ಷ್ಮೀ ನಿಜಗುಳಿ, ಸಾರಿಕಾ ಟೊಪ್ಪಣ್ಣವರ, ಶೋಭಾ ದಾನಿ, ಜ್ಯೋತಿ ದಾನಿ, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಅನೇಕ ಮಹಿಳಾ ಸಂಘಟನೆಗಳ ಪದಾಧಿಕಾರಿಗಳು, ಹಿರಿಯ ನಾಗರಿಕ ವೇದಿಕೆ ಪದಾಧಿಕಾರಿಗಳು ಪಟ್ಟಣದ ಮುಖಂಡರು ಹಾಗೂ ಕಾಲೇಜು ವಿದ್ಯಾರ್ಥಿಗಳು, ಗುರುದತ್ತ ಅಕಾಡೆಮಿ ತರಬೇತಿ ವಿದ್ಯಾರ್ಥಿಗಳು ಇದ್ದರು.

ಮ್ಯಾರಥಾನಲ್ಲಿ ಮುಖಂಡರಾದ ಲೋಕಣ್ಣ ಕತ್ತಿ, ಕಾಶಿನಾಥ ಹುಡೇದ, ಪರಮಾನಂದ ಟೊಪ್ಪಣ್ಣವರ, ಯಮನಪ್ಪ ಹೊರಟ್ಟಿ, ಪಿಕೆಪಿಎಸ್ ಅಧ್ಯಕ್ಷ ಹೊಳಬಸು ಕಾಜಗಾರ, ಗೋವಿಂದ ಕೌಲಗಿ, ಈರಣ್ಣ ನಿಜಗುಳಿ, ಆನಂದ ಹಿರೇಮಠ, ಡಾ. ಬಸವರಾಜ ಹಿರೇಮಠ, ಮಲ್ಲಪ್ಪ ಅಂಗಡಿ, ಪ್ರಭು ಬೋಳಿಶೆಟ್ಟಿ, ಸುನೀಲ ವಸ್ತ್ರದ, ಹಿರಿಯ ನಾಗರಿಕರ ವೇದಿಕೆ ಅಧ್ಯಕ್ಷ ಬಸನಗೌಡ ಪಾಟೀಲ, ಮಾಜಿ ಸೈನಿಕ ಅಧ್ಯಕ್ಷ ಸಿ.ಎಂ.ಪಾಟೀಲ, ಭೀಮಣ್ಣ ಹುಣಶಿಕಟ್ಟಿ, ನಿಲೇಶ ಬನ್ನೂರ, ಗಿರೀಶ ಹುಕುಮನವರ, ರಫೀಕ ದಫ್ತೇದಾರ ಅನೇಕರು ಇದ್ದರು.

ಕಾಂಗ್ರೆಸ್ ಅಭ್ಯರ್ಥಿ ಗೆಲುವು ಖಚಿತ: ಮಲ್ಲಿಕಾರ್ಜುನ ಚರಂತಿಮಠ

◆**ಬಾಗಲಕೋಟೆ:** ನಾನು ಕಾಂಗ್ರೆಸ್ ಬಿಟ್ಟು ಬೇರೆ ಯಾವ ಪಕ್ಷಕ್ಕೂ ಹೋಗುವುದಿಲ್ಲ, ರಾಜ್ಯ ಬಿಜೆಪಿಯ ನಾಲ್ಕು ಜನ ನನಗೆ ದೂರವಾಣಿ ಕರೆ ಮಾಡಿ ಪಕ್ಷಕ್ಕೆ ಸೇರ್ಪಡೆ ಆಗುವ ಕುರಿತು ಚರ್ಚೆ ಮಾಡಿದ್ದರೂ ಅದಕ್ಕೆ ನಾವು ಸ್ಪಂದಿಸಿಲ್ಲ, ನಾನು ಈಗ ಕಾಂಗ್ರೆಸ್ ಪಕ್ಷದಲ್ಲಿದ್ದೇನೆ. ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸುತ್ತೇವೆ ಎಂದು ಕಾಂಗ್ರೆಸ್ ಪಕ್ಷದ ಮುಖಂಡ ಮಲ್ಲಿಕಾರ್ಜುನ ಚರಂತಿಮಠ ಹೇಳಿದರು.

ನಗರದ ಕಾಂಗ್ರೆಸ್ ಪಕ್ಷದ ಕಾರ್ಯಾಲಯದಲ್ಲಿ ಮಾತನಾಡಿದ ಅವರು, ನನ್ನನ್ನೂ ಬಿಜೆಪಿಗೆ ಕರೆಯಲು ಬಿಜೆಪಿ ನಾಯಕರು ನನ್ನ ಸ್ನೇಹಿತರನ್ನೂ ಕೂಡ ಸಂಪರ್ಕ ಮಾಡಿದ್ದಾರೆ. ನಮ್ಮ ಮನೆಗೆ ಸಿಎಂ ಬರುವ ಕಾರಣದಿಂದ ಅವರಿಗೆ ಸಮಯ ಕೊಡಲಿಲ್ಲ, ನಮ್ಮ ಮನೆಗೆ ಯಾವ ಬಿಜೆಪಿ ನಾಯಕರು ಬಂದಿಲ್ಲ, ನಮ್ಮೊಂದಿಗೆ ಇದ್ದವರು ಬಿಜೆಪಿಗೆ ಹೋಗಿದ್ದಾರೆ ಅವರಿಗೆ ಒಳ್ಳೆಯದಾಗಲಿ ಎಂದರು.

ನಾವು ಹಿಂದೂಗಳೇ ನಮ್ಮ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಜನ ಮತ ಹಾಕಿ ಗೆಲ್ಲಿಸುತ್ತಾರೆ. ನಾನು ಪಕ್ಷೇತರ ಅಭ್ಯರ್ಥಿಯಾಗಿ ನಿಂತಾಗ ಬಂದಿರುವ ಮತಗಳಿಗಿಂತ ಹೆಚ್ಚು ಮತಗಳು ನಮ್ಮ ಪಕ್ಷದ ಅಭ್ಯರ್ಥಿಗೆ ಬೀಳಲಿವೆ ಎಂದರು.

ಯುವ ಮುಖಂಡ ಸಂತೋಷ ಹೋಕ್ರಾಣಿ ಮಾತನಾಡಿ, ನಮ್ಮ ಮನೆಗೆ ಗೋವಿಂದ ಕಾರಜೋಳವರು ಇನ್ನಿತರರು



ಬಂದಿದ್ದರು. ಆದರೆ, ಕಾಂಗ್ರೆಸ್ ಬಿಟ್ಟು ಬರುವುದಿಲ್ಲವೆಂದು ತಿಳಿಸಿದ್ದೇನೆ. ಕಾಂಗ್ರೆಸ್ ಪಕ್ಷದಲ್ಲಿದ್ದೇನೆ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರ ನಡೆಸುತ್ತೇನೆ ಎಂದು ಹೇಳಿದರು.

ಮಲ್ಲಿಕಾರ್ಜುನ ಮೇಟಿ ಮಾತನಾಡಿ, ಪಕ್ಷದ ಕಾರ್ಯಕರ್ತರು ನಮ್ಮ ಸಹೋದರನನ್ನು ಗೆಲ್ಲಿಸುತ್ತಾರೆ. ನಮ್ಮ ತಂದೆಯವರು ಮಾಡಿದ ಕೆಲಸಗಳು ನಮ್ಮ ಗೆಲುವಿಗೆ ಸಹಕಾರಿಯಾಗಲಿವೆ. ನಮ್ಮ ತಂದೆಯವರು ನಿಧನದ ನಂತರ ನಮ್ಮ ಮೇಲೆ ಮತದಾರರ ಅನುಕಂಪ ಕೂಡ ಇದೆ ಎಂದು ಹೇಳಿದರು.

ಬಾಯಕ್ಕ ಮೇಟಿ ಮಾತನಾಡಿ, ನಮ್ಮಕುಟುಂಬದಲ್ಲಿ ಯಾವುದೇ ಗೊಂದಲ ಇಲ್ಲ, ನಾನು ಮತ್ತು ನಮ್ಮ ಅಣ್ಣ ನಮ್ಮ ಕಿರಿಯ ಸಹೋದರನಿಗೆ ಟಿಕೆಟ್ ಬಿಟ್ಟು ತ್ಯಾಗ ಮಾಡಿದ್ದೇವೆ. ನಮ್ಮಲ್ಲಿ ಯಾವುದೇ ಒಡಕಿಲ್ಲ, ಎಲ್ಲರೂ ನಿಂತು ಕಾಂಗ್ರೆಸ್ ಗೆಲ್ಲಿಸುತ್ತೇವೆ. ನಮ್ಮ ಸಹೋದರಿಯೂ ಕೂಡ ಪ್ರಚಾರಕ್ಕೆ ಬರುತ್ತಾರೆ. ನಮ್ಮ ತಂದೆಯವರ ಹಾಕಿಕೊಟ್ಟಿರುವ ಮಾರ್ಗದರ್ಶನದಲ್ಲಿ ನಾವು ನಡೆಯುತ್ತೇವೆ ಎಂದು ಹೇಳಿದರು.

ಗ್ಯಾಸ್ ವಿತರಣಾ ಕೇಂದ್ರದ ಮುಂದೆ ಸರದಿ ಸಾಲು

◆**ಗುಳೇದಗುಡ್ಡ:** ಇರಾನ್-ಇಸ್ರೇಲ್, ಅಮೆರಿಕಾ ಯುದ್ಧದಿಂದಾಗಿ ದೇಶ್ಯಾದ್ಯಂತ ಎಲ್‌ಪಿಜಿ ಗ್ಯಾಸ್ ಕೊರತೆಯ ಅಭಾವದ ವದಂತಿ ಹೆಚ್ಚಾಗುತ್ತಿದ್ದರಿಂದ ಗ್ಯಾಸ್ ಸಿಗುತ್ತದೋ ಇಲ್ಲೋ ಎಂದು ಭಯ ಬಿದ್ದಿರುವ ಗ್ರಾಹಕರು ಗ್ಯಾಸ್ ಪಡೆದುಕೊಳ್ಳಲು ವಿತರಣಾ ಕೇಂದ್ರಕ್ಕೆ ಮುಗಿಬೀಳುತ್ತಿದ್ದಾರೆ.

ಕಳೆದ ಒಂದು ವಾರದಿಂದಲೂ ಹೀಗೆ ಪಟ್ಟಣದಗ್ಯಾಸ್ ವಿತರಣಾಕೇಂದ್ರದಮುಂದೆ ಖಾಲಿ ಗ್ಯಾಸ್ ತೆಗೆದುಕೊಂಡು ಸರದಿಯಲ್ಲಿ ನಿಂತಿರುವ ದೃಶ್ಯ ಸಾಮಾನ್ಯವಾಗಿದೆ. ಒಲೆ ಉರಿಸಲು ಗ್ಯಾಸ್ ಸಿಲೆಂಡರ್ ಸಿಗುತ್ತದೋ ಇಲ್ಲೋ ಎಂಬ ಆತಂಕದಲ್ಲಿರುವ ಗ್ರಾಹಕರಿಗೆ ಸಾಮಾಜಿಕ ಜಾಲತಾಣದಲ್ಲಿನ ಸುದ್ದಿಗಳನ್ನು ನೋಡಿ ಗ್ಯಾಸ್ ಸಿಗುತ್ತದೋ ಇಲ್ಲೋ ಎಂದು ಇನ್ನಷ್ಟು ಆತಂತ ಪಡುತ್ತಿದ್ದಾರೆ. ಹೀಗಾಗಿ ಪಟ್ಟಣದ ಕೆಲವರು ಸೌದೆ ಒಲೆ ಹಾಗೂ ಇಂಡಕ್ಷನ್ ಒಲೆಗಳ ಬಳಕೆಗೆ ಮುಂದಾಗುತ್ತಿದ್ದಾರೆ.

ಮನೆಯಲ್ಲಿನ ಕೆಲಸ ಬಿಟ್ಟು ಗ್ಯಾಸ್

> ಗೃಹ ಬಳಕೆ ಸಿಲಿಂಡರ್ ಸರಬರಾಜು ಆಗುತ್ತಿದ್ದು, ಗ್ರಾಹಕರು ಆತಂಕ ಪಡುವ ಅವಶ್ಯಕತೆ ಇಲ್ಲ. ಗೃಹ ಬಳಕೆಯ ಸಿಲಿಂಡರಗಳ ಬುಕ್ಕಿಂಗ್ ಆಗಿ ಡಿಎಸ್‌ಸಿ ನಂಬರ್ ಬಂದವರಿಗೆ ಖಂಡಿತವಾಗಿ ಗ್ಯಾಸ್ ದೊರೆಯುತ್ತವೆ ಗ್ರಾಹಕರು ಆತಂಕ್ಕೀಡಾಗದೆ ಸಮಾದಾನವಾಗಿ ಬಂದು ಸಿಲಿಂಡರ ಪಡೆಯಬೇಕು.
>
> ■ ಎಚ್.ಕೆ. ಹಿರೇಮಠ, ಲಿಂಬಯ್ಯಸ್ವಾಮಿ ಗ್ಯಾಸ್ ಏಜೆನ್ಸಿ, ಗುಳೇದಗುಡ್ಡ

ಪಡೆಯಲು ವಿತರಣಾ ಕೇಂದ್ರದ ಮುಂದೆ ನಿಲ್ಲುವ ಸ್ಥಿತಿ ಬಂದಿದೆ. ಯುದ್ಧ ಇನ್ನೂ ಎಷ್ಟು ದಿನ ಮುಂದುವರಿಯುತ್ತದೋ, ಗ್ಯಾಸ್ ಸಿಲೆಂಡರ್ ಅಭಾವ ಇನ್ನೂ ಹೆಚ್ಚಾಗುತ್ತದೋ ಎಂದು ಸರತಿಸಾಲಿನಲ್ಲಿ ನಿಂತಿರುವ ಗ್ರಾಹಕರು ಎಂಬ ಆತಂಕ ವ್ಯಕ್ತಪಡಿಸಿದ್ದಾರೆ.



ಮಾನುಕುಲದ ಒಳಿತಿಗೆ ಪ್ರಾರ್ಥನೆ ಅವಶ್ಯ: ಸಚಿವ ತಿಮ್ಮಾಪುರ

◆**ಲೋಕಾಪುರ:** ಪಟ್ಟಣದ ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಶುಭಕೋರಿದ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರು ಮಾನವಕುಲದ ಒಳಿತಿಗೆ ಪ್ರಾರ್ಥಿಸುವುದು ಅತ್ಯಂತ ಅವಶ್ಯ ಎಂದು ತಿಳಿಸಿದರು.

ಶನಿವಾರ ರಂಜಾನ್ ಹಬ್ಬದ ಪ್ರಯುಕ್ತ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿ ಮಾತನಾಡಿ, ಮಾನವೀಯತೆಯಿಂದ ಪರಸ್ಪರ ಪ್ರೀತಿ ವಿಶ್ವಾಸದಿಂದ ಬಾಳುವುದು ಅವಶ್ಯ ಭಾರತ ದೇಶದ ವಿವಿಧ ಜಾತಿ ಸಂಸ್ಕೃತಿಗಳಿಂದ ಕೂಡಿದೆ, ವಿವಿಧತೆಯಲ್ಲಿ ಏಕತೆಯಿರುವ ನಮ್ಮ ದೇಶದಲ್ಲಿ ಎಲ್ಲರೂ ಒಟ್ಟಾಗಿ ಬಾಳಬೇಕು. ಯಾವುದೇ ಧರ್ಮವೂ ದ್ವೇಷವನ್ನು ಬೋಧಿಸುವುದಿಲ್ಲ ಎಲ್ಲ ಧರ್ಮಗಳೂ ಪ್ರೀತಿಯನ್ನು ಬೋಧಿಸುತ್ತದೆ ಎಂದರು. ಜಿಲ್ಲಾ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಉಪಾಧ್ಯಕ್ಷ ರಫೀಕ ಬೈರಕದಾರ, ಅಂಜುಮನ್-ಎ-ಇಸ್ಲಾಂ ಕಮಿಟಿ ಅಧ್ಯಕ್ಷ ಹಸನಡೋಂಗ್ರಿ ಮಹಾಲಿಂಗಪೂರ ಮಾತನಾಡಿದರು.

ಅಂಜುಮನ್ ಇಸ್ಲಾಂ ಕಮೀಟಿಯಿಂದ ಅಬಕಾರಿ ಸಚಿವರಿಗೆ ಸನ್ಮಾನ ಮಾಡಲಾಯಿತು. ಮುಧೋಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸದುಗೌಡ ಪಾಟೀಲ, ಲೋಕಾಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶೋಕ ಕಿವಡಿ, ಬಿಡಿಸಿಸಿ ಬ್ಯಾಂಕ ಉಪಾಧ್ಯಕ್ಷ ಶಿವಾನಂದ ಉದಪುಡಿ, ಹೊಳಬಸು ದಂಡಿನ,



ಮುತ್ತಪ್ಪ ಚೌಧರಿ, ಅಲ್ಲಾಸಾಬ ಯಾದವಾಡ, ಸಿದ್ದು ಕಿಲಾರಿ, ಅಂಜುಮನ್ ಸಂಸ್ಥೆಯ ಉಪಾಧ್ಯಕ್ಷ ಸೈಯದ ನಧಾಪ, ಕಾರ್ಯದರ್ಶಿ ಸಾದೀಕ ಪಠಾಣ, ಖಜಾಂಜಿ ರಫೀಕ ಗುಳೆದಗುಡ್ಡ ಸದಸ್ಯರಾದ ಅಬ್ದುಲರೆಹಮಾನ್ ತೊರಗಲ್, ಗುಲಾಬಸಾಬ ಅತ್ತಾರ, ಕುತುಬು ಅತ್ತಾರ, ಶಬ್ಬೀರ ಚೌಧರಿ, ಸೈಯದ ನಧಾಪ, ಸೈಯದ ಗುದಗಿ, ಸೈಯದ ಚಿತ್ರಭಾನುಕೋಟಿ, ರಿಯಾಜ ಮಕಾನದಾರ, ನಜೀರ ತೊರಗಲ್, ಅಬ್ದುಲ್ ಮುಲ್ಲಾ, ಮೈಬೂಬ ಜೀರಗಾಳ, ಲಾಲಸಾಬ ನಧಾಪ, ಸಮಾಜದ ಯುವ ಮುಖಂಡರಾದ ನಬಿ ಇಂಗಳಗಿ ಮೈಬೂಬ ರಾಮದುರ್ಗ, ಸುಲ್ತಾನ ಕಲಾದಗಿ, ರಫೀಕ ಕಲಾದಗಿ, ಲಾಲಸಾಬ ಗುದಗಿ, ಪತ್ರಕರ್ತ ಸಲೀಂ ಕೊಪ್ಪದ, ಮುಸ್ಲಿಂ ಸಮಾಜದ ಮುಖಂಡರು ಇದ್ದರು.

ಬಿಜೆಪಿಗೆ ಬರುವವರನ್ನು ಪಕ್ಷ ಗೌರವದಿಂದ ನಡೆಸಿಕೊಳ್ಳಲಿದೆ : ವಿಜಯೇಂದ್ರ

◆**ಬಾಗಲಕೋಟೆ:** ಬಿಜೆಪಿಯ ಸಿದ್ಧಾಂತಗಳನ್ನು ಒಪ್ಪಿಕೊಂಡು ಪಕ್ಷಕ್ಕೆ ಬರುವ ಪ್ರತಿಯೊಬ್ಬರನ್ನು ಪಕ್ಷದಲ್ಲಿ ಗೌರವದಿಂದ ನಡೆಸಿಕೊಳ್ಳಲಿದೆ. ಗೌರವದೊಂದಿಗೆ ನಮ್ಮ ಜತೆಗೆ ಪಕ್ಷವನ್ನು ಮತ್ತಷ್ಟು ಗಟ್ಟಿಗೊಳ್ಳಲು ಸಂಘಟನೆಯಲ್ಲಿ ತೊಡಗಿಸಿಕೊಳ್ಳುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ನವನಗರದ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ಡಾ.ದೇವರಾಜ ಪಾಟೀಲ, ದುಂಡಪ್ಪ ಏಳೆಮ್ಮಿ, ಡಿ.ಬಿ.ಸಿದ್ದಾಪುರ, ಬಸವರಾಜ ಕಟಗೇರಿ ಸೇರಿದಂತೆ ಅನೇಕರನ್ನು ಪಕ್ಷಕ್ಕ ಬರಮಾಡಿಕೊಂಡು ಮಾತನಾಡಿ, ಬಾಗಲಕೋಟೆಯಲ್ಲಿ ಪಕ್ಷದ ಹಿರಿಯರಾದ ವೀರಣ್ಣ ಚರಂತಿಮಠವರು ಸ್ಪರ್ಧೆ ಮಾಡಿದ್ದು ಮಾ.23ರಂದು ನಡೆಯುವ ನಾಮಪತ್ರ ಸಲ್ಲಿಕೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಭಾಗವಹಿಸಿ ಬಿಜೆಪಿಯನ್ನು ಬೆಂಬಲಿಸಲು ಸಂಕಲ್ಪ ಮಾಡಬೇಕು ಎಂದು ಕಾರ್ಯಕರ್ತರಿಗೆ ಹೇಳಿದರು.

ಕಾರ್ಯಕರ್ತರು ಮತದಾನ ಆಗುವವರೆಗೂ ಮೈಮರೆಯದೇ ಪಕ್ಷದ ಸಂಘಟನೆಗೆ ಒತ್ತು ನೀಡಬೇಕು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷದ ಸಂಘಟನೆಯಲ್ಲಿ ಕೆಲಸ ಮಾಡಿದರೆ ವೀರಣ್ಣ ಚರಂತಿಮಠರು ದೊಡ್ಡಮಟ್ಟದ ಗೆಲುವು ಪಡೆಯಲಿದ್ದಾರೆ ಎಂದರು. ಪಕ್ಷದ ಸಿದ್ಧಾಂತ ಒಪ್ಪಿಕೊಂಡು ಬರುವವರಿಗೆ ಪಕ್ಷದಲ್ಲಿ ಗೌರವ ಕೊಡಲಾಗುತ್ತಿದೆ. ಮುಂದಿನ ದಿನ ಹಲವುನಾಯಕರು, ಕಾರ್ಯಕರ್ತರು ಬಿಜೆಪಿಗೆ ಸೇರ್ಪಡೆಯಾಗಲಿದ್ದಾರೆ ಎಂದರು.

ಪಕ್ಷಕ್ಕೆ ಸೇರ್ಪಡೆಯಾದವರು: ಬಾಗಲಕೋಟೆಯ ವೈದ್ಯರು, ಕುರುಬ ಸಮಾಜದ



ಮುಖಂಡ ಡಾ.ದೇವರಾಜ ಪಾಟೀಲ, ಕಾಂಗ್ರೆಸ್ ಪಕ್ಷದ ಮುಖಂಡ ದುಂಡಪ್ಪ ಏಳೆಮ್ಮಿ, ಕುರುಬ ಸಮಾಜದ ಜಿಲ್ಲಾಧ್ಯಕ್ಷ ಡಿ.ಬಿ.ಸಿದ್ದಾಪುರ, ಬಸವರಾಜ ಕಟಗೇರಿ, ಅರುಣ್ ಲೋಕಾಪುರ, ಚನ್ನಪ್ಪ ಮಾಚಕನೂರ, ರಾಹುಲ್ ಚವ್ಹಾಣ್, ಮಂಜುನಾಥ ಯಲ್ಲಾಪುರ, ಸಿದ್ದು ಯರಮಲ್ಲ, ಗಿಡ್ಡಪ್ಪ ಬಂಡಿವಡ್ಡರ, ಸಿದ್ಧರಾಮಯ್ಯ ಹಿರೇಮಠ, ಬಸು ಸೂಳಿಕೇರಿ, ಗಣೇಶ ಸುರುಪುರ, ಮಲ್ಲು ದೇಸಾಯಿ, ಶಿವಾನಂದ ಶೆಟ್ಟಿ ಸೇರಿದಂತೆ ಅನೇಕರು ಬಿಜೆಪಿಗೆ ಸೇರ್ಪಡೆಯಾರು.

ಸಂಸದ ಗೋವಿಂದ ಕಾರಜೋಳ, ರಾಜ್ಯ ಸಭೆ ಸದಸ್ಯ ನಾರಾಯಣಸಾ ಭಾಂಡಗೆ, ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ, ಮಾಜಿ ಶಾಸಕ ಪಿ.ರಾಜೀವ, ಎಂ.ಕೆ.ಪಟ್ಟಣಶೆಟ್ಟಿ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಡಾ.ಎಂ.ಎಸ್ .ದಡ್ಡೇನವರ, ಎಂ.ಡಿ.ಲಕ್ಷ್ಮೀನಾರಾಯಣ, ಮಲ್ಲಯ್ಯ ಮೂಗನೂರಮಠ ಇದ್ದರು.

ಉಪ ಚುನಾವಣೆ : ಪಿಆರ್‌ಓ, ಎಪಿಆರ್‌ಓಗಳಿಗೆ ತರಬೇತಿ

ತರಬೇತಿ ಕೇಂದ್ರಕ್ಕೆ ಡಿಸಿ, ಸಾಮಾನ್ಯ ವೀಕ್ಷಕರ ಭೇಟಿ

◆**ಬಾಗಲಕೋಟೆ:** ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ ಹಿನ್ನಲೆಯಲ್ಲಿ ಪ್ರಿಸೆಂಡಿಂಗ್ ಅಧಿಕಾರಿ ಮತ್ತು ಅಸಿಸ್ಟಂಟ್ ಪ್ರಿಸೆಂಡಿಂಗ್ ಅಧಿಕಾರಿಗಳಿಗೆ ಪ್ರಥಮ ಹಂತದ ತರಬೇತಿ ಕಾರ್ಯಕ್ರಮ ಭಾನುವಾರ ಜರುಗಿತು.

ನವನಗರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದು, ಪಿಆರ್‌ಓ ಮತ್ತು ಎಪಿಆರ್ ಓಗಳ ತರಬೇತಿ ಕೇಂದ್ರಕ್ಕೆ ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ಹಾಗೂ ಸಾಮಾನ್ಯ ವೀಕ್ಷಕರಾದ ಪಾರುಲ್ ಪಟವಾರಿ ಭೇಟಿ ನೀಡಿ ತರಬೇತಿ ಪ್ರಗತಿಯನ್ನು ಪರಿಶೀಲಿಸಿದರು. ಮತದಾನದ ಪ್ರಕ್ರಿಯೆ, ಇವಿಎಂ ಹಾಗೂ ವಿವಿಪ್ಯಾಟ್ ಉಪಯೋಗ, ಮತದಾರರ ಗುರುತಿನ ಪರಿಶೀಲನೆ ಸೇರಿದಂತೆ ವಿವಿಧ ಪ್ರಮುಖ ಅಂಶಗಳ ಕುರಿತು ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಲಾಯಿತು.

ಚುನಾವಣಾ ಕರ್ತವ್ಯಗಳನ್ನು



ಜವಾಬ್ದಾರಿಯಿಂದಹಾಗೂನಿಷ್ಠೆಯಿಂದ ನಿರ್ವಹಿಸಬೇಕು. ಮತಗಟ್ಟೆ ಅಧಿಕಾರಿಗಳ ಕಾರ್ಯ ನಿರ್ವಹಣೆಯನ್ನು ಪರಿಣಾಮಕಾರಿ ಯಾಗಿ ನಡೆಸುವ ಉದ್ದೇಶದಿಂದ ತರಬೇತಿ ನೀಡಲಾಗುತ್ತಿದೆ. ತರಬೇತಿಯಲ್ಲಿ ಅಣಕು ಮತದಾನ ಪ್ರಕ್ರಿಯೆ ನಡೆಸಲಾಗುತ್ತಿದ್ದು, ಎಲ್ಲ ಪ್ರಿಸೆಂಡಿಂಗ್ ಅಧಿಕಾರಿಗಳು ತರಬೇತಿಯಲ್ಲಿ ಹೇಳಿಕೊಟ್ಟ ವಿಷಯಗಳನ್ನು ಸಮರ್ಪಕವಾಗಿ ಅರ್ಥ ಮಾಡಿಕೊಂಡು ಚುನಾವಣೆ ಯನ್ನು ಶಾಂತಿಯುತ 'ವಾಗಿ ಹಾಗೂ ಪಾರದರ್ಶಕವಾಗಿ ನಡೆಸಲು ಸಹಕರಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ಅವರು ತಿಳಿಸಿದರು.ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವ ಸ್ವಾಮಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ ಸೇರಿದಂತೆ ಇತರರು ಇದ್ದರು.

ಇಂದು ದೇವಾಂಗ ಜ್ಯೋತಿ ಪ್ರಚಾರಕ್ಕೆ ಚಾಲನೆ

◆**ಬಾದಾಮಿ:** ಸಮೀಪದ ಬನಶಂಕರಿ ದೇವಾಂಗ ಶಾಖಾಮಠದಲ್ಲಿ ಮೇ 9 ಮತ್ತು 10 ರಂದು ಹಂಪಿ ಹೇಮಕೂಟ ಶ್ರೀ ಗಾಯತ್ರಿಪೀಠ ಮಹಾಸಂಸ್ಥಾನ ಟ್ರಸ್ಟ್ ಹಾಗೂ ರಾಜ್ಯ ದೇವಾಂಗ ಸಂಘದ ಸಹಯೋಗದಲ್ಲಿ ನಡೆಯಲಿರುವ ಅಖಿಲ ಭಾರತ ದೇವಾಂಗ(ನೇಕಾರ) ಜಾಗೃತ ಸಮಾವೇಶ ಮತ್ತು ಶ್ರೀ



ದಯಾನಂದ ಪುರಿ ಮಹಾಸ್ವಾಮಿಗಳ 36 ನೇ ವರ್ಷದ ಪಟ್ಟಾಭಿಷೇಕ ಹಾಗೂ ತುಲಾಭಾರ ಸಮಾರಂಭದ ಅಂಗವಾಗಿ ಮಾ.23 ಬೆಳಿಗ್ಗೆ 9 ಗಂಟೆಗೆ ದೇವರ ದಾಸಿಮಯ್ಯ ಜಯಂತಿ ಹಾಗೂ ಅಖಿಲ ಭಾರತ ದೇವಾಂಗ(ನೇಕಾರ) ಜಾಗೃತ ಸಮಾವೇಶದ ದೇವಾಂಗ ಜ್ಯೋತಿ ನಾಲ್ಕು ವಿಭಾಗವಾರು ಪ್ರಚಾರ ವಾಹನದ ಉದ್ಘಾಟನೆಯನ್ನು ಪರಮ ಪೂಜ್ಯ ಜಗದ್ಗುರು ದಯಾನಂದಪುರಿ ಶ್ರೀಗಳ ಅಮೃತ ಹಸ್ತದಿಂದ ನೆರವೇರಲಿದ್ದು, ಕಾರ್ಯಕ್ರಮಕ್ಕೆ ರಾಜ್ಯದ ಮುಂಚೂಣಿ ಘಟಕಗಳ ದೇವಾಂಗ ಮುಖಂಡರು, ಎಲ್ಲಾ ದೇವಾಂಗ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಅಖಿಲ ಭಾರತ ದೇವಾಂಗ(ನೇಕಾರ) ಜಾಗೃತ ಸಮಾವೇಶ ಪರಮ ಪೂಜ್ಯ ಜಗದ್ಗುರು ದಯಾನಂದಪುರಿ ಶ್ರೀಗಳ 36 ನೇ ವರ್ಷದ ಪಟ್ಟಾಭಿಷೇಕ ಮಹೋತ್ಸವ ಸಮಿತಿಯ ಅಧ್ಯಕ್ಷ ರವೀಂದ್ರ ಪಿ ಕಲಬುರ್ಗಿ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

ಕಾಂಗ್ರೆಸ್ ಮುಖಂಡರು ಬಿಜೆಪಿಗೆ ಸೇರ್ಪಡೆ

◆**ಬಾಗಲಕೋಟೆ:** ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ದೇಶಕ್ಕೆ ಒಂದು ಭರವಸೆಯಾಗಿದ್ದು, ಬಾಗಲಕೋಟೆ ಸರ್ವತೋಮುಖ ಅಭಿವೃದ್ಧಿಗೆವೀರಣ್ಣ ಚರಂತಿಮಠರು ಶಾಸಕರಾಗುವುದು ಮುಖ್ಯ ಎಂದು ನೀಲಾನಗರದ ಕಾಂಗ್ರೆಸ್ ಮುಖಂಡರು ಭಾನುವಾರ ಶಿವಾನಂದ ಜಿನ್‌ನಲ್ಲಿರುವ ಭಾರತೀಯ ಜನತಾ ಪಾರ್ಟಿ ಕಾರ್ಯಾಲಯದಲ್ಲಿ ರಂಗನಗೌಡ ಗೌಡರ ಹಾಗೂ ಸೋಮಸಿಂಗ್ ಬಾಬು ಲಮಾಣಿ ಅವರ ನೇತೃತ್ವದಲ್ಲಿ ಬಿಜೆಪಿ ಸೇರ್ಪಡೆಗೊಂಡರು.

ಜಿಲ್ಲಾ ಪಂಚಾಯತ ಮಾಜಿ ಸದಸ್ಯ ರಂಗನಗೌಡ ಗೌಡರ ಮಾತನಾಡಿ, ಬಾಗಲಕೋಟೆ ಇಷ್ಟೊಂದು ಅಭಿವೃದ್ಧಿ ಹೊಂದಿರುವುದಕ್ಕೆ ವೀರಣ್ಣ ಚರಂತಿಮಠರೇ ಕಾರಣ, ಅವರು ಶಾಸಕರಾದರೆ ಎಲ್ಲ ಮುಳಗಡೆ ಸಮಸ್ಯೆಗಳು ಪರಿಹಾರವಾಗುತ್ತವೆ ಎಂದರು.



ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ, ಬಾಗಲಕೋಟೆ ಜನ ಅಭಿವೃದ್ಧಿ ಪರವಾಗಿದ್ದು, ಗ್ರಾಮೀಣ ಭಾಗ ಅಭಿವೃದ್ಧಿಯಾದರೆ ನಗರ ಅಭಿವೃದ್ಧಿಯಾಗುತ್ತದೆ, ನಗರ ಅಭಿವೃದ್ಧಿಯಾದರೆ ನಾಡು, ದೇಶ ಅಭಿವೃದ್ಧಿಗೊಳ್ಳುತ್ತದೆ. ವಿಕಸಿತ ಭಾರತವನ್ನಾಗಿಸಲು ಎಲ್ಲರೂ ಕೈಜೋಡಿಸೋಣ ಎಂದರು.

ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೋಣ್ಣೂರ, ಕಲ್ಲಪ್ಪ ಭಗವತಿ, ಪ್ರಭುಸ್ವಾಮಿ ಸರಗಣಾಚಾರಿ, ಜಿ.ಎನ್.ಪಾಟೀಲ ರಾಜು ಮುದೆನೂರ, ದೀಲಿಪ್ ರಾಠೋಡ, ದೀಲಿಪ ಚವ್ಹಾಣ, ಗಿರೀಶ ರಾಠೋಡ, ಇದ್ದರು.

ಪಕ್ಷಕ್ಕೆ ಸೇರ್ಪಡೆ: ರಾಮು ಕಟ್ಟಿಮನಿ, ಕೃಷ್ಣ ಕಟ್ಟಿಮನಿ, ಶಂಕರ ಕಟ್ಟಿಮನಿ, ರವಿ ಕಟ್ಟಿಮನಿ, ಪುಂಡಲಿಕ ಕಟ್ಟಿಮನಿ, ಪಾಂಡಪ್ಪ ಕಟಿಮನಿ, ಪಾಂಡಪ್ಪ ಕಟ್ಟಿಮನಿ, ಸುಂದರ ಕಟ್ಟಿಮನಿ,ರಾಜು ಹಾನಾಪುರ, ವೆಂಕಟೇಶ ದೊಡಮನಿ ಸೇರಿದಂತೆ 30ಕ್ಕೂ ಹೆಚ್ಚು ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿಗೆ ಸೇರ್ಪಡೆಗೊಂಡರು.

ಕಿರುಸುದ್ದಿ

ಇಂದಿನಿಂದ ಪುರಾಣ ಪ್ರವಚನ ಪ್ರಾರಂಭೋತ್ಸವ



ಸಿಂದಗಿ: ನಗರದ ಆರಾಧ್ಯ ದೈವ ಮಲ್ಲಿಕಾರ್ಜುನ ಸ್ವಾಮಿಯ ಜಾತ್ರಾ ಮಹೋತ್ಸವ ನಿಮಿತ್ಯ ಶ್ರೀಶೈಲ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಪುರಾಣ ಪ್ರವಚನ ಪ್ರಾರಂಭೋತ್ಸವ ಸಮಾರಂಭವು ಮಾ.23 ರಿಂದ ಏ.9ರವರೆಗೆ ಪತ್ರಿನಿತ್ಯ ಸಂಜೆ 7 ಗಂಟೆಗೆ ನಂದಿಕೋಲ ಬಡಾವಣೆಯ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಜರುಗಲಿದೆ ಎಂದು ಮಲ್ಲಿಕಾರ್ಜುನ ದೇವಸ್ಥಾನ ಕಮೀಟಿ ಅಧ್ಯಕ್ಷ ಕೊಡ್ಲಯ್ಯ ನಂದಿಕೋಲ ತಿಳಿಸಿದ್ದಾರೆ. ಕಾರ್ಯಕ್ರಮದ ಪಾವನ ಸಾನಿಧ್ಯವನ್ನು ಸಾರಂಗಮಠದ ಡಾ. ಪ್ರಭುಸಾರಂಗದೇವ ಶಿವಾಚಾರ್ಯರು ವಹಿಸಲಿದ್ದಾರೆ. ಕಾರ್ಯಕ್ರಮದ ಉದ್ಘಾಟನೆಯನ್ನು ಮಾಗಣಗೇರಾ ಬೃಹನ್ಮಠದ ವಿಶ್ವಾರಾಧ್ಯ ಶಿವಾಚಾರ್ಯರು ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶರಣ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಚನ್ನಪ್ಪ ಕತ್ತಿ ಅತಿಥಿಗಳಾಗಿ ಅಖಿಲ ಭಾರತ ವಿರಶೈವ ಮಹಾಸಭಾ ತಾಲೂಕಾಧ್ಯಕ್ಷ ಅಶೋಕ ವಾರದ, ಗಣ್ಯ ವ್ಯಾಪಾರಸ್ಥರಾದ ಪಂಡಿತರಾವ್ ಕುಲಕರ್ಣಿ ಸೇರಿದಂತೆ ಅನೇಕರು ಇರಲಿದ್ದಾರೆ. ಮಲ್ಲಿಕಾರ್ಜುನ ಸ್ವಾಮಿಯ ಪುರಾಣವನ್ನು ಸಾರಂಗಮಠದ ಉತ್ತರಾಧಿಕಾರಿ ಡಾ.ವಿಶ್ವಪ್ರಭುದೇವ ಶಿವಾಚಾರ್ಯರು ಪ್ರವಚನ ಮಾಡಲಿದ್ದಾರೆ. ಸಂಗೀತ ಸೇವಯನ್ನು ಸಂಗೀತ ಶಿಕ್ಷಕ ರೇಣುಕ ಗವಾಯಿಗಳು (ಕೆರೂಟಗಿ), ತಬಲಾ ಸೇವಯನ್ನು ಜೇವರ್ಗಿಯ ಮಹಾಂತೇಶ ಕಾಳಗಿ ಸಲ್ಲಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು.

ಬೃಹತ್ ಪ್ರತಿಭಟನೆ ನಾಳೆ

ಸಿಂದಗಿ: ಒಳಮೀಸಲಾತಿ ರೋಸ್ಟರ್ ಹಂಚಿಕೆ ವಿರೋಧಿಸಿ, ಹಳೆಯ ನಿಯಮದಂತೆ ನೇಮಕಾತಿ ನಡೆಸಲು ಒತ್ತಾಯಿಸಿ ಬಂಜಾರ, ಭೋವಿ, ಕೊರಮ, ಕೊರಚ,ಚರ್ಮಕಾರ, ಸೂಕ್ಷ್ಮ ಪರಿಶಿಷ್ಟ ಜಾತಿಗಳ ರಾಜ್ಯ ಮಹಾ ಒಕ್ಕೂಟದಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮಾ. 24ರಂದು ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿಯವರ ನೇತೃತ್ವದಲ್ಲಿ ನಡೆಯುವ ಬೃಹತ್ ಪ್ರತಿಭಟನೆಯಲ್ಲಿ ಸಿಂದಗಿ ತಾಲೂಕಿನ ಬಂಜಾರ, ಭೋವಿ, ಕೊರಮ, ಕೊರಚ, ಚರ್ಮಕಾರ ಜಾತಿಗಳ ಸಮುದಾಯದ ಜನರು ಸ್ವಯಂ ಪ್ರೇರಿತರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗ ವಹಿಸುವಂತೆ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ (ಅ) ರಾಜ್ಯ ಸಮಿತಿಯ ಮುಖಂಡ ಪಂಡಿತ ಯಂಪೂರೆ ಮನವಿ ಮಾಡಿಕೊಂಡಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕ ನೀಡಿದ ಅವರು, ಒಳ ಮೀಸಲಾತಿ ಕುರಿತು ನಾಗಮೋಹನ್‌ದಾಸ್ ಆಯೋಗ ನೀಡಿರುವ ವರದಿ ಅವೈಜ್ಞಾನಿಕವಾಗಿದ್ದು ಒಳ ಮೀಸಲಾತಿ ಕುರಿತು ನಾಗಮೋಹನ್‌ದಾಸ್ ಆಯೋಗದ ವರದಿ ಅವೈಜ್ಞಾನಿಕವಾಗಿದ್ದು ಇದನ್ನು ರಾಜ್ಯ ಸರ್ಕಾರ ಇದನ್ನು ತಿರಸ್ಕಾರ ಮಾಡಿ ಎಲ್ಲ ಸಮುದಾಯದ ಹಿತಾಸಕ್ತಿಗಾಗಿ ನಮ್ಮ ಮಕ್ಕಳ ಮುಂದಿನ ಭವಿಷ್ಯಕ್ಕಾಗಿ ಮಾಡುವ ಹೋರಾಟ ಆಗಿರುವುದರಿಂದ ಹೋರಾಟದಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದ್ದಾರೆ.

5 ಗ್ರಾಮಗಳಿಂದ ದೇವರ ಪಲ್ಲಕ್ಕಿಗಳ ಅದ್ದೂರಿ ಭೇಟಿ



ಝುಳಕಿ: ಬೀರಲಿಂಗೇಶ್ವರ ದೇವರ ಪಲ್ಲಕ್ಕಿಗಳ ಅದ್ದೂರಿಯಾಗಿ ಭೇಟಿ ಜರಗಿದವು. ಸ್ಥಳೀಯ ಬೀರಲಿಂಗೇಶ್ವರ ದೇವರ ಜಾತ್ರಾಮಹೋತ್ಸವ ಪ್ರಯುಕ್ತ ಲೋಣಿ ಬಿಕೆ ಪಲ್ಲಕ್ಕಿ, ಗೋಟ್ಯಾಳ, ಮೈಲಾರ, ಬಳ್ಳೊಳ್ಳಿ, ಹಾಗೂ ಚೇವೂರ ಗ್ರಾಮಳಿಂದ ಬಂದ ದೇವರ ಪಲ್ಲಕ್ಕಿಗಳ ವಾದ್ಯ ವೈಭವಗಳನ್ನೊಂದಿಗೆ ಅದ್ದೂರಿಯಾಗಿ ಭೇಟಿ ಜರಗಿತು. ಭಕ್ತರಿಂದ ದೇವರ ಪಲ್ಲಕ್ಕಿಗಳ ಮೇಲೆ ಭಂಡಾರ, ಹಾಗೂ ಹೂವೂ ಹಾರಿಸುವ ಮೂಲಕ ಭಕ್ತರು ತಮ್ಮ ಭಕ್ತಿಯ ಹರಕೆಯನ್ನು ತೀರಿಸಿದರು.

ಈ ಸಂದರ್ಭದಲ್ಲಿ ಜಾತ್ರಾ ಕಮಿಟಿ ಅಧ್ಯಕ್ಷ ಭೀರಣ್ಣಗೌಡ ಬಗಲಿ, ಶ್ರೀಶೈಲ ಸ್ವಾಮೀಜಿ ಹಿರೇಮಠ, ಶಿವಾನಂದ ಪೂಜಾರಿ, ಅಶೋಕ ಸಾಹುಕಾರ ಕಾಪಸೆ, ಅಣ್ಣಪ್ಪ ತಳವಾರ, ಸಣ್ಣಪ್ಪ ತಳವಾರ, ಜಿ.ಡಿ. ಹೂಗಾರ ಸಂಜೀವ ಝುಳಕಿಕರ, ರಾಘವೇಂದ್ರ ಸಾಹುಕಾರ ಕಾಪಸೆ, ವಿನೋದ ಶಿರಶ್ಯಾಡ, ಮಾಳಪ್ಪ ಉಮರಾಣಿ, ರಮೇಶಗೌಡ ಪಾಟೀಲ, ಶಂಕರಗೌಡ ಬಿರಾದಾರ, ಹಣಮಂತ ಕೋಳಿ, ತುಕುರಾಮ ಕಾಗರ, ವಿಠ್ಠಲ ಸಾಹುಕಾರ ಮಾನಹಳ್ಳಿ, ಸಮಸ್ತ ಗ್ರಾಮಸ್ಥರು, ಸುತ್ತಮುತ್ತಲಿನ ಗ್ರಾಮಸ್ಥರು ಇದ್ದರು.



ವಿಜಯಪುರ: ಜಿಲ್ಲೆ ಸುಕ್ಷೇತ್ರ ಕತಕನಹಳ್ಳಿ (ಕತ್ನಳ್ಳಿ) ಗ್ರಾಮದಲ್ಲಿ ಚಕ್ರವರ್ತಿ ಶ್ರೀ ಸದಾಶಿವ ಸ್ವಾಮೀಜಿಯವರ ರಥೋತ್ಸವ ಕಾರ್ಯಕ್ರಮ ನೆರವೇರಿತು. ಕಾರ್ಯಕ್ರಮದಲ್ಲಿ ಪೂಜ್ಯರು ಜನಪ್ರತಿನಿಧಿಗಳು ವಿವಿಧ ಸಂಘ ಸಂಸ್ಥೆಯ ಪದಾಧಿಕಾರಿಗಳು ಸುಕ್ಷೇತ್ರದ ಸುತ್ತಲಿನ ಗ್ರಾಮದ ತಾಯಂದಿರು ಹಾಗೂ ಸಾವಿರಾರು ಭಕ್ತಾದಿಗಳು, ಭಾಗವಹಿಸಿದ್ದರು.

ಜಿಲ್ಲಾ ಮಟ್ಟದ ಬೇಸಿಗೆ ಶಿಬಿರ ಇಂದು

ಮುದ್ದೇಬಿಹಾಳ: ಜಿಲ್ಲಾ ಮಟ್ಟದ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ವತಿಯಿಂದ ರೋವರ್ಸ್ ಮತ್ತು ರೇಂಜರ್ಸ್‌ಗಳ ಬೇಸಿಗೆ ಶಿಬಿರ ಹಾಗೂ ಶಿಬಿರಾಗ್ನಿ ಕಾರ್ಯಕ್ರಮ ಮಾ.23 ಮತ್ತು24ರಂದು ಸ್ಥಳೀಯ ಶಾ ಸೊಗಮಲ್ ಪೀರಾಜಿ ಓಸ್ವಾಲ್ ಸರಕಾರಿ ಪದವಿ ಕಾಲೇಜಿನಲ್ಲಿ ಆಯೋಜಿಸಲಾಗಿದೆ. ಮಾ.23ರ ಬೆಳಗ್ಗೆ 10ರಿಂದ ಪ್ರಾರಂಭವಾಗುವ ಶಿಬಿರದಲ್ಲಿ ವಿದ್ಯಾರ್ಥಿಗಳ ನೋಂದಣಿ, ಮಧ್ಯಾಹ್ನ 2.30 ಗಂಟೆಗೆ ಧ್ವಜಾರೋಹಣ 3 ಗಂಟೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಜಿಲ್ಲಾ ಸ್ಕೌಟ್ ಗೈಡ್ಸ್ ಅಧ್ಯಕ್ಷರಾದ ಸತೀಶ್ ಜಿಗಜಿನಿ ಮುಖ್ಯ ಅತಿಥಿಗಳಾಗಿ. ಶಾಸಕ ಸಿ ಎಸ್ ನಾಡಗೌಡ ಕಾರ್ಯಕ್ರಮ ಉದ್ಘಾಟಿಸುವರು. ಸಂಜೆ 5 ಗಂಟೆಗೆ ಶಿಬಿರದ ಉದ್ಘಾಟನೆ, ಸಂಜೆ 6.30 ಗಂಟೆಗೆ ಶಿಬಿರಾರ್ಥಿಗಳಿಂದ ಊರಿನ ಪ್ರಮುಖ ಬೀದಿಗಳಲ್ಲಿ ಪಥ ಸಂಚಲನ, ಹೊರಾಂಗಣ ಆಟಗಳು ರಾತ್ರಿ 8.30 ಶಿಬಿರಾಗ್ನಿ ಕಾರ್ಯಕ್ರಮಗಳು ಜರುಗಲಿವೆ. ಮಂಗಳವಾರ ಬೆಳಿಗ್ಗೆ 5.30 ರಿಂದ ಸುಪ್ರಭಾತ ವ್ಯಾಯಾಮ, 7.30 ಕ್ಕೆ ಸರ್ವಧರ್ಮ ಪ್ರಾರ್ಥನೆ, ಮಧ್ಯಾಹ್ನ 2:30ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ಉಳಿದಂತೆ ಜಿಲ್ಲಾ ಮುಖ್ಯ ಆಯುಕ್ತ ಸಿದ್ದಣ್ಣ ಎಂ ಸಕ್ರಿ, ಜಿಲ್ಲಾ ತರಬೇತಿ ಆಯುಕ್ತ ಎಸ್ ಬೊಮ್ಮನಹಳ್ಳಿ, ಜಿಲ್ಲಾ ಕಾರ್ಯದರ್ಶಿ ಪಿಎಸ್ ಕುಂಬಾರ, ಚೇರ್ಮನ್ ಪ್ರೊ.ಎಸ್.ಎಸ್. ಹೂಗಾರ, ಪ್ರಾಂಶುಪಾಲ ಡಾ. ಎಚ ಎ ಕಟಗೂರು ಭಾಗವಹಿಸುವರು ಎಂದು ಕಾಲೇಜು ಘಟಕದ ರೋವರ್ಸ್ ಮತ್ತು ರೇಂಜರ್ಸ್ ಲೀಡರ್ಗಳಾದ ಪ್ರೊ. ಮೌನೇಶ್, ಪ್ರೊ. ವನಿತಾ ದೊಡ್ಡಮನಿ ತಿಳಿಸಿದ್ದಾರೆ.



ಝುಳಕಿ: ಸಮೀಪದ ಅರ್ಜನಾಳ ಗ್ರಾಮದ ಭೀರಲಿಂಗೇಶ್ವರ ದೇವರ ಜಾತ್ರೆ ಅಂಗವಾಗಿ ಯುಗಾದಿ ಅಮವಾಸ್ಯೆರಂದು ಬೆಳಗ್ಗೆ ಪುಷ್ಪ ಅಲಂಕಾರ, ಮಹಾಪೂಜೆ ಅಭಿಷೇಕ ವಾದ್ಯವಾಲಗದೊಂದಿಗೆ ಮಹಾಪೂಜೆ, ಡೋಳ್ಳಿನ ಪದಗಳು ಜರಗಿದವು. ಕಮೀಟಿ ಅಧ್ಯಕ್ಷ ಮಹಾಂತೇಶ ಪೂಜಾರಿ, ಚಂದ್ರಶೇಖರ್ ಅಂಜುಟಗಿ, ಪಂಡಿತ ಕ್ಷತ್ರಿ, ಪಂಚಪ್ಪ ಗೋಡಿಹಾಳ,ಅಕ್ಬರ ಮುಜಾವಾರ, ರಾಜು ಬೂದಿಹಾಳ, ಖಾಜೆಸಾಬ ಟಾಕಳಿ, ಮಹೀಂದ್ರ ಪೂಜಾರಿ, ಮಾದೇವ ಪೂಜಾರಿ, ರಮೇಶ ಮೈಲ, ಸಿದ್ದಾರಾಮ ಮೈಲ, ಉಪಸ್ಥಿತರಿದ್ದರು.

ಕಷ್ಟ, ಸುಖಗಳ ಮಧ್ಯೆಯೇ ಆನಂದದಿಂದ ಬದುಕಿ: ಶ್ರೀಗಳು



ವಿಜಯಪುರ: ಸಂಸಾರ ಎಂಬ ಜಂಜಾಟದಲ್ಲಿ ಅನೇಕ ಕಷ್ಟ-ಸುಖಗಳು ಬರುತ್ತವೆ, ಅವುಗಳ ಮಧ್ಯದಲ್ಲಿ ಆನಂದದಿಂದ ಬದುಕಬೇಕು ಎಂದು ಬಬಲಾದಿ- ಚಮಕೇರಿ- ಕತಕನಹಳ್ಳಿಯ ಗುರು ಚಕ್ರವರ್ತಿ ಸದಾಶಿವ ಮಠದ ಶಿವಯ್ಯ ಮಹಾಸ್ವಾಮೀಜಿ ಹೇಳಿದರು.

ವಿಜಯಪುರ ತಾಲೂಕಿನ ಕತಕನಹಳ್ಳಿಯ ತ್ರಿಕಾಲಜ್ಞಾನಿ ಗುರು ಚಕ್ರವರ್ತಿ ಸದಾಶಿವ ಶಿವಯೋಗಿಗಳ ಜಾತ್ರಾ ಮಹೋತ್ಸವ ನಿಮಿತ್ತ ದೇವಾಲಯದ ಆವರಣದಲ್ಲಿ ಭಾನುವಾರ 52 ಜೋಡಿಗಳ ಸಾಮೂಹಿಕ ವಿವಾಹ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಮನುಷ್ಯನ ಶರೀರಕ್ಕೆ ಎರಡು ಕಣ್ಣು, ಎರಡು ಕಾಲು, ಎರಡು ಕೈ, ಎರಡು ಕಿವಿ ಹೀಗೆ ಎರಡೆರಡು ಅವಯವಗಳು ಶರೀರಕ್ಕೆ ಕೊಟ್ಟಾಗ ಸಮವಾಗಿ ಕೆಲಸ ಮಾಡುತ್ತವೆ. ಅದೇ ರೀತಿ ಸಂಸಾರದಲ್ಲಿ ಪತಿ- ಪತ್ನಿ ಇನ್ನು ಮೇಲೆ ನೀವು ಶರಣರ ನುಡಿಗಳನ್ನು ಕೇಳುತ್ತ ಹಿರಿಯರ ಮಾರ್ಗದರ್ಶನದಲ್ಲಿ ಜೀವನವನ್ನು ನಡೆಸಬೇಕು. ಹೊಸ ಜೋಡಿಗಳು ತಿಳಿದು ಜೀವನ ನಡೆಸಬೇಕು. ಕಷ್ಟ-ಸುಖ ಎರಡನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು. ಕಲ್ಲಿನ ಮೇಲೆ ಶ್ರೀಗಂಧದ ಕಟ್ಟಿಗೆಯನ್ನು ತೇದಾಗ ಸುಗಂಧವು ಹೇಗೆ ಬರುತ್ತದೆ, ಅದೇ ರೀತಿ ತಮ್ಮ ಜೀವನವನ್ನು ನಡೆಸಬೇಕು ಎಂದರು.

ಮಹಾದೇವಿ ತಾಯಿ ಮಾತನಾಡಿ, ಸತಿ-ಪತಿಗಳ ಭಕ್ತಿ ಒಂದಾದಾಗ ಬದುಕು ಸುಂದರವಾಗುತ್ತದೆ. ಶಿವನ ಸ್ಮರಣೆಯೊಂದಿಗೆ ಹಿರಿಯರ ಮಾರ್ಗದರ್ಶನದಲ್ಲಿ ಜೀವನವನ್ನು ನಡೆಸಬೇಕು. ಎತ್ತಿನ ಬಂಡಿಯ ಗಾಲಿಗೆ ಯಾವ ರೀತಿ ಕೀಲು ಕೆಲಸ ಮಾಡುತ್ತದೆ ಅದೇ ರೀತಿ ಜೀವನ ನಡೆಸಬೇಕು ಎಂದರು.

ಗುಣದಾಳದ ಡಾಕ್ಟರ್ ವಿವೇಕಾನಂದ ಸ್ವಾಮೀಜಿ ಮಾತನಾಡಿ, ಕತ್ನಳ್ಳಿ ಶ್ರೀಮಠ ನೋಡಿ ಸಂತೋಷವಾಗಿದೆ. ಕೃಷಿ ಕಾರ್ಮಿಕರ ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡುತ್ತ ಬಂದಿದೆ. ಇನ್ನೂ ಈ ಶ್ರೀಮಠದಿಂದ ಕಾರ್ಯಗಳು ಹೆಚ್ಚಾಗಲಿ, ಬರುವ ಹೊಸ ಜೋಡಿಗಳಿಗೆ ಸದಾಶಿವನ ಸ್ವಾಮೀಜಿಯವರ ಶುಭ ಆಶೀರ್ವಾದವಾಗಲಿ ಎಂದರು.

ಇದೇ ಸಂದರ್ಭ ಅಕ್ಷತಾರೋಹನ ಸಾಮೂಹಿಕ ವಿವಾಹದ ಕಾರ್ಯಕ್ರಮ ಬಸಯ್ಯ ಗಚ್ಚಿನಮಠ ನಡೆಸಿಕೊಟ್ಟರು.

ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ, ಉದ್ದಿಮೆದಾರ ಬಾಬುಗೌಡ ಬಿರಾದಾರ, ವಿಡಿಎ ಅಧ್ಯಕ್ಷ ಗಂಗಾಧರ ಸಂಬಣ್ಣಿ, ಸುಭಾಷ ಇಂಗಳೇಶ್ವರ. ಪ್ರಕಾಶಗೌಡ ಪಾಟೀಲ (ಹಾಲಹಳ್ಳಿ), ರೂಪಸಿಂಗ್ ಲುನಾರಿ, ಮುರಗೇಶ ಮಠಪತಿ, ಪ್ರವೀಣ ಹೆರಲಗಿ, ಅಶೋಕ ಪಟ್ಟಣಶೆಟ್ಟಿ, ಸುರೇಶ ಸಿಂಗಾರೆಡ್ಡಿ, ಶ್ರೀಕಾಂತ ಪವಾರ್, ವಿನೋದ ಕಾಳೆ, ಶರಣಪ್ಪ ಕೋರಳ್ಳಿ, ಕಲ್ಲುಗೌಡ ಪಾಟೀಲ, ಸಂತೋಷ ಕವಲದಾರ, ಆನಂದ ದಿಗ್ಗಾವಿ, ಅಶೋಕ ಬಿರಾದಾರ, ವಿನೋದ ಆಳೂರ, ಸಿದ್ದು ಮಲ್ಲಿಕಾರ್ಜುನಮಠ, ಅಶೋಕ ತಿಮಶೆಟ್ಟಿನ ಇತರರು ಇದ್ದರು.

ಮೂಲ ಸೌಕರ್ಯಗಳ ಅಭಿವೃದ್ಧಿಗೆ ಆಗ್ರಹ



ಚಡಚಣ: ಹತ್ತಳ್ಳಿ ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವ ಹಿನ್ನೆಲೆಯಲ್ಲಿ ಕೆಆರ್‌ಎಸ್ ಪಕ್ಷದ ಪದಾಧಿಕಾರಿಗಳು, ಕಾರ್ಯಕರ್ತರು ಗ್ರಾ.ಪಂ.ಅಭಿವೃದ್ಧಿ ಅಧಿಕಾರಿ (ಪಿಡಿಒ) ಶಿವಾನಂದ ಬಿರಾದಾರಗೆ ಮನವಿ ಸಲ್ಲಿಸಿದರು.

ಬೇಸಿಗೆಯ ಸಮಯದಲ್ಲಿ ಗ್ರಾಮದಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ಎದುರಾಗಿದೆ. ಸಮರ್ಪಕ ನೀರಿನ ಸರಬರಾಜು ಇಲ್ಲದ ಕಾರಣ ಗ್ರಾಮಸ್ಥರು ಸಂಕಷ್ಟ ಅನುಭವಿಸುತ್ತಿದ್ದಾರೆ. ಕೂಡಲೇ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕೆಂದು ಆಗ್ರಹಿಸಿದರು.

ಗ್ರಾಮದಲ್ಲಿ ಒಳಚರಂಡಿ ವ್ಯವಸ್ಥೆ ಸರಿಯಾಗಿಲ್ಲದ ಕಾರಣ ನೀರು ರಸ್ತೆಯ ಮೇಲೆಯೇ ಹರಿದು ಪರಿಸರ ಅಸ್ವಚ್ಛವಾಗುತ್ತಿದೆ. ಇದರಿಂದ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಹೆಚ್ಚಿದ್ದು, ಕೀಟ-ಕೀಟಕಗಳ ಸಂಖ್ಯೆ ಹೆಚ್ಚಾಗಿದೆ. ರಾತ್ರಿ ವೇಳೆಕಚ್ಚುಹುಳಗಳಕಾಟದಿಂದಗ್ರಾಮಸ್ಥರು ತೊಂದರೆ ಅನುಭವಿಸುತ್ತಿದ್ದಾರೆ. ಈ ಸಮಸ್ಯೆಯನ್ನು ತಕ್ಷಣ ಪರಿಹರಿಸಲು ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು.

ಗ್ರಾಮದಲ್ಲಿ ರಸ್ತೆ ಬದಿಯ ವಿದ್ಯುತ್ ಕಂಬಗಳಿಗೆ ಬಲ್ಬ್‌ಗಳನ್ನು ಅಳವಡಿಸದಿರುವುದರಿಂದ ರಾತ್ರಿ ವೇಳೆ ಅಂಧಕಾರ ಆವರಿಸುತ್ತಿದ್ದು, ಸಾರ್ವಜನಿಕರಿಗೆ ಸಂಚಾರದಲ್ಲಿ ತೊಂದರೆ ಉಂಟಾಗಿದೆ. ಆದ್ದರಿಂದ ತುರ್ತಾಗಿ ಬೀದಿ ದೀಪಗಳ ವ್ಯವಸ್ಥೆ ಕಲ್ಪಿಸಬೇಕೆಂದು ಒತ್ತಾಯಿಸಿದರು.

ಗ್ರಾಮದ ಸ್ವಚ್ಛತೆಗೂ ಆದ್ಯತೆ ನೀಡಬೇಕಿದ್ದು, ನೈರ್ಮಲೀಕರಣ ಕಾರ್ಯ ಕೈಗೊಂಡು ಹತ್ತಳ್ಳಿ ಸುತ್ತಮುತ್ತಲಿನ ಗ್ರಾಮಗಳಾದ ಹಾವಿನಾಳ, ಸಂಖ ಗ್ರಾಮದಲ್ಲು ಇದೆ ಪರಿಸ್ಥಿತಿ ಇದ್ದು ಸ್ವಚ್ಛತೆ ಹಾಗೂ ಮೂಲಸೌಕರ್ಯಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕೆಂದು ಮನವಿ ಸಲ್ಲಿಸಿದರು.

ಈ ವೇಳೆ ಕೆಆರ್‌ಎಸ್ ಪಕ್ಷದ ಚಡಚಣ ಅಧ್ಯಕ್ಷ ಅಣ್ಣಾ ಪೂಜಾರಿ, ಪದಾಧಿಕಾರಿಗಳು, ಕಾರ್ಯಕರ್ತ ತುಕಾರಾಮ ಇಂಗಳೆ ಹಾಗೂ ಗ್ರಾಮಸ್ಥರಾದ ಚುಕ್ಕು ವಾಘಮೋರೆ, ಬಸವರಾಜ ಶಿಂಧೆ, ಬಸು ವಾಘಮೋರೆ, ಸಚೀನ ವಾಘಮೋರೆ ಉಪಸ್ಥಿತರಿದ್ದರು.

ಹತ್ತಳ್ಳಿ, ಹಾವಿನಾಳ, ಸಂಖ ಗ್ರಾಮದ ಪಿಡಿಒ ಶಿವಾನಂದ ಬಿರಾದಾರ ಮಾತನಾಡಿ, ಬೇಸಿಗೆಯಲ್ಲಿ ಈಗಾಗಲೆ ಕುಡಿಯುವ ನೀರಿನ ತೊಂದರೆ ಆಗದಂತೆ ಕ್ರಮ ಕೈಗೊಂಡಿದ್ದೇವೆ. ಕೆಲವೊಮ್ಮೆ ತೊಂದರೆಯಾದಾಗ ಗ್ರಾಮಸ್ಥರು ಸಹಕರಿಸಬೇಕು. ರಸ್ತೆಬದಿಯ ವಿದ್ಯುತ್ ಬಲ್ಬ ಅಳವಡಿಸಲಾಗಿದೆ. ಕೆಲವೊಂದು ಹಾಳಾಗಿದ್ದರೇ ಶೀಘ್ರದಲ್ಲಿ ಸರಿಪಡಿಸಲಾಗುವುದು. ಒಳಚರಂಡಿ ವ್ಯವಸ್ಥೆಗೆ ಸರ್ಕಾರದ ಅನುಮತಿ, ಅನುದಾನ ಬೇಕಾಗುದರಿಂದ ಸಮಯ ಬೇಕು. ರಸ್ತೆ ಮೇಲೆ, ಅಕ್ಕಪಕ್ಕದಲ್ಲಿ ಸ್ವಚ್ಛಗೊಳಿಸಲಾಗುವುದು ಎಂದರು.

ಧರಣಿ: ಪಟ್ಟಣದಲ್ಲೇ ಪ್ರಜಾಸೌಧ ಕಟ್ಟಲಿ

ತಾಳಿಕೋಟೆ: ತಾಲೂಕಿನ ಮೇಲೆಶ್ವರ ಗ್ರಾಮದ ಸಮೀಪ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಆಯ್ಕೆ ಮಾಡಿರುವ ಸ್ಥಳದ ವಿರುದ್ಧ ತಾಳಿಕೋಟೆ ಪಟ್ಟಣದಲ್ಲಿ ಭುಗಿಲೆದ್ದ ಜನಆಕ್ರೋಶ ದಿನದಿಂದ ದಿನಕ್ಕೆ ಉಗ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವು ರವಿವಾರ 26ನೇ ದಿನಕ್ಕೆ ಕಾಲಿಟ್ಟಿದ್ದು, ಬಸವೇಶ್ವರ ವೃತ್ತ ಹೋರಾಟದ ಕೇಂದ್ರವಾಗಿಯೇ ಅಲ್ಲದೆ ಜನರ ನ್ಯಾಯ ಹೋರಾಟದ ಸಂಕೇತವಾಗಿ ರೂಪಾಂತರಗೊಂಡಿದೆ.

ಈ ಹೋರಾಟಕ್ಕೆ ಇದೀಗ ಬಣಜಿಗ ಕ್ಷೇಮಾಭಿವೃದ್ಧಿ ಸಂಘ ನಗರ ಘಟಕ (ರಿ) ತಾಳಿಕೋಟೆಯಿಂದ ಘೋಷಣಾತ್ಮಕ ಹಾಗೂ ಸಂಪೂರ್ಣ ಬೆಂಬಲ ವ್ಯಕ್ತವಾಗಿದ್ದು, ಸಮಾಜದ ಹಿರಿಯರು, ಯುವಕರು, ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟಕ್ಕೆ ಹೊಸ ತಿರುವು ನೀಡಿದರು. ''ಪ್ರಜಾಸೌಧ ಪಟ್ಟಣದಲ್ಲೇ ನಿರ್ಮಿಸಬೇಕು'' ಎಂಬ ಒಂದೇ ಬೇಡಿಕೆಯನ್ನು ಗಟ್ಟಿಯಾಗಿ ಪ್ರತಿಧ್ವನಿಸಲಾಯಿತು.

ಧರಣಿ ವೇದಿಕೆಯಲ್ಲಿ ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಮುಖಂಡರಾದ ಎಂ ಆರ್ ಕತ್ತಿ, ರಮೇಶ ಸಾಲಂಕೆ ಹಾಗೂ ನ್ಯಾಯವಾದಿ ಗಂಗಾಧರ ಕಸ್ತೂರಿ ಮಾತನಾಡಿ, ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಮುಖಂಡರು ಹೋರಾಟಕ್ಕೆ ಸಂಪೂರ್ಣ ಬೆಂಬಲ ಘೋಷಿಸಿ, ಹೋರಾಟ ಸಮಿತಿಯ ಕರೆ ಬಂದಾಗ ನಾವು ಎಲ್ಲರೂ ಒಗ್ಗಟ್ಟಿನಿಂದ ಈ ಹೋರಾಟವನ್ನು ಮತ್ತಷ್ಟು ಬಲಪಡಿಸುತ್ತೇವೆ ಎಂದು ಭರವಸೆ ನೀಡಿದರು.

ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಹಲವರು ಮಾತನಾಡಿದರು.

ಈ ವೇಳೆ ಮಹೇಶ್ ದೇವಶೆಟ್ಟಿ, ಮಲ್ಲಿಕಾರ್ಜುನ ದೇವಶೆಟ್ಟಿ, ಮಲ್ಲಿಕಾರ್ಜುನ ಕತ್ತಿ, ಶಾಂತಪ್ಪ ಇಚೇರಿ, ಕಾಶಿನಾಥ ಪಾಲ್ಕಿ, ಸಿ.ಬಿ. ಸರಶೆಟ್ಟಿ, ಗಂಗಾಧರ ಸರ್ಶೆಟ್ಟಿ, ವಿ.ಕೆ. ಜಿಗಜಿನ್ನಿ, ಸಂತೋಷ ಕತ್ತಿ, ಐ.ಆರ್. ಕಲ್ಬುರ್ಗಿ, ವೀರೇಶ್ ಸಾತನೂರು, ಮುರುಗೆಪ್ಪ ಸರಶೆಟ್ಟಿ, ಚಂದ್ರಕಾಂತ್ ಪಾಲ್ಕಿ, ಸಿ.ಬಿ. ತಿಳಗುಳ ಸೇರಿದಂತೆ ಅನೇಕರಿದ್ದರು.

ಹೋರಾಟ ಸಮಿತಿಯ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್.ಬಿ. ಕಟ್ಟಿಮನಿ, ಆರ್. ಎಸ್. ಪಾಟೀಲ (ಕುಚಬಾಳ), ಮುತ್ತಪ್ಪ ಚಮಲಾಪುರ, ಕಾಶಿನಾಥ ಮುರಾಳ, ಪರಶುರಾಮ ತಂಗಡಗಿ, ಮಸೂಮಸಾಬ್ ಕೆಂಭಾವಿ, ವಿಜಯಸಿಂಗ್ ಹಜೇರಿ ಸೇರಿದಂತೆ ಹಲವು ಪ್ರಮುಖರು ಧರಣಿಯಲ್ಲಿ ಪಾಲ್ಗೊಂಡಿದ್ದರು. ವಿವಿಧ ಸಮಾಜಗಳ ಮುಖಂಡರು, ಪಟ್ಟಣದ ಹಿರಿಯರು ಇದ್ದರು.



ವಿವಿಧ ಉದ್ಯಾನವನಗಳಿಗೆ ಹರಿದು ಬಂದ ಜನಸಾಗರ



ಆಲಮಟ್ಟಿ: ಮ್ಯೂಸಿಕಲ್ ಫೌಂಟೇನ್, ಲೇಸರ್ ಶೋ, ರಾಕ್ ಗಾರ್ಡನ್ ಸೇರಿದಂತೆ ಇಲ್ಲಿನ ನಾನಾ ಉದ್ಯಾನವನಗಳನ್ನು ಕಣ್ತುಂಬಿಕೊಳ್ಳಲು ಭಾನುವಾರ ಜನಸಾಗರವೇ ಹರಿದು ಬಂದಿತ್ತು.

ರಂಜಾನ್ ಹಬ್ಬದ ಹಿನ್ನಲೆಯಲ್ಲಿ ಹಾಗೂ ಭಾನುವಾರ ರಜೆ ದಿನವಾಗಿದ್ದರಿಂದ ಇಲ್ಲಿನ ನಾನಾ ಉದ್ಯಾನಗಳಲ್ಲಿ ಹೆಚ್ಚಿನ ಪ್ರವಾಸಿಗರು ಕಂಡು ಬಂದರು. ರಂಜಾನ್ ಹಿನ್ನಲೆಯಲ್ಲಿ ಮುಸ್ಲಿಂ ಕುಟುಂಬ ಸದಸ್ಯರೆಲ್ಲ ಸೇರುತ್ತಾರೆ. ಹಬ್ಬದ ಮರುದಿನ ಮನೆಮಂದಿ ಸೇರಿದಂತೆ ಸ್ನೇಹಿತರೊಂದಿಗೆ ಆಗಮಿಸಿದ ಜನ ಇಲ್ಲಿನ ನಾನಾ ಉದ್ಯಾನಗಳಲ್ಲಿ ನಲಿದಾಡುವುದು ವಾಡಿಕೆಯಾಗಿದೆ.

ಸಾಮೂಹಿಕ ಭೋಜನ: ನಾನಾ ಉದ್ಯಾನಗಳಲ್ಲಿ ಹೆಚ್ಚಿನ ಸಂಖ್ಯೆಯ ಮುಸ್ಲಿಂರು ಆಗಮಿಸಿದ್ದರಿಂದ ರಾಕ್ ಗಾರ್ಡನ್‌ನಲ್ಲಿ ನಾನಾ ಖಾದ್ಯದ ವಾಸನೆ ಹರಡಿತ್ತು. ಕುಟುಂಬ ಸದಸ್ಯರೆಲ್ಲ ಸಾಮೂಹಿಕವಾಗಿ ಊಟ ಸವಿಯುತ್ತಿದ್ದ ದೃಶ್ಯಗಳು ಕಂಡು ಬಂದವು. ಹೊಸ ಉಡುಗೆ ತೊಟ್ಟು ಅವುಗಳಿಗೆ ನಾನಾ ಸುಗಂಧ ದ್ರವ್ಯಗಳನ್ನು ಹಾಕಿಕೊಂಡು ಆಗಮಿಸಿದ್ದರು.

ಪೋಲೀಸ್ ಬಂದೋಬಸ್ತ್: ಮುಂಜಾಗ್ರತೆ ಕ್ರಮವಾಗಿ ಡಿವೈಎಸ್‌ಪಿ ನೇತೃತ್ವದಲ್ಲಿ ಒಬ್ಬ ಸಿಪಿಐ, 5 ಪಿಎಸ್‌ಐ, 70 ಪೊಲೀಸ್ ಸಿಬ್ಬಂದಿ ಹಾಗೂ ಕೆಎಸ್‌ಐಎಸ್‌ಎಫ್ ಡಿವೈಎಸ್‌ಪಿ ಈರಣ್ಣ ವಾಲಿ ನೇತೃತ್ವದಲ್ಲಿ 50 ಕೆಎಸ್‌ಐಎಸ್‌ಎಫ್ ಸಿಬ್ಬಂದಿ, ಎರಡು ಡಿಎಆರ್ ತುಕುಡಿ ಬಂದೋಬಸ್ತ್ ನಿಯೋಜಿಸಲಾಗಿತ್ತು.

ಭರ್ಜರಿ ವ್ಯಾಪಾರ: ನಾನಾ ಉದ್ಯಾನಗಳಲ್ಲಿ ಸಾಕಷ್ಟು ಪ್ರವಾಸಿಗರು ಆಗಮಿಸಿದ್ದರಿಂದ ಕೂಲ್ಡ್ರಿಂಕ್ಸ್, ಐಸ್ ಕ್ರೀಂ, ಚಕ್ಕುಲಿ, ಪಾಪಡಿ, ಚೀಪ್ಸ್, ಕಬ್ಬಿನ ಹಾಲು, ನೀರಿನ ಬಾಟಲ್ ಸೇರಿದಂತೆ ನಾನಾ ವ್ಯಾಪಾರಿಗಳ ಮುಖದಲ್ಲಿ ಮಂದಹಾಸ ಮೂಡಿತು. ವಾಟರ್ ಪಾರ್ಕ್ ಹಾಗೂ ದೋಣಿ ವಿಹಾರ ಇವೆರಡು ಈ ಬಾರಿ ಪ್ರವಾಸಿಗರಿಗೆ ಹೊಸ ಮನೋರಂಜನೆ ನೀಡಿದವು.

ಶಿಸ್ತು ಬೆಳೆಸುವಲ್ಲಿ ಎನ್‌ಎಸ್‌ಎಸ್ ಸಹಕಾರಿ



ಮುದ್ದೇಬಿಹಾಳ: ರಾಷ್ಟ್ರೀಯ ಸೇವಾ ಯೋಜನೆ ಮುಖ್ಯ ಉದ್ದೇಶ ದೇಶವನ್ನು ಸಮೃದ್ಧವಾಗಿ ಕಟ್ಟುವುದು, ಯುವಕರನ್ನು ಶಿಸ್ತಿನ ಸಿಪಾಯಿಯಾಗಿ ಬೆಳೆಸುವುದು ಹಾಗೂ ಕ್ರಿಯಾ ಶಕ್ತಿಯನ್ನು ಬೆಳೆಸುವುದೇ ಆಗಿದೆ ಎಂದು ಎಂಜಿಬಿಸಿ ಕಾಲೇಜಿನ ಪ್ರಾಚಾರ್ಯ ಪ್ರೊ. ಎಸ್. ಎನ್ ಪೋಲೆಶಿ ಹೇಳಿದರು.

ತಾಲೂಕಿನ ತಂಗಡಗಿ ಗ್ರಾಮದ ಹಡಪದ ಅಪ್ಪಣ್ಣ ಸಂಸ್ಥಾನ ಮಠದ ಆವರಣದಲ್ಲಿ ಸ್ಥಳೀಯ ಎಂಜಿವಿಸಿ ಕಾಲೇಜಿನ ವಾರ್ಷಿಕ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಶಿಸ್ತು, ಸಂಯಮ ಮತ್ತು ಪರಿಶ್ರಮದ ಗುಣ ವಿದ್ಯಾರ್ಥಿಗಳಲ್ಲಿ ಬಂದರೆ ದೇಶದ ಪ್ರಗತಿ ಆಗುತ್ತದೆ. ಸೈನಿಕರ ಶಿಸ್ತು, ದೂರ ದೃಷ್ಟಿ ಮತ್ತು ತ್ಯಾಗ ಗುಣ ಇದ್ದರೆ ಸಮಾಜದಲ್ಲಿ ಬೆಳವಣಿಗೆ ಕಂಡು ಬರುತ್ತದೆ, ಇದಕ್ಕಾಗಿ ವಿದ್ಯಾರ್ಥಿಗಳು ಸೇವಾ ಶಿಬಿರ ಉಪಯುಕ್ತ ಮಾಡಿಕೊಳ್ಳಬೇಕು ಎಂದು ಹೇಳಿದರು.

ಎಸ್‌ಜಿವಿಸಿ ವಿಶ್ವಸ್ತ ನಿಧಿಯ ಕಾರ್ಯದರ್ಶಿ ಅಶೋಕ ಶಂ ತಡಸದ ಮಾತನಾಡಿ, ವಿದ್ಯಾರ್ಥಿಗಳು ಎನ್‌ಎಸ್‌ಎಸ್ ಶಿಬಿರದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ಭಾವಿ ಜೀವನ ಸಫಲಗೊಳಿಕೊಳ್ಳಲು ಪ್ರಯತ್ನಿಸಬೇಕು ಎಂದು ಶಿಬಿರಾರ್ಥಿಗಳಿಗೆ ತಿಳಿಸಿದರು.

ಹಡಪದ ಅಪ್ಪಣ್ಣ ಮಠದ ಅನ್ನದಾನಿ ಭಾರತಿ ಸ್ವಾಮಿಗಳು ಮಾತನಾಡಿ, ಸತ್ಯ, ನಿಷ್ಠೆ, ಶಿಸ್ತು ಸ್ವಚ್ಛತೆಯೊಂದಿಗೆ ವ್ಯಕ್ತಿತ್ವ ವಿಕಸನಗೊಳಿಸಿಕೊಳ್ಳಲು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಎಂ.ಐ ಬಿರಾದಾರ, ವಿ. ಎಸ್ ಲಮಾಣಿ, ಎಂ.ಎ ಬಿರಾದಾರ. ಎಸ್.ಎನ್. ಬೀದರಕುಂದಿ, ಎಸ್.ಎಂ. ನಿಂಬಲಗುಂದಿ, ಶ್ರೀಶೈಲ ಹಟ್ಟಿ, ಬಸವರಾಜ ಬೋಳಶೆಟ್ಟಿ, ಡಾ. ಬಸವರಾಜ ಹಡಪದ ಸೇರಿದಂತೆ ಮಹಾವಿದ್ಯಾಲಯದ ಎಲ್ಲಾ ಪ್ರಾಧ್ಯಾಪಕರು, ಉಪನ್ಯಾಸಕರು, ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು.

ಒಬ್ಬರ ರಕ್ತ ನಾಲ್ಕು ಜನರ ಪ್ರಾಣ ಉಳಿಸಬಲ್ಲದು

ಬಸವನಬಾಗೇವಾಡಿ: ರಕ್ತವನ್ನು ನಾಲ್ಕು ವಿಧಗಳಲ್ಲಿ ಭಾಗ ಮಾಡಿ ನಾಲ್ಕು ಜನರಿಗೆ ಉಪಯೋಗಿಸಬಹುದು ಎಂದು ವಿಜಯಪುರ ಜಿಲ್ಲಾ ಖ್ಯಾತ ಮಕ್ಕಳ ತಜ್ಞ ಡಾ.ಎಲ್.ಹೆಚ್. ಬಿದರಿ ಹೇಳಿದರು.

ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಭಾರತೀಯ ರೆಡ್ ಕ್ರಾಸ್ ಸೊಸೈಟಿ ವಿಜಯಪುರ ಇವರ ಸಹಯೋಗದಲ್ಲಿ ಇತ್ತೀಚೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಕಾರ್ಯಕ್ರಮದಲ್ಲಿ ಮಾತನಾಡಿ, ರಕ್ತವನ್ನು ನೀಡುವುದರಿಂದ ಹಲವಾರು ಜನರಿಗೆ ಉಪಯೋಗವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ನೀಲಪ್ಪ ಹೊಸಮನಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ವಿಜಯಪುರ ಜಿಲ್ಲೆಯ ಖ್ಯಾತ ಪ್ರಸೂತಿ ತಜ್ಞರಾದ ಡಾ.ಸೌಮ್ಯ ಬಿರಾದಾರ, ಡಾ. ಸೈಯದ, ಡಾ.ಫತೇಪುರ, ಕಾಲೇಜಿನ ರೆಡ್ ಕ್ರಾಸ್ ಘಟಕದ ಸಂಯೋಜಕಿ ಪ್ರೊ.ಲೀಲಾವತಿ ಸಿ, ಎನ್ ಎಸ್‌ಎಸ್ ಘಟಕದ ಸಂಚಾಲಕರಾದ ಡಾ.ಹೆಚ್. ಎಂ.ನಾಟೀಕಾರ, ಪ್ರೊ.ಇಸ್ಮಾಯಿಲ್, ಪ್ರೊ.ರೇಣುಕಾ ಅಂಬಲಿ, ಪ್ರೊ. ಶ್ರೀಶೈಲ ಬಳವಾಟ, ಪ್ರಿಯಾಂಕಾ ಜಿಂದೆ, ಅತಿಥಿ ಉಪನ್ಯಾಸಕರಾದ ಭೀಮಾಶಂಕರ ಹಡಪದ, ಸುಮಾ ಕಲ್ಲೂರ, ಗೀತಾ ಬೆಳೊಂಡಗಿ, ಶೀಲಾ ರಾಮತೀರ್ಥ ಸೇರಿ ಇತರರು ಇದ್ದರು. ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರು. ರಕ್ತದಾನ ಮಾಡಿದ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಪ್ರಮಾಣ ಪತ್ರ, ಹಾಗೂ ಗೋಡೆ ಗಡಿಯಾರ ನೀಡಿ ಗೌರವಿಸಲಾಯಿತು.



ಪುಸ್ತಕ ಮೇಳದ ವಾಲ್‌ಪೋಸ್ಟರ್ ಬಿಡುಗಡೆ



ವಿಜಯಪುರ: ಮೇ ಸಾಹಿತ್ಯ ಮೇಳ ವಿಜಯಪುರ ಬಳಗ, ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಹಮ್ಮಿಕೊಳ್ಳಲಾದ ಬಿಜಾಪುರ ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳದ ವಾಲ್ ಪೋಸ್ಟರ್ ರನ್ನು ಚಿಂತಕ ಬಸವರಾಜ ಸೂಳಿಭಾವಿ ಅವರು ಬಿಡುಗಡೆಗೊಳಿಸಿದರು.

ನಗರದ ಸಾರಿಪುತ್ರ-ಬೋಧಿಧಮ್ಮ ಬುದ್ಧ ವಿಹಾರದಲ್ಲಿ ಪುಸ್ತಕ ಮೇಳದ ಉಪಸಮಿತಿಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ದರ್ಬಾರ್ ಹೈಸ್ಕೂಲ್ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿರುವ ಬಿಜಾಪುರ ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳದ ಉಪಸಮಿತಿ ಸದಸ್ಯರು ಪುಸ್ತಕ ಮೇಳವನ್ನು ಯಶಸ್ವಿಗೊಳಿಸಲು ಪ್ರತಿಯೊಬ್ಬರೂ ಶ್ರಮಿಸಬೇಕೆಂದು ಹೇಳಿದರು.

ಈ ವೇಳೆ ಕರ್ನಾಟಕ ರಾಜ್ಯ ಎಸ್ಸಿ/ಎಸ್ಟಿ ಸರ್ಕಾರಿ ನೌಕರರ ಸಮನ್ವಯ ಸಮಿತಿಯ ಬಿ.ಎಚ್. ನಾಡಗಿರಿ, ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಘಟನಾ ಸಂಚಾಲಕ ಚನ್ನು ಕಟ್ಟಿಮನಿ, ಮಾನವ ಬಂಧುತ್ವ ವೇದಿಕೆಯ ಪ್ರಭುಗೌಡ ಪಾಟೀಲ, ನಿ, ಬೌದ್ಧವಿಹಾರ ನಿರ್ಮಾಣ ಸಮಿತಿ ಅಧ್ಯಕ್ಷ ರಾಜಶೇಖರ ಯಡಹಳ್ಳಿ, ಉಪಾಧ್ಯಕ್ಷ ಶಶಿಕಾಂತ ಹೊನವಾಡಕರ್, ಪ್ರಧಾನ ಕಾರ್ಯದರ್ಶಿ ನಾಗರಾಜ ಲಂಬು, ನಿರ್ದೇಶಕ ರಾಜೇಶ ತೊರವಿ, ಸಂಘಟಕರಾದ ಅನಿಲ ಹೊಸಮನಿ, ಯಮನಪ್ಪ ಗುಣಕಿ, ಕೆ.ಎಂ. ಕೂಡಲಗಿ, ಮಿಲನಕುಮಾರ ನಾಮದಾರ, ಅಪ್ಪಾಸಾಹೇಬ ಯರನಾಳ, ಸುಖದೇವ ಕಟ್ಟಿಮ ಸುಭಾಸ ಹೊನಕಂಠಿ, ದಾನೇಶ ಅವಟಿ, ಭೀಮರಾವ ತಳಕೇರಿ, ಸಂತೋಷ ಶಹಾಪುರ, ಮಹಾಂತೇಶ ಕಟ್ಟಿಮನಿ, ಸಂಘರ್ಷ ಹೊಸಮನಿ, ಬಿ.ಆರ್. ಬಮಸೋಡೆ ಎಂ.ಇ.ಬಿ. ಹಳ್ಳದಮನಿ ಇದ್ದರು.

ರಂಜಾನ್: ಸಚಿವ ಶಿವಾನಂದ ಪಾಟೀಲ ಭಾಗಿ

ಕೊಲ್ಹಾರ: ಇಸ್ಲಾಮೀಯರ ಪವಿತ್ರ ರಂಜಾನ್ ಹಬ್ಬದ ಹಿನ್ನೆಲೆ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಕೊಲ್ಹಾರ ಪಟ್ಟಣದಲ್ಲಿ ಇಸ್ಲಾಂ ಧರ್ಮೀಯರೊಂದಿಗೆ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡು ರಂಜಾನ್ ಹಬ್ಬದ ಶುಭಾಶಯ ಕೋರಿದರು.

ತಾವು ಪ್ರತಿನಿಧಿಸುವ ಬಸವನಬಾಗೇವಾಡಿ ಕ್ಷೇತ್ರ ವ್ಯಾಪ್ತಿಯ ಕೊಲ್ಹಾರ ತಾಲ್ಲೂಕು ಕೇಂದ್ರದಲ್ಲಿರುವ ರಂಜಾನ್ ಹಬ್ಬದ ಹಿನ್ನೆಲೆ ಈದ್ಗಾ ಮೈದಾನದಲ್ಲಿ ಪ್ರಾರ್ಥನೆಯಲ್ಲಿ ಮಾತನಾಡಿ, ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಯುದ್ಧದ ಸಂದರ್ಭದಲ್ಲಿ ಇಸ್ಲಾಂ ಶಾಂತಿ ಸಂದೇಶದ ಅನುಷ್ಠಾನದ ಅಗತ್ಯವಿದೆ. ವಿಶ್ವದಲ್ಲಿ ಶಾಂತಿ ನೆಲೆಸಲು ಪ್ರವಾದಿ ಮುಹಮ್ಮದ್ ಅವರು ಸಾರಿದ ಶಾಂತಿಯ ತತ್ವ ಸಂದೇಶದ ಜೀವನ ನಡೆಸುವುದು ಅತ್ಯಗತ್ಯ ಎಂದರು.

ಇಸ್ಲಾಮೀಯರು ಪವಿತ್ರ ರಂಜಾನ್ ತಿಂಗಳಲ್ಲಿ ಉಪವಾಸದ ಮೂಲಕ ಶ್ರದ್ಧೆಯಿಂದ ಧರ್ಮಾಚರಣೆ ಮಾಡಿದ್ದೀರಿ, ಭಗವಂತ ನಿಮಗೆಲ್ಲ ಶುಭವನ್ನೇ ಕರುಣಿಸಲಿ ಎಂದು ಹಾರೈಸಿದರು. ಮೌಲಾನಾ ಮುಬಾರಕ್ ಅಲಿ ಧರ್ಮ ಸಂದೇಶ ನೀಡಿದರು. ಆರ್.ಬಿ ಪಕಾಲಿ, ಉಸ್ಮಾನ್ ಪಟೇಲ್ ಖಾನ್, ಪಿ.ಕೆ ಗಿರಗಾವಿ, ದಾದಾ ಗೂಗಿಹಾಳ, ಬಿ.ಡಿ ಕಲಾದಗಿ, ಹಸನ ಪಕಾಲಿ, ಡೋಂಗ್ರಿಸಾಬ ಗ್ಯಾಟ್, ಅಲ್ಲಾಬಕ್ಷ ಕಾಖಂಡಕಿ, ಹನೀಪ ಮಕಾನದಾರ, ಇಕ್ಬಾಲ್ ನದಾಫ, ತೌಸಿಪ್ ಗಿರಗಾವಿ, ಎಂ.ಆರ್ ಕಲಾದಗಿ, ದಸ್ತಗೀರ ಕಲಾದಗಿ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಕಿರುಸುದ್ದಿ



ಕಲಬುರಗಿ: ಶ್ರೀರಾಮ ನವಮಿ ಉತ್ಸವ ಸಮಿತಿ ಕಲಬುರಗಿ ವತಿಯಿಂದ ಭಾನುವಾರ ಸಂಜೆ ನಗರದ ಶೆಟ್ಟಿ ಕಾಂಪ್ಲೆಕ್ಸ್ ಬಳಿ ಮರಾಠಾ ಶೌರ್ಯದ ಪ್ರತಿರೂಪ ತಾನಾಜಿ ಮಾಲುಸುರೆರವರ ಸಾಹಸಗಾಥೆ ಜೀವಂತಗೊಳಿಸಿದ 2020ರಲ್ಲಿ ಬಿಡುಗಡೆಯಾದ ಓಂ ರಾವುತ್ ನಿರ್ದೇಶನದ ಐತಿಹಾಸಿಕ ತಾನಾಜಿ ಚಿತ್ರ ಪ್ರದರ್ಶನ ಮಾಡಲಾಯಿತು.ಸಾರ್ವಜನಿಕರು ಕಿಕ್ಕಿರಿದು ಚಿತ್ರ ವೀಕ್ಷಣೆ ಮಾಡಿದರು.

ಸಂಭ್ರಮದ ರಂಜಾನ್

◆**ಹನುಮಸಾಗರ:** ಪಟ್ಟಣದ ಮನ್ನೇರಾಳ ರಸ್ತೆಯಲ್ಲಿ ಇರುವ ಹಾಗೂ ಬೀಳಗಿ ಅಗಸಿ ಹತ್ತಿರವಿರುವ ಈದ್ಗಾ ಮೈದಾನದಲ್ಲಿ ಮುಸ್ಲಿಮರು ಸಂಭ್ರಮದಿಂದ ಪವಿತ್ರ ರಂಜಾನ್ ಹಬ್ಬವನ್ನು ಸಹೋದರತೆ, ಸೌಹಾರ್ದದ ವಾತಾವರಣದಲ್ಲಿ ಆಚರಿಸಿದರು. ನಮಾಜ್ ನಂತರ ಪ್ರಾರ್ಥನೆಯಲ್ಲಿ ದೇಶಕ್ಕೆ, ವಿಶ್ವಕ್ಕೆ ಶಾಂತಿ ದೊರೆಯಲಿ ಎಂದೂ ಪ್ರಾರ್ಥಿಸಿದರು. ಒಂದು ತಿಂಗಳ ಕಠಿಣ ಉಪವಾಸ ಪೂರ್ಣಗೊಳಿಸಿದ ನಂತರ ಚಂದ್ರದರ್ಶನದೊಂದಿಗೆ ಮಸೀದಿಗಳಲ್ಲಿ ಹಾಗೂ ಈದ್ಗಾಮೈದಾನಗಳಲ್ಲಿ ಸಾಮೂಹಿಕ ನಮಾಜ್ ಸಲ್ಲಿಸಿ, ವಿಶೇಷ ಪ್ರಾರ್ಥನೆಗಳನ್ನು ನೆರವೇರಿಸಿದರು. 'ಈದ್ ಮುಬಾರಕ್' ಎಂದು ಹೇಳುತ್ತ ಪರಸ್ಪರ ಶುಭಾಶಯ ವಿನಿಮಯ ಮಾಡಿದರು ಹಾಗೂ ಹಬ್ಬದ ಸಂತಸ ಹಂಚಿಕೊಂಡರು. ಪಟ್ಟಣದ ಸುತ್ತಮುತ್ತ ಇರುವ ಗ್ರಾಮದಿಂದ ಆಗಮಿಸಿದ ಸಾವಿರಾರು ಮುಸ್ಲಿಮರು ಈದ್ಗಾ ಮೈದಾನದಲ್ಲಿ ಸೇರಿದರು. ಹೊಸ ಬಟ್ಟೆಗಳನ್ನು ಧರಿಸಿ, ಫಿತ್ ಝುಕಾತ್ (ದಾನ) ನೀಡುವ ಮೂಲಕ ಧಾರ್ಮಿಕ ಆಚರಣೆಗಳಲ್ಲಿ ತೊಡಗಿದರು. ಮೈನುದೀನ್ ಖಾಜಿ ಮತ್ತು ಗೇಸುದರಾಜ ಮೂಲಿಮನಿ ಮಾತನಾಡಿ, ಈ ರಂಜಾನ್ ಹಬ್ಬವು ದೇಶದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಹೋದರ ವಾತ್ಸಲ್ಯ ಹೆಚ್ಚಿಸಲಿ ಎಂದು ಹೇಳಿದರು.

ನಾಳೆ ಒಳಮೀಸಲಾತಿ ವಿರೋಧಿಸಿ ಬೃಹತ್ ಸಮಾವೇಶಕ್ಕೆ ಕರೆ



◆**ಕುಷ್ಟಗಿ:** ಒಳಮೀಸಲಾತಿ ಜಾರಿಗೆ ಸಂಬಂಧಿಸಿದಂತೆ ಉಂಟಾಗಿರುವ ಗೊಂದಲಗಳು ಹಾಗೂ ರೋಸ್ಟರ್ ವ್ಯವಸ್ಥೆಯ ದೋಷಗಳನ್ನು ಸರಿಪಡಿಸುವಂತೆ ಆಗ್ರಹಿಸಿ ಮಾ.24ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಕೋಲಂಬೋ ಮತ್ತು ಸಂಬಂಧಿತ ಸಮುದಾಯಗಳ ಮುಖಂಡರು ತಿಳಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮುಖಂಡರು, ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿಯ ಬಳಿಕ ನೇಮಕಾತಿ ಪ್ರಕ್ರಿಯೆಯಲ್ಲಿ ಪ್ರವರ್ಗ ಃ ಮತ್ತು ಅ ಸಮುದಾಯಗಳಿಗೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿದರು. ರೋಸ್ಟರ್ ವಿನ್ಯಾಸದಲ್ಲಿನ ಲೋಪದೋಷಗಳು ಸಮಾನ ಅವಕಾಶಗಳನ್ನು ಕಿತ್ತುಕೊಳ್ಳುತ್ತಿದ್ದು, ಸಂವಿಧಾನದ ಕಲಂ 16(1) ಮತ್ತು 16(4) ಅಡಿಯಲ್ಲಿ ಸಿಗಬೇಕಾದ ಹಕ್ಕುಗಳಿಗೆ ಧಕ್ಕೆಯಾಗುತ್ತಿದೆ ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲಾ ಜಿಲ್ಲೆಗಳು, ತಾಲ್ಲೂಕುಗಳು ಮತ್ತು ಗ್ರಾಮಗಳಿಂದ ಲಕ್ಷಾಂತರ ಜನರು ಬೆಂಗಳೂರಿನ ಫ್ರೀಡಂ ಪಾರ್ಕ್‌ಗೆ ಆಗಮಿಸಿ ಸರ್ಕಾರದ ಮೇಲೆ ಒತ್ತಡ ಹೇರುವಂತೆ ಕರೆ ನೀಡಲಾಗಿದೆ. ಪಕ್ಷಾತೀತವಾಗಿ ಒಗ್ಗಟ್ಟಿನಿಂದ ಪ್ರತಿಭಟನೆ ನಡೆಸುವ ಮೂಲಕ ತಮ್ಮ ಹಕ್ಕುಗಳನ್ನು ಕಾಪಾಡಿಕೊಳ್ಳಬೇಕೆಂದು ಅವರು ಮನವಿ ಮಾಡಿದರು.

ಕೋಲಂಬೋ ಸಂಘದ ತಾಲ್ಲೂಕು ಅಧ್ಯಕ್ಷ ಪರಸಪ್ಪ ಅಮರಾವತಿ, ಅಖಿಲ ಕರ್ನಾಟಕ ಭೋವಿ ಯುವ ವೇದಿಕೆ ರಾಜ್ಯ ಮಾಧ್ಯಮ ಪ್ರತಿನಿಧಿ ನಾಗರಾಜ ಭೋವಿ, ಅಮರೇಶ ರಾಠೋಡ, ಮಂಜುನಾಥ, ಹನಮೇಶ ಭೋವಿ, ಈಶಪ್ಪ ಭೋವಿ, ಹನಮಂತಪ್ಪ ಯರೇದಾಳ ಸೇರಿದಂತೆ ಹಲವು ಸಮುದಾಯದ ಮುಖಂಡರು ಉಪಸ್ಥಿತರಿದ್ದರು.



ಹನುಮಸಾಗರ: ಪಟ್ಟಣದ ಮನ್ನೇರಾಳ ರಸ್ತೆಯಲ್ಲಿ ಇರುವ ಹಾಗೂ ಬೀಳಗಿ ಅಗಸಿ ಹತ್ತಿರವಿರುವ ಈದ್ಗಾ ಮೈದಾನದಲ್ಲಿ ಮುಸ್ಲಿಮರು ಸಂಭ್ರಮದಿಂದ ಪವಿತ್ರ ರಂಜಾನ್ ಹಬ್ಬವನ್ನು ಸಹೋದರತೆ, ಸೌಹಾರ್ದದ ವಾತಾವರಣದಲ್ಲಿ ಆಚರಿಸಿದರು.

ಕುದ್ರೆಲ್ಲೇಶ್ವರ ಜಾತ್ರೆ: ರಥೋತ್ಸವ ಅದ್ದೂರಿ

◆**ಯಲಬುರ್ಗಾ:** ತಾಲೂಕಿನ ಹುಲೆಗುಡ್ಡ ಗ್ರಾಮದ ಕುದ್ರೆಲ್ಲೇಶ್ವರ ಜಾತ್ರಾ ಮಹೋತ್ಸವ ಪ್ರಯುಕ್ತ ಮಹಾರಥೋತ್ಸವ ಅದ್ದೂರಿಯಾಗಿ ಜರುಗಿತು.

ದೇವಸ್ಥಾನದಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಯಿತು. ಗೆದಗೇರಿ ಗ್ರಾಮಸ್ಥರಿಂದ ತೇರಿನ ಕಳಶ, ಮಕ್ಕಳ್ಳಿ ಹಾಗೂ ಸಾಲಭಾವಿ, ಹುಲೇಗುಡ್ಡ, ಗ್ರಾಮಸ್ಥರಿಂದ ರುದ್ರಾಕ್ಷಿ ಮಾಲೆ, ನರಸಾಪೂರದಿಂದ ಗೆಜ್ಜೆ ಕೋಲು,ಮುರಡಿ ತಾಂಡಾದಿಂದ ರಥೋತ್ಸವಕ್ಕೆ ಹೂವಿನ ಹಾರ.ಬಸರಿಹಾಳ ಗ್ರಾಮದಿಂದ ರಥ ಎಳೆಯುವ ಹಗ್ಗವನ್ನು ಮೆರವಣಿಗೆಯ ಮೂಲಕ ತರಲಾಯಿತು.

ಯಲಬುರ್ಗಾದ ಶ್ರೀಧರ ಮುರಡಿ ಹಿರೇಮಠದ ಪೀಠಾಧಿಪತಿ ಬಸವಲಿಂಗೇಶ್ವರ ಸ್ವಾಮೀಜಿ ರಥೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಮನುಷ್ಯ ಮನುಷ್ಯರ ನಡುವೆ ಪರಸ್ಪರ ಪ್ರೀತಿ ವಿಶ್ವಾಸ ಒಡಮೂಡಿ ಎಲ್ಲರೂ ಒಂದೇ ಎನ್ನುವ ಭಾವನೆಯಿಂದ ಜೀವನ ಸಾಗಿಸಿದರೆ ಮಾತ್ರ ಸೌಹಾರ್ದಯುತ ಮತ್ತು ನೆಮ್ಮದಿಯ ಬದುಕು ಕಂಡುಕೊಳ್ಳಲು ಸಾಧ್ಯವಿದೆ ಎಂದರು. ಕುದರಿಮೋತಿಯ ವಿಜಯ ಮಹಾಂತ ಸ್ವಾಮೀಜಿ, ಮಕ್ಕಳ್ಳಿಯ ಶಿವಾನಂದಮಠದ ಶಿವಾನಂದ ಸ್ವಾಮೀಜಿ, ಗವಿಸಿದ್ದಯ್ಯ ಹಿರೇಮಠ, ಚನ್ನಬಸಯ್ಯ ಚಿತ್ತರಗಿಮಠ, ಗಿರಿಜಯ್ಯಸ್ವಾಮಿ ಚಿತ್ತರಗಿ ಮಠ ಇತರರಿದ್ದರು. ಬಳಿಕ ಮಹಾರಥೋತ್ಸವ ವಿಜೃಂಭಣೆಯಿಂದ ಸಾಗಿತು ಅನೇಕ ಭಕ್ತರು ರಥೋತ್ಸವಕ್ಕೆ ಹೂ ಹಣ್ಣು ಉತ್ತತ್ತಿ ಸಮರ್ಪಿಸಿ ಕುದರೇಲ್ಲೇಶ್ವರ ಕೃಪೆಗೆ ಪಾತ್ರರಾದರು.



ಯಲಬುರ್ಗಾ: ತಾಲೂಕಿನ ಹುಲೆಗುಡ್ಡ ಗ್ರಾಮದ ಕುದ್ರೆಲ್ಲೇಶ್ವರ ಜಾತ್ರೆ ಪ್ರಯುಕ್ತ ಮಹಾರಥೋತ್ಸವ ಅದ್ದೂರಿಯಾಗಿ ಜರುಗಿತು. ತಲ್ಲೂರು, ಮುರಡಿ, ತಲ್ಲೂರು ತಾಂಡಾ ಚಿಕ್ಕಮ್ಯಾಗೇರಿ, ತಾಂಡಾ ವಜ್ರಬಂಡಿ, ಸಾಲಭಾವಿ ಗೆದಗೇರಿ, ಮಕ್ಕಳ್ಳಿ ಜರಕುಂಟಿ, ಮದ್ಲೂರು, ಮುರಡಿ ತಾಂಡಾ, ಗುತ್ತೂರು ವಣಗೇರಿ, ಲಕಮನಗುಳೆ, ಮಂಡಲಮರಿ, ತರಲಕಟ್ಟಿ, ಗಾಣಧಾಳ, ಚಿಕ್ಕವಂಕಲಕುಂಟಾ, ಗೆದಗೇರಿ ತಾಂಡಾ, ಹುಲೇಗುಡ್ಡ ಗ್ರಾಮಸ್ಥರಿದ್ದರು.

100 ಹಾಸಿಗೆ ಆಸ್ಪತ್ರೆ ನಿರ್ಮಾಣಕ್ಕೆ ಸಚಿವ ತಂಗಡಗಿ ಭೂಮಿಪೂಜೆ

ಕ್ರೀಡಾಂಗಣ ನಿರ್ಮಾಣಕ್ಕೆ ಭೂಮಿ ನೀಡಿ

◆**ಕನಕಗಿರಿ:** ತಾಲೂಕು ಕೇಂದ್ರಕ್ಕೆ ಅಗತ್ಯ ಇರುವ ಬಹುತೇಕ ಮೂಲ ಸೌಲಭ್ಯ ಒದಗಿಸಲಾಗಿದೆ. ಯಾರಾದರೂ ದಾನಿಗಳು ಕನಿಷ್ಠ 5 ಎಕರೆ ಭೂಮಿ ನೀಡಿದರೆ ಇದೇ ವರ್ಷ ತಾಲೂಕು ಕ್ರೀಡಾಂಗಣ ನಿರ್ಮಾಣಕ್ಕೆ ಚಾಲನೆ ನೀಡಲಾಗುವುದು. ಒಟ್ಟು 3 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಾಣ ಮಾಡಲಾಗುವುದು ಎಂದು ಸಚಿವ ಶಿವರಾಜ ತಂಗಡಗಿ ಭರವಸೆ ನೀಡಿದರು.

ಪಟ್ಟಣದಲ್ಲಿ ನೂತನವಾಗಿ ನಿರ್ಮಾಣ ಆಗುತ್ತಿರುವ 100 ಹಾಸಿಗೆ ಆಸ್ಪತ್ರೆ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಭಾನುವಾರ ಮಾತನಾಡಿದರು.

ಕನಕಗಿರಿ ಪಟ್ಟಣದಲ್ಲಿ ಆಸ್ಪತ್ರೆ ನಿರ್ಮಾಣಕ್ಕೆ ಜಾಗ ಬೇಕಿತ್ತು. ಭೂಮಿ ನೀಡುವಂತೆ ಚನ್ನಮಲ್ಲ ಶ್ರೀಗಳನ್ನು ಕೇಳಿದ್ದರಿಂದ ಮರು ಮಾತನಾಡದೇ ಬರೋಬ್ಬರಿ 6 ಎಕರೆ ಭೂಮಿದಾನವಾಗಿ ನೀಡಿದ್ದಾರೆ. ಇದು ಶ್ರೀಗಳ ಹೆಚ್ಚುಗಾರಿಕೆ. ಕೊಡುವ ಕೈಗಳನ್ನೇ ಮತ್ತೇ ಬೇಡಬೇಕು ಎಂಬ ಮಾತಿನಂತೆ ಚನ್ನಮಲ್ಲ ಶ್ರೀಗಳೇ ತಾಲೂಕು ಕ್ರೀಡಾಂಗಣ ನಿರ್ಮಾಣಕ್ಕೆ ಭೂಮಿ ನೀಡಬೇಕು ಎಂದು ಮನವಿ ಮಾಡುತ್ತೇನೆ. ಅವರ ಹೊರತಾಗಿ ಯಾರಾದರೂ ಕನಿಷ್ಠ 5 ಎಕರೆ ಭೂಮಿ ನೀಡಲು ಮುಂದೆ ಬಂದರೆ, ಇದೇ ವರ್ಷ ಕ್ರೀಡಾಂಗಣ ನಿರ್ಮಾಣಕ್ಕೆ 3 ಕೋಟಿ ರೂ. ಅನುದಾನ ಮೀಸಲು ಇಡುತ್ತೇನೆ. ಕೂಡಲೇ ತಾಲೂಕು ಕ್ರೀಡಾಂಗಣ ನಿರ್ಮಾಣ ಕಾರ್ಯ ಆರಂಭವಾಗಲಿದೆ ಎಂದು ಭರವಸೆ ನೀಡಿದರು.

ಈಗಾಗಲೇ ಪ್ರಜಾಸೌಧ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಕನಕಗಿರಿ ತಾಲೂಕು ವ್ಯಾಪ್ತಿಯಲ್ಲಿ ತೋಟಗಾರಿಕೆ ಕ್ಷೇತ್ರ ಹೆಚ್ಚಾಗುತ್ತಿದೆ. ಇದರಿಂದ ಕೊಪ್ಪಳ ಜಿಲ್ಲೆ ಮಾತ್ರವಲ್ಲ ನೆರೆ ಜಿಲ್ಲೆಯ ರೈತರಿಗೆ ಅನುಕೂಲ ಆಗುವಂತೆ ತೋಟಗಾರಿಕೆ ಟೆಕ್ನಾಲಜಿ ಪಾರ್ಕ್ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ತೋಟಗಾರಿಕೆ ಟೆಕ್ನಾಲಜಿ ಪಾರ್ಕ್ ನಿರ್ಮಾಣಕ್ಕೆ ಈಗಾಗಲೇ 10 ಕೋಟಿ ರೂ. ನೀಡಲಾಗಿದೆ. ಅಧಿವೇಶನದ ಬಳಿಕ ಟೆಂಡರ್ ಪ್ರಕ್ರಿಯೆ ಶುರು ಆಗಲಿವೆ. ಸಾಂಸ್ಕೃತಿಕ ಭವನ ನಿರ್ಮಾಣ ಕಾರ್ಯ ನಡೆದಿದೆ. ಮುಂದಿನ ಕೆಲವು ತಿಂಗಳಿನಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದ್ದು, ಲೋಕಾರ್ಪಣೆ ಆಗಲಿದೆ. ಅಗ್ನಿ ಶಾಮಕ ಠಾಣೆ ಮಂಜೂರಾಗಿದೆ. ಬಸ್ ಡಿಪೋ ನಿರ್ಮಾಣಕ್ಕೆ ಪ್ರಪೋಸಲ್ ನೀಡಲಾಗಿದೆ ಎಂದು ತಿಳಿಸಿದರು.

ಒಂದೇ ವಿಧಾನಸಭೆ ಕ್ಷೇತ್ರದಲ್ಲಿ ಎರಡು ತಾಲೂಕು ಮಾಡಿದಾಗ ಎರಡೂ ಭಾಗದವರು ನನ್ನನ್ನು ಬೈದುಕೊಂಡರು. ನವಲಿ ಭಾಗದವರು ಕಾರಟಗಿ ತಾಲೂಕಿಗೆ ಸೇರಿಸುವಂತೆ ಕೇಳಿದ್ದರು. ಒಂದೊಮ್ಮೆ ಕಾರಟಗಿಗೆ ಸೇರಿದ್ದರೆ ಕೆಕೆಆರ್‌ಡಿಬಿ ಅನುದಾನ ಪಡೆಯಲು ಸಮಸ್ಯೆ ಆಗುತ್ತಿತ್ತು. ಒಂದೇ ಕ್ಷೇತ್ರದಲ್ಲಿ ಎರಡು ಆಸ್ಪತ್ರೆ ಹಾಗೂ ಎರಡು ಪ್ರಜಾಸೌಧ ಮಂಜೂರಿ ಮಾಡಿಸಿದ್ದು ರಾಜ್ಯದಲ್ಲೇ ಇದೇ ಮೊದಲು ಅಂದುಕೊಂಡಿದ್ದೇನೆ ಎಂದರು.

ಚನ್ನಮಲ್ಲ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಕನಕಗಿರಿ ಪಪಂ ಅಧ್ಯಕ್ಷೆ ತನ್ನುಶ್ರೀ ಟಿ.ಜೆ.ರಾಮಚಂದ್ರ, ಪಪಂ ಉಪಾಧ್ಯಕ್ಷ ಕಂಠಿರಂಗಪ್ಪ ನಾಯಕ, ಗಂಗಾಧರ ಸ್ವಾಮಿ, ರೆಡ್ಡಿ ಶ್ರೀನಿವಾಸ ಇದ್ದರು.



ಮೂಲ ಸೌಲಭ್ಯ ಒದಗಿಸಲು 13 ಕೋಟಿ

ಕನಕಗಿರಿಯ 100 ಹಾಸಿಗೆ ಆಸ್ಪತ್ರೆಗೆ ಒಟ್ಟು 42 ಕೋಟಿ ರೂ. ನೀಡಲಾಗಿದೆ. ಸುಮಾರು 29 ಕೋಟಿ ರೂ. ವೆಚ್ಚದಲ್ಲಿ ಕಟ್ಟಡ ನಿರ್ಮಾಣ ಮಾಡಲಾಗುವುದು. ಉಳಿದಂತೆ ವೈದ್ಯಕೀಯ ಉಪಕರಣ ಸೇರಿ ಮೂಲ ಸೌಲಭ್ಯ ಒದಗಿಸಲು 13 ಕೋಟಿ ನೀಡಲಾಗಿದೆ. ಇದರಲ್ಲಿ ಸರಕಾರ ನೇರವಾಗಿ ಶೇ.50ರಷ್ಟು ಹಾಗೂ ಕೆಕೆಆರ್ ಡಿಬಿಯ ಶೇ. 50 ರಷ್ಟು ಅನುದಾನ ಇದೆ. ಭೂಮಿ ನೀಡಿದರೆ ಕೋರ್ಟ್ ನಿರ್ಮಾಣ ಕಾರ್ಯಕ್ಕೂ ಅನುದಾನ ತರುತ್ತೇನೆ ಎಂದು ಶಿವರಾಜ ತಂಗಡಗಿ ಮಾಹಿತಿ ನೀಡಿದರು.

ಸ್ತ್ರೀಯರಿಗೆ ಪುರುಷರಷ್ಟೇ ಸಮಾನ ಸ್ಥಾನಮಾನ ನೀಡಿದ್ದು ಬಸವ ಧರ್ಮ

◆**ಕೊಪ್ಪಳ:** ಸ್ತ್ರೀಯರಿಗೆ ಸಮಾಜದಲ್ಲಿ ಪುರುಷರಷ್ಟೇ ಸಮಾನ ಸ್ಥಾನಮಾನ ನೀಡಿದ್ದು ಬಸವ ಧರ್ಮ. ಇಂಥ ಶ್ರೇಷ್ಠ ಧರ್ಮ ನೀಡಿದ ವಿಶ್ವ ಮಾನವ ಬಸವಣ್ಣ ಅವರನ್ನು ಒಂದು ಸಮುದಾಯಕ್ಕೆ ಸೀಮಿತ ಮಾಡಬಾರದು ಎಂದು ಮಾಜಿ ಶಾಸಕ ಪರಣ್ಣ ಮುನವಳ್ಳಿ ಅಭಿಪ್ರಾಯಪಟ್ಟರು.

ಗಂಗಾವತಿನಗರದ ಸಿಬಿಎಸ್ ಕಲ್ಯಾಣ ಮಂಟಪದಲ್ಲಿ ರಾಷ್ಟ್ರೀಯ ಬಸವದಳದಿಂದ ಆಯೋಜಿಸಿದ್ದ ರಾಜ್ಯಮಟ್ಟದ ಸಮಾವೇಶ, ಮಹಾದಂಡ ನಾಯಕರ ಸ್ಮರಣೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಭಾನುವಾರ ಮಾತನಾಡಿದರು.

ಇಂಥ ಶ್ರೇಷ್ಠ ಧರ್ಮದ ಆಧಾರ ಸ್ತಂಭ ಆಗಿರುವ

ವಚನಸಾಹಿತ್ಯ ಬೆಳಕಿಗೆತರಲುವಲ್ಲಿಫ.ಗು. ಹಳಕಟ್ಟಿ ಅವರ ಕೊಡುಗೆ ದೊಡ್ಡದಾಗಿದೆ. ಬಸವ ಧರ್ಮವನ್ನು ಹೆಚ್ಚು ಜನರಿಗೆ ಪರಿಚಯಿಸಿದ್ದು ರಾಷ್ಟ್ರೀಯ ಬಸವದಳ. ಇದರ ಪ್ರಥಮ ಮಹಿಳಾ ಜಗದ್ಗುರು ಮಾತೆ ಮಹಾದೇವಿ, ಲಿಂಗಾನಂದರು ಸಮಾಜವಾದಿ ಸಿದ್ದಾಂತದ ಬಸವಣ್ಣ ಅವರನ್ನು ಪ್ರಚಲಿತಕ್ಕೆ ತರುವುದರಲ್ಲಿ ಮಹತ್ತರ ಪಾತ್ರವಹಿಸಿದ್ದಾರೆ. ಮಹಾ ದಂಡನಾಯಕರಾಗಿದ್ದ ಅವರು ಹಾಕಿ ಕೊಟ್ಟಿರುವ ದಾರಿಯಲ್ಲಿ ಬಸವ ದಳದ ಕಾರ್ಯಕರ್ತರು ನಡೆದುಕೊಳ್ಳಬೇಕು. ಗಂಗಾವತಿಯಲ್ಲಿ ರಾಷ್ಟ್ರೀಯ ಬಸವದಳ ಪರಿಚಯಿಸುವ ಮೂಲಕ ಶರಣ ಚಿಂತಕ ಸಿ.ಎಚ್.ನಾರಿನಾಳ ಉತ್ತಮ ಕಾರ್ಯ ಮಾಡಿದ್ದಾರೆ. ಗಂಗಾವತಿಯಲ್ಲಿ ರಾಜ್ಯ ಮಟ್ಟದ ಸಮಾವೇಶ ಹಮ್ಮಿಕೊಂಡಿದ್ದು ಸಂತಸ ತಂದಿದೆ ಎಂದರು.

ರಾಷ್ಟ್ರೀಯಬಸವದಳದಹಿರಿಯರುಮತ್ತು ಚಿಂತಕಸಿ.ಎಚ್.ನಾರಿನಾಳಮಾತನಾಡಿದರು. ಬೆಂಗಳೂರಿನ ಕುಂಬಳಗೋಡು ಬಸವ ಗಂಗೋತ್ರಿಯ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ, ಮನಗುಂಡಿಯ ಬಸವಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಬೀದರ್ ಬಸವ ಮಂಟಪದ ಮಾತೆ ಸತ್ಯದೇವಿ, ಬಸವಕಲ್ಯಾಣದ ಬಸವ ಪ್ರಭು ಸ್ವಾಮೀಜಿ, ಬಸವರಾಜ ವೆಂಕಟಪುರ ಶರಣರು, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ವಿರುಪಾಕ್ಷಪ್ಪ ಸಿಂಗನಾಳ, ಗಾಳಿ ರುದ್ರಪ್ಪ, ದಿಲೀಪ್ ಕುಮಾರ್, ಎ.ಕೆ ಮಹೇಶ , ಪಂಪಣ್ಣ ಮನೋಹರ ಗೌಡ ಹೇರೂರು, ಬಸವರಾಜ ಇದ್ದರು.



ಶಿವಶರಣೆ ನೀಲೂರ ನಿಂಬೆಕ್ಕದೇವಿಯ ಭಕ್ತಿಗೀತೆಗಳ ಕೃತಿ ಲೋಕಾರ್ಪಣೆ

◆**ಅಫಜಲಪುರ:** ಸುಕ್ಷೇತ್ರ ನೀಲೂರ ಗ್ರಾಮದ ಶಿವಶರಣೆನಿಂಬೆಕ್ಕದೇವಿಯಜೀವನಚರಿತ್ರೆ ಹಾಗೂ ಐತಿಹಾಸಿಕ ಪವಾಡಗಳ ಕುರಿತು ಅಫಜಲಪುರದ ಹಿರಿಯ ಸಾಹಿತಿ ಬಸವರಾಜ ಹೂಗಾರ ಕೋರಳ್ಳಿ ಇವರು ರಚಿಸಿರುವ ಭಕ್ತಿಗೀತೆಗಳ ಕೃತಿಯನ್ನು ಪೂಜ್ಯ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು ಹಾಗೂ ಚಿನ್ಮಯಗಿರಿಯ ಶ್ರೀವೀರಮಹಾಂತ ಶಿವಾಚಾರ್ಯರು ಲೋಕಾರ್ಪಣೆಗೊಳಿಸಿದರು.

ತಾಲೂಕಿನ ನೀಲೂರ ಗ್ರಾಮದ ಶ್ರೀನಿಂಬೆಕ್ಕದೇವಿಯ ಜಾತ್ರಾ ಮಹೋತ್ಸವದ ಅಂಗವಾಗಿನಡೆದಸಮಾರಂಭದಲ್ಲಿಶ್ರೀ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು ಮಾತನಾಡಿ, ಈ ಭಾಗದಲ್ಲಿ ಐತಿಹಾಸಿಕ ಮತ್ತು ಧಾರ್ಮಿಕ ಕಾರ್ಯಗಳಿಂದ ಹೆಸರುವಾಸಿಯಾಗಿರುವ ಶಿವಶರಣೆ ನಿಂಬೆಕ್ಕದೇವಿಯು ಸಾಕಷ್ಟು ಪವಾಡಗಳನ್ನು ಮಾಡಿ ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದ್ದಾರೆ. ನೀಲೂರ ಗ್ರಾಮದ ಭಕ್ತರು ಯಾವತ್ತೂ ಕೂಡ ಧಾರ್ಮಿಕ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿರುವುದು ಸಂತಸ ತಂದಿದೆ ಎಂದರು.

ಗ್ರಾಮದ ಹಿರಿಯ ಮುಖಂಡ ಮಲ್ಲಿನಾಥ ಹಾಳಮಳ್ಳಿ ಅವರು ಮಾತನಾಡಿ, ಶಿವಶರಣೆ ನೀಲೂರ ನಿಂಬೆಕ್ಕದೇವಿಯ ಭಕ್ತಿಗೀತೆಗಳ ಕೃತಿ ಇಂದು ಲೋಕಾರ್ಪಣೆಯಾಗಿದ್ದು ನಮಗೆಲ್ಲ ಸಂತಸತಂದಿದೆ. ಈ ಕೃತಿಯಿಂದ ನಿಂಬೆಕ್ಕ ದೇವಿಯ ಐತಿಹಾಸಿಕ ಜೀವನ ಚರಿತ್ರೆಯು ಸಮಾಜದ ಮುನ್ನಲೆಗೆ ಬರಲಿದ್ದು ನಿಂಬೆಕ್ಕ ದೇವಿಯ ತತ್ವಸಿದ್ಧಾಂತ ಹಾಗೂ ಅವರ ಮಾರ್ಗದರ್ಶನದ ಹಾದಿಯಲ್ಲಿ ಎಲ್ಲರೂ ಸಾಗೋಣ ಎಂದು ತಿಳಿಸಿದರು.

ಸಮಾರಂಭದಲ್ಲಿ ಶಶಿಕುಮಾರ ದೇವರು ಮೇಳಕುಂದ, ಬಂಗಾರ ಜಡೆ ನೀಲಕಂಠೇಶ್ವರ ಹಿರೇಮಠದ ಧರ್ಮದರ್ಶಿ ಶರಣಯ್ಯ ಸ್ವಾಮಿಗಳು, ಮುಖ್ಯ ಅತಿಥಿಗಳಾಗಿ ಚಂದ್ರಶೇಖರ ಕರಜಗಿ, ಶರಣಬಸಪ್ಪ ಪದಕಿ, ರಮೇಶ್ ಸರಡಗಿ, ಗುರಯ್ಯ ಮಠ, ಮಲ್ಲಿನಾಥ ಹಾಳಮಳ್ಳಿ, ಭಗವಂತರಾವ ಕಾಮಜಿ, ಶಿವಲಿಂಗಪ್ಪ ಮುಗದಿ, ನಾಗಪ್ಪ ಠಕ್ಕಾ, ಬಾಬುರಾವ ಕುಲಕರ್ಣಿ, ಸಾಯಬಣ್ಣ ಹೂಗಾರ, ಮಲ್ಲಿನಾಥ ಕಾಮದಿ, ಅಂಬರೀಶ ಹೂಗಾರ ಕೋರಳ್ಳಿ, ವೈಜನಾಥ ಸಾವಳಗಿ, ಸಾತಲಿಂಗಪ್ಪ ಲೋಣಿ, ಶಿವಾನಂದ ಅಂಬಲಗಿ, ವಸಂತ ಜಾದವ, ಸುರೇಶ ಮುಗದಿ, ಅಪ್ಪಾಸಾಬ ಹಾಳಮಳ್ಳಿ, ಶರಣು ಹಾಳಮಳ್ಳಿ, ಶ್ರೀಶೈಲ್ ಕಾಮಜಿ, ಸೇರಿದಂತೆ ಅನೇಕರು ಉಪಸ್ಥಿತರಿದರು. ಗ್ರಂಥ ದಾಸೋಹಿಗಳಾದ ಲಿಂ.ನಾಗೇಶಪ್ಪಾ ಹಾಳಮಳ್ಳಿ ಕುಟುಂಬಸ್ಥರು ಹಾಜರಿದ್ದರು. ನಿರೂಪಣೆಯನ್ನು ಸಂಗಮನಾಥ ಹೂಗಾರ ನಡೆಸಿಕೊಟ್ಟರು.



ಮೇ ಅಂತ್ಯದೊಳಗೆ ತುಂಗಭದ್ರಾ ಜಲಾಶಯಕ್ಕೆ ಹೊಸ ಗೇಟ್ ಅಳವಡಿಕೆ

◆**ಸಿಂಧನೂರು:** ತುಂಗಭದ್ರಾ ಜಲಾಶಯಕ್ಕೆ ಹೊಸ ಗೇಟ್ ಅಳವಡಿಕೆ ಕಾರ್ಯ ಭರದಿಂದ ಸಾಗುತ್ತಿದ್ದು ಮೇ ಅಂತ್ಯದೊಳಗೆ ಪೂರ್ಣಗೊಳ್ಳುವ ವಿಶ್ವಾಸವಿದೆ ಎಂದು ಶಾಸಕ ಹಂಪನಗೌಡ ಬಾದರ್ಲಿ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತುಂಗಭದ್ರಾ ಮಂಡಳಿ ಹಾಗೂ ಮೂರು ರಾಜ್ಯಗಳ ಸಹಯೋಗದಲ್ಲಿ ಈ ಕಾಮಗಾರಿ ನಡೆಯುತ್ತಿದೆ.ಒಟ್ಟು 33 ಗೇಟ್‌ಗಳಲ್ಲಿ 18 ಗೇಟ್‌ಗಳು ಶೇ.90 ರಷ್ಟು ಪೂರ್ಣಗೊಂಡಿದ್ದು, ಉಳಿದವುಗಳ ಕಾಮಗಾರಿ ಪ್ರಗತಿಯಲ್ಲಿದೆ. ಏಪ್ರಿಲ್ 15ರೊಳಗೆ ಗೇಟ್ ಅಳವಡಿಕೆ ಪೂರ್ಣಗೊಳ್ಳಲಿದ್ದು,ಮೇ 15ರವರೆಗೆ ಚೈನ್ ಅಳವಡಿಸುವ ಕಾರ್ಯ ನಡೆಯಲಿದೆ ಎಂದರು.

ತುಂಗಭದ್ರಾ ಎಡದಂಡೆ ನಾಲೆಯ 13ನೇ ಮೈಲ್ ಬಸ್ಸಾಪುರ ಹತ್ತಿರ ಕಾಲುವೆ ಹೊಡೆದ ಪರಿಣಾಮ ಕೆರೆಗಳಿಗೆ ನೀರು ತುಂಬಿಸುವಲ್ಲಿ ಸಮಸ್ಯೆ ಉಂಟಾಗಿದೆ. ಈಗಾಗಲೇ ಅಧಿಕಾರಿಗಳ ಸಭೆ ನಡೆಸಿ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.ಮುಖ್ಯ ಕಾಲುವೆ ದುರಸ್ತಿಗೆ ಕನಿಷ್ಠ ಒಂದು ತಿಂಗಳು ಬೇಕಾಗಿದ್ದು, ತಾತ್ಕಾಲಿಕವಾಗಿ ಬಂಡ್ ನಿರ್ಮಿಸಿ 2000 ಕ್ಯೂಸೆಕ್ ನೀರು ಹರಿಸುವ ಮೂಲಕ ಸಮಸ್ಯೆ ಪರಿಹರಿಸಲು ಚರ್ಚೆ ನಡೆದಿದೆ ಎಂದು ಹೇಳಿದರು. ಸಿಂಧನೂರಿನಲ್ಲಿ ಕೆಲವರು ಏಕಪಾತ್ರಾಭಿನಯದಂತೆ ವರ್ತಿಸುತ್ತಿದ್ದು ಪ್ರತಿಭಟನೆ ನಡೆಸಿ ಮತ್ತೆ ಖರೀದಿ ಕೇಂದ್ರ ಆರಂಭಿಸಲು ಒತ್ತಾಯಿಸುತ್ತಿದ್ದಾರೆ ಎಂದು ಟೀಕಿಸಿದ ಶಾಸಕ, ಜೋಳ ಖರೀದಿ ಕೇಂದ್ರಗಳಲ್ಲಿ ಇರುವ ಗೊಂದಲಗಳನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಕಾಂಗ್ರೆಸ್ ಮುಖಂಡರಾದ ಖಾಜಿ ಮಲಿಕ್,ವೀರೇಶ ಹಟ್ಟಿ,ಮಲ್ಲನಗೌಡ ಮಾವಿನಮಡಗು,ರಂಗಾರೆಡ್ಡಿ,ಅಂಬ್ರೂಸ್,ರಾಮಣ್ಣ ಗೋನವಾರ ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಕೊರಡಕೇರಾ ಗ್ರಾಮದ ಸರ್ಕಾರಿ ಶಾಲಾ ಕೊಠಡಿ ಉದ್ಘಾಟನೆ

◆**ಕುಷ್ಟಗಿ:** ತಾಲೂಕಿನ ಕೊರಡಕೇರಾ ಗ್ರಾಮದ ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆಯ 10 ಶಾಲಾ ಕೊಠಡಿಗಳು ಹಾಗೂ ಶುದ್ಧ ಕುಡಿಯುವ ನೀರಿನ ಘಟಕ, ಮತ್ತು ಶಾಲಾ ಗ್ರಂಥಾಲಯ, ಸ್ಮಾರ್ಟ್ ಕ್ಲಾಸ್‌ಅನ್ನು ಶಾಸಕ ಹಾಗೂ ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ತಮ್ಮ ಸ್ವ-ಗ್ರಾಮವಾದ ಕೊರಡಕೇರಾದಲ್ಲಿ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ನಮ್ಮ ಸರ್ಕಾರಿ ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯಬೇಕು. ಆದರೆ ಶಿಕ್ಷಕರಾದವರು ಮಕ್ಕಳಿಗೆ ಉತ್ತಮ ಕಲಿಕೆ ಕಲಿಸುವ ಮೂಲಕ ಅವರ ಕೀರ್ತಿ ಗಳಿಸಲು ಮುಂದಾಗಬೇಕು ಮತ್ತು ಸರ್ಕಾರ ಸೌಲಭ್ಯಗಳನ್ನು ತಲುಪಿಸಬೇಕು. ಪ್ರಾಥಮಿಕ ಹಂತದಲ್ಲಿ ಒಳ್ಳೆಯ ಶಿಕ್ಷಣ ನೀಡಿದಾಗ ಮಾತ್ರ ಮುಂದೆ ಹತ್ತನೇ ತರಗತಿ ಪಾಸ್ ಆಗಲು ವಿದ್ಯಾರ್ಥಿಗಳಿಗೆ ಸುಲಭವಾಗುತ್ತದೆ ಅದಕ್ಕಾಗಿ ಪ್ರಾಥಮಿಕ ಹಂತದ ಪ್ರತಿಯೊಬ್ಬ ಶಿಕ್ಷಕ, ಶಿಕ್ಷಕಿಯರು 1 ರಿಂದ 7ನೇ ತರಗತಿ ಮಕ್ಕಳಿಗೆ ಉತ್ತಮ ಪಾಠ ಹೇಳಿಕೊಡುವ ಮೂಲಕ ಒಳ್ಳೆಯ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಮುಂದಾಗಬೇಕು ಎಂದು ಹೇಳಿದರು.



ಕಾರ್ಯಕ್ರಮ ಅಧ್ಯಕ್ಷತೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಉಮಾದೇವಿ ಬಸಾಪೂರ ಅವರು ವಹಿಸಿ ಮಾತನಾಡಿದರು.

ಎಸ್‌ಡಿಎಂಸಿ ಅಧ್ಯಕ್ಷರಾದ ಶಿವಾನಂದಯ್ಯ ಗುರುವಿನ, ಉಪಾಧ್ಯಕ್ಷರಾದ ಲಲಿತಾ ಪೂಜಾರ, ಗ್ರಾಮದ ಹಿರಿಯರಾದ ತೇಜಯ್ಯ ಗುರುವಿನ, ಭೀಮನಗೌಡ ಪಾಟೀಲ, ಸಂಗಣ್ಣ ಕರಡಿ, ಹನಮಪ್ಪ ಕೊಳ್ಳಿ, ಬಸನಗೌಡ ಪಾಟೀಲ, ಶರಣಪ್ಪ ಗುಗ್ರಿ, ಕಲ್ಲಪ್ಪ ಹಿರೇಮನಿ, ಶಿಕ್ಷಕರ ಸಂಘದ ಅಧ್ಯಕ್ಷರಾದ ನಿಂಗಪ್ಪ ಗುನ್ನಾಳ, ಮುಖ್ಯ ಶಿಕ್ಷಕರಾದ ಬೀರಪ್ಪ ಕುರಿ, ಎಸ್‌ಡಿಎಂಸಿ ಸರ್ವ ಸದಸ್ಯರು ಇತರರಿದ್ದರು.

ಮಾ.27ರಿಂದ ಎರಡು ದಿನಗಳ ಯುಕ್ತಿ-2026 ಕಾರ್ಯಕ್ರಮ: ಗಾದಗೆ

◆**ಕಲಬುರಗಿ:** ನಗರದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಕಲಬುರಗಿಯ ಸ್ನಾತಕೋತ್ತರ ಕೇಂದ್ರ ಹಾಗೂ ಪ್ರಾದೇಶಿಕ ಕಚೇರಿಯಲ್ಲಿ ಇದೇ ಮಾ.27, 28ರಂದು ಎರಡು ದಿನಗಳ ಕಾಲ ಪ್ರಾದೇಶಿಕ ಮಟ್ಟದ ತಾಂತ್ರಿಕ ನಿರ್ವಹಣೆ-ಸಾಂಸ್ಕೃತಿಕ ಉತ್ಸವ 2026 (ಮೂರನೇ ಆವೃತ್ತಿ) ಜರುಗಲಿದೆ ಎಂದು ಕಾರ್ಯಕ್ರಮದ ಮುಖ್ಯ ಸಂಯೋಜಕ ಪ್ರೊ. ಬಸವರಾಜ ಗಾದಗೆ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಕಾರ್ಯಕ್ರಮದ ಉದ್ಘಾಟನೆಗೆ ಬೀದರ್ ಗುರುನಾನಕ್ ಗುರುದ್ವಾರದ ಅಧ್ಯಕ್ಷ ಡಾ.ಸರದಾರ್ ಬಲಬೀರ್‌ಸಿಂಗ್,ಮುಖ್ಯ ಅತಿಥಿಗಳಾಗಿ ಕೆಕೆಆರ್‌ಟಿಸಿ ನಿಗಮದ ಅಧ್ಯಕ್ಷ ಅರುಣಕುಮಾರ ಎಂ.ವೈ.ಪಾಟೀಲ್, ಗೌರವ ಅತಿಥಿಗಳಾಗಿ ವಿತಾವಿ ಬೆಳಗಾವಿ ಸದಸ್ಯ ಡಾ.ಸಂಗಪ್ಪ ಎಸ್.ಬಿ., ಮೈಸೂರಿನ ಡಾ.ಎ.ಪಿ.ಪಾರ್ಥ, ಕಾರ್ಯಕಾರಿ ಮಂಡಳಿ ಸದಸ್ಯ ಮಹಾಂತೇಶ ಕೌಲಗಿ ಆಗಮಿಸಲಿದ್ದು, ಅಧ್ಯಕ್ಷತೆಯನ್ನು ವಿತಾವಿ ಬೆಳಗಾವಿ ಕುಲಪತಿ ಡಾ.ವಿದ್ಯಾಶಂಕರ ಎಸ್. ವಹಿಸಲಿದ್ದಾರೆ ಎಂದರು.

ಬೆಳಗಾವಿ ವಿತಾವಿ ಕುಲಸಚಿವ ಡಾ.ಪ್ರಸಾದ್ ಬಿ.ರಾಂಪುರೆ, ಡಾ.ಉಜ್ವಾಲ್ ಯು.ಜೆ., ಡಾ.ಪ್ರಶಾಂತ ನಾಯಕ್, ಡಾ.ಶುಭಾಂಗಿ ಡಿಸಿ, ಡಾ.ಬಸವರಾಜ ಗಾದಗೆ, ಡಾ.ಅಂಬರೀಶ್ ಭದ್ರಶೆಟ್ಟಿ, ಡಾ.ಮನೀಶ್ ಪಿಡಿ ಸೇರಿದಂತೆ ಪ್ರಾದೇಶಿಕ ಕಚೇರಿಯ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ಸಂಶೋಧನಾ ನಿರತ ವಿದ್ಯಾರ್ಥಿಗಳು ಉಪಸ್ಥಿತರಿರಲಿದ್ದಾರೆ ಎಂದರು.

ಮಾ.28ರ ಸಂಜೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಘನ ಅಧ್ಯಕ್ಷತೆಯನ್ನು ವಿಧಾನ ಪರಿಷತ್ ಸದಸ್ಯ, ಹೆಚಕೆಇ ಅಧ್ಯಕ್ಷ ಶಶೀಲ್ ನಮೋಶಿ,ಶಾಸಕಿ ಖನೀಜ್ ಫಾತಿಮಾ, ಶರಣಬಸವೇಶ್ವರ ಸಂಸ್ಥಾನದ ಕಾರ್ಯದರ್ಶಿ ಬಸವರಾಜ ದೇಶಮುಖ, ಕೆಬಿಎನ್ ಕುಲಪತಿ ಸೈಯದ್ ಮಹಮದ್ ಅಲಿ ಅಲ್ ಹುಸೇನಿ ಹಾಗೂ ಎಸ್ ಆರ್ ರೆಡ್ಡಿ ಸೇರಿದಂತೆ ಹಲವರು ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಂಗೀತ ಕಾರ್ಯಕ್ರಮಗಳಲ್ಲಿ ರಾಜೇಶ್ ಕೃಷ್ಣನ್ ,ಡಾ.ಶಮಿತಾ ಮಾಲನಡ್,ರಘು ಅಲಿಯಾಸ್ ರಾಗಿಣಿ,ಮೆಹುಲ್ ಇ ಸಬ್ರಿ ಬ್ರದರ್ಸ್ ರಸಮಂಜರಿ, ಸವಾರಿ ದಿ ಫ್ಯೂಷನ್ ಬ್ಯಾಂಡ್, ಸ್ವರ ಸಂಗೀತ ಶಿವಾನಿ ಸ್ವಾಮಿ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಡಾ.ಶುಭಾಂಗಿ ಡಿಸಿ ಕಾರ್ಯಕ್ರಮದ ನಿರೂಪಣೆಯನ್ನು ನಡೆಸಿಕೊಡಲಿದ್ದಾರೆ.

ಮಹಾಂತೇಶ ಕೌಲಗಿ, ಶಿವರಾಮಗೌಡ,ಡಾ. ಅಂಬರೀಶ್ ಭದ್ರಶೆಟ್ಟಿ, ಮಾಣಿಕ ಪಿಡಿ, ವಿರೇಶ್ ಪೂಜಾರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಎಂಜಿನಿಯರಿಂಗ್ ವಿದ್ಯಾರ್ಥಿಗಳು ಭಾಗಿ

ಕಲ್ಯಾಣ ಕರ್ನಾಟಕ ಭಾಗದ ಎಲ್ಲಾ ವಿಶ್ವವಿದ್ಯಾಲಯ ಹಾಗೂ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಈ ಉತ್ಸವದಲ್ಲಿ ಭಾಗಿಯಾಗುತ್ತಿದ್ದು, ಮಕ್ಕಳಲ್ಲಿ ತಾಂತ್ರಿಕ ನೈಪುಣ್ಯತೆ ಹಾಗೂ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಮಕ್ಕಳಲ್ಲಿನ ಕೌಶಲ್ಯವನ್ನು ಹೊರಹಾಕುವ ಕಾರ್ಯಕ್ರಮ ಇದಾಗಿದ್ದು, **1500** ಜನ ವಿದ್ಯಾರ್ಥಿಗಳು ಭಾಗಿಯಾಗಲಿದ್ದಾರೆ. ನೋಂದಣಿ ಪ್ರಕ್ರಿಯೆ ವಿಶ್ವವಿದ್ಯಾಲಯಕ್ಕೆ ಬಂದೆ ಮಾಡಿಸಬೇಕು. ಎರಡು ದಿನಗಳ ಕಾರ್ಯಕ್ರಮದಲ್ಲಿ ಮಂಥನ ಎನ್ನುವ ತಾಂತ್ರಿಕ ಸ್ಪರ್ಧೆಗಳ ಪ್ರಕಲ್ಪ ಪ್ರಸ್ತುತಿ, ಚಾಣಾಕ್ಷ, ರೋಬೊಸಮರ, ಪ್ರಜ್ಞಾನ, ವಾಗ್ಮಿತ್ತ ಚಿಂತನ ಎನ್ನುವ ಮ್ಯಾನೇಜ್ಮೆಂಟ್ ಸ್ಪರ್ಧೆಗಳಲ್ಲಿ ದಕ್ಷ, ಶ್ರೇಷ್ಠವಿತ್ತ, ವಿಪಣನ್ ಮಾನವ ಸಂಪಾಧನ, ಸುಮೇಧ್, ಕಲಾಚಿತ್ರ ಸೇರಿದಂತೆ ಹಲವು ಸ್ಪರ್ಧಾತ್ಮಕ ಕಾರ್ಯಕ್ರಮ ನಡೆಯಲಿದೆ ಎಂದು ವಿತಾವಿ ಮಂಡಳಿ ಸದಸ್ಯ ಮಹಾಂತೇಶ ಕೌಲಗಿ ತಿಳಿಸಿದರು.

ಅಕ್ಕ ಕೆಫೆ ಪ್ರಾರಂಭಕ್ಕೆ ಜಿಪಂನಿಂದ ಸಕಲ ಸಿದ್ಧತೆ

▶**ವಾಗೀಶ ವೀ. ಪಾಟೀಲ**

◆**ರಾಯಚೂರು:** ಜಿಲ್ಲೆಯಲ್ಲಿನ ಮಹಿಳಾ ಸ್ವಸಹಾಯ ಗುಂಪುಗಳನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವುದಕ್ಕೆರಾಜ್ಯ ಸರ್ಕಾರ ಜಾರಿಗೆ ತಂದಿರುವ ಅಕ್ಕ ಕೆಫೆ ಹಾಗೂ ಕುಕ್ಕುಟ ಸಂಜೀವಿನಿ ಯೋಜನೆಗಳನ್ನು ಅನುಷ್ಠಾನ ಗೊಳಿಸುವುದಕ್ಕೆ ಜಿಪಂ ಸಕಲ ಸಿದ್ಧತೆ ಕೈಗೊಳ್ಳುತ್ತಿದೆ.

2024-25ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಎರಡು ಅಕ್ಕ ಕೆಫೆ ಮಂಜೂರಾಗಿದ್ದರೆ ಪ್ರಸಕ್ತ ಸಾಲಿನಲ್ಲಿ ಏಳು ಮಂಜೂರಾಗಿವೆ. ಕುಕ್ಕುಟ ಸಂಜೀವಿನಿ ಯೋಜನೆಯಲ್ಲಿ ಎರಡು ಗುಂಪುಗಳಿಂದ ಕೇವಲ ಮೊಟ್ಟೆ ಹಾಗೂ ಎರಡು ಗುಂಪುಗಳಿಂದ ಮಾಂಸದ ಕೋಳಿಗಳ ಸಾಕಾಣಿಕೆ ಇಗಾಗಲೇ ಆರಂಭವಾಗಿದೆ.

ಅಕ್ಕಕೆಫೆಯಲ್ಲಿಅಗ್ಗದ ದರದಲ್ಲಿಶುಚಿ, ರುಚಿಯಾದ ಪದಾರ್ಥಗಳನ್ನು ಸಾರ್ವಜನಿಕರಿಗೆ ನೀಡುವುದು ಹಾಗೂ ಸರ್ಕಾರಿ ಕಚೇರಿಗಳಲ್ಲಿ ಆಯೋಜಿಸುವ ಕಾರ್ಯಕ್ರಮಗಳಿಗೆ ಬೇಕಾಗುವ ಊಟ, ಉಪಹಾರ ಸೇರಿದಂತೆ ಆಹಾರ ಪದಾರ್ಥಗಳನ್ನು ಅಕ್ಕ ಕೆಫೆ ಮೂಲಕ ಸರಬರಾಜು ಮಾಡುವುದಕ್ಕೆ ಕ್ರಮ.

ಕುಕ್ಕುಟ ಸಂಜೀವಿನಿ ಯೋಜನೆಯಡಿಯಲ್ಲಿ ಬರುವಮೊಟ್ಟೆಗಳನ್ನು ಸರ್ಕಾರಿವಸತಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಹಾಗೂ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ನೀಡುವುದಕ್ಕೆ ಖರೀದಿಸಲಾಗುತ್ತಿದೆ. ಕೋಳಿ ಮಾಂಸವನ್ನು ವಿದ್ಯಾರ್ಥಿ ನಿಲಯಗಲ್ಲಿ ತಯಾರಿಸುವ ಮೆನುಗೆ ಪೂರೈಸಲಾಗುತ್ತಿದೆ. ಅಕ್ಕ ಕೆಫೆ 2024-25ನೇ ಸಾಲಿನಲ್ಲಿ ಲಿಂಗಸುಗೂರು ತಾಪಂ ಆವರಣದಲ್ಲಿ ಪ್ರಾರಂಭವಾಗಿದೆ. ಸಿಂಧನೂರಿನಲ್ಲಿ ನೂತನ ಕಟ್ಟಡ ನಿರ್ಮಾಣವಾಗುತ್ತಿದೆ ಪೂರ್ಣಗೊಂಡ ತಕ್ಷಣ ಆರಂಭಿಸಲಾಗುವುದು. 2025-26ನೇ ಸಾಲಿನಲ್ಲಿ ಜಿಪಂ ಆವರಣದಲ್ಲಿ(ಮಂಗಳ ಮುಖಿಯರ ಗುಂಪಿಗೆ), ಮಹಾನಗರ ಪಾಲಿಕೆ ಆವರಣದಲ್ಲಿ, ಮಹರ್ಷಿ ವಲ್ಮೀಕಿ ವಿವಿ ಆವರಣದಲ್ಲಿ ಹಾಗೂ ತಾಯಿ ಮಕ್ಕಳ ಆಸ್ಪತ್ರೆ ಆವರಣ ಸೇರಿ ರಾಯಚೂರು ತಾಲೂಕಿನಲ್ಲಿ ನಾಲ್ಕು. ದೇವದುರ್ಗ ಸರ್ಕಾರಿ ಅತಿಥಿ ಗೃಹ, ಮಾನವಿ ಹೊಸ ತಾಪಂ ಆವರಣ ಹಾಗೂ ಸಿರವಾರದಲ್ಲಿ ಜಾಗೆ ಇಲ್ಲದ ಕಾರಣಕ್ಕೆ ಮಸ್ಕಿಯ ಹಳೆ ಆರ್‌ಎಸ್‌ಕೆ ಕಟ್ಟಡಕ್ಕೆ ಸ್ಥಳಾಂತರಿಸಲಾಗುತ್ತಿದೆ.

ಕುಕ್ಕುಟ ಸಂಜೀವಿನಿ ಯೋಜನೆಯಲ್ಲಿ ರಾಯಚೂರಿನ ಪಶುಸಂಗೋಪನಾ ಇಲಾಖೆಯ ಆವರಣದಲ್ಲಿನ ಕಟ್ಟಡದಲ್ಲಿ ಮಾಂಸದ ಕೋಳಿ ಸಾಕಾಣಿಕೆ ಇಗಾಗಲೇ ಮಾಡಲಾಗುತ್ತಿದೆ. ದೇವದುರ್ಗದಲ್ಲಿ 1500 ನಾಟಿ ಮೊಟ್ಟೆ ಕೋಳಿ ಸಾಕಾಣಿಕೆ, ಲಿಂಗಸುಗೂರು ಒಂದು, ಮಾನವಿಯಲ್ಲಿ ಎರಡು, ಸಿಂಧನೂರು ಎರಡು ಕೋಳಿ ಸಾಕಾಣಿಕಾ ಕೇಂದ್ರಗಳು ಆರಂಭಿಸಲಾಗುತ್ತಿವೆ.

ಮೊಟ್ಟೆ ಕೋಳಿ ಸಾಕಾಣಿಕೆ ಹೆಚ್ಚು ಕಾಲಾವಧಿ ಬೇಕಾಗುವುದರಿಂದ ಹೆಚ್ಚೆಚ್ಚು ಮಾಂಸದ ಕೋಳಿ ಸಾಕಾಣಿಕೆಗೆ ಮಹಿಳಾ ಗುಂಪುಗಳು ಆಸಕ್ತಿ ತೋರಿಸುತ್ತಿದ್ದಾರೆ. ಮೊಟ್ಟೆ ಸಾಕಾಣಿಕೆಗೆ ಅವಧಿಯಂತೆ ಹೆಚ್ಚಿನ ಬಂಡವಾಳವೂ ಬೇಕಾಗುತ್ತದೆ.

ಅಕ್ಕ ಕೆಫೆಗಳಲ್ಲಿ ಶುಚಿ, ರುಚಿ, ಸ್ಥಳೀಯ ಆಹಾರ ಪದಾರ್ಥಗಳ ತಯಾರಿಕೆಗೆ ಮೊದಲ ಆದ್ಯತೆಯನ್ನು ನೀಡಲಾಗುವುದು. ಇದರಿಂದ ಸ್ವಸಹಾಯ ಸಂಘಗಳ ಮೂಲಕ ಕಡಿಮೆ ದರದಲ್ಲಿ ಹಾಗೂ ಉತ್ತಮ ಗುಣಮಟ್ಟದ ಆಹಾರ ನೀಡುವುದರಿಂದ ಸಂಘಗಳಿಗೂ ಹಾಗೂ ಸಾರ್ವಜನಿಕರಿಗೂ ಲಾಭವಾಗಲಿದೆ. ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಒಂದೆರಡು ಅಕ್ಕ ಕೆಫೆಗಳು ಮಂಜೂರಾಗಿದ್ದರೆ ರಾಯಚೂರು ಜಿಲ್ಲೆ ಒಟ್ಟು 9 ಮಂಜೂರಾಗಿವೆ.

■ **ಈಶ್ವರ ಕಾಂದೂ, ಜಿಪಂ ಸಿಇಒ**

ಕಿರುಸುದ್ದಿ

ಗ್ರ್ಯಾಜುಯೇಷನ್ ಡೇ

ಕೊಟ್ಟೂರು: ಪಟ್ಟಣದ ವಿದ್ಯಾಭಾರತಿ ಇಂಗ್ಲಿಷ್ ಮಿಡಿಯಂ ಸ್ಕೂಲ್‌ನಲ್ಲಿ ಕಿಂಡರ್ ಗಾರ್ಟನ್ ವಿಭಾಗದ ವಿದ್ಯಾರ್ಥಿಗಳ ಗ್ರ್ಯಾಜುಯೇಷನ್ ಡೇ ಕಾರ್ಯಕ್ರಮ ಭಾನುವಾರ ಅತ್ಯಂತ ಅದ್ದೂರಿಯಾಗಿ ಹಾಗೂ ಸಂಭ್ರಮದಿಂದ ನೆರವೇರಿತು. ಶಾಲೆಯ ಅಧ್ಯಕ್ಷ ಜೆ.ಕುಮಾರಸ್ವಾಮಿ ಅವರು ಅಧ್ಯಕ್ಷತೆ ವಹಿಸಿ, ಮಕ್ಕಳ ಪ್ರತಿಭೆಯನ್ನು ಮೆಚ್ಚಿದರು. ಕಾರ್ಯದರ್ಶಿ ಬಸವರಾಜ್ ಹಾಗೂ ನಿರ್ದೇಶಕರಾದ ಹರ್ಷ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ವಿದ್ಯಾರ್ಥಿಗಳ ಸಾಧನೆಗೆ ಅಭಿನಂದನೆ ಸಲ್ಲಿಸಿದರು. ಮಕ್ಕಳ ಮನಮೋಹಕ ನೃತ್ಯಗಳು ಹಾಗೂ ಗ್ರ್ಯಾಜುಯೇಷನ್ ಸಮಾರಂಭದ ವಿವಿಧ ಹಂತಗಳು ಪ್ರೇಕ್ಷಕರ ಮನಸೆಳೆದವು. ಪುಟಾಣಿಗಳ ಆತ್ಮವಿಶ್ವಾಸ ಹಾಗೂ ವೇದಿಕೆ ಮೇಲಿನ ಪ್ರದರ್ಶನ ಎಲ್ಲರಲ್ಲೂ ಸಂತಸ ಮೂಡಿಸಿತು. ಜೆ.ಕುಮಾರಸ್ವಾಮಿ ಮತ್ತು ಡಾ.ಜೆ.ಬಸವರಾಜ್ ಮಾತನಾಡಿ, ಮಕ್ಕಳ ಸಮಗ್ರ ಅಭಿವೃದ್ಧಿಗೆ ಶಾಲೆಯ ಪಾತ್ರವನ್ನು ಪ್ರಶಂಸಿಸಿದರು. ಇಂತಹ ಕಾರ್ಯಕ್ರಮಗಳು ಮಕ್ಕಳಲ್ಲಿ ಧೈರ್ಯ ಮತ್ತು ನಾಯಕತ್ವ ಗುಣಗಳನ್ನು ಬೆಳೆಸುತ್ತವೆ ಎಂದು ಅಭಿಪ್ರಾಯಪಟ್ಟರು. ಯಶಸ್ಸಿಗೆ ಪೋಷಕರು ಹರ್ಷವ್ಯಕ್ತಪಡಿಸಿ ಶಾಲೆಯ ಪ್ರಯತ್ನಗಳನ್ನು ಕೊಂಡಾಡಿದರು. ಮುಖ್ಯೋಪಾಧ್ಯಾಯರಾದ ಚಿರಂಜೀವಿ ಹನಸಿ ಹಾಗೂ ಎಲ್ಲ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ಪೋಷಕರು ಉಪಸ್ಥಿತರಿದ್ದರು.

ನಾಗನಾಥೇಶ್ವರ, ಶಿರಿಗೇರಮ್ಮ ಜಾತ್ರೆಗಳ ಪೂರ್ವಭಾವಿ ಸಭೆ



ಕುರುಗೋಡು: ಸಮೀಪದ ಶಿರಿಗೇರಿ ಇದೇ ತಿಂಗಳ 25 ಬುಧುವಾರ ಮತ್ತು 27 ಶುಕ್ರವಾರ ರಂದು ಜರುಗುವ ಗ್ರಾಮ ಅಧಿ ದೇವರಾದ ಶ್ರೀನಾಗನಾಥೇಶ್ವರ ಹಾಗೂ ಶಿರಿಗೇರಮ್ಮ ದೇವಿ ಜಾತ್ರೆಯ ನಿಮಿತ್ತವಾಗಿ ಇಲ್ಲಿನ ಗ್ರಾಮ ಪಂಚಾಯತಿಯಿಂದ ಪೂರ್ವಭಾವಿ ಸಭೆ ನಡೆಸಲಾಯಿತು. ಈ ವೇಳೆ ಮಾತನಾಡಿದ ಗ್ರಾಪಂ ಪಿಡಿಒ ಪೀರಸಾಬ್ ರಥೋತ್ಸವವನ್ನು ಅಚ್ಚುಕಟ್ಟಾಗಿ ಹಾಗೂ ವಿಜೃಂಭಣೆಯಿಂದ ನಡೆಸಿಕೊಡಬೇಕಾಗಿದೆ. ಇದರಲ್ಲಿ ಗ್ರಾಮ ಆಡಳಿತ ಮತ್ತು ಗ್ರಾಮ ಸದಸ್ಯರ ಮುತುವರ್ಜಿ ಅತ್ಯವಶ್ಯಕ. ಜಾತ್ರಾ ಸಂದರ್ಭದಲ್ಲಿ ಯಾವ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ತಿಳಿಸಬೇಕೆಂದರು. ಸಭೆಯಲ್ಲಿ ಭಾಗವಹಿಸಿದ್ದ ಸದಸ್ಯರು ತೇರು ಬೀದಿಯಿಂದ ಬಸವಣ್ಣನ ಗುಡಿವರೆಗೆ ರಸ್ತೆ ದುರಸ್ತಿಗೊಳಿಸಿ ಅಗಲೀಕರಣ ಮಾಡಬೇಕು. ರಸ್ತೆಗೆ ಅಡ್ಡವಾಗಿರುವ ಬೀದಿಬದಿ ಶೆಡ್ ಗಳನ್ನು ತೆರವುಗೊಳಿಸಬೇಕು. ಎಲ್ಲಾ ಮುಖ್ಯ ರಸ್ತೆಗಳನ್ನು ದುರಸ್ತಿಗೊಳಿಸಿ ಸ್ವಚ್ಛತಾ ಕಾರ್ಯ ಹಮ್ಮಿಕೊಳ್ಳಬೇಕು. ಕುಡಿಯುವ ನೀರಿನ ಭಾವ ಉಂಟಾಗದಂತೆ ಭಕ್ತಾದಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ ಕೊಡಬೇಕು. ಬೀದಿ ದೀಪ ಸೇರಿದಂತೆ ಎಲ್ಲಾ ಮೂಲಭೂತ ಸೌಕರ್ಯ ಒದಗಿಸಬೇಕೆಂದರು. ಆಯಾ ವಾರ್ಡಿನ ಸದಸ್ಯರು ತಮ್ಮ ತಮ್ಮ ಏರಿಯಾಗಳಲ್ಲಿ ಕಾಮಗಾರಿ ಕೈಗೊಂಡು ಪೂರ್ಣಗೊಳಿಸಬೇಕೆಂದರು. ಇದಕ್ಕೆ ಎಲ್ಲ ಸದಸ್ಯರ ಅನುಮೋದನೆ ದೊರೆಯಿತು. ಸಭೆಯಲ್ಲಿ ಹೆಚ್ ದ್ಯಾವಣ್ಣ, ಅಡಿವೆಯ ಸ್ವಾಮಿ, ಬಿ ಉಮೇಶ, ಗೋಡೆ ಚಿನ್ನಪ್ಪ, ನಾಗರಾಜ, ಗುಡಟ್ಟಿ ಈರಣ್ಣ, ಅಲಿಭಾ?ಾ ,ಕರಿಬಸಪ್ಪ, ಕುಂಬಾರ್ ಬಸವರಾಜ, ರಾಘವೇಂದ್ರ, ಸದ್ದಾಂ, ಅನಿಲ್, ಸಲೀಂ ಸೇರಿದಂತೆ ಸದಸ್ಯರು ಇದ್ದರು.

ಹೃದಯಾಘಾತದಿಂದ ನೀರಗಂಟಿ ಸಾವು

ವಿಜಯನಗರ: ಹೊಸಪೇಟೆ ತಾಲೂಕಿನ ಸೀತಾರಾಮ ತಾಂಡಾ ಗ್ರಾ.ಪಂ.ನಲ್ಲಿ ನೀರಗಂಟಿಯಾಗಿ ಕರ್ತವ್ಯನಿರ್ವಹಿಸುತ್ತಿದ್ದ ಗಂಗಪ್ಪ ಎಲ್.(58) ಹೃದಯಘಾತದಿಂದ ಸಾವನ್ನಪ್ಪಿರುವ ಘಟನೆ ಶನಿವಾರ ಸಂಜೆ ನಡೆದಿದೆ. ಸೀತಾರಾಮ ತಾಂಡಾದ ಗ್ರಾ.ಪಂಯಲ್ಲಿ ನೀರಗಂಟಿಯಾಗಿ ಕಳೆದ 29 ವರ್ಷಗಳ ಕಾಲದಿಂದ ಕಾರ್ಯನಿರ್ವಹಿಸುತ್ತಿದ್ದು



ಗಂಗಪ್ಪ ಎಲ್. ಅವರು ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದ ಅವರು, ಮತ್ತೆ ಕೆಲಸಕ್ಕೆ ಹೋಗಿದ್ದರು. ಕೆಲಸದ ವೇಳೆ ಏಕಾಏಕಿ ಕುಸಿದು ಬಿದ್ದಿದ್ದಾರೆ. ತಕ್ಷಣ ಹೊಸಪೇಟೆಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕೊಪ್ಪಳ ಕಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಿಸದೇ, ನಿಧನರಾಗಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಕೊಟ್ಟೂರು: ಪಟ್ಟಣದ ವಿದ್ಯಾಭಾರತಿ ಇಂಗ್ಲಿಷ್ ಮಿಡಿಯಂ ಸ್ಕೂಲ್‌ನಲ್ಲಿ ಕಿಂಡರ್ ಗಾರ್ಟನ್ ವಿಭಾಗದ ವಿದ್ಯಾರ್ಥಿಗಳ ಗ್ರ್ಯಾಜುಯೇಷನ್ ಡೇ ಕಾರ್ಯಕ್ರಮ ಭಾನುವಾರ ಅತ್ಯಂತ ಅದ್ದೂರಿಯಾಗಿ ಹಾಗೂ ಸಂಭ್ರಮದಿಂದ ನೆರವೇರಿತು.

ನಂದಿಪುರ ಮಠಕ್ಕೆ ಮುಸ್ಲಿಂ ಬಾಂಧವರ ಭೇಟಿ

ಹಗರಿಬೊಮ್ಮನಹಳ್ಳಿ: ತಾಲೂಕಿನ ನಂದಿಪುರ ಪುಣ್ಯಕ್ಷೇತ್ರದಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ಸಾಮೂಹಿಕ ಪ್ರಾರ್ಥನೆಯ ಬಳಿಕ ಮುಸ್ಲಿಂ ಬಾಂಧವರು ಇಲ್ಲಿನ ಶ್ರೀಗುರು ದೊಡ್ಡ ಬಸವೇಶ್ವರ ಸ್ವಾಮಿಯ ಮಠಕ್ಕೆ ಭೇಟಿ ನೀಡಿದರು. ಗದ್ದಿಕೆರೆ ಹಿರೇಮಠದ ಅಭಿನವ ಚರಂತೇಶ್ವರ ಮಹಾ ಸ್ವಾಮೀಜಿಯವರ ದರ್ಶನ, ಆಶೀರ್ವಾದ ಪಡೆದರು. ಕಳೆದ ಒಂದು ತಿಂಗಳಿಂದ ಉಪವಾಸ ವ್ರತಾಚರಣೆ ಮಾಡಿರುವ ಮುಸ್ಲಿಂ ಬಾಂಧವರು ಶ್ರದ್ಧಾಭಕ್ತಿಯಿಂದ ಮಸೀದಿಯಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದ ಬಳಿಕ ಗ್ರಾಮದ ಹೊರ ವಲಯದಲ್ಲಿರುವ ಈದ್ಗಾದಲ್ಲಿ ಏಕಕಾಲಕ್ಕೆ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಶ್ರೀಮಠದಲ್ಲಿ ಮುಸ್ಲಿಂ ಸಮುದಾಯದ ಹಿರಿಯರಾದ ಮೌಲಾನಾ ಸಿರಾಜುದ್ದೀನ್ ಅವರನ್ನು ಅಭಿನವ ಚರಂತೇಶ್ವರ ಸ್ವಾಮೀಜಿ ಗೌರವಿಸಿ, ಸನ್ಮಾನಿಸಿದರು. ಮೌಲಾನ ಸಿರಾಜುದ್ದೀನ್, ಮುತಾಲಿಬ್ ಪಿ.ನಬಿಸಾಬ್, ಬೇಲ್ದಾರ್ ಯಮನೂರ್ ಸಾಬ್, ಸೈಯದ್ ಅಲಿ, ರಾಯದುರ್ಗ ಚಾಂದ್ ಬಾಷಾ, ವಾಹೀದ್, ರಫಿಕ್, ಕರೀಂಸಾಬ್, ಚಾಂದ್ ಬಾಷಾ, ರಹಿಮಾನ್, ಜಬ್ಬಾರ್ ಸಾಬ್, ಖಾದರ್ ಸಾಬ್, ದಾದಾಪೀರ್, ರಾಜಾ, ನಸೀರ್ ಸಾಬ್, ಜಾಕೀರ್ ಸಾಬ್, ಶೇಕ್ಷಾವಲಿ, ಉಪನ್ಯಾಸಕ ಹೆಚ್.ಎಂ. ಗುರುಬಸವರಾಜಯ್ಯ, ಎಚ್.ಎಂ.ಚಂದ್ರಶೇಖರಯ್ಯ, ನೀರಲಗಿಯ ಎಚ್.ಎಂ.ಬಸವರಾಜ ಇತರರು ಇದ್ದರು. ರಂಜಾನ್ ಹಬ್ಬದ ಸಾಮೂಹಿಕ ಪ್ರಾರ್ಥನೆಯಲ್ಲಿ ನಂದಿಪುರ ಸೇರಿದಂತೆ ಸಾಲ್ಮೂರಹಳ್ಳಿ, ಬನ್ನಿಕಲ್ಲು, ಗದ್ದಿಕೆರೆ. ಬ್ಯಾಸಿಗಿದೇರಿ, ಏಣಿಗಿ ಬಸಾಪುರ, ಯಡ್ರಾಮನಹಳ್ಳಿ, ಸೊಬಟಿ, ಗ್ರಾಮಗಳ ಮುಸ್ಲಿಂ ಬಾಂಧವರು ಭಾಗವಹಿಸಿದ್ದರು.



ಹಗರಿಬೊಮ್ಮನಹಳ್ಳಿ: ತಾಲೂಕಿನ ನಂದಿಪುರ ಪುಣ್ಯಕ್ಷೇತ್ರದಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ಸಾಮೂಹಿಕ ಪ್ರಾರ್ಥನೆಯ ಬಳಿಕ ಮುಸ್ಲಿಂ ಬಾಂಧವರು ಇಲ್ಲಿನ ಶ್ರೀಗುರು ದೊಡ್ಡ ಬಸವೇಶ್ವರ ಸ್ವಾಮಿಯ ಮಠಕ್ಕೆ ಭೇಟಿ ನೀಡಿದರು.

ವಿಚಾರ ಸಂಕಿರಣ | ಡಾ.ಖಾದರ್ ವಲಿ ಅಭಿಪ್ರಾಯ

ಸಿರಿಧಾನ್ಯ ಸೇವನೆಯೇ ನಿಜವಾದ 'ಅಹಿಂಸೆ'

ವಿಜಯನಗರ: ಜಾಗತಿಕ ತಾಪಮಾನ ಏರಿಕೆ, ಹೆಚ್ಚುತ್ತಿರುವ ಆರೋಗ್ಯ ಸಮಸ್ಯೆಗಳಿಗೆ ನಮ್ಮ ಬದಲಾದ ಆಹಾರಪದ್ಧತಿಯೇಕಾರಣ. ಭಗವದ್ಗೀತೆ ಮತ್ತು ಜೈನ ಪರಂಪರೆ ಬೋಧಿಸಿರುವ ಅಹಿಂಸಾ ತತ್ವವನ್ನು ಪಾಲಿಸಬೇಕೆಂದರೆ ನಾವು ಸಿರಿಧಾನ್ಯಗಳ ಮೊರೆ ಹೋಗುವುದು ಅನಿವಾರ್ಯ ಎಂದು ಖ್ಯಾತ ಆಹಾರ ತಜ್ಞ ಡಾ. ಖಾದರ್ ವಲಿ ತಿಳಿಸಿದರು.

ಹೊಸಪೇಟೆ ನಗರದಲ್ಲಿ ಜೈನ್ ಇಂಟರ್ ನ್ಯಾಷನಲ್ ಟ್ರೇಡ್ ಆರ್ಗನೈಸೇಷನ್ ವತಿಯಿಂದ ಭಾನುವಾರ ಆಯೋಜಿಸಿದ್ದ 'ಸಿರಿಧಾನ್ಯಗಳ ಮಹತ್ವ' ಕುರಿತ ವಿಚಾರ ಸಂಕಿರಣದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

ಪೆಸ್ಟಿಸೈಡ್ಸ್ ಬಳಸಿ ಬೆಳೆದ ಉತ್ಪನ್ನಗಳನ್ನು ಸೇವನೆಯಿಂದ ರೋಗಗಳ ಸಂಖ್ಯೆ ಹೆಚ್ಚಿವೆ. ಸಂತಾನ ಶಕ್ತಿಯೂ ಕಡಿಮೆಯಾಗುತ್ತಿದೆ. ಜರ್ಮನಿ, ಜಪಾನ್ ದೇಶಗಳಲ್ಲಿ ಮಕ್ಕಳ ಜನನ ಪ್ರಮಾಣ ಇಳಿಮುಖವಾಗುತ್ತಿದೆ. ಯುವಕ, ಯುವತಿಯರಲ್ಲಿ ಮಾನವನ ಪುನರುತ್ಪತ್ತಿಯ ಶಕ್ತಿ ಕ್ಷೀಣಿಸುತ್ತಿದೆ. ಭಾರತದ ಸಣ್ಣ ಪುಟ್ಟ ಪಟ್ಟಣಗಳಿಗೂ ಐವಿಎಫ್ ಸೆಂಟರ್‌ಗಳು ಕಾಲಿಟ್ಟಿವೆ. ಐವಿಎಫ್ ಮೂಲಕ ಜನಿಸುವ ಮಕ್ಕಳಲ್ಲಿ ಶೇ.50ರಷ್ಟು ಬುದ್ಧಿಮಾಂದ್ಯತೆ ಕಂಡುಬರುತ್ತಿರುವುದು ಆತಂಕದ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದರು.

ಆಧುನಿಕ ಜೀವನದ ಆಹಾರದ ಭಾಗವಾಗಿರುವ ಹಾಲು, ಅಕ್ಕಿ, ಗೋಧಿ ಮತ್ತು ಸಕ್ಕರೆ 'ಸ್ಲೋ ಪಾಯಿಸನ್' ಇದ್ದಂತೆ. ಅವು ನಮ್ಮ ರಕ್ತದಲ್ಲಿ ಏಕಾಏಕಿ ಗ್ಲೂಕೋಸ್ ಬಿಡುಗಡೆ ಮಾಡಿದರೆ, ಸಿರಿ ಧಾನ್ಯಗಳು ಅದಕ್ಕೆ ತದ್ವಿರುದ್ಧ. ಸಿರಿಧಾನ್ಯಗಳು ರಕ್ತದಲ್ಲಿ ಗ್ಲುಕೋಸ್ ಅನ್ನು ನಿಯಮಿತವಾಗಿ ಅಗತ್ಯಕ್ಕೆ ತಕ್ಕಂತೆ ಬಿಡುಗಡೆ ಮಾಡುತ್ತವೆ. ಆಸ್ಪತ್ರೆಗಳು ಕಾಯಿಲೆಗಳನ್ನು ಗುಣಪಡಿಸುತ್ತಿಲ್ಲ, ಬದಲಿಗೆ ನಿರ್ವಹಣೆ ಮಾಡುತ್ತಿವೆ. ಮಧುಮೇಹ ಎಂಬ ರೋಗವೇ ಇಂದು ಜಗತ್ತಿನಲ್ಲಿ 800 ಟ್ರಿಲಿಯನ್ ಡಾಲರ್ ಇನ್ಸುಲಿನ್ ಮಾರಾಟವಾಗಿದ್ದರೆ, ಭಾರತದಲ್ಲೇ 200 ಶತಕೋಟಿ ಡಾಲರ್ ಇನ್ಸುಲಿನ್‌ಗಾಗಿಯೇ ವ್ಯಾಪಾರವಾಗಿದೆ. ಸಿರಿಧಾನ್ಯಗಳ ಆಹಾರ ಸೇವನೆಯಿಂದಾಗಿ ಟೈಪ್ -1 ಡಯಾಬಿಟಿಸ್ ಇರುವ ಮಕ್ಕಳು ಸಹ ಕೆಲವೇ ತಿಂಗಳಲ್ಲಿ ಇನ್ಸುಲಿನ್‌ನಿಂದ ಮುಕ್ತರಾಗುತ್ತಿದ್ದಾರೆ. ಸಿರಿಧಾನ್ಯಗಳಲ್ಲಿ ಪ್ರತಿಯೊಂದು ಆರೋಗ್ಯ ಸಮಸ್ಯೆಯಿಂದ ಮುಕ್ತಗೊಳಿಸಲು ಶಕ್ತಿಯಿದೆ ಎಂದು ತಮ್ಮ 30 ವರ್ಷಗಳ ವೈದ್ಯಕೀಯ ಸೇವೆಯ ಅನುಭವವನ್ನು ಹಂಚಿಕೊಂಡರು.

ಇದಕ್ಕೂ ಮುನ್ನ ಮಾತನಾಡಿದ ಹೋಟೆಲ್ ಉದ್ಯಮಿ ಶ್ರೀನಿವಾಸ್, ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿನ ಯುದ್ಧದ ಪರಿಸ್ಥಿತಿಯಿಂದಾಗಿ ಮುಂದಿನ ಒಂದೂವರೆ ವರ್ಷ ಇಂಧನ ಮತ್ತು ಅಡುಗೆ ಅನಿಲದ ಕೊರತೆ ಎದುರಾಗಬಹುದು. ಭಾರತ ಸರ್ಕಾರದ ಉತ್ತಮ ನೀತಿಗಳಿಂದ ನಾವು ಸದ್ಯದ ಮಟ್ಟಿಗೆ ಸುರಕ್ಷಿತವಾಗಿದ್ದರೂ, ಪ್ರತಿಯೊಬ್ಬರೂ ಇಂಧನ ಉಳಿತಾಯದ ಬಗ್ಗೆ ಚಿಂತನೆ ನಡೆಸಬೇಕು ಎಂದು ಸಲಹೆ ನೀಡಿದರು.

ಜೀತೊ ಟ್ರಸ್ಟ್ ಅಧ್ಯಕ್ಷ ಹಿತೇಶ್ ಬಗ್ರೇಚಾ ಪ್ರಾಸ್ತಾವಿಕ ಮಾತನಾಡಿದರು. ಟ್ರಸ್ಟಿ ಮನೋಜ್ ಕುಮಾರ್ ಜೈನ್ ಸಿರಿಧಾನ್ಯದ ಮಹತ್ವ ತಿಳಿಸಿದರು.



ಸಿರಿಧಾನ್ಯ ಬದುಕಿನಲ್ಲಿ ಅಳವಡಿಸಿಕೊಳ್ಳಿ

ಮಾನವ ಹುಟ್ಟುತ್ತಲೇ ಸೇವಿಸಿದ್ದು ಸಿರಿಧಾನ್ಯಗಳು. ಆದರೆ, ಬರ, ನೆರೆಯ ನೆಪವೊಡ್ಡಿ ಬಹುರಾಷ್ಟ್ರೀಯ ಕಂಪನಿಗಳು ಹಸಿರು ಕ್ರಾಂತಿಯ ನೆಪದಲ್ಲಿ ಫರ್ಟಿಲೈಸರ್, ಪೆಸ್ಟಿಸೈಡ್ಸ್ ಆಹಾರ ಧಾನ್ಯಗಳನ್ನು ಪರಿಚಯಿಸಿ, ಇಡೀ ಮನುಕುಲಕ್ಕೆ ಗಂಡಾಂತರ ತಂದೊಡ್ಡಿದ್ದಾರೆ. ಆದರೆ, ಅದನ್ನು ವಿಜ್ಞಾನದ ಸಾಧನೆ ಎಂಬಂತೆ ಕೊಂಡಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ನಮ್ಮ ಆರೋಗ್ಯ, ಆಹಾರಕ್ಕಾಗಿ ಮತ್ತೊಬ್ಬರನ್ನು ದೂಷಿಸುವುದರಲ್ಲಿ ಅರ್ಥವಿಲ್ಲ. ನಮ್ಮ ಜೀವ, ಜೀವನಕ್ಕಾಗಿ ಬದಲಾವಣೆಗೆ ತೆರೆದುಕೊಳ್ಳಬೇಕು. ಸಾಂಪ್ರದಾಯಿಕ ಸಿರಿಧಾನ್ಯಗಳನ್ನು ನಿತ್ಯ ಬದುಕಿನಲ್ಲಿ ಅಳವಡಿಸಿಕೊಂಡು ರೋಗ ಮುಕ್ತರಾಗಬೇಕು ಎಂದು ಖ್ಯಾತ ಆಹಾರ ತಜ್ಞ ಡಾ. ಖಾದರ್ ವಲಿ ಸಲಹೆ ನೀಡಿದರು.

ಬಳ್ಳಾರಿ-ವಿಜಯನಗರಕ್ಕೆ ತಲಾ 100 ಕೆಂಪು, 20 ಎಸಿ ಬಸ್ ನೀಡಿ

ಬಳ್ಳಾರಿ: ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಿಗೆ ತಲಾ 100 ಕೆಂಪು ಬಸ್ ಮತ್ತು ತಲಾ 20 ಎಸಿ ಬಸ್‌ಗಳನ್ನು ನೀಡಬೇಕು ಎಂದು ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ್ ಅವರು ಒತ್ತಾಯಿಸಿದರು.

ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು, ವೈ.ಎಂ.ಸತೀಶ್ ಅವರ ಪ್ರಶ್ನೆಗೆ ಉತ್ತರಿಸಿ, ಕಲ್ಯಾಣ ಕರ್ನಾಟಕಕ್ಕೆ ಮಾರ್ಚ್ 2026ರ ನಂತರ 56 ವಿವಿಧ ಪ್ರೀಮಿಯಂ ಬಸ್‌ಗಳ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡಿದೆ. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನದಲ್ಲಿ 2025-26 ರಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 400 ಬಸ್‌ಗಳನ್ನು ಖರೀದಿಸಲೂ ಕ್ರಮ ಕೈಗೊಳ್ಳಲಾಗಿದೆ ಎಂದರು.

ಆಗ, ವೈ.ಎಂ. ಸತೀಶ್ ಅವರು, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಗ್ರಾಮೀಣ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ಪಟ್ಟಣ - ನಗರ ಪ್ರದೇಶಗಳಿಗೆ ನಿತ್ಯ ಬಂದು ಹೋಗಲು ಸಾಕಷ್ಟು ಪರದಾಡುತ್ತಿದ್ದಾರೆ. ವಿದ್ಯಾರ್ಥಿಗಳ ಶೈಕ್ಷಣಿಕ ಕಾಳಜಿಗಾಗಿ ಮತ್ತು ಗ್ರಾಮೀಣ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಅನುಕೂಲಕ್ಕಾಗಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗೆ ತಲಾ 100 ಕೆಂಪು ಬಸ್‌ಗಳನ್ನು ನೀಡಿದಲ್ಲಿ ಸಾಕಷ್ಟು ಅನುಕೂಲ ಆಗಲಿದೆ. ಇಲ್ಲವಾದಲ್ಲಿ ಅನೇಕ ವಿದ್ಯಾರ್ಥಿಗಳಿಗೆ ನಿತ್ಯ ಬಸ್‌ಗಳಲ್ಲಿ ಪ್ರಯಾಣಿಸುವುದು ಕಷ್ಟಕರವಾಗುತ್ತಿದೆ ಎಂದು ವಿವರಿಸಿದರು.

ಆಗ, ಸಚಿವರಾದ ರಾಮಲಿಂಗಾರೆಡ್ಡಿ



ಅವರು, 2023-24ರ ಪೂರ್ವದ ನಾಲ್ಕು ವರ್ಷ ಸರ್ಕಾರ ಹೊಸ ಬಸ್ ಗಳನ್ನು ಖರೀದಿಸಿಲ್ಲ, 2016 ರಲ್ಲಿ ನಾನು ಸಾರಿಗೆ ಇಲಾಖೆಯ ಸಚಿವನಾಗಿದ್ದಾಗ ನಡೆದಿದ್ದ ನೇಮಕಾತಿ, ಈಗ ನಡೆದಿದೆ. ಸತತವಾಗಿ ನಾಲ್ಕು ವರ್ಷಗಳ ಕಾಲ ಬಸ್ ಗಳ ಖರೀದಿ ಮಾಡದ ಕಾರಣ ಬಸ್‌ಗಳ ಸ್ಥಿತಿ ಹದಗೆಟ್ಟಿದೆ. ಮುಂದಿನ ದಿನಗಳಲ್ಲಿ ಖರೀದಿ ಮಾಡುತ್ತಿರುವ ಬಸ್‌ಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಳ್ಳಾರಿ - ವಿಜಯನಗರ ಜಿಲ್ಲೆಗಳಿಗೆ ನೀಡಲಾಗುತ್ತದೆ ಎಂದು ಭರವಸೆ ನೀಡಿದರು.

ಅಲ್ಲದೇ, ಕೇಂದ್ರ ಸರ್ಕಾರದ ಷರತ್ತು - ನಿಯಮಗಳಿಗೆ ಬದ್ಧವಾಗಿ 15 ವರ್ಷ ಹಳೆಯ ಬಸ್‌ಗಳನ್ನು ರೀಫರ್ಬಿಷ್‌ಮೆಂಟ್ ಮಾಡಿ - ತಾಂತ್ರಿಕವಾಗಿ ನವೀಕರಿಸಿ ರಸ್ತೆಯಲ್ಲಿ ಓಡಾಡಿಸಲಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ 26 ಸಾವಿರ ಬಸ್‌ಗಳು ಸಂಚರಿಸುತ್ತಿವೆ. ಬಳ್ಳಾರಿ-ವಿಜಯನಗರ ಜಿಲ್ಲೆಯ ಬಸ್‌ಗಳ ತಾಂತ್ರಿಕ ವ್ಯವಸ್ಥೆಗೆ ಸರಿಪಡಿಸಲು ಅಗತ್ಯ ಕ್ರಮಕೈಗೊಳ್ಳಲಾಗುತ್ತದೆ ಎಂದರು.

ಪುಂಡರ ಹಾವಳಿ: ರೋಸಿಹೋದ ಜನತೆ

ಕೆಂಭಾವಿ: ಕಳೆದ ಒಂದು ವಾರದಲ್ಲಿ ಪಟ್ಟಣದಲ್ಲಿ ಮಧ್ಯರಾತ್ರಿ ಸಮಯದಲ್ಲಿ ಪುಂಡಪೋಕರಿಗಳ ಹಾವಳಿ ಹೆಚ್ಚಾಗಿದ್ದು ಇದರಿಂದ ಜನತೆ ಭಯಭೀತರಾಗಿದ್ದಾರೆ. ಮಧ್ಯರಾತ್ರಿ ಸುಮಾರು 1 ಗಂಟೆಯ ನಂತರ ಕೈಯ್ಯಲ್ಲಿ ಕುಡುಗೋಲು, ಕಲ್ಲುಗಳನ್ನು ಹಿಡಿದು ಕೇಕೆ ಹಾಕುತ್ತಾ ಮನೆಗಳ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳಿಗೆ ಮತ್ತು ಬಾಗಿಲು ಹಾಕಿರುವ ಅಂಗಡಿಗಳ ಸೆಟರ್‌ಗಳಿಗೆ ಕಲ್ಲು ಎಸೆಯುತ್ತಿರುವ ಅನಾಮಿಕ ವ್ಯಕ್ತಿಗಳ ಕಾಟಕ್ಕೆ ಜನತೆ ರೋಸಿಹೋಗಿದ್ದು ಪೊಲೀಸ್ ಇಲಾಖೆ ಈ ಬಗ್ಗೆ ಕ್ರಮ ಕೈಗೊಳ್ಳದೆ ಇರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಸುಮಾರು 15 ರಿಂದ 20 ಜನ ಯುವಕರು, ಬಾಲಕರು ಈ ಕೃತ್ಯಕ್ಕೆ ಕೈಹಾಕುತ್ತಿದ್ದು ಮಧ್ಯರಾತ್ರಿ ಚೀರಾಟ ನಡೆಸುತ್ತಾ ತಿರುಗುವ ಈ ಗ್ಯಾಂಗ್ ಸಿಕ್ಕಸಿಕ್ಕವರ ಮನೆಗಳಿಗೆ ಕಲ್ಲು ಎಸೆಯುವದು, ವಾಹನಗಳಿಗೆ ಹಾನಿ ಮಾಡುವುದು ಸೇರಿದಂತೆ ಹಲವು ದುಷ್ಕೃತ್ಯಕ್ಕೆ ಕೈಹಾಕಿದ್ದಾರೆ. ಇಂಥಾ ಕೃತ್ಯವನ್ನು ಪತ್ತೆಹಚ್ಚಿ ಆರೋಪಿಗಳನ್ನು ಬಂಧಿಸುವಲ್ಲಿ ಪಟ್ಟಣದ ಪೊಲೀಸ್ ಠಾಣೆ ಸಂಪೂರ್ಣ ವಿಫಲವಾಗಿದೆ ಎಂದು ಅನೇಕರು ದೂರುತ್ತಿದ್ದಾರೆ. ದುರುಳರು ನಡೆಸುತ್ತಿರುವ ಈ ಕೃತ್ಯದ ವಿಡಿಯೊ ಮತ್ತು ಫೋಟೊಗಳು ಈಗಾಗಲೆ ಮಾಧ್ಯಮಕ್ಕೆ ಲಭ್ಯವಾಗಿದ್ದು ಈ ಕುರಿತು ಪೊಲೀಸ್ ಇಲಾಖೆಗೆ ಮಾಹಿತಿ ನೀಡಲಾಗಿದೆ. ಉತ್ತರಾದಿ ಮಠ ಬೀದಿ, ಸೊನ್ನದ ಬಡಾವಣೆ, ರಾಘವೇಂದ್ರ ಕಾಲೋನಿ, ಎಸ್‌ಬಿಸಿ ಕ್ಯಾಂಪ್, ಸಂಜೀವ ನಗರ ಸೇರಿದಂತೆ ಹಲವು ಕಡೆ ನಿತ್ಯ ಮಧ್ಯರಾತ್ರಿ ತಮ್ಮ ಕೈಚಳಕ ತೋರಿಸುತ್ತಿರುವ ದುರುಳರು ಈ ಬಗ್ಗೆ ಪ್ರಶ್ನಿಸಿದವರ ಮೇಲೆ ಕಲ್ಲುಗಳಿಂದ ಹೊಡೆಯುತ್ತಿರುವುದೂ ಕಂಡು ಬಂದಿದೆ.

ಟೆರೇಸ್ ಮೇಲೆ ಬಿಟ್ಟುಹೋದ ಕುಡುಗೋಲು-ಹಿಂದೂಗಳ ಪವಿತ್ರ ಹಬ್ಬ ಯುಗಾದಿ ಹಬ್ಬದ ಹಿಂದಿನ ದಿನವಾದ ಬುಧವಾರ ಮಧ್ಯರಾತ್ರಿ 5ನೇ ವಾರ್ಡ್‌ನ ಕಾಳಿಕಾ ದೇವಸ್ಥಾನಕ್ಕೆ ಹೋಗುವ ಮುಖ್ಯ ರಸ್ತೆಯ ಪಕ್ಕದ ಮನೆಯ ಟೆರೇಸ್‌ವೊಂದರ ಮೇಲೆ ಬಿಳಿಬಟ್ಟೆ ಸುತ್ತಿದ ಕುಡುಗೋಲು ಒಂದನ್ನು ಗೂಂಡಾಗಳು ಬಿಟ್ಟುಹೋಗಿದ್ದು ಇದರಿಂದ ಜನತೆ ಮತ್ತಷ್ಟು ಭಯಭೀತರಾಗಿದ್ದಾರೆ. ಈ ಬಗ್ಗೆ ಸ್ಥಳೀಯ ಹಲವರು ಪತ್ರಕರ್ತರ ಸಹಾಯದಿಂದ ರಾತ್ರಿ ಪೊಲೀಸ್ ಠಾಣೆಗೆ ಫೋನ್ ಕರೆ ಮೂಲಕ ಮಾಹಿತಿ ನೀಡಿದಾಗ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶಿಲನೆ ನಡೆಸಿದರು.



ರೈಲ್ವೆ ಹೋರಾಟ ಸಮಿತಿ ಸಭೆ: ವೇಗ ತರಲು ತೀರ್ಮಾನ

ಹುಣಸಗಿ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ರವಿವಾರದಂದು ಹುಣಸಗಿ ರೈಲ್ವೆ ಹೋರಾಟ ಸಮಿತಿಯ ಸಭೆ ನಡೆಯಿತು. ಸಭೆಯಲ್ಲಿ ಯಾದಗಿರಿ-ಆಲಮಟ್ಟಿ ರೈಲ್ವೆ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರ ಈಗಾಗಲೇ ವಿವಿಧ ಕಾರ್ಯಗಳಿಗೆ ಹಣವನ್ನು ನಿಗದಿಪಡಿಸಿ, ಟೆಂಡರ್ ಪ್ರಕ್ರಿಯೆ ಆರಂಭಿಸಿರುವ ವಿಚಾರ ಪ್ರಸ್ತಾಪಿಸಲಾಯಿತು.

ಯೋಜನೆಯ ಪ್ರಗತಿ ಕುರಿತು ಸಮಗ್ರ ಮಾಹಿತಿ ಪಡೆಯುವ ಉದ್ದೇಶದಿಂದ ನೈರುತ್ಯ ರೈಲ್ವೆ ವಿಭಾಗದ ಹುಬ್ಬಳ್ಳಿ ಕಚೇರಿಗೆ ಸುರಪೂರ, ಶಹಾಪೂರ, ಯಾದಗಿರಿ, ತಾಳಿಕೋಟಿ, ಮುದ್ದೇಬಿಹಾಳ ಹಾಗೂ ನಿಡಗುಂದಿ ತಾಲೂಕಿನ ನಿಯೋಗದೊಂದಿಗೆ ನಿರ್ಧರಿಸಲಾಯಿತು. ವಿಶೇಷವಾಗಿ ಸರ್ವೇ ಕಾಮಗಾರಿಯ ಸ್ಥಿತಿ ಕುರಿತು ಅಧಿಕಾರಿಗಳಿಂದ ವಿವರವಾದ ಮಾಹಿತಿ ಕಲೆಹಾಕಲು ಒತ್ತಾಯಿಸುವುದಾಗಿ ಸದಸ್ಯರು ತಿಳಿಸಿದ್ದಾರೆ.

ಇದೇ ವೇಳೆ ರೈಲ್ವೆ ಯೋಜನೆ ಶೀಘ್ರ ಜಾರಿಗೆ ಬರಲು ಹೋರಾಟವನ್ನು ಹಂತ ಹಂತವಾಗಿ ಸಂಘಟಿತ ರೀತಿಯಲ್ಲಿ ಮುಂದುವರಿಸಲು ತೀರ್ಮಾನ ಕೈಗೊಳ್ಳಲಾಯಿತು. ಪ್ರತಿ ತಿಂಗಳು ಸಮಿತಿಯ ಸದಸ್ಯರು ಪಟ್ಟಣದಲ್ಲಿ ಸಭೆ ಸೇರಿ ಮುಂದಿನ ಕ್ರಮಗಳ ಬಗ್ಗೆ ಚರ್ಚಿಸಿ ಹೋರಾಟವನ್ನು ಮತ್ತಷ್ಟು



ಬಲಪಡಿಸುವುದಾಗಿ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಸಮಿತಿಯ ಅಧ್ಯಕ್ಷ ಚಂದ್ರಶೇಖರ ದಂಡಿನ, ಮುಖಂಡರಾದ ಸಂಗಣ್ಣ ವೈಲಿ, ವೀರೇಶ್ ಚಿಂಚೋಳಿ, ಬಸವರಾಜ್ ಸಜ್ಜನ್, ಶಾಂತಪ್ಪ ಬಾಕಲಿ, ಬಾಳ ಸಾಹೇಬ್ ದೇಶಮುಖ್, ಶಿವಲಿಂಗಯ್ಯ ಬೇನಾಳಮಠ, ಬಸವರಾಜ ಬೂದಿಹಾಳ, ಚಂದ್ರಶೇಖರ್ ಚಿತ್ತರಗಿ, ಎಲ್‌ಎಫ್ ಮುಜಾವರ್ ಕೋಳಿಹಾಳ್, ಭೀಮಸೇನರಾವ್ ಕುಲಕರ್ಣಿ, ರಾಘವೇಂದ್ರ ಕಾಮನಟಗಿ, ರಾಜಕುಮಾರ ಬಿರಾದಾರ, ಚನ್ನಕುಮಾರ ತಂಡವಾರ, ನಾಗರಾಜ ಬಿರಾದಾರ, ಮಲ್ಲಿಕಾರ್ಜುನ ಗುತ್ತೇದಾರ, ಬಸವರಾಜ ಮರೋಳ, ರವಿಕುಮಾರ ಬಂಟನೂರ ಉಪಸ್ಥಿತರಿದ್ದರು.

ಶಾದಿಮಹಲ್ ಕಾಮಗಾರಿಗೆ ಶಾಸಕ ಗಣೇಶ ಭೂಮಿಪೂಜೆ

ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದಲ್ಲಿ 2025-26ನೇ ಸಾಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಯೋಜನೆಯಡಿ ಅಂದಾಜು 1 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಿರುವ ಮುಸ್ಲಿಂ ಸಮಾಜದ ಶಾದಿಮಹಲ್ ಕಟ್ಟಡ ಕಾಮಗಾರಿಗೆ ಶಾಸಕ ಜೆ.ಎನ್.ಗಣೇಶ ಶನಿವಾರ ಭೂಮಿಪೂಜೆ ನೆರವೇರಿಸಿದರು.

ನಂತರ ಶಾಸಕ ಗಣೇಶ ಮಾತನಾಡಿ, ಕಂಪ್ಲಿ ಕ್ಷೇತ್ರದ ಎಮ್ಮಿಗನೂರು, ಕಗ್ಗಲ್, ಗೆಣಕಿಹಾಳ್ ಗ್ರಾಮದಲ್ಲಿ ಮುಸ್ಲಿಂ ಸಮಾಜದ ಶಾದಿಮಹಲ್ ನಿರ್ಮಾಣಕ್ಕಾಗಿ ತಲಾ ಒಂದೊಂದು ಕೋಟಿಯಂತೆ ಸುಮಾರು 4 ಕೋಟಿ ಅನುದಾನದಲ್ಲಿ ಕಟ್ಟಡ ಕಾಮಗಾರಿಗೆ ಚಾಲನೆ ನೀಡಲಾಯಿತು. ಕ್ಷೇತ್ರದಲ್ಲಿ ವಿವಿಧ ಕಡೆ ತಲಾ 33 ಲಕ್ಷದಂತೆ ಒಟ್ಟು 8 ಖಬರುಸ್ತಾನ್ ಅಭಿವೃದ್ಧಿಗೆ ಸುಮಾರು 2.64 ಕೋಟಿ ಅನುದಾನದಲ್ಲಿ ಅಭಿವೃದ್ಧಿ ಕೈಗೆತ್ತಿಕೊಳ್ಳಲಾಗಿದೆ. ಹೀಗೆ ನಾನಾ ಅಭಿವೃದ್ಧಿಯೊಂದಿಗೆ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಕಂಪ್ಲಿಯ ಸಕ್ಕರೆ ಕಾರ್ಖಾನೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಳಿಯಲ್ಲಿ ಈಗಾಗಲೇ ಮೌಲಾನ ಆಜಾದ್ ಶಾಲೆ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಇಲ್ಲಿನ ಶಾಲೆ ಬಳಿಯಲ್ಲೇ ಮೌಲಾನ ಆಜಾದ್ ಶಾಲೆ ನಿರ್ಮಾಣದಿಂದ ಸಾಕಷ್ಟು ಜನರಿಗೆ ಅನುಕೂಲವಾಗಲಿದೆ ಎಂದರು.



ಮುಸ್ಲಿಂ ಹಿರಿಯ ಮುಖಂಡ ಮೀನ್‌ಕೆರೆ ಶೇಕ್‌ಣ್ಣಸಾಬ್, ಮಾಜಿ ತಾಪಂ ಸದಸ್ಯ ವೆಂಕಟರಾಜು, ವೈ.ರಾಘವೇಂದ್ರರಡ್ಡಿ, ಮಸೀದಿಯ ಕಮಿಟಿ ಅಧ್ಯಕ್ಷರಾದ ಟಿ.ಎಚ್.ಪೀರಾಸಾಬ್, ಉಪಾಧ್ಯಕ್ಷರಾದ ಕೆ.ಹೊನ್ನೂರಸಾಬ್, ಕಾರ್ಯದರ್ಶಿ ಕೆ.ಕಾಸಿಂಸಾಬ್, ಖಜಾಂಚಿ ಪಿ. ರಾಜಸಾಬ್, ಸದ್ಯಸರಾದ ಎ.ದಸ್ತಗಿರಿ ಸಾಬ್, ಕೆ.ಬಂದನವಾಜ್, ಓದೋ ಕಾಜಸಾಬ್, ನೆಣಿಕೆಸಕ್ರಪ್ಪ, ಎಂ.ರಸೂಲ್‌ಸಾಬ್, ನೆಲ್ಲೂಡಿ ಶೇಕಪ್ಪ ಇತರರಿದ್ದರು.

ಜನಪದ ಕಲೆಗಳಿಂದ ಆನಂದ, ನೆಮ್ಮದಿ: ಡಾ.ವಿಜಯಾ

ಬೀದರ್: ಜನಪದ ಕಲೆಗಳಿಂದ ನಿಜ ಆನಂದ ಹಾಗೂ ನೆಮ್ಮದಿ ದೊರೆಯುತ್ತದೆ ಎಂದು ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ವಿಜಯಾ ರಹಾಟಕರ್ ಹೇಳಿದರು.

ನೆರೆಯ ತೆಲಂಗಾಣದ ಶ್ರೀಶೈಲಂನ ಅಕ್ಕ ಮಹಾದೇವಿ ಚೈತನ್ಯ ಪೀಠದಲ್ಲಿ ಕೇಂದ್ರದ ಸಂಸ್ಕೃತಿ ಸಚಿವಾಲಯ ಹಾಗೂ ಈಶ್ವರಿ ಮಹಿಳಾ ಮಂಡಳ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ ರಾಷ್ಟ್ರೀಯ ಜನಪದ ನೃತ್ಯ ಉತ್ಸವವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

ವಾಟ್ಸ್ಆ್ಯಪ್ ಹಾಗೂ ಫೇಸ್‌ಬುಕ್ ರೀಲ್ಸ್‌ಗಳಲ್ಲಿ ವ್ಯರ್ಥ ಕಾಲಹರಣ ಮಾಡುತ್ತಿರುವ ಯುವ ಸಮೂಹ ಜೀವನದಲ್ಲಿ ಶಾಂತಿ ಹಾಗೂ ಸಮಾಧಾನಕ್ಕಾಗಿ ಜನಪದ ಕಲೆಗಳ ಮೊರೆ ಹೋಗಬೇಕು ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ರಾಜ್ಯ ಅಭಿವೃದ್ಧಿ, ಸಮನ್ವಯ ಹಾಗೂ ಮೇಲುಸ್ತುವಾರಿ ಸಮಿತಿ ಸದಸ್ಯ ಶಿವಯ್ಯ ಸ್ವಾಮಿ ಮಾತನಾಡಿ, ಎರಡು ದಶಕದಿಂದ ಜನಪದ ಕಲೆ ಹಾಗೂ ಕಲಾವಿದರನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಾ ಬರಲಾಗಿದೆ. ಅದರ ಭಾಗವಾಗಿಯೇ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತಿದೆ ಎಂದು ತಿಳಿಸಿದರು.

ಅಕ್ಕ ಮಹಾದೇವಿ ಚೈತನ್ಯ ಪೀಠದ ಸಂಚಾಲಕ ಡಾ. ರಾಜಶೇಖರ ಶಿವಾಚಾರ್ಯ ಮಾತನಾಡಿದರು. ಪೀಠದ



ಅಧಿಪತಿ ಮಾತೆ ಕರುಣಾದೇವಿ ಸಾನಿಧ್ಯ ವಹಿಸಿದ್ದರು. ದೇಶದ ವಿವಿಧೆಡೆಯ 9 ಕಲಾ ತಂಡಗಳು ಕಲಾ ಪ್ರದರ್ಶನ ನೀಡಿ ಗಮನ ಸೆಳೆದವು.

ಆಂಧ್ರಪ್ರದೇಶ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ರಾಯಪಟಿ ಶೈಲಜಾ, ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ, ಮೇರಾ ಯುವ ಭಾರತ್ ಬೀದರ್ ಜಿಲ್ಲಾ ಯುವ ಅಧಿಕಾರಿ ಮಯೂರಕುಮಾರ ಗೋರಮೆ, ರಾಚೋಟಿ ವೀರಭದ್ರೇಶ್ವರ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯ ಸಿ.ಎಂ.ಶಿವಶರಣಪ್ಪ, ನಂದ್ಯಾಳ್ ಜಿಪಂ ಯೋಜನಾ ನಿರ್ದೇಶಕ ಶ್ರೀಧರ ರೆಡ್ಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿ ಲೀಲಾವತಿದೇವಿ, ರಾಷ್ಟ್ರೀಯ ಮಹಿಳಾ ಆಯೋಗದ ಉಪ ನಿರ್ದೇಶಕ ರಾಮಅವತಾರ ಸಿಂಗ್, ರಾಚೋಟಿ ವಿಶ್ವ ಹಿಂದೂ ಪರಿಷತ್ ಜಿಲ್ಲಾ ಜಂಟಿ ಕಾರ್ಯದರ್ಶಿ ಸುಬ್ಬಯ್ಯ ಸ್ವಾಮಿ ರಾಚೋಟಿ ಇತರರಿದ್ದರು.

ರಂಜಾನ್ ಕೇವಲ ಉಪವಾಸವಲ್ಲ, ಆತ್ಮಶುದ್ಧಿ

ಸಿರುಗುಪ್ಪ: ಸೂರ್ಯೋದಯದಿಂದಸೂರ್ಯಸ್ತದವರೆಗೆಕೇವಲ ಉಪವಾಸವಲ್ಲ, ಹಸಿವಿನ ಅನುಭವ, ಇಂದ್ರೀಯಗಳನ್ನು ಸಮತೋಲನದಲ್ಲಿರಿಸಿ ಆತ್ಮಶುದ್ಧಿಯ ತಳಹದಿಯಿಂದ ಸಂಕಷ್ಟದಲ್ಲಿರುವರಿಗೆ ಜಕಾತ್ ಮಾಡುವ ಶ್ರೇಷ್ಠತೆಯೇ ರಂಜಾನ್ ಹಬ್ಬ ಆಚರಣೆಯಾಗಿದೆ ಎಂದು ಧರ್ಮಗುರು ಖತೀಬ್ ಎಂ.ಡಿ.ಅಮೀಷಾ ಸಾಬ್ ಹೇಳಿದರು. ನಗರದ ಕೆಂಚನಗುಡ್ಡ ರಸ್ತೆಯ ಈದ್ಗಾ ಮೈದಾನದಲ್ಲಿ ರಂಜಾನ್ ಹಬ್ಬ ಹಿನ್ನೆಲೆ ಶನಿವಾರ ಮುಸ್ಲಿಂ ಸಮುದಾಯದವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಬಳಿಕ ಮಾತನಾಡಿದರು. ಅಹಂಕಾರವನ್ನು ತೊರೆದು, ಸರಳತೆಯನ್ನು ಅಪ್ಪಿಕೊಂಡು, ಬಡವರ ನೋವಿಗೆ ಸ್ಪಂದಿಸುವ ಮನಸ್ಸನ್ನು ಬೆಳೆಸಿಕೊಳ್ಳಬೇಕು. ಸುಳ್ಳು, ಕೋಪ, ಅಸೂಯೆ ಮತ್ತು ದ್ವೇಷದಿಂದ ದೂರವಿದ್ದು, ಪ್ರೀತಿ, ಸಹನೆ ಮತ್ತು ಸತ್ಯದ ಮಾರ್ಗದಲ್ಲಿ ನಡೆಯಬೇಕು ಎಂದರು. ಲಾಡ್ ಖಾನ್ ಮಸೀದಿಯ ಅಧ್ಯಕ್ಷ ಎಸ್.ಎಂ.ಫೀಜುಲುಲ್ಲ ಮಾತನಾಡಿದರು. ವಿವಿಧ ಸಮುದಾಯದ ಗಣ್ಯರನ್ನು ಸನ್ಮಾನಿಸಲಾಯಿತು. ಮೀರ್ ಹುಸೇನ್, ಹಂಡಿ ಹಸೀಮ್, ಹುಸೇನ್, ಫಯಾಜ್, ನಜೀರ್, ಮುಲ್ಲಾರೋಫ್, ವಾಲ್ಮೀಕಿ ವಿದ್ಯಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಬಿ.ಎಂ.ಸತೀಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕರಿಬಸಪ್ಪ, ಮುಖಂಡರಾದ ವೆಂಕಟೇಶ, ಗಣೇಶ, ವಾಲ್ಮೀಕಿ ವಿದ್ಯಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಬಿ.ಎಂ.ಸತೀಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕರಿಬಸಪ್ಪ, ಮುಖಂಡರಾದ ವೆಂಕಟೇಶ, ಗಣೇಶ ಇತರರಿದ್ದರು.



ಗುಜನೂರಿನಲ್ಲಿ ಆಂಜನೇಯ ಸ್ವಾಮಿ ಜಾತ್ರೆ

ಹೂವಿನಹಡಗಲಿ: ತಾಲೂಕಿನ ಗುಜನೂರು ಗ್ರಾಮದಲ್ಲಿ ಯುಗಾದಿ ಹಬ್ಬದ ಅಂಗವಾಗಿ ಗ್ರಾಮದ ಆಂಜನೇಯ ಸ್ವಾಮಿ ಜಾತ್ರೆ ಹಲವಾರು ವಿಶೇಷಗಳಿಂದ ಜರುಗಿತು. ಯುಗಾದಿ ಹಬ್ಬದ ದಿನದಂದು ಬೆಳಿಗ್ಗೆ ಉತ್ಸವ (ಉಚ್ಚಯ್ಯ) ಎಳೆಯುವುದು, ಗುಜನೂರು ಗ್ರಾಮ ಸೇರಿದಂತೆ ಹಲವಾರು ಊರುಗಳಿಂದ ಬಂದ ಭಕ್ತರು ಮತ್ತು ಸುತ್ತಮುತ್ತಲ ಭಕ್ತರು ದೀರ್ಘ ದಂಡ ನಮಸ್ಕಾರ ಹಾಕುವುದರ ಮುಖಾಂತರ ಹರಕೆ ತೀರಿಸಿದರು.

ನಂತರ ಪವಾಡ ದಾಸಪ್ಪನವರಾದ ಹೊಸಮನಿ ಮರುತೇಶ್ ಶಿವಪುತ್ರಪ್ಪ ಅವರ ಮನೆಯಿಂದ (ಡೊಳ್ಳು) ಸಕಲ ವ್ಯಾದ್ಯದಿಂದ ಭವ್ಯ ಮೆರವಣಿಗೆಯಿಂದ ಆಂಜನೇಯ ಸ್ವಾಮಿ ಉತ್ಸವ ದೇವಸ್ಥಾನಕ್ಕೆ ತೆರಳಿ ಡೊಳ್ಳಿನ ಮಜುಲಿನಿಂದ ಆರಂಭವಾದ ಉತ್ಸವ ಅಡವಿ ಚೆನ್ನಿಗೆಪ್ಪ ಹೋಗಿ, ಅಲ್ಲಿ ಕೂಡ



ಪೂಜಾ ಕಾರ್ಯಕ್ರಮ ಮುಗಿಸಿ ನಂತರ ಬರೀ ಕೈಯಿಂದ ಕಂಠಿ ಗಿಡ ಕಿತ್ತು (ಬ್ಯಾಟಿ ಗಿಡ) ತಂದು ಅದರಲ್ಲಿ ಹಾರುತ್ತಾ ಜಿಗಿಯುತ್ತ ಅದರಂತೆ. 6 ಜಾಗದಲ್ಲಿ ಹಾಕಿ, ಗಿಡಕ್ಕೆ ಹಾರುವುದು. ಗುಂಡು, ಬಾಕು ಹಲಗೂ ಹಾಕಿ ಪವಾಡ ದಾಸಪ್ಪನರ ಜೊತೆಗೆ ಎಲ್ಲ ದಾಸಪ್ಪನವರು ಆಂಜನೇಯ ಸ್ವಾಮಿ ಕಾರ್ಯಕ್ರಮ ಸಾಕ್ಷಿಯಾದರೂ ವಿಶೇಷ ಕಾರ್ಯಕ್ರಮ ನೆರೆದ ಭಕ್ತರ ಮೈ ರೋಮಾಂಚನಗೊಳಿಸಿದವು.

ಹೂವಿನಹಡಗಲಿ ತಾಲೂಕಿನಲ್ಲೇ ಗುಜನೂರು ಗ್ರಾಮದ ವಿಶೇಷ ಹಬ್ಬ ಇದು ಎಂದು ಗ್ರಾಮದ ಬಣಕಾರ ಮರುತೇಶ್ ಎಚ್. ಹೇಳಿದರು

ಕರ್ನಾಟಕ ಸಾರ್ವಜನಿಕ ಸೇವಾ ಸಂಘದ ಅಧ್ಯಕ್ಷ ಹನುಮಂತಪ್ಪ ಎಚ್, ಬಣಕಾರ ಮರುತೇಶ್ ಹೊಸಮನಿ, ಸೋಮಪ್ಪ ಹೊಸಮನಿ,

ಹಿರಣ್ಣನವರ ಹನುಮಂತಪ್ಪ, ಶಿವಪುತ್ರಪ್ಪ ಹೆಚ್, ಮಾರುತೇಶ್ ವಕೀಲರು, ಪಾಂಡುರಂಗ ವಕೀಲರು, ಪೂಜಾರ ಕೃಷ್ಣಪ್ಪ, ಬಿ.ಚನ್ನಪ್ಪ ಅಂಗಡಿ, ಬಿ.ಪಾಂಡುರಂಗ, ಗಿರಗತಿ ಬಸವರಾಜ, ಆರ್.ಮಂಜುನಾಥ ಸಿಂಗ್, ಎಂ.ಪಾಂಡುರಂಗ, ಹೊಸಮನಿ ಶಾಂತಪ್ಪ, ಹಿರಣ್ಣನವರ ರಾಮಕೃಷ್ಣಪ್ಪ ಇತರರಿದ್ದರು.